ಕಸ್ತೂರಿ


ಜೂನ್, ೧೯೮೩

ಬೆಲೆ: ರೂ. ೨-೫೦



ಕಸ್ತೂರಿ

ಕನ್ನಡ ಡೈಜೆಸ್ಟ



ಸಹಾಯಕ ಸಂಪಾದಕ :

ಮಾಧವ ನಾ. ಮಹಿಷಿ

ಕಲೆ :

ಕೆ. ಬಿ. ಕುಲಕರ್ಣಿ

ಮುಖಪುಟ :

ಶಿಲೆಯಲ್ಲವೀ ಗುಡಿಯು...

ಚಿತ್ರ :

ವಿನೋದ ದೇಸಾಯಿ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI June 1983

ಬೆಳಕಿಂಡಿ

ಪ್ರಣಯದಲ್ಲಿ ಕನಸು ಕಾಣುವವರು ವಿವಾಹದ ಬಳಿಕ ಎಚ್ಚರಗೊಳ್ಳುತ್ತಾರೆ.

-ಅಲೆಕ್ಸಾಂಡರ್ ಪೋಪ್

*

ಇಲ್ಲಿಯ ವರೆಗೆ ವಿಷಯಪೂರ್ಣವಾಗಿದ್ದ ಶಿಕ್ಷಣ ಇನ್ನಾದರೂ ವಿಚಾರಪೂರ್ಣವಾಗಿರಲಿ. -ಅನತೋಲ ಫ್ರಾನ್ಸ

*

ಎಲ್ಲರಿಗೂ ತಿಳಿಯುವ ಭಾಷೆಯಲ್ಲಿಯೆ ಹಣ ಮಾತಾಡುತ್ತದೆ. -ಅಫ್ರಾ ಬ್ಹೆನ್

*

ಕೆಟ್ಟ ಕಾನೂನನ್ನು ತಿದ್ದುಪಡಿಸುವುದು ಬಹು ಸುಲಭ. ಅದು ಸರಿಯಾಗಿ ಜಾರಿಗೆ ಬರುವಂತೆ ನೋಡಿಕೊಂಡರೆ ಆಯಿತು.

-ಅಬ್ರಹಾಮ್ ಲಿಂಕನ್

*

ವಿನಯವೇ ದೊಡ್ಡಸ್ತಿಕೆಯ ಮುಖ್ಯ ಲಕ್ಷಣ. -ಜಾನ್ ರಸ್ಕಿನ್

*

ಧರ್ಮವು ದೇವರ ಪೂಜೆಯನ್ನು ಪುರಸ್ಕರಿಸಿದರೆ ಮೂಢ ನಂಬಿಕೆಯು ಆ ಪೂಜೆಯನ್ನೇ ಅಪವಿತ್ರಗೊಳಿಸುತ್ತದೆ.

-ಸೆನೆಕಾ

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಏನು ವಿಶೇಷ ?

"ವಿಜ್ಞಾನಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ?" (ಕಸ್ತೂರಿ, ಎಪ್ರಿಲ್ ಸಂಚಿಕೆ) ಎಂಬ ಪ್ರಶ್ನೆಯ ಉತ್ತರದಲ್ಲಿ ಏನೋ ರಹಸ್ಯವಿದೆ ಎಂಬ ವ್ಯಂಗವು ವಿರೋಧ ಪಕ್ಷದ ರಾಜಕಾರಣಿಗಳಿಗೂ ಪತ್ರಿಕಾಕರ್ತರಿಗೂ ಸಾಕಷ್ಟು ಹೂರಣವನ್ನು ಒದಗಿಸಿದೆ. ಅಂತಹ ರಹಸ್ಯವೇನಾದರೂ ಇದ್ದಿದ್ದರೆ ಅದನ್ನು ಬಚ್ಚಿಟ್ಟುಕೊಂಡ ಸಂಸ್ಥೆಗಳು ಎಂದಿನಂತೆ ನಡೆಯುತ್ತಿರಲಿಲ್ಲ. ಅಲ್ಲಿಯ ಮೇಲಧಿಕಾರಿಗಳಿಗೆ ಅದರ ಬಿಸಿ ತಟ್ಟದೆ ಇರುತ್ತಿರಲಿಲ್ಲ. ಇದಾವುದೂ ನಡೆದಿಲ್ಲವೆಂದರೆ ಅದರಲ್ಲಿ ಅಂತಹ ರಹಸ್ಯವೇನೂ ಇಲ್ಲವೆಂದೇ ತಿಳಿಯಬಹುದು. ಬೇರೆ ಬೇರೆ ಇಲಾಖೆಗಳ ನೌಕರರೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ವ್ಯಾಪಾರಿಗಳೂ ಉದ್ದಿಮೆದಾರರೂ ಮಾಡಿಕೊಳ್ಳುತ್ತಾರೆ, ಜೀವನದಲ್ಲಿ ಜುಗುಪ್ಸೆ ಎಂದು ಹೆಂಗಸರೂ ಗಂಡಸರೂ ಮಾಡಿಕೊಳ್ಳುತ್ತಾರೆ, ವಿಜ್ಞಾನಿಗಳೂ ಇವರೆಲ್ಲರಂತೆಯೇ ಮನುಷ್ಯರಾದ್ದರಿಂದ ಅವರೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಅದಕ್ಕೆ ವಿಶೇಷವಾದ ಕಾರಣವಿದ್ದರೆ ಅದೊಂದು ರಹಸ್ಯವಾಗಿರದೆ ಬಹಿರಂಗ ಚರ್ಚೆಗೆ ಯೋಗ್ಯವಾಗಿದೆ. ಅದು ಅವರ ಶಿಕ್ಷಣದಲ್ಲಿರುವ ದೋಷ: ತಾವು ಎಲ್ಲರಂತಲ್ಲ, ತಮ್ಮ ಬುದ್ಧಿವಂತಿಕೆ ಹೆಚ್ಚಿನದು, ತಮ್ಮ ಕಾರ್ಯಕ್ರಮದ ಪ್ರಯೋಜನ ಹೆಚ್ಚಿನದು, ಅದರ ಲಾಭವನ್ನು ತಮಗಷ್ಟೇ ಬಿಡದೆ ತಮ್ಮ ವರಿಷ್ಠರೂ ಸಂಗಡಿಗರೂ (ಅಪ್ರಾಮಾಣಿಕ ರೀತಿಯಲ್ಲಿ) ಪಡೆಯುತ್ತಾರೆ ಇತ್ಯಾದಿ. ಈ ಮನೋವೃತ್ತಿಯನ್ನು ಪರ್ಸಿಕ್ಯೂಶನ್ ಮೇನಿಯ ಎನ್ನುತ್ತಾರೆ. ಇದು ಬೆಳೆಯುವದಕ್ಕೆ ಅವರ ಶಿಕ್ಷಣದಲ್ಲಿ ಸಾಹಿತ್ಯ ತತ್ತ್ವಶಾಸ್ತ್ರಗಳ ಅಂಶಗಳಿಲ್ಲದೇ ಇರುವದು ಅಥವಾ ಗೌಣವಾಗಿರುವದು ಕಾರಣವಾಗಿರಬಲ್ಲದು.

ಒಳ್ಳೆಯ ಸಾಹಿತ್ಯವನ್ನು ಸರಿಯಾಗಿ ಓದಿದವನು ಪ್ರಪಂಚದ ಸ್ವರೂಪವನ್ನು ತಿಳಿಯಬಲ್ಲವನಾಗುತ್ತಾನೆ. ತನ್ನ ಸ್ಥಿತಿಯನ್ನು ಕೇವಲ ತನೊಬ್ಬನ ದೃಷ್ಟಿಯಿಂದ ಮಾತ್ರ ನೋಡದೆ, ಸಮಾಜದಲ್ಲಿ ಅವಿಶ್ವಾಸವನ್ನು ತಾಳದೆ, ಪ್ರತಿಯೊಂದು ಘಟನೆಯನ್ನೂ ಅದರಲ್ಲಿ ಸಂಬಂಧಿಸಿದ ಇತರರ ದೃಷ್ಟಿಯಿಂದಲೂ ನೋಡಬಲ್ಲವನಾಗುತ್ತಾನೆ. ತತ್ತ್ವಶಾಸ್ತ್ರವನ್ನು ತಿಳಿದವನು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ವಸ್ತುಸ್ಥಿತಿಯ ಜ್ಞಾನಕ್ಕೆ ಇತಿಮಿತಿಗಳಿವೆ ಎಂದು ಮನಗಾಣುತ್ತಾನೆ. ಆಗ ಅವನು ತನ್ನ ತನ್ನ ಜೀವಿತವನ್ನು ಇಷ್ಟು ಲಘುವಾಗಿ ಗಣಿಸಲಾರನು. ಒಂದೇ ಸುಲಭ ಪ್ರಶ್ನೆ ಇದು – ತನ್ನಲ್ಲಿ ಯೋಗ್ಯತೆ ಇದ್ದರೆ, ತಾನು ಮಾಡುತ್ತಿದ್ದ ಚಾಕರಿಯನ್ನು ಬಿಟ್ಟು ಬೇರೆಡೆಯಲ್ಲಿ ತನ್ನ ಪ್ರತಿಷ್ಠೆಯನ್ನು ಏಕೆ ಪಡೆಯುವದಿಲ್ಲ ? ಆದ್ದರಿಂದ ಇಲ್ಲಿ ಕೇಳಬೇಕಾದ ಪ್ರಶ್ನೆ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಉಳಿದ ವರ್ಗಗಳಲ್ಲಿಗಿಂತ ವಿಜ್ಞಾನಿಗಳಲ್ಲಿ ಹೆಚ್ಚಾಗಿದೆಯೆ? ಹಾಗೆಂದು ಯಾರೂ ತೋರಿಸಿಲ್ಲ. ಒಂದು ವೇಳೆ ಹಾಗಿದೆ ಎಂದು ತೋರಿಸಿದರೆ ಮೇಲೆ ಹೇಳಿದ ಸಂಸ್ಕಾರದ ಕೊರತೆ ಉಳಿದವರ ಶಿಕ್ಷಣಕ್ಕಿಂತ ಅವರ ಶಿಕ್ಷಣದಲ್ಲಿ ಹೆಚ್ಚಾಗಿದೆ ಎಂದುಕೊಂಡು ಅದನ್ನು ಸರಿಪಡಿಸಿ ಮುಂದಿನ ಪರಿಣಾಮಗಳನ್ನು ಎದುರು ನೋಡಬಹುದು.

ಬೆಂಗಳೂರು —ಪಿ. ವಿ. ಜೋಶಿ

ಕಂಪ್ಯೂಟರ್ ಮತ್ತು ಭಾರತ

ಮೇ ತಿಂಗಳ "ಕಂಪ್ಯೂಟರ್ ಮತ್ತು ಭಾರತ" ನಿಮ್ಮ ಇತ್ತೀಚಿನ ವೈಜ್ಞಾನಿಕ ಲೇಖನಗಳಲ್ಲಿ ಒಂದು ಅತ್ಯುತ್ತಮ ಲೇಖನ.

ಭಾರತದ ಕೋಟ್ಯಂತರ ಬಡ ಜನರ ಹಣ ಮತ್ತು ಸಮಯವನ್ನು ಉಳಿಸಬಲ್ಲ, ಲಕ್ಷಾಂತರ ಜನರ ರೋಗ ರುಜಿನಗಳನ್ನು ಹೇಳ ಹೆಸರಿಲ್ಲದಂತೆ ಒದ್ದೋಡಿಸಬಲ್ಲ ಈ ಎಲೆಕ್ಟ್ರಾನಿಕ್ ಉಪಕರಣವನ್ನು ನಾವು ಲೇಖಕರು ಹೇಳಿರುವಂತೆ ರಾಜಕೀಯ, ಸಾಮಾಜಿಕ, ಮೂಢನಂಬಿಕೆಯ ಕಾರಣಗಳನ್ನು ಮುಂದೊಡ್ಡಿ ಮುಂದೂಡುತ್ತಿದ್ದರೆ ನಮ್ಮ ಭವಿಷ್ಯ ಕರಾಳವಾಗುವುದರಲ್ಲಿ ಸಂಶಯವಿಲ್ಲ. ಆರೋಗ್ಯ, ಸಂಪರ್ಕ, ಸಾಕ್ಷರತೆ ಮತ್ತು ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ನಮ್ಮಲ್ಲಿ ಮೂಲಭೂತ ಬದಲಾವಣೆಯಾಗದೆ ದಾರಿಯಿಲ್ಲ.

ಖಾನಾಪುರ —ಕೆ. ಎಸ್. ಪೃಥ್ವೀರಾಜ್

ನಾಯಿ ಬಾಲದಂತವನು

೧೯೬೪ ರ ಮೇ ತಿಂಗಳ 'ಕಸ್ತೂರಿ'ಯಲ್ಲಿ ಪ್ರಕಟವಾದ ಎಚ್. ಕೆ. ಶಿವಪ್ರಕಾಶರ "ನಾಯಿ ಬಾಲದಂತವನು" ಕಥೆಯನ್ನು ಓದುವಾಗ ಶರಚ್ಚಂದ್ರ ಚಟರ್ಜಿಯವರ ಒಂದು ಕಥೆ ನೆನಪಿಗೆ ಬರುತ್ತದೆ. ಕುಡಿತ ಎಂತಹ ಅವಮಾನವೀಯ ಸಂದರ್ಭಗಳನ್ನು ಸೃಷ್ಟಿಸಿ ಕರುಳಿನ ಸಂಬಂಧವನ್ನೇ ಕಿತ್ತು ತಿನ್ನುತ್ತದೆ ಎಂಬುದಕ್ಕೆ ಈ ಕಥೆ ನಿದರ್ಶನವಾಗಿದೆ.

ಆಲೂರು (ಹಾಸನ) –ಚಂದ್ರಶೇಖರ ಧೂಲೇಕರ್

ಕಸ್ತೂರಿ ಮೇ ೬೪ ರ ಸಂಚಿಕೆಯಲ್ಲಿ "ನಾಯಿಗೊಂದು ವೀರಗಲ್ಲು" ಎಂಬ ಲೇಖನ ಪ್ರಕಟವಾಗಿದೆ. ಈ ಲೇಖನದ ಲೇಖಕ ನಾನಲ್ಲ. ಇದು ನನ್ನ ಹೆಸರಿನಲ್ಲಿ ಹೇಗೆ ಪ್ರಕಟವಾಯಿತು ತಿಳಿಯಲಿಲ್ಲ. ಪ್ರಸ್ತುತ ಲೇಖನದ ಲೇಖಕರು ನನ್ನ ಅಣ್ಣ ಶ್ರೀವತ್ಸ ಎಸ್. ವಟಿ ಅವರು.

ಬೇಲೂರು –ಕೇಶವ ಎಸ್. ವಟಿ

ಏನಿದೆ ?

ಎಪ್ರಿಲ್ ೬೪ರ ಸಂಚಿಕೆಯ ಪುಟ ೫೫ರಲ್ಲಿ ಮುದ್ರಿಸಿರುವ ಹಾಸ್ಯ ಚಿತ್ರವು ಬೆಳಕು–ವಸ್ತು–ನೆರಳುಗಳ ಸಾಪೇಕ್ಷ ಸ್ಥಾನದ ದೃಷ್ಟಿಯಿಂದ ತೀರಾ ಅಸಂಗತವಾಗಿದೆ. ಹಾಲಿ ಬೆಳಕಿನ ಸ್ಥಾನದಿಂದ ಆ ರೀತಿಯಲ್ಲಿ ನೆರಳು ಏರ್ಪಡುವುದು ಸಾಧ್ಯವೆಂದು ಒಪ್ಪುವುದು ಕಷ್ಟ. ಕಲ್ಪನೆಯಾದರೂ ಸುಸಂಗತವಾಗಿರಬೇಡವೆ ?

ಬೂತನಕೆರೆ –ಸು. ಶ್ರೀನಿವಾಸಯ್ಯ

ಈ ಮುಂಚೆಯೇ ಬಂದಿದೆ ?

ಮೇ 'ಕಸ್ತೂರಿ'ಯಲ್ಲಿ ಮೂರ್ತಿ ರಾಮನಾಥಪುರಂ ಅವರು ಅನುವಾದಿಸಿದ ಎಸ್. ಕೆ. ಪೊಟ್ಟೆಕ್ಕಾಟ್ ಅವರ ಮಲೆಯಾಳಂ ಕಥೆ 'ಒಂದು ಗಡಿಯಾರದ ಕಥೆ' ಓದಿದೆ.

ವರ್ಷದ ಹಿಂದೆ, ಬಹಳಷ್ಟು ಎಂಟ್ಟಿಗೆ 'ಪ್ರಜಾವಾಣಿ'– 'ಸಾಪ್ತಾಹಿಕ ಪುರವಣಿ'ಯಲ್ಲೇ ೯೦ ಬೇಕು– ಇದೇ ವಸ್ತುವಿನ ಅನುವಾದಿತ ಕತೆ ಓದಿದ್ದ ಅಚ್ಚಳಿಯದ ನೆನಪು ಉಂಟಲ್ಲ !

ಗುಬ್ಬಿ –ಕೆ. ಕಾಳಯ್ಯ

ಈಶ್ವರ ಸಣಕಲ್ಲರು

ಎಪ್ರಿಲ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಸಿದ್ಧರಾಜ ಪೂಜಾರಿಯವರ 'ಕವಿಯೊಂದಿಗೆ ಕಳೆದ ಸಂಜೆ' ಎಂಬ ಲೇಖನವನ್ನು ಓದಿದಾಗ ಆತ್ಮೀಯತೆಯೊಂದಿದ್ದರೆ ಜೀವನದಲ್ಲಿ ಬದುಕಬೇಕೆನಿಸುವುದು ಎನ್ನುವ ಸಣಕಲ್ಲರ ಮಾತು ಹೃದಯವೀಣೆ ಮೀಟುವಂತಿದೆ.

ವಿಜಾಪುರ –ಕಿರಣ ವಿ. ದೇಸಾಯಿ

ಒಳ್ಳೆಯ ವ್ಯಕ್ತಿಚಿತ್ರಗಳು

ಸುಂದರ ಮುಖಪುಟದ ಮೇ 'ಕಸ್ತೂರಿ'ಯ ವೈಶಿಷ್ಟ್ಯವೆಂದು ನಾನು ಭಾವಿಸಿರುವುದು ಅಲ್ಲಿಯ ಮೂರು ವ್ಯಕ್ತಿಚಿತ್ರಗಳು. ಗೋವಿಂದ ಪೈ, ರಾಮಕುಮಾರ ಚೌಬೆ ಮತ್ತು ಗೌರೀಶ ಕಾಯ್ಕಿಣಿಯವರನ್ನು ಕುರಿತಂತೆ ಬಂದಿರುವ ಲೇಖನಗಳು ಈ ಮೂವರ ಸಾಧನೆಗಳನ್ನು ಹಾಗು ಪೈ ಮತ್ತು ಕಾಯ್ಕಿಣಿಯವರ ವಿಚಾರಗಳನ್ನು ಓದುಗರ ಮುಂದಿರಿಸುತ್ತವೆ. ಚೌಬೆಯವರ ಅಧ್ಯಯನ ಪ್ರವೃತ್ತಿ ಅವರನ್ನು ಉತ್ತುಂಗ ಶಿಖರಕ್ಕೆ ಎತ್ತರಿಸಿತೆಂಬುದು ನಿಜ. ಆದರೆ ನನಗೆ ವೈಯಕ್ತಿಕವಾಗಿ ಮೆಚ್ಚಿಗೆಯಾದದ್ದು ಪೈಗಳೊಂದಿಗೆ ಇಂದಿಗೆ ಮೂರು ದಶಕಗಳಷ್ಟು ಹಿಂದೆ ನಡೆದ ಸಂದರ್ಶನ. ಪಾ. ವೆಂ. ಆಚಾರ್ಯರು ಅಂದು ಕೇಳಿದ ಪ್ರಶ್ನೆಗಳೂ ಪೈಗಳ ಉತ್ತರಗಳೂ ಇಂದೂ ಅರ್ಥವತ್ತಾಗಿ ತೋರುತ್ತವೆ. ಕಾಯ್ಕಿಣಿಯವರ ಬಗ್ಗೆ ಬರೆಯುವಾಗ ಶಿವಾನಂದರು ಇನ್ನಷ್ಟು ತಿಳಿಯಾಗಬೇಕಿತ್ತೆನಿಸುತ್ತದೆ.

ಮೈಸೂರು –ಬಿ. ನಾರಾಯಣ

ಮೇ ೬೪ರ 'ಕಸ್ತೂರಿ' ಸಂಚಿಕೆಯ ಮುಖಪುಟದ ವರ್ಣಪಾರದರ್ಶಿಕೆಯನ್ನು ತೆಗೆದವರು ಶ್ರೀ ಬಿ. ವಿಶ್ವನಾಥ ಅವರು. ಅವರ ಹೆಸರು ಕಣ್ತಪ್ಪಿನಿಂದ ಅಚ್ಚಾಗದೆ ಹೋದುದಕ್ಕೆ ವಿಷಾದಿಸುತ್ತೇವೆ. –ಸಂ

ಕಸ್ತೂರಿ

ವರ್ಷ : ೨೭ ಜೂನ್ ೧೯೮೩ ಸಂಚಿಕೆ : ೧೦

ಅರ್ಥವಾಗದ ಪಾಠ

ಒಂದು ಕಾಲದಲ್ಲಿ ಒಬ್ಬ ಗುರು ಹಲವು ಮಂದಿ ವಿದ್ಯಾರ್ಥಿಗಳಿಗೆ ಪಾಠ ಕಲಿಸಿಕೊಂಡಿದ್ದ. ಒಮ್ಮೆ ಅವನು ಪ್ರತಿ ಮಕ್ಕಳೊಂದಿಗೂ, "ನಾನು ಕಲಿಸಿದ ಪಾಠ ನಿಮಗೆ ಅರ್ಥವಾಯಿತೆ?" ಎಂದು ಪ್ರಶ್ನಿಸಿದ. ಎಲ್ಲರೂ ಅರ್ಥವಾಯಿತೆಂದರು. ಆ ವಿದ್ಯಾರ್ಥಿಗಳ ಪೈಕಿ ಆ ದೇಶದ ರಾಜನ ಮಗನೂ ಒಬ್ಬ. ಅವನು ಸುಮ್ಮನಿದ್ದುದನ್ನು ನೋಡಿ, "ನಿನಗೆ?" ಎಂದು ಕೇಳಿದ ಗುರು.

"ನನಗೆ ಮೊದಲನೆಯ ಸಾಲು ಚೆನ್ನಾಗಿ ಅರ್ಥವಾಗಿದೆ; ಎರಡನೆಯ ಸಾಲು ಕೂಡಾ ಸುಮಾರಾಗಿ ಗೊತ್ತಾಗಿದೆ, ಆದರೆ..." ಎಂದು ಅರ್ಧಕ್ಕೇ ನಿಲ್ಲಿಸಿದ ರಾಜಕುಮಾರ.

"ಥೂ ಸೋಮಾರಿ, ಇದೇನಾ ನೀನು ಕಲಿತದ್ದು?" ಎಂದು ಕೋಪದಿಂದ ಗುರು ಬೆತ್ತ ತೆಗೆದುಕೊಂಡು ಒಂದೇ ಸಮನೆ ರಾಜಪುತ್ರನನ್ನು ಹೊಡೆಯಲಾರಂಭಿಸಿದ. ಆದರೆ ಸ್ವಲ್ಪ ಹೊತ್ತಿನಲ್ಲೇ ತಾನು ಹೊಡೆಯುತ್ತಿರುವುದು ಯಾರನ್ನೆಂಬುದು ಹೊಳೆದೊಡನೆಯೇ ಹೆದರಿ ಹೊಡೆಯುವುದನ್ನು ನಿಲ್ಲಿಸಿ ನಡುಗತೊಡಗಿದ.

ಆದರೆ ಗುರುವಿಗೆ ಭಯದೊಂದಿಗೆ ಆಶ್ಚರ್ಯವೂ ಆಗಿತ್ತು. ಕಾರಣ ಅಷ್ಟು ಪೆಟ್ಟು ತಿಂದರೂ ರಾಜಕುಮಾರನ ಮುಖದಲ್ಲಿ ಕಿಂಚಿತ್ತೂ ನೋವಾಗಲಿ, ವ್ಯಥೆಯಾಗಲಿ ಕಂಡುಬರಲಿಲ್ಲ, ಅವನು ಶಾಂತವಾಗಿಯೆ ನಿಂತಿದ್ದ.

ಗುರುವು ಸಂಕೋಚದಿಂದ, "ನಿನಗೆ ಅರ್ಥವಾದ ಆ ವಾಕ್ಯಗಳು ಯಾವವು?" ಎಂದು ಕೇಳಿದ.

"ಕೋಪವನ್ನು ನಿಗ್ರಹದಲ್ಲಿರಿಸಿ ಕೊಳ್ಳಬೇಕು; ಯಾವ ಕಾಲದಲ್ಲೂ ಸತ್ಯವನ್ನೇ ಹೇಳಬೇಕು ಎನ್ನುವ ಮಾತು," ಎಂದ ರಾಜಪುತ್ರ.

ಆ ಮಾತು ಕೇಳುತ್ತಿದ್ದಂತೆ ಗುರುವಿನ ಒಳಗಣ್ಣು ತೆರೆಯಿತು. ತಾನೇ ಬೋಧಿಸಿದ ಪಾಠವಾದರೂ ಅದರ ನಿಜವಾದ ಅರ್ಥವನ್ನು ತಾನೇ ತಿಳಿದುಕೊಳ್ಳಲಿಲ್ಲವಲ್ಲ ಎಂದು ವ್ಯಥೆಪಟ್ಟ.

—ಪ. ರಾಮಕೃಷ್ಣಶಾಸ್ತ್ರಿ



'ದೈತ್ಯ' ನಟ ಗಂಗಾಧರರಾಯರು

ಹ. ವೆಂ. ಸೀತಾರಾಮಯ್ಯ

ಐವತ್ತು ವರ್ಷಗಳ ಹಿಂದಿನ ಮಾತು. ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನ ಸ್ಕೇಟಿಂಗ್ ಹಾಲಿನಲ್ಲಿ ಕಿಕ್ಕಿರಿದ ಜನಸ್ತೋಮ. ಕೋಲಾರ ಗೋಲ್ಡ್ ಫೀಲ್ಡ್ಸ್‌ನ ಆಡಳಿತ ಶಾಖೆಯ ಪ್ರಮುಖ ಕಾರ್ಯನಿರ್ವಾಹಕ ಸರ್ ಜಾನ್ ಟೇಲರ್ ಅಲ್ಲದೆ ಪ್ರಮುಖ ಆಂಗ್ಲ ಅಧಿಕಾರಿಗಳು, ದೇಶೀಯ ಪ್ರಮುಖ ನಾಗರಿಕರು, ಭಾರತೀಯ ಉನ್ನತಾಧಿಕಾರಿಗಳು, ಇನ್ನೂ ಅನೇಕರು ಆ ಜನಸ್ತೋಮದಲ್ಲಿದ್ದರು. ಕಾರಣ: 'ರಂಗಮಂಚದ ಪ್ರತ್ಯಕ್ಷ ಯಮ' ಎಂದು ಖ್ಯಾತರಾಗಿದ್ದ ಪಾತ್ರಧಾರಿಯೋರ್ವರು ಜೀವಂತ ಕೋಣದ ಮೇಲೆ ಕುಳಿತು ಯಮನ ಪಾತ್ರ ನಿರ್ವಹಿಸಿದ್ದುದು.

ಅಂದು ಕರ್ನಾಟಕದ ಪ್ರಮುಖ ವೃತ್ತಿ ನಾಟಕ ಮಂಡಲಿಗಳಲ್ಲೊಂದೆನಿಸಿದ್ದ "ಲಲಿತ ಕಲಾ ವರ್ಧಿನಿ" ಪ್ರದರ್ಶಿಸುತ್ತಿದ್ದ "ಯಮ ಗರ್ವ ಭಂಗ" ನಾಟಕವನ್ನು ವೀಕ್ಷಿಸಲು ರಂಗಮಂದಿರದಲ್ಲಿ ಘೇರಾಯಿಸಿದ್ದ ಕಿಕ್ಕಿರಿದ ಪ್ರೇಕ್ಷಕವೃಂದ ಕಾತರವಾಗಿದ್ದಿತು.

ನಾಟಕ ವೇಳೆಗೆ ಸರಿಯಾಗಿ ಪ್ರಾರಂಭವಾಗಲು ಮೊದಲನೆಯ ಬೆಲ್ ಬಾರಿಸಿತು. ಅಂಕದ ಪರದೆ ಮೇಲೆದ್ದಿತು. ಕಿಕ್ಕಿರಿದಿದ್ದ ಜನಸ್ತೋಮ ಸ್ತಂಭೀಭೂತವಾಯಿತು. ಓರ್ವ ಆಜಾನುಬಾಹು ವ್ಯಕ್ತಿ ಜೀವಂತ ಕೋಣದ ಮೇಲೆ ಕುಳಿತು ರಂಗಮಂಚದ ಮೇಲೆ ಕಾಣಿಸಿಕೊಂಡಿತು. ಆ ವ್ಯಕ್ತಿಯ ಕಂಚಿನ ಕಂಠ. ಸಂಭಾಷಣೆಯಲ್ಲಿನ ಗುಡುಗು,

"ತರುವುದು ಬೇಗ ತ್ವರಿತದೊಳೀಗ ದುರು
ಳತನದ
ಖಳ ಮಾನವರ ದುರಿತವನೆಸಗಿದ ಮಾನವರ"

—ಎಂಬ ಹಾಡಿನಲ್ಲಿನ ಸಿಡಿಲು, ಕೆಲವು ಪ್ರೇಕ್ಷಕರನ್ನು ಚಕ್ಕಸ ಬೆರಗಾಗುವಂತೆಯೂ ಇನ್ನೂ ಕೆಲವರನ್ನು ಬೆಚ್ಚಿ ಬೀಳುವಂತೆಯೂ ಮಾಡಿತು. ಆತನ ದೇಹದಾರ್ಢ್ಯ, ಮೈನವಿರೇಳಿಸುವ ಮೀಸೆ, ರೌದ್ರಾವತಾರದ ಮುಖಮುದ್ರೆ ಜಾನ್ ಟೇಲರ್‌ರನ್ನು ಮಂತ್ರಮುಗ್ಧರನ್ನಾಗಿಸಿತು. ಆಂಗ್ಲ ಪ್ರೇಕ್ಷಕ ವೃಂದ ತಮ್ಮ ಅಭಿಮಾನದ ಕುರುಹಾಗಿ ಮನಿ ಪರ್ಸ್‌ಗಳನ್ನು ರಂಗಮಂಚಕ್ಕೆಸೆಯಿತು. ಮಾರ್ವಲೆಸ್ (ಅದ್ಭುತ) ವಂಡರ್‌ಫುಲ್ (ಆಶ್ಚರ್ಯ) ಎಂದು ಕೂಗಿ ಕಿವಿಯ ಸೆಲೆಗಳೊಡೆಯುವಂತೆ ಕರತಾಡನಗೈದಿತು. ನಾಟಕ ಮುಕ್ತಾಯವಾಗಲು ಒಂದು ದೃಶ್ಯವಿದ್ದಿತು. ಮುಂಭಾಗದ ಆಸನದಲ್ಲಿ ಕುಳಿತಿದ್ದ ಜಾನ್ ಟೇಲರ್ ಗತ್ತಿನಿಂದ ವೇದಿಕೆಯತ್ತ ನಡೆದು ಪಾತ್ರಧಾರಿಗೆ ಹಸ್ತಲಾಘವವನ್ನಿತ್ತು ಸಂತೋಷದ ಪ್ರತೀಕವಾಗಿ ಬಂಗಾರದ ಚೈನ್ ಒಂದನ್ನು ಬಹುಮಾನವಾಗಿ ಕೊರಳಿಗೆ ಹಾಕಿದರು. ಅಂದು ಉನ್ನತ ಆಂಗ್ಲ ಅಧಿಕಾರಿಗಳು ಕೊಟ್ಟ ಪ್ರಶಸ್ತಿ ಪತ್ರಗಳಿಗಂತೂ ಲೆಕ್ಕವೇ ಇಲ್ಲವಾಯಿತು. ಟೇಲರ್ ಅವರಂತೂ ಆ ವ್ಯಕ್ತಿಯನ್ನು ಹಾರ್ದಿಕವಾಗಿ ಆಲಂಗಿಸಿಕೊಂಡು, "ನಿಮ್ಮ ನಟನೆ ನಮ್ಮ ದೇಶದ (ಇಂಗ್ಲೆಂಡ್) ಪ್ರಖ್ಯಾತ ನಟರುಗಳಿಗೆ ಸರಿಸಮಾನವಾದದ್ದು. ನೀವು ಲಂಡನ್ನಿಗೆ ಬಂದು ನಮ್ಮ ಜನತೆಯ ಮುಂದೆ ಪ್ರದರ್ಶನ ನೀಡಬೇಕು" ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.

ತಮ್ಮ ಭಯಂಕರ ಪಾತ್ರದಿಂದ ಅಂದು ಆಂಗ್ಲರನ್ನು ತಲೆದೂಗಿಸಿ ಕನ್ನಡ ರಂಗನಟರು ಪಾಶ್ಚಾತ್ಯ ದೇಶದ ನಟರಿಗೆ ಯಾವ ರೀತಿಯಲ್ಲೂ ಕಡಿಮೆಯವರಲ್ಲ ಎಂಬುದನ್ನು ಸಾಬೀತು ಮಾಡಿದ ಈ ನಟ 'ಪ್ರಿನ್ಸ್ ಆಫ್ ಆಕ್ಟರ್ಸ್' (ನಟರುಗಳ ರಾಜ) 'ಅಭಿನವ ಕಂಠೀರವ,' 'ನಟಭಯಂಕರ' ಬಿರುದಾಂಕಿತರಾದ ಎಂ. ವಿ. ಗಂಗಾಧರರಾಯರು.

ಚಾಕಚಕ್ಯ

ಇದು "ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ" ಕರ್ನೂಲಿನಲ್ಲಿ ಮೊಕ್ಕಾಂ ಮಾಡಿ 'ಯಮ ಗರ್ವಭಂಗ', 'ಪ್ರಹ್ಲಾದ ಚರಿತ್ರೆ' ಮತ್ತು 'ಸುಭದ್ರಾ ಪರಿಣಯ' ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾಗ ನಡೆದ ಸಂಗತಿ. ಅಂದಿನ ಮದರಾಸು ರಾಜ್ಯದ ಅಭಿವೃದ್ಧಿ ಇಲಾಖೆಯ ಸಚಿವರಾಗಿದ್ದ ದಿವಾನ್ ಬಹದ್ದೂರ ಟಿ. ಎನ್. ಶಿವಜ್ಞಾನಂ ಪಿಳ್ಳೈ ಅವರಿಗೆ ರಾಯರ ಅಭಿನಯದ ನಾಟಕಗಳನ್ನು ನೋಡುವ ಸಂದರ್ಭ ಒದಗಿತು. ಮದರಾಸು ಮಂತ್ರಿಗಳ ಸಮ್ಮುಖದಲ್ಲಿ ಅಂದು 'ಪ್ರಹ್ಲಾದ ಚರಿತ್ರೆ' ನಾಟಕವನ್ನು ಅಭಿನಯಿಸಲಾಯಿತು. ರಾಯರು ದೈತ್ಯ ಹಿರಣ್ಯಕಶಿಪುವಿನ ಪಾತ್ರ ವಹಿಸಿದ್ದರು.

ಈ ಪಾತ್ರವನ್ನು ಅಭಿನಯಿಸುವಾಗ ಅವರಿಗೆ ಅವ್ಯಕ್ತ ಸ್ಫೂರ್ತಿಯ ಆವೇಶವೇ ಬರುತ್ತಿತ್ತು. ಪಾತ್ರಕ್ಕೆ ಅನುಗುಣವಾಗಿದ್ದ ದೈತ್ಯಶಕ್ತಿ ಅವರ ಧಮನಿಗಳಲ್ಲಿ ಪ್ರವಹಿಸುತ್ತಿತ್ತು. ಬಾಲಕ ಪ್ರಹ್ಲಾದನನ್ನು "ಎಲ್ಲಿ ನಿನ್ನ ಶ್ರೀಹರಿ, ತೋರಿಸು" ಎಂದು ಅವನ ಎರಡು ಕಾಲುಗಳನ್ನೂ ತಮ್ಮ ಒಂದೇ ಕೈಯಿಂದ ಮೇಲಕ್ಕೆ ಎತ್ತಿ ಹಿಡಿದು ನಿಲ್ಲಿಸುತ್ತಿದ್ದರು. ಸರ್ಕಸ್ ಕಲಾವಿದನಿಗೂ ಒಮ್ಮೊಮ್ಮೆ ಅಸಾಧ್ಯವಾಗಬಹುದಾಗಿದ್ದ ಶಕ್ತಿ ನೈಪುಣ್ಯ. ಈ ದೃಶ್ಯವನ್ನು ನೋಡಿದ ಮದರಾಸಿನ ಅಮಾತ್ಯರು ಅಚ್ಚರಿಗೊಂಡು ಕನ್ನಡ ಕಲಾವಿದ ರಾಯರ ಪ್ರತಿಭೆಯನ್ನು ಕೊಂಡಾಡಿದರು.

ಇನ್ನೊಮ್ಮೆ ಕಂಪನಿ ರಾಯಚೂರು ಮೊಕ್ಕಾಂ ಪ್ರಾರಂಭಿಸಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ರಾಯಚೂರಿನ ಜನತೆ ರಾಯರ ಭಯಾನಕ ಪಾತ್ರಗಳ ಅಭಿನಯಕ್ಕೆ ಮಾರುಹೋಗಿತ್ತು. ಪ್ರತಿದಿನವೂ ರಂಗಮಂದಿರ ಪ್ರೇಕ್ಷಕರಿಂದ ತುಂಬಿ ಹೋಗುತ್ತಿತ್ತು. ರಾಯರ ಅಭಿನಯವನ್ನು ನೋಡುವ ಸಲುವಾಗಿಯೇ ಜನರು ಒಂದೆರಡು ದಿನಗಳ ಮುಂಚಿತವಾಗಿಯೇ ಟಿಕೇಟುಗಳನ್ನು ಕೊಂಡು ಇಟ್ಟುಕೊಳ್ಳುತ್ತಿದ್ದರು. ಹೀಗೆ ಮಾಡದಿದ್ದಲ್ಲಿ ನಾಟಕ ನೋಡಲು ಅವಕಾಶವೇ ಸಿಕ್ಕುತ್ತಿರಲಿಲ್ಲ. ಹುಬ್ಬಳ್ಳಿ ಮತ್ತು ಧಾರವಾಡಗಳಿಂದ

ಕಲಾಭಿಮಾನಿಗಳು ತಂತಿಗಳನ್ನು ಕೊಟ್ಟು ತನ್ಮೂಲಕ ತಮ್ಮ ತಮ್ಮ ಸ್ಥಳಗಳನ್ನು ಕಾಯ್ದಿರಿಸಿಕೊಳ್ಳುತ್ತಿದ್ದರು.

ಆ ದಿನಗಳಲ್ಲಿ ಒಂದು ಅಪೂರ್ವ ಪ್ರಸಂಗ ನಡೆಯಿತು. ಅಂದು ರಾತ್ರಿ 'ಶರಭ ಲೀಲೆ' ನಾಟಕ ಪ್ರದರ್ಶನ. ಎಂದಿನಂತೆ ಪ್ರೇಕ್ಷಕರು ರಂಗಮಂದಿರದಲ್ಲಿ ಕಿಕ್ಕಿರಿದು ನೆರೆದಿದ್ದರು. ವೀರಶೈವ ಮಠದ ಮಹಾಸ್ವಾಮಿಗಳೊಬ್ಬರು ಅನಿರೀಕ್ಷಿತವಾಗಿ ತಮ್ಮ ಕೆಲವು ಶಿಷ್ಯರೊಡನೆ ನಾಟಕ ನೋಡಲು ಬಂದು ಕುಳಿತರು. ನಾಟಕವನ್ನು ಮನಸಾರೆ ಸವಿದು ಆನಂದಿಸಿದರು. ನಾಟಕ ಮುಕ್ತಾಯವಾಗಲು ಒಂದೆರಡು ದೃಶ್ಯಗಳಿದ್ದಾಗ ಸಂಸ್ಥೆಯ ಮಾಲೀಕರಿಗೆ ಹೇಳಿ ಕಳುಹಿಸಿ ರಂಗಮಂದಿರದಲ್ಲಿ ದರ್ಶನ ಕೊಟ್ಟು ನಾಟಕವನ್ನೂ, ರಾಯರ ಪಾತ್ರವನ್ನೂ ಕೊಂಡಾಡಿದರು. ರಾಯರಿಗೆ ಹಾರ ಹಾಕಿ ಬಂಗಾರದ ಪದಕ ಕೊಟ್ಟು "ನಟ ಭಯಂಕರ" ಎಂಬ ಬಿರುದನ್ನು ದಯಪಾಲಿಸಿದರು.

ಪ್ರಶಸ್ತಿಗಳು

ಚಿತ್ರದುರ್ಗದ ಮೊಕ್ಕಾಂ. 'ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ'ಕ್ಕೆ ಉತ್ತೇಜನದ ಸುರಿಮಳೆಯೇ ಸುರಿಯಿತು. ಪ್ರತಿದಿನವೂ ರಂಗಮಂದಿರ ಪ್ರೇಕ್ಷಕರಿಂದ ಕಿಕ್ಕಿರಿಯುತ್ತಿತ್ತು. ರಾಯರ ಪಾತ್ರಗಳು ಪ್ರೇಕ್ಷಕರಿಗೆ ಮೋಡಿಯನ್ನೇ ಹಾಕಿದ್ದವು. ಸಮಾಜದ ಎಲ್ಲಾ ವರ್ಗದವರೂ ರಾಯರ ಪಾತ್ರವನ್ನು ಒಪ್ಪಿ ಅಭಿನಯ ಕಲೆಯನ್ನು ಶ್ಲಾಘಿಸತೊಡಗಿದರು. ಅವರ ಅಭಿನಯ ಪ್ರೌಢಿಮೆಗೆ ಪುರಜನರ ಸನ್ಮಾನ ಪ್ರಶಸ್ತಿ ದೊರಕಿತು.

ಅಂದು 'ಸುಭದ್ರಾ ಪರಿಣಯ' ನಾಟಕ. ರಾಯರೇ ಬಲರಾಮ. ಎಂ. ವಿ. ಸುಬ್ಬಯ್ಯ,



'ಭಕ್ತ ಪ್ರಹ್ಲಾದ' ನಾಟಕದಲ್ಲಿ ಗಂಗಾಧರರಾಯರು (ಹಿರಣ್ಯ ಕಶಿಪು)
ಎಂ. ಸುಬ್ಬರಾವ್ (ಕಯಾದು)

ನಾಯ್ದು ಶ್ರೀಕೃಷ್ಣ, ಎಚ್. ಎಲ್. ಎನ್. ಸಿಂಹ ಘಟೋತ್ಕಚ. ರಾಯರ ಅಳಿಯ ಗಾಯಕ ನಟ ಎಂ. ಸುಬ್ಬರಾವ್ ಸುಭದ್ರೆ. ಬಲರಾಮನ ಪಾತ್ರವನ್ನು ರಾಯರು ಅಮೋಘವಾಗಿ ನಟಿಸುತ್ತಿದ್ದರು. ಚಿತ್ರದುರ್ಗದ ಕಲಾರಸಿಕರು ಪುರಜನರು, ಹೂವಿನ ಹಾರ ಹಾಕಿ ಸ್ವರ್ಣ ಪದಕವನ್ನಿತ್ತು 'ಅಭಿನವ ಕಂಠೀರವ' ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಈ ಪ್ರಜಾ ಪ್ರಶಸ್ತಿಯನ್ನು ರಾಯರು ಪ್ರಭುತ್ವದ ಪ್ರಶಸ್ತಿ ಎಂದೇ ಸ್ವೀಕರಿಸಿದರು. ದುರ್ಗದ ಕಲಾರಸಿಕರಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು.

ಯಶಸ್ವಿ ನಾಟಕ ಪ್ರದರ್ಶನಗಳ ನಂತರ ನಾಟಕ ಸಂಸ್ಥೆ ಚಿತ್ರದುರ್ಗದಿಂದ ಹೊಸಪೇಟೆಗೆ ತೆರಳಿತು. ಇಲ್ಲಿ 'ಶ್ರೀ ರಾಮಾಂಜನೇಯ ಯುದ್ಧ' (ತೋರಣಗಲ್ ರಾಜಾರಾಯರಿಂದ ವಿರಚಿತ) ನಾಟಕವನ್ನು ಪ್ರದರ್ಶಿಸತೊಡಗಿತು. ನಾಟಕ ರಸಿಕರ ಮನ್ನಣೆಗೆ ಪಾತ್ರವಾಯಿತು.

ನಾಟಕದ ಹೆಸರಿನಿಂದಲೇ ಆಕರ್ಷಿತರಾದ ಕೂಡ್ಲಿ ಶ್ರೀ ಶೃಂಗೇರಿ ಮಠದ ಏಜಂಟರು ತಮ್ಮ ಪರಿವಾರದೊಡನೆ ಸೂಚನೆ ಕೊಡದೆಯೇ ನಾಟಕ ವೀಕ್ಷಣೆಗೆ ಬಂದರು. ಶ್ರೀ ಮಠದ ಏಜೆಂಟರು ನಾಟಕಕ್ಕೆ ಪರಾಂಬರಿಸಿದುದು ಕಲಾವಿದರಿಗೆ ದೈವಿಕ ಸ್ಫೂರ್ತಿಯನ್ನಿತ್ತಿತು. ಎಲ್ಲರೂ ಭಯ, ಭಕ್ತಿಯಿಂದ ಪಾತ್ರಗಳನ್ನು ನಿರ್ವಹಿಸಿದರು. ಅಂದು ರಾಯರು ಆಂಜನೇಯನ ಪಾತ್ರವಹಿಸಿದ್ದರು. ಪ್ರೌಢ ಸಂಭಾಷಣೆ ಮತ್ತು ವಿವಿಧ ರಾಗಗಳಿಂದ ರಂಜಿತವಾದ ಹಾಡುಗಳು, ವೃತ್ತ ಹಾಗೂ ಸೀಸ ಪದ್ಯಗಳ ಗಾಯನ ಪ್ರೇಕ್ಷಕರಂತೆಯೇ ಶ್ರೀ ಮಠದ ಏಜಂಟರನ್ನೂ ಮೈಮರೆಸಿತು. ನಾಟಕದ ನಂತರ ಏಜೆಂಟರು ನೇಪಥ್ಯಕ್ಕೆ ಬಂದು ರಾಯರನ್ನೂ ಇತರ ಕಲಾವಿದರನ್ನೂ ಹಾರ್ದಿಕವಾಗಿ ಅಭಿನಂದಿಸಿದರು.

ಮರುದಿನ ರಾಯರಿಗೆ ಕೂಡ್ಲಿ ಮಠದ ಶ್ರೀಗಳ ಮಂಗಳ ಆಶೀರ್ವಾದವೂ ಪ್ರಾಪ್ತವಾಯಿತು.

೧೯೩೧. ಗುಬ್ಬಿ ಕಂಪನಿ ತಮಿಳುನಾಡಿನ ಮಧುರೈ ಮೊಕ್ಕಾಂ ಮಾಡಿ 'ಪ್ರಹ್ಲಾದ ಚರಿತ್ರೆ' ನಾಟಕವನ್ನಾಡತೊಡಗಿತು. ತಮಿಳುನಾಡಿನಲ್ಲಿ ಕನ್ನಡ ರಂಗ ಕಲಾವಿದರ ಜಯಭೇರಿ ಮೊಳಗುತ್ತಿತ್ತು. ಎಟ್ಟಿಯಾಪುರಂ ಮಹಾರಾಜರು ಹಿರಣ್ಯಕಶಿಪು ಪಾತ್ರವನ್ನು ನೋಡಲೆಂದೇ ನಾಟಕಕ್ಕೆ ಆಗಮಿಸಿದ್ದರು. ನಾಟಕ ವೀಕ್ಷಿಸಿ ಅಮಿತಾನಂದಗೊಂಡರು. ಮುಕ್ತ ಕಂಠದಿಂದ ರಾಯರ ಅಭಿನಯವನ್ನು ಕೊಂಡಾಡಿದ ಅವರು ವಜ್ರದ ಪದಕವೊಂದನ್ನು ಬಹುಮಾನವಾಗಿತ್ತರು.

೧೯೩೦. ಗುಬ್ಬಿ ಕಂಪನಿ ಉಡುಪಿ ಮೊಕ್ಕಾಂ ಮಾಡಿ 'ಪ್ರಹ್ಲಾದ ಚರಿತ್ರೆ' ನಾಟಕವನ್ನು ಪ್ರದರ್ಶಿಸತೊಡಗಿತ್ತು. ರಾಯರ ಹಿರಣ್ಯಕಶಿಪುವಿನ ಪಾತ್ರದ ಖ್ಯಾತಿ ಅಷ್ಟ ಮಠಾಧೀಶರಲ್ಲೊಬ್ಬರಾದ ಶ್ರೀ ಫಲಿಮಾರು ಮಠಾಧೀಶರ ಕಿವಿಗೂ ಬಿದ್ದಿತು. ನಾಟಕ ನೋಡಲು ಸ್ವಾಮಿಗಳು ಇಚ್ಛಯಿಸಿದರು. ನಾಟಕಕ್ಕೆ ಆಗಮಿಸಿದ ಶ್ರೀ ಸ್ವಾಮಿಗಳು ನಾಟಕ ಪೂರ್ಣವಾಗುವವರೆಗೂ ತಲ್ಲೀನರಾಗಿ ವೀಕ್ಷಿಸಿದರು. ಅದ್ದೂರಿಯ ಪೀತಾಂಬರ, ಶಾಲು ಜೋಡಿ, ಹಾರ್ಮೋನಿಯಮ್ಮನ್ನು ಆಶೀರ್ವಾದಪೂರ್ವಕವಾಗಿ ರಾಯರಿಗೆ ಅನುಗ್ರಹಿಸಿದರು.

ಮೊಳಕೆಯಲ್ಲಿ

೧೮೮೮ ಏಪ್ರಿಲ್ ೩. ಗಂಗಾಧರರಾಯರು ಮೂಕನಹಳ್ಳಿಯಲ್ಲಿ (ಈ ಕುಗ್ರಾಮ ತುಮ) ಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿದೆ ಜನಿಸಿದರು. ತಂದೆ ನರಸಿಂಹಯ್ಯ ತಾಯಿ-ಸಾಕಮ್ಮ. ಬಾಲ್ಯದಲ್ಲಿಯೇ ಪಿತೃವಿಯೋಗವಾಯಿತು. ಸೋದರರ ಮಮತೆಯ ರಕ್ಷಣೆಯಲ್ಲಿ ಬಾಲ್ಯ ಜೀವನ ವಿಕಾಸಗೊಂಡಿತು.

ಹುಡುಗನಾಗಿದ್ದಾಗಿನಿಂದಲೂ ನಾಟಕವೆಂದರೆ ಪಂಚಪ್ರಾಣ. ಸುತ್ತಮುತ್ತಲಿನ ಎಲ್ಲೇ ನಾಟಕ ಇದ್ದರೂ ಅಲ್ಲಿಗೆ ಓಡುತ್ತಿದ್ದರು.

ನಾಟಕದ ಕಲೆ ಕೈ ಬೀಸಿ ಕರೆಯುತ್ತಿದ್ದುದರಿಂದ ಮನಸ್ಸು ಅತ್ತ ಕಡೆಯೇ ವಾಲುತ್ತಿತ್ತು. ಶಾಲೆಯ ವ್ಯಾಸಂಗದ ಬಗ್ಗೆ ಧ್ಯಾಸವೇ ಇರುತ್ತಿರಲಿಲ್ಲ. ಎಸ್. ಎಸ್. ಎಲ್. ಸಿ. ಯ ವರೆಗೆ ಓದು ಮುಗಿಸುವುದರಲ್ಲಿ ಅವರಿಗೆ ಸಾಕು ಸಾಕಾಗಿ ಹೋಯಿತು.

ಊರಿನ ಶ್ಯಾನಭೋಗರಾಗಿದ್ದ ಅವರ ಅಣ್ಣ, ತಮ್ಮನ ಭವಿಷ್ಯದ ಬಗ್ಗೆ ಚಿಂತಿಸಿದರು. ಶ್ಯಾನುಭೋಗರಾದ ಅವರಿ ಆ ಊರಿಗೊಂದು ಪ್ರಾಥಮಿಕ ಶಾಲೆಯನ್ನು ಮಂಜೂರು ಮಾಡಿಸಿದರು. ತಿಂಗಳಿಗೆ ಏಳೂವರೆ ರೂಪಾಯಿಗಳ ಸಂಬಳದ ಉಪಾಧ್ಯಾಯರ ಕೆಲಸ ರಾಯರಿಗೆ ಸಿಕ್ಕಿತು. ಶಾಲೆಯಲ್ಲಿ ರಾಯರು ಪಾಠ ಹೇಳಲಿಲ್ಲ. ವ್ಯಾಯಾಮ ಕಲಿಸಿದರು. ಕುಸ್ತಿಯ ಪಟ್ಟುಗಳನ್ನು ಹೇಳಿಕೊಟ್ಟರು. ಆರು ತಿಂಗಳಲ್ಲಿ ಈ ಕೆಲಸ ಸಾಕೆನಿಸಿತು. ಕೆಲಸಕ್ಕೆ ತ್ಯಾಗಪತ್ರ ನೀಡಿ ಊರಿನಲ್ಲಿ ಸುಮ್ಮನೆ ಕುಳಿತರು ಸಂಗೀತವನ್ನು ಕಲಿಯಬೇಕೆಂದು ಅವರ ಮನಸ್ಸು ಹಂಬಲಿಸಿತು. ತುಮಕೂರಿನ ಪಿಟೀಲು ವಿದ್ವಾನ್ ಒಬ್ಬರ ಬಳಿ ಶಾಸ್ತ್ರೀಯ ಸಂಗೀತವನ್ನು ಕೆಲ ಕಾಲ ಅಭ್ಯಸಿಸಿದರು. ಕಟ್ಟುಮಸ್ತಾಗಿ ಬೆಳೆದು ದೃಢಕಾಯರಾಗಿದ್ದ ನನ್ನ ತಮ್ಮನಿಗೆ (ಗಂಗಾಧರರಾಯರಿಗೆ) ಪೋಲೀಸ್ ಕೆಲಸಕ್ಕೆ ಹಾಕಿದರೆ ಅಲ್ಲಾದರೂ ನಿಲ್ಲುವನೆಂದು ಭಾವಿಸಿದ ಅವರ ಅಣ್ಣನವರು ಪ್ರಯತ್ನಪಟ್ಟು ಪೋಲೀಸ್ ಪೇದೆಯ ಕೆಲಸ ಕೊಡಿಸಿಕೊಟ್ಟರು. ರಾಯರು ಕೆಲಸದ ಮೇಲೆ ತುಮಕೂರಿಗೆ ಹೋದರು. ಆಗ ರಾಯರಿಗೆ ಇಪ್ಪತ್ತರ ಹರಯ. ಆರು ಅಡಿ ಎತ್ತರ, ಇನ್ನೂರು ಐವತ್ತು ಪೌಂಡ್ ತೂಕ. ಪರೇಡ್ ಮೈದಾನದಲ್ಲಿ ಕವಾಯಿತು ಮಾಡುವ ಸಮಯ. ಪೋಲೀಸ್ ಅಧಿಕಾರಿ ರಾಯರನ್ನು ಹಂಗಿಸಿ ನುಡಿದ. ರಾಯರಿಗೆ ಕೋಪ ನೆತ್ತಿಗೇರಿತು. ಸಿಡಿದೆದ್ದ ಅವರು ಆ ಪೋಲೀಸ್ ಅಧಿಕಾರಿಯನ್ನು ಅನಾಮತ್ ಮೇಲಕ್ಕೆ ಎತ್ತಿ ನೆಲಕ್ಕೆ ಕುಕ್ಕಲು ಸಿದ್ಧರಾದರು. ಅಕ್ಕಪಕ್ಕದವರಿಂದ ಅನಾಹುತ ತಪ್ಪಿತು. ಉದ್ಯೋಗ ಕೈಬಿಟ್ಟುಹೋಯಿತು.



ಪೋಲೀಸ್ ಕೆಲಸವನ್ನೂ ಬಿಟ್ಟು ಬಂದ ರಾಯರು ಊರಿನಲ್ಲಿ ಸೋಮಾರಿಯಾಗಿ ಕೂಡಲಿಲ್ಲ. ಈ ಬಾರಿ ಹೊಸದೊಂದು ಕಾರ್ಯವನ್ನು ಕೈಗೊಂಡರು.

ಅ[illegible] ಹಳೆಯ ಕಾಲ. ಮನರಂಜನೆಯ ಸಾಧನಗಳು ಇಂದಿನಂತೆ ವೈಜ್ಞಾನಿಕವಾಗಿ ಮುಂದುವರಿದಿರಲಿಲ್ಲ. ಗ್ರಾಮಫೋನಿನ ಗಾಯನ [illegible] ಆಗ [illegible]. ರಾಯರು ತಮ್ಮ [illegible] [illegible] [illegible] ಗ್ರಾಮಫೋನ್ [illegible] ಹಲವಾರು ರಿಕಾರ್ಡ್‌ಗಳನ್ನೂ [illegible] [illegible]. ಹಳ್ಳಿಗರಿಗೆ ಸಂಗೀತದ ಸಮಾರಾಧನೆ [illegible]. ಹಳ್ಳಿ ಹಳ್ಳಿಗಳಿಂದ [illegible] [illegible] ಗೋಷ್ಠಿ, ದುಡ್ಡು, ದವಸ

ಮಾನರಂಜನೆ, ಇವರಿಗೂ ಏನೋ ಸಂತೋಷ.

ಮೊದಲ ಪಾತ್ರ

ರಾಯರ ನಾಟಕ ಜೀವನಕ್ಕೆ ನಾಂದಿಯಾದ ಪ್ರಕರಣವೊಂದು ಈ ಸಮಯದಲ್ಲೇ ಮೂಕನ ಪಳ್ಳಿಯಲ್ಲಿ ಜರುಗಿತು.

'ಶಿರಯಾಳ ಚರಿತ್ರೆ'ಯು ನಾಟಕವನ್ನು ಆಡ ಬೇಕೆಂದು ಊರಿನ ಪ್ರಮುಖರು ತೀರ್ಮಾನಿಸಿದರು. ನಾಟಕದ ನಾಯಕನ ಪಾತ್ರವನ್ನು ಗಂಗಾಧರರಾಯರೇ ವಹಿಸಬೇಕೆಂದು ಸರ್ವಾನುಮತದ ತೀರ್ಮಾನವಾಯಿತು. ಉಗಾದಿಯ ದಿನದಂದು ಊರಿನಲ್ಲಿ ನಾಟಕ ಪ್ರದರ್ಶನ. ಊರಿಗೆ ಊರೇ ನಾಟಕ ನೋಡಲು ನೆರೆದಿತ್ತು. ಅಂದು ಧರ್ಮಪಾಲನೆ ಪಾತ್ರವನ್ನು ರಾಯರು ಅಮೋಘವಾಗಿ ಅಭಿನಯಿಸಿದರು.

ರಾಯರ ಅದ್ಭುತವಾದ ಮೈಕಟ್ಟು, ಸಾಹಿತ್ಯದ ಪರಿಜ್ಞಾನ, ಸಂಗೀತದಲ್ಲಿ ಗಳಿಸಿದ್ದ ಸಾಧನೆ, ನೈಜ ಅಭಿನಯಗಳು ಮೇಳವಿಸಿ, ಧರ್ಮಪಾಲನ ಪಾತ್ರವನ್ನು ಜೀವಂತಗೊಳಿಸಿದ್ದುವು. ರಾಯರ ಅಭಿನಯಕ್ಕೆ ಅಗ್ರ ತಾಂಬೂಲ ದೊರೆಯಿತು. ರಾಯರು ನಟಶ್ರೇಷ್ಠರಾಗುವರೆಂದು ಗ್ರಾಮದ ಹಿರಿಯರು ಕಾಲಜ್ಞಾನ ನುಡಿದರು.

ಜೀವನದಲ್ಲಿ ಅಭಿನಯಿಸಿದ ಈ ಪ್ರಥಮ ಪಾತ್ರದಿಂದ ನಟನಾಗಿ, ಬಾಳನ್ನು ಪರಿವರ್ತಿಸಬೇಕೆಂದು ಸುಸ್ಪಷ್ಟ ಸ್ಫೂರ್ತಿ ದೊರೆಯಿತು.

ಪರಿಣಾಮ ೧೯೧೪ರಲ್ಲಿ ತುಮಕೂರಿನ 'ಸೀತಾ ಮನೋಹರ ನಾಟಕ ಸಭಾ' ಎಂಬ ವೃತ್ತಿ ನಾಟಕ ಸಂಸ್ಥೆಗೆ ಪಾದಾರ್ಪಣ ಮಾಡಿದರು. ಆಗ ರಾಯರಿಗೆ ಇಪ್ಪತ್ತಾರು ವರ್ಷ ವಯಸ್ಸು. ಧೀರೋದಾತ್ತ ಪಾತ್ರಗಳಿಗೆ ಹೇಳಿ ಮಾಡಿಸಿದ ವ್ಯಕ್ತಿತ್ವ. ಇಲ್ಲಿ 'ಸುಭದ್ರ' ನಾಟಕದಲ್ಲಿ ಬಲರಾಮನ ಪಾತ್ರವನ್ನು ವಹಿಸತೊಡಗಿದರು. ಇವರ ಪಾತ್ರಾಭಿನಯದ ಪ್ರಶಂಸೆ ತುಮಕೂರು ಜಿಲ್ಲೆಯ ಮೂಲೆ ಮೂಲೆಯಲ್ಲಿಯೂ ಪ್ರತಿಧ್ವನಿಸಿತು.

ಆ ಕಾಲದಲ್ಲಿ ಚಂದಣ್ಣನವರ ನೇತೃತ್ವದಲ್ಲಿ ನಡೆಯುತ್ತಿದ್ದ ಗುಬ್ಬಿ ಕಂಪನಿ ತುಂಬ ಹೆಸರು ಮಾಡಿದ್ದಿತ್ತು. ವೈಶಿಷ್ಟ್ಯಪೂರ್ಣವಾದ ರಾಯರ ವ್ಯಕ್ತಿತ್ವ ಗುಬ್ಬಿ ಕಂಪನಿಯ ಘನತೆಯನ್ನು ಹೆಚ್ಚಿಸಬಲ್ಲದು ಎಂದು ತಿಳಿದ ಚಂದಣ್ಣನವರು ರಾಯರನ್ನು ತಮ್ಮ ಕಂಪನಿಗೆ ಸೇರಲು ಆಹ್ವಾನವಿತ್ತರು. ಇಲ್ಲಿ ರಾಯರ ಅಭಿನಯ ಕಲೆ ವಿಕಾಸವಾಗಲು, ಕೀರ್ತಿ ವಿಸ್ತಾರವಾಗಿ ಹರಡಲು ಭೂಮಿಕೆ ದೊರೆಯಿತು.

'ಭಕ್ತ ಪ್ರಹ್ಲಾದ' ನಾಟಕದಲ್ಲಿ ಹಿರಣ್ಯಕಶಿಪು ಪಾತ್ರವನ್ನೂ, 'ಕೃಷ್ಣಲೀಲೆ' ನಾಟಕದಲ್ಲಿ ಕಂಸನ ಪಾತ್ರವನ್ನೂ 'ಯಮ ಗರ್ವಭಂಗ' ನಾಟಕದಲ್ಲಿ ಯಮನ ಪಾತ್ರವನ್ನೂ ಅತ್ಯಂತ ಪ್ರೌಢಿಮೆ ವೆಯಿಂದ ನಿರ್ವಹಿಸತೊಡಗಿದರು. ಈ ಪಾತ್ರಗಳನ್ನು ನೋಡಿ ತಣಿಯದ ಕಲಾಭಿಮಾನಿಗಳೇ ಇಲ್ಲವಾದರು. ನಾಡಿನ ಉದ್ದಗಲಕ್ಕೂ ಅವರ ಕೀರ್ತಿ ಬೆಳಗಿತು.

ಗುಬ್ಬಿ ಕಂಪನಿ ಸೇಲಂ ನೆಕ್ಕಾಂ ಮಾಡಿದ್ದಾಗ ರಾಯರು ಕಾರಣಾಂತರಗಳಿಂದ ಆ ನಾಟಕ ಸಂಸ್ಥೆಯಿಂದ ಹೊರಬಂದರು.

ಸ್ವಂತ ಕಂಪನಿ

ಗುಬ್ಬಿ ಕಂಪನಿ ಬಿಟ್ಟ ರಾಯರು ತರುವಾಯ ಪ್ರವೇಶಿಸಿದ ಇನ್ನೊಂದು ನಾಟಕ ಸಂಸ್ಥೆ 'ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ.' ಇದನ್ನು ಚನ್ನಪಟ್ಟಣದ ಟಿ. ಎಸ್. ಗುರಿಕಾರರು ನಡೆಸುತ್ತಿದ್ದರು. ಇಲ್ಲಿ ಏಳು ವರ್ಷಗಳ ಕಾಲ ವಿವಿಧ ಪಾತ್ರಗಳನ್ನು ನಿರ್ವಹಿಸಿದರು. ಪಾಲುದಾರರೂ ಆದರು. 'ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ'ದೊಡನೆ ರಾಯರು ಸಮಗ್ರ ನಾಡಿನ ದರ್ಶನ ಪಡೆದರು. ತಮ್ಮ ಅಭಿನಯ ಕಲೆಯಿಂದ ಲಕ್ಷಾಂತರ ಮಂದಿ ಕನ್ನಡ ಕಲಾಭಿಮಾನಿಗಳನ್ನು ರಂಜಿಸಿದರು.

'ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ' ಯಶಸ್ವಿಯಾಗಿ ಉತ್ತರ ಕರ್ನಾಟಕದ ಯಾತ್ರೆಯನ್ನು ಮುಗಿಸಿ, ಬೆಂಗಳೂರಿಗೆ ಬಂದು ನಾಟಕಗಳನ್ನು ಪ್ರದರ್ಶಿಸಲಾರಂಭಿಸಿತು. ಈ ಸಮಯದಲ್ಲಿ ಕಂಪನಿಯ ವ್ಯವಹಾರದಲ್ಲಿ ಕೆಲವು ಮಾರ್ಪಾಟುಗಳಾದವು. ಸಂಸ್ಥೆಯ ಪಾಲುದಾರರಾಗಿದ್ದ ಗುರಿಕಾರರು ತಮ್ಮ ಲೆಕ್ಕವನ್ನು ಫೈಸಲ್ ಮಾಡಿ

ಕೊಂಡು, ಕಂಪನಿಯ ಜತೆಯ ತಮ್ಮ ಸಂಬಂಧವನ್ನು ಕಳೆದುಕೊಂಡರು. ಇದರಿಂದಾಗಿ ನಟ ಭಯಂಕರ ಗಂಗಾಧರರಾಯರೇ ಸಂಸ್ಥೆಯ ಏಕೈಕ ಒಡೆಯರಾದರು. ರಾಯರು ತಮ್ಮ ಮಾಲೀಕತ್ವದ ಹೊಸ ಸಂಸ್ಥೆಗೆ 'ಶ್ರೀ ವಿಶ್ವೇಶ್ವರ ನಾಟಕ ಸಭಾ' ಎಂದು ನಾಮಕರಣ ಮಾಡಿದರು.

ರಾಯರ ಸ್ವಂತ ಕಂಪನಿಗೆ ಬಾಲ್ಯದಲ್ಲಿಯೇ ಬಾಲಗ್ರಹ ಬಡಿಯಿತು. ಕಂಪನಿ ಉದಯಿಸಿದ ಒಂದು ವರ್ಷದೊಳಗೇ ಒಡೆದುಹೋಯಿತು. ದೈವೀ ಕಲೆಯ ಈ ಕಲಾವಿದ ಶಾಪಗ್ರಸ್ತರಾದರು. ತಮ್ಮ ದುರ್ವಿಧಿಯನ್ನು ಹಳಿದುಕೊಂಡು ಮೂಕನಹಳ್ಳಿಗೆ ಹೋಗಿ ಕುಳಿತು ಬಿಟ್ಟರು.

ಸ್ವಂತ ಕಂಪನಿ ಕಟ್ಟಿ ಸಾಲ ಸೋಲ ಮಾಡಿಕೊಂಡು ಅದೆಷ್ಟೋ ಬಾರಿ ತಿಂಗಳಾನುಗಟ್ಟಲೆ ಅಜ್ಞಾತವಾಸವನ್ನೂ ಅನುಭವಿಸಿದ್ದರು.

ಗುಬ್ಬಿ ಕಂಪನಿ ಮತ್ತೆ ರಾಯರನ್ನು ಆಹ್ವಾನಿಸಿತು. ನಿಬಂಧನೆಯೂ ಆಕರ್ಷಕವಾಗಿತ್ತು. ಗುಬ್ಬಿ ಶಾಖಾ ಕಂಪನಿಯ ಮಾಲೀಕರಲ್ಲೊಬ್ಬರಾಗಿ ರಾಯರು ಪಾತ್ರಗಳನ್ನು ವಹಿಸುತ್ತ ಅಲ್ಲಿ ಉಳಿದರು.

ಈ ಕಂಪನಿಯ 'ಕೃಷ್ಣಲೀಲ' ನಾಟಕದಲ್ಲಿ ರಾಯರು ಕಂಸ, ಗುಬ್ಬಿ ವೀರಣ್ಣನವರು ಮಕರಂದ. ನಾಟಕ ಪ್ರೇಕ್ಷಕರನ್ನು ರಂಜಿಸುತ್ತಿತ್ತು.

ಗುಬ್ಬಿ ಕಂಪನಿಯ ಗಲ್ಲಾ ಪೆಟ್ಟಿಗೆಯ ನಾಟಕ 'ಕುರುಕ್ಷೇತ್ರ'ವಲ್ಲಿ ರಾಯರು ಭೀಮನ ಪಾತ್ರವನ್ನು ನಿರ್ವಹಿಸುತ್ತಿದ್ದರು. ಒಮ್ಮೆ ಈ ಪಾತ್ರದಲ್ಲಿ 'ಅಹಾ' ಎಂದು ಅವರು ಕೆನೆದ ಅಬ್ಬರಕ್ಕೆ ಹೆದರಿ ಪ್ರೇಕ್ಷಕರಲ್ಲೊಬ್ಬ ಮೂರ್ಛೆ ಹೋದ ಪ್ರಸಂಗವೂ ಇದೆ.

ಪಾತ್ರ ತಂದ ಪಾರ್ಶ್ವವಾಯು

ಜೀವನದ ಸಂಜೆಯಲ್ಲಿ ಪಾರ್ಶ್ವವಾಯುವಿನಿಂದ ಪೀಡಿತರಾದರು. 'ರಾಮಾಯಣ' ನಾಟಕದಲ್ಲಿ ರಾವಣನ ಪಾತ್ರ ವಹಿಸುತ್ತಿದ್ದಾಗ ಸಂಭವಿಸಿದ ಸಣ್ಣ ಆಕಸ್ಮಿಕವೇ ಇದಕ್ಕೆ ಕಾರಣವಾಯಿತು. ಅದೊಂದು ದಿನ ರಾಯರ ಕಂಪನಿಯಲ್ಲಿ ಹಿಂದೆ ವಾದ್ಯಗಾರನಾಗಿ ಸೇವೆ ಸಲ್ಲಿಸಿದ ಕಲಾವಿದ ಚೌಡಯ್ಯ ಗ್ರಾಮಕ್ಕೆ ಬಂದು ರಾಯರನ್ನು ಕಂಡು, ತಿರುಮಕೂಡಲು ನರಸೀಪುರದಲ್ಲಿ ತನ್ನ ಮಗಳ ವಿವಾಹದ ಸಹಾಯಾರ್ಥವಾಗಿ ಆಡಲಿರುವ 'ರಾಮಾಯಣ' ನಾಟಕದಲ್ಲಿ ರಾವಣನ ಪಾತ್ರ ವಹಿಸಲು ದಯಮಾಡಿಸಬೇಕೆಂದು ಕೋರಿಕೊಂಡ. ಧರ್ಮಬುದ್ಧಿಯ ರಾಯರು ಇದಕ್ಕೆ ಸಮ್ಮತಿಸಿ ನಾಟಕದ ದಿನ ಟಿ. ನರಸೀಪುರಕ್ಕೆ ತೆರಳಿದರು.

ರಾತ್ರಿ ನಾಟಕ ಪ್ರಾರಂಭವಾಯಿತು. ಗಂಗಾಧರರಾಯರ ರಾವಣೇಶ್ವರನ ಪಾತ್ರ, ರಾವಣನ ದರ್ಬಾರಿನ ದೃಶ್ಯ, ರಾಯರು ಮೀಸೆಯನ್ನು ಹುರಿ ಮಾಡುತ್ತ ಸಿಂಹಾಸದ ಮೇಲೆ ಮಂಡಿಸಿದ್ದರು. ಲಕ್ಷ್ಮಣನಿಂದ ಕಿವಿ ಮೂಗುಗಳನ್ನು ಕೊಯ್ಯಿಸಿಕೊಂಡಿದ್ದ ಶೂರ್ಪನಖಿ ದರ್ಬಾರಿಗೆ ಬಂದು ಅಣ್ಣನಿಗೆ ತನ್ನ ಅಳಲನ್ನು ತೋಡಿಕೊಂಡಳು. ತಂಗಿಗಾದ ಅಪಮಾನವನ್ನು ಸಹಿಸದೆ ರಾವಣ ಕೋಪೋದ್ರಿಕ್ತನಾಗಿ ಸಿಂಹಾಸನದಿಂದ ಜಿಮ್ಮಿದ. ಅಭಿನಯ ಆವೇಶದಿಂದ ಕೆಳಕ್ಕೆ ಧುಮುಕಿದ ರಾಯರಿಗೆ ಪುನಃ ಮೇಲಕ್ಕೆ ಏಳಲು ಸಾಧ್ಯವಾಗಲೇ ಇಲ್ಲ. ಹಾಗೇ ಕುಸಿದರು. ಹಠಾತ್ತಾಗಿ ಅವರಿಗೆ ದೇಹದ ವಾಮಭಾಗದಲ್ಲಿ ಪಾರ್ಶ್ವವಾಯು ಕಾಣಿಸಿಕೊಂಡು ಎಡಗೈ ಮತ್ತು ಎಡಗಾಲನ್ನು ಅಲಿಸಲು ಸಾಧ್ಯವೇ ಇಲ್ಲವಾಗಿ ಹೋಯಿತು.

ರಾಯರು ತಮ್ಮ ಬಣ್ಣದ ಬದುಕಿನಲ್ಲಿ ಸಾವಿರಾರು ಬಾರಿ ರಾವಣನ ಪಾತ್ರ ವಹಿಸಿದ್ದಾಗ ಹೀಗೆಯೇ ಸಿಂಹಾಸನದಿಂದ ಜಿಮ್ಮಿದ್ದರು. ಆದರೆ ಈ ಬಾರಿ ಅವರಿಗೆ ಈ ಅಭಿನಯ ಚಾಕಚಕ್ಯವನ್ನು ಅರಗಿಸಿಕೊಳ್ಳಲು ಸಾಧ್ಯವಾಗದೆ ಹೋಯಿತು. ರಾವಣನ ಪಾತ್ರವೇ ರಾಯರ ಕೊನೆಯ ಅಭಿನಯವಾಗಿ ಹೋಯಿತು.

೧೯೬೧ ಮಾರ್ಚ್ ಹನ್ನೆರಡರಂದು (೭೩ನೇ ವಯಸ್ಸಿನಲ್ಲಿ) ಈ 'ರಂಗಸಿಂಹ' ಸ್ವಾಮಿಯ ಪಾದವನ್ನು ಸೇರಿಹೋಯಿತು. ✡

ಆಧುನಿಕ ಮರಾಠಿ ಕವಿತೆಯ ಜನಕ


ಕೇಶವಸುತರು

ಗೊ. ನೆ. ಚುಳಕಿ

ಅರ್ವಾಚೀನ ಮರಾಠಿ ಕವಿತೆಯ ಜನಕರೂ ಮಾರ್ಗಪ್ರವರ್ತಕರೂ ಆದ ಮಹಾರಾಷ್ಟ್ರದ ಕವಿ ಕೇಶವಸುತರು ಸರ್ವ ಸುಪರಿಚಿತರಾಗಿದ್ದಾರೆ. ಹಳೆಯ ಮರಾಠಿ ಕವಿತೆಗೆ ಕಾಯಕಲ್ಪವನ್ನು ಮಾಡುವ ಕ್ರಾಂತಿಕಾರಕ ಕಾರ್ಯವನ್ನು ಕೇಶವಸುತರೇ ಮಾಡಿದರು. ಆಧುನಿಕ ಮರಾಠಿ ಕವಿತೆಗೆ ನೂತನ ಆವರಣವನ್ನು ದೊರಕಿಸಿದುದಲ್ಲದೆ ಹಳೆಯ ಮರಾಠಿ ಕವಿತೆಗೆ ಸಂಪೂರ್ಣವಾಗಿ ಅಪರಿಚಿತವಾದ ಆವರಣವನ್ನು ಕೇಶವಸುತರೇ ನಿರ್ಮಿಸಿದರು.

ಇಂಥ ದಿವ್ಯ ದೃಷ್ಟಿಯ ಕವಿಯ ಜನ್ಮ ಶತಾಬ್ದಿಯು ೧೯೬೬ ನೇ ಇಸ್ವಿಯ ಅಕ್ಟೋಬರ್ ೭ರಂದು ಆಗಿಹೋಯಿತು. ಈ ಮಾತಿಗೆ ಇಂದು ಹದಿನೇಳು ವರುಷಗಳು ಗತಿಸಿ ಹೋದವು. ಕೇಶವಸುತರು ಮಾಡಿದ ಕಾರ್ಯವು ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಇಂದಿನ ಮರಾಠಿ ಕವಿತೆಯ ಉಗಮ ಸ್ಥಾನವೆಂದು ಕವಿ ಕೇಶವಸುತರನ್ನೇ ಬಹಳ ಗೌರವಾದರಗಳಿಂದ ಉಲ್ಲೇಖ ಮಾಡಬೇಕಾಗಿದೆ. ಯಾಕೆಂದರೆ ಮರಾಠಿಯ ಹಳೆಯ ಸಾಂಪ್ರದಾಯಿಕ ಪರಂಪರೆಯನ್ನು ಹಿಂದಿಕ್ಕಿಟ್ಟು ಇಂಗ್ಲಿಷ್ ಕಾವ್ಯದ ರೀತಿಯನ್ನು ರೂಢಿಗೊಳಿಸುವಲ್ಲಿ ಕೇಶವಸುತರೇ ಮೊಟ್ಟ ಮೊದಲಿಗರು.

ಕೇಶವಸುತರು ತಮ್ಮ ಜೀವಮಾನದಲ್ಲಿ ವಿವಿಧ ವಿಷಯಗಳನ್ನು ಕುರಿತು ವಿಪುಲವಾಗಿ ಮರಾಠಿ ನೂತನ ಕಾವ್ಯದೇವಿಯನ್ನು ಅಲಂಕರಿಸಿದ್ದಾರೆ. ಮರಾಠಿ ಕಾವ್ಯಭಾಂಡಾರವು ಸಮೃದ್ಧವೂ [illegible] ಶ್ರಮಿಸಿದ್ದಾರೆ. ಕವಿ, ಕಾವ್ಯ, ಪ್ರೇಮ, ನಿಸರ್ಗ ಹಾಗೂ ಸಾಮಾಜಿಕ ತಾತ್ವಿಕ ಮೊದಲಾದ ವಿಷಯಗಳನ್ನು ಇವರ ಕಾವ್ಯಗಳು ಒಳಗೊಂಡಿವೆ. ಅವರಿಂದ ರಚಿತವಾದ ಅನೇಕ ಕವನಗಳು ಮರಾಠಿಗರ ಬಾಯಲ್ಲಿ ಗುಣಗುಣಿಸುತ್ತಿರುವವು. ತುತಾರಿ, ಸತಾರೀಚೆ ಬೋಲ, ನವಾ ಶಿಪಾಯಿ, ನೈಋತ್ಯ ಕಡಿಲ ವಾರಾ, ಆಮ್ಹಿ ಕೋಣ, ಸ್ಫೂರ್ತಿ, ಝಪೂರ್ಝಾ, ಹರಪಲೆ ಶ್ರೇಯ ಮೊದಲಾದ ಕವಿತೆಗಳೆಂದರೆ ಮರಾಠಿ



ಕಾವ್ಯ ಭಾಂಡಾರದೊಳಗಿನ ಅನರ್ಘ್ಯ ರತ್ನಗಳೆಂದೇ ಹೇಳಬೇಕು.

ಗೋಷ್ಟಿ ಘರಾಕಡೀಲ, ನೈಋತ್ಯೇಚಾ ವಾರಾ, ಆಯಿ ಕವಿತಾ ತೋಕ, ನಾಮಾರ್ಗಿ ಬಿಕೇಲಾ ಇತ್ಯಾದಿ ಕವನಗಳು ಭಾವನೆಗಳ ಅಭಿವ್ಯಕ್ತಿಯಿಂದ ತುಂಬಿರುವುದರಿಂದ ಅವುಗಳನ್ನು ವೈಯಕ್ತಿಕ ಸ್ವರೂಪದವೆಂದು ಹೆಸರಿಸಬಹುದು. ತಮ್ಮ ತಾಯಿ ತಂದೆ, ಬಂಧು ಭಾಂದವರು, ಪತ್ನಿ ಮೊದಲಾದವರ ಬಗೆಗೆ ಬರೆದ ಕವನಗಳಲ್ಲಿ ಪ್ರೇಮರಸವು ಅತ್ಯಂತ ಉತ್ಕಂಠತೆಯಿಂದ ಉಕ್ಕುತ್ತಿರುವುದು. ಕವಿ ಮತ್ತು ಕಾವ್ಯ ಕುರಿತು ೧೫–೨೦ ಕವನಗಳನ್ನು ರಚಿಸಿದ್ದುಂಟು. ಅವರ ಅಭಿಪ್ರಾಯದಲ್ಲಿ ಹೇಳಬೇಕೆಂದರೆ ಕವಿಯು ದೇವ ದೇವನ ಕೃಪೆಯಿಂದ ಪೋಷಿತನಾದವನಿದ್ದು, ಅವನ ದೃಷ್ಟಿಯು ದಿಕ್ಕಾಲಾತೀತವಾಗಿದೆ. ಕವಿತೆಯು ಕವಿಯ ಪ್ರಿಯಳಾಗಿದ್ದು ಅವನು ಆಕೆಯ ಪ್ರಿಯಾರಾಧನೆಯನ್ನು ಮಾಡುತ್ತಿರುತ್ತಾನೆ. ಇಂಥ ವಿಚಾರಧಾರೆಯ ಮೇಲೆ ಆಧಾರವಾದ ಕವಿತೆ ಮತ್ತು ಕವಿತೆಯ ಪ್ರಯೋಜನ ಶಬ್ದದ ಹಿಂದಿರುವ ಸ್ಫೂರ್ತಿಯ ಪರಿಪಾಕವನ್ನು ಮನಸಾರೆ ಕೊಂಡಾಡಿರುವದುಂಟು.

'ಕವಿತಾ ಆಣಿ ಕವಿ' ಎಂಬ ತಮ್ಮ ಕವನದಲ್ಲಿ ಕೇಶವಸುತರು 'ಜಸಾ ಯುವತೀಸ ನೋಪಿ, ತಸಾ ಕವಿ ಹಾ ಕವಿತೇಸಿ ಪಾಹ' ಎಂದು ಬಣ್ಣಿಸಿದ್ದಾರೆ. ಕವಿಯ ಆತ್ಮವಿಶ್ವಾಸವು ಮತ್ತು ಕವಿ ಕಾರ್ಯದ ಮೊದ ಗುಣಗಳನ್ನು ವರ್ಣಿಸುವಾಗ 'ಆಮ್ಹಿ ಕೋಣ' ಎಂಬ ಕವಿತೆಯಲ್ಲಿ ಈ ಬಗೆಯಾಗಿ ಹೇಳಿದ್ದಾರೆ: "ಆಮ್ಹಾಸಿ ವಗಳಾ ಗತಪ್ರಭ ಝಣಿ ಹೋತೀಲ ತಾರಾಂಗಣೇ ಆಮ್ಹಾಲಾ ವಗಳಾ ವಿಕೇಲ ಕವಡಿ ಮೋಲಾಪರಿ ಹೇಜಣೆ."

ಪ್ರೇಮವನ್ನು ಕುರಿತು ಬರೆದ ಕವನದಲ್ಲಂತೂ ಕೇಶವಸುತರು ಮರಾಠಿ ಕಾವ್ಯ ಸೃಷ್ಟಿಯಲ್ಲಿ ತೀರ ಹೊಸ ರೀತಿಯ ಪ್ರವಾಹವನ್ನೇ ಹರಿಸಿಬಿಟ್ಟಿದ್ದಾರೆ. ಕೇಶವಸುತರಿಗಿಂತ ಹಿಂದಿನ ಕಾಲದಲ್ಲಿ ಸ್ವಂತದ ವಿಷಯಕ್ಕಿರುವ ಪ್ರೇಮದ ಬಗ್ಗೆ ಬರೆಯುವುದು ಸಂಕೋಚವೆನಿಸುತ್ತಿತ್ತು. ಇಂಗ್ಲಿಷ್ ಭಾಷೆಯ

—೨೧ನೆಯ ಪುಟಕ್ಕೆ

ಭಾರತೀಯ ಭಾಷೆಗಳ ಕಾವ್ಯಕ್ಷೇತ್ರದಲ್ಲಿ ತಮಿಳಿನ ಸುಬ್ರಹ್ಮಣ್ಯ ಭಾರತಿ, ಗುಜರಾತಿಯ ನರ್ಮದ್, ಬಂಗಾಲಿಯ ಮಧುಸೂದನ ದತ್ ಅವರ ಹಾಗೆಯೇ ಮರಾಠಿಯಲ್ಲಿ ಆಧುನಿಕ ಕಾವ್ಯಕ್ಕೆ ಮೊದಲಿಗರೆನಿಸಿಕೊಳ್ಳುವ ಈ ಕವಿಯ ಕಾವ್ಯ ಕೃತಿಗಳ ಬಗ್ಗೆ, ಜೀವನದ ಬಗ್ಗೆ ಜನನ–ಮರಣದ ಬಗ್ಗೆ ಸಿಕ್ಕುವ ಮಾಹಿತಿ ತೀರ ಕಡಿಮೆ. ಕೇಶವಸುತರು ಬಿಟ್ಟುಹೋದುದೆಂದರೆ ಅವರ ಮರಣೋತ್ತರ ಕಾಲದಲ್ಲಿ ಪ್ರಕಟವಾದ ೧೩೨ ಕವನಗಳ ಒಂದು ಸಂಗ್ರಹ ಅಷ್ಟೇ.

೧೮೬೬ರ ಮಾರ್ಚ್ ೧೫ರಂದು ಜನಿಸಿದರೆಂದು ಹೇಳಲಾಗುವ ಕೇಶವಸುತರು ಬದುಕಿದ್ದು ೩೯ ವರ್ಷಗಳ ಕಾಲ ಮಾತ್ರ. ಪೂರ್ಣ ಹೆಸರು ಕೃಷ್ಣಾಜಿ ಕೇಶವ ದಾಮಲೆ. ಇವರು ಸೋದರರೂ ಆರು ಜನ ಸೋದರಿಯರೂ ಇದ್ದ ಮನೆಯಲ್ಲಿ ಗಂಡುಮಕ್ಕಳಲ್ಲಿ ಮಧ್ಯಮನಾಗಿ ಬೆಳೆದರು ಈ ಕವಿ. ಪ್ರತಿಭಾನ್ವಿತ ಕುಟುಂಬವೆಂದು ಹೆಸರಾಗಿದ್ದ ಈ ದಾಮಲೆ ಮನೆತನದಲ್ಲಿ ಎಲ್ಲರೂ ಅಲ್ಪಾಯುಷಿಗಳಾಗಿದ್ದುದೊಂದು ವಿಪರ್ಯಾಸ. ಈ ಖೇದ ಕೇಶವಸುತರ ಕಾವ್ಯದಲ್ಲಿ ಎದ್ದುಕಾಣುತ್ತದೆ.

ಆದರೆ ಉಳಿದೆಲ್ಲ ಸೋದರರಂತೆ ಇವರ ಶಿಕ್ಷಣದ ಬಗ್ಗೆ ತಂದೆಗೇಕೆ ಆಸ್ಥೆ ಇರಲಿಲ್ಲವೊ, ಇವರ ಓದು ಕಡೆಗಣಿಸಲ್ಪಟ್ಟಿತು. ಅಲ್ಲದೆ ತೀರ ನಾಚಿಕೆಯ ಸ್ವಭಾವ ಬೇರೆ. ಒಬ್ಬಂಟಿಯಾಗಿ ಸದಾ ಏನಾದರೂ ಗುಣುಗುಣುತ್ತಲೆ ಇರುತ್ತಿದ್ದ ಈ 'ಕೆಟ್ಟ ಮೋರೆಯವನು' ಅಂತೂ ಇಂತೂ ಮ್ಯಾಟ್ರಿಕ್‌ವರೆಗೆ ಓದಿ ಮುಂದೆ ಓದಲಾಗದೆ ೧೮೯೦ರಲ್ಲಿ ಕೆಲಸದ ಬೇಟೆ ನಡೆಸಿದರು. ಮುಂಬೈಗೆ ಹೋದರು. ಅಮೇರಿಕನ್ ಮಿಶನ್ನಿನವರು ನಡೆಸುತ್ತಿದ್ದ 'ಜ್ಞಾನೋದಯ'ವೆಂಬ ನಿಯತಕಾಲಿಕದಲ್ಲಿ ಕೆಲಸ ಮಾಡತೊಡಗಿ ನಂತರ ದಾದರದ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಶಿಕ್ಷಕರಾದರು. ೧೮೯೧ರಲ್ಲಿ ಕಲ್ಯಾಣದ ಒಂದು ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿದರು. ನಂತರ ಕಾರಕೂನ

ಒಂದು ಪರಿಚಯ

೧೫ ರೂಪಾಯಿ ಸಂಬಳದ ಕೆಲಸದಲ್ಲಿಯೂ ತಮ್ಮ ಸ್ವತಂತ್ರ ಮನೋವೃತ್ತಿ ಹಾಗೂ ಸ್ವಚ್ಛಂದ ವಿಚಾರಗಳನ್ನು ಬಿಡಲಿಲ್ಲ. ಅಧಿಕಾರ ವರ್ಗದೊಂದಿಗೆ ಸದಾ ಘರ್ಷಣೆ. ವರ್ಗಾವಣೆ ಕೋರಿದ್ದರಿಂದ ಅವರನ್ನು ಫೈಜಪುರದ ಇಂಗ್ಲಿಷ್ ಶಾಲೆಯ ಮುಖ್ಯಾಧ್ಯಾಪಕ ಹುದ್ದೆಯಿಂದ ೧೯೦೪ ರಲ್ಲಿ ಧಾರವಾಡದ ಹೈಸ್ಕೂಲೊಂದಕ್ಕೆ ಮರಾಠಿ ಶಿಕ್ಷಕರನ್ನಾಗಿ ವರ್ಗಾಯಿಸಲಾಯಿತು.

ಜೀವನದುದ್ದಕ್ಕೂ ಅನಾರೋಗ್ಯ ಪೀಡಿತರಾಗಿಯೇ ಇದ್ದ ಈ ಕವಿ ೧೯೦೫ ರಲ್ಲಿ ಹುಬ್ಬಳ್ಳಿಯಲ್ಲಿ ಅಸ್ವಾಸ್ಥ್ಯದಿಂದ ನರಳುತ್ತಿದ್ದ ತಮ್ಮ ಚಿಕ್ಕಪ್ಪ ಹರಿ ಸದಾಶಿವ ದಾಮಲೆಯವರ ಭೇಟಿಗೆ ಮಡದಿ ಮಕ್ಕಳೊಂದಿಗೆ ಬಂದವರು ಪ್ಲೇಗಿನ ಬಾಧೆಯಿಂದಾಗಿ ನಿಧನ ಹೊಂದಿದರು (೧೯೦೫, ನವೆಂಬರ್ ೭). 'ಬಲವಂತ'ರಿಂದ ದೂರವೇ ಇರುತ್ತಿದ್ದ ಇವರು ಕಾಣಲು ಹೇಗಿದ್ದರೆಂಬುದಕ್ಕೂ ಪುರಾವೆಗಳಿಲ್ಲ.

ಕೇಶವಸುತರು 'ಒಳಮುಖಿಗ'ರಾಗಿದ್ದರು. ಉಜ್ಜೈನಿಯಲ್ಲಿ ದರ್ಶನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರ ಅಣ್ಣ ತಮ್ಮ ಮನೆಮಂದಿಯದೊಂದು ಗ್ರೂಪ್‌ಫೋಟೋ ತೆಗೆಯಲು ಯೋಚಿಸಿ ಕೇಶವಸುತರನ್ನು ಕರೆದರೆ ಈ ವ್ಯಕ್ತಿ ಅಲ್ಲಿ ಹೋಗಲಿಲ್ಲವಂತೆ (ಇಲ್ಲಿ ಕೊಟ್ಟಿರುವ ಚಿತ್ರ ಕೇಶವಸುತರನ್ನು ನೋಡಿದ ನೆನಪಿನಿಂದ ಅವರ ಮಿತ್ರ ಶ್ರೀ ಮಣೇರೀಕರ್ ಎಂಬವರು ತೆಗೆದಿದ್ದು ಇದು ಅದರ ಫೋಟೋ ಪ್ರತಿ.)

'ಜ್ಞಾನೋದಯ'ದಲ್ಲಿ ಕೆಲಸ ಹಚ್ಚಿಕೊಟ್ಟ ರೆವರೆಂಡ್ ನಾರಾಯಣ ವಾಮನ ಟಿಳಕರ ಸಂಪರ್ಕದಿಂದಲೇ ಕೇಶವಸುತರಿಗೆ ಕವಿತಾರಚನೆಗೆ ಸ್ಫೂರ್ತಿ ದೊರೆಯಿತಂತೆ. ಟಿಳಕರು ಕ್ರೈಸ್ತಧರ್ಮ ಸ್ವೀಕರಿಸಿದಾಗ ಕೇಶವಸುತರೂ ಅವರನ್ನೇ ಅನುಸರಿಸುವರೇನೋ ಎಂಬ ಭಯ ಮನೆಮಂದಿಗೆಲ್ಲ. ಆದರೆ ಬೈಬಲ್ಲನ್ನು ಹೆಚ್ಚು ಮೆಚ್ಚಿಕೊಂಡು, ಕ್ರೈಸ್ತ ಧರ್ಮದ ಬಗ್ಗೆ ಹೆಚ್ಚು ಒಲ

ವಿದ್ದಿತಾದರೂ ಕೇಶವಸುತರು ಹಾಗೆ ಮಾಡಲಿಲ್ಲ.

ಪುಣೆಯ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಕೇಶವಸುತರಿಗೆ ಭೇಟಿಯಾದ ಹರಿ ನಾರಾಯಣ ಆಪಟೆಯವರೆ ಈ ಕವಿಯ ಹೆಸರು ಎಲ್ಲರಿಗೂ ಗೊತ್ತಾಗುವಂತೆ ಮಾಡಿದವರು. ಮರಾಠಿಯಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಆಪಟೆ ದೊಡ್ಡ ಹೆಸರು. ಕೇಶವಸುತರ ಮರಣಾನಂತರ ಅವರ ಒಂದೇ ಒಂದು ಕವನ ಸಂಗ್ರಹದ ಪ್ರಕಾಶಕರೂ ಅವರೆ.

ಲೋಕಮಾನ್ಯರು ಶಿಕ್ಷಕರಾಗಿದ್ದ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿದ್ದರೂ ಕೇಶವಸುತರ ಮೇಲೆ ಟಿಳಕರ ಪ್ರಭಾವ ಆದಂತೆ ಕಾಣುವುದಿಲ್ಲ. ಕ್ಲಾಸಿನಲ್ಲಿ ಟಿಳಕರು ಪಾಠ ಹೇಳುತ್ತಿದ್ದರೆ ಈ ಹುಡುಗ ಗುರುವಿನ ವ್ಯಂಗ್ಯಚಿತ್ರ ಬಿಡಿಸುತ್ತಿರುತ್ತಿದ್ದನಂತೆ.

ನಾಚಿಕೆಯ ಬುರುಕ ವ್ಯಕ್ತಿಯಾಗಿದ್ದ ಕೇಶವಸುತರು ಸಮಾಜ ಸುಧಾರಕರ ಅಥವಾ ರಾಜಕಾರಣದ ಬ್ಯಾಂಡು ಬಜಂತ್ರಿಯ ಬಂಡಿಯೇರಿ ಕುಳಿತುಕೊಳ್ಳದೆ ತಮ್ಮದೆ ಆದ ಕವನ ಮಾಧ್ಯಮಕ್ಕೆ ಅಂಟಿಕೊಂಡು ಉಳಿದರು.

ಸಾಹಿತ್ಯ ಕ್ಷೇತ್ರದಲ್ಲಿ ಕೂಡ ಈ 'ದೂರ ಉಳಿಯುವಿಕೆ' ಅವರನ್ನು ಬಿಡಲಿಲ್ಲ. ಸಾಹಿತ್ಯ ಸಮ್ಮೇಳನ ಎಂದರೆ ಜಾತ್ರೆ ಎಂಬ ಅಭಿಪ್ರಾಯದ ಕೇಶವಸುತರು, "ಕವಿಗಳು ಇಂಥದರಿಂದ ದೂರ ಉಳಿಯಬೇಕು," ಎಂದು ಒಂದೆಡೆ ಹೇಳಿದ್ದಾರೆ.

"..ನಾನೊಬ್ಬ ಕುಳ್ಳ. ಇನ್ನೂ ಎತ್ತರಕ್ಕೆ ಬೆಳೆಯುವ ಯಾವ ಕುರುಹನ್ನೂ ನಾನು ತೋರುವುದಿಲ್ಲ. ಅದ್ದರಿಂದ ನನ್ನನ್ನೇ ನಾನು ಜುಗುಪ್ಸೆಯಿಂದ ಕಾಣುತ್ತೇನೆ...... ಇತರರು ನನ್ನಂತಾಗದಿರಲಿ. ಬೆಳೆಯಲಿ. ಬೆಳೆದು ಶತಮಾನದಿಂದ ನಿರ್ಮಾಣಗೊಳ್ಳದೆ ಇರುವ ದೀರ್ಘ ಕಾವ್ಯವೊಂದನ್ನು ಬರೆಯಲಿ..." ಎಂಬ ಆಶಯದ ಈ ಕವಿಯ ಹೆಸರಲ್ಲಿ ಹುಬ್ಬಳ್ಳಿಯಲ್ಲಿ 'ಶ್ರೀ ಕೇಶವಸುತ ಭಾವೈಕ್ಯ ಸದನ'ವೆಂಬ ಸಂಸ್ಥೆ ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿದೆ.

✡

(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ, ಪ್ರಭಾಕರ ಮಾಚ್ವೆಯವರು ಬರೆದ, ಗೌರೀಶ ಕಾಯ್ಕಿಣಿಯವರು ಅನುವಾದಿಸಿದ 'ಕೇಶವಸುತರು' ಎಂಬ ಪುಸ್ತಕದಿಂದ ಈ ಅಂಶಗಳನ್ನು ಸಾಭಾರ

೧೪ನೆಯ ಪುಟದಿಂದ

ಕಾವ್ಯ ಸೃಷ್ಟಿಯಲ್ಲಿ ಅಂಥ ನಿರ್ಮಿತಿಯು ಸರಾಗವಾಗಿ ನಡೆಯುವವನ್ನು ನಿರಾಕರಿಸಿದ ಮೇಲೆ ಕೇಶವಸುತರು ಮರಾಠಿ ಭಾಷೆಯಲ್ಲಿ ಈ ಪರಂಪರೆಯನ್ನು ರೂಢಿಗೆ ತಂದರು. ಅದೇ ಮುಂದೆ ಪದ್ಧಾರಿಯಾಗಿ ಪರಿಣಮಿಸಿತು. ಪ್ರೀತಿ, ಸಮೃದ್ಧಿ ಅಣಿ ಪ್ರೀತಿ, ಮಯೂರಸಿಂಹಾಸನ, ತಾಜಮಹಾಲ ಮೊದಲಾದ ಕವಿತೆಗಳಲ್ಲಿ ಅವರು ಪ್ರೇಮದ ಬಗೆಗಿರುವ ತಮ್ಮ ತತ್ವಜ್ಞಾನವನ್ನು ವಿವರಿಸಿದ್ದಾರೆ. ಪ್ರೇಮವನ್ನು ಕುರಿತು ಅವರು ಏನಿಲ್ಲವೆಂದರೂ ೪೦ ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಕವನಗಳು ಇಂಗ್ಲಿಷಿನ ಭಾಷಾಂತರಗಳಾಗಿ ಅನುವಾದ ಸ್ವರೂಪವನ್ನು ತಾಳಿವೆ. ಪ್ರೀತಿ ಎಂಬ ಕವನದಲ್ಲಿ ಕೇಶವಸುತರು ಬರೆದಿರುವುದನ್ನು ನೋಡಿ–

ಪ್ರೀತಿಯು ಪೇಟೆಯೊಳು ಸಿಗಬಹುದೇ?
ಪ್ರೀತಿಯು ನೆರೆಯೊಳು ಸಿಕ್ಕೀತೆ?
ಪ್ರೀತಿಯು ತೋಟದಿ ಸಿಗಬಹುದೆ?
ಪ್ರೀತಿಯು ಹೊಲಗಳೊಳು ಸಿಕ್ಕೀತೆ?
ಪ್ರೀತಿಯು ಮಾತು ಹೀಗೆಯೇ ಇದೆ.
ಅವರು ಹೃದಯದೊಳು ಶೋಧಿಸಿ ನೋಡು.

ಇದರಂತೆ ಕೇಶವಸುತರು ಸಾಮಾಜಿಕ ವಿಷಯದಲ್ಲಿಯೂ ದೇಶದ ಪಾರತಂತ್ರ್ಯದ ವಿಷಯದಲ್ಲಿಯೂ ತಮ್ಮದೇ ಆದ ವಿಚಾರಗಳನ್ನು ಪ್ರಕಟಿಸುತ್ತ ಕೆಲವೊಂದು ತೇಜಸ್ವಿ ಕವನಗಳನ್ನು ರಚಿಸಿದ್ದುಂಟು. ತುತಾರಿ, ಸ್ಫೂರ್ತಿ, ನವಾ ಶಿಪಾಯಿ, ಗೋಫಾ ಕೇಲಿ ಛಾನ, ಪಣ ಲಕ್ಷಾತ ಕೋಣ ಘೇತೋ, ಅಂತ್ಯಜಾಚ್ಯಾ ಮುಲಾಚಾ ಪಹಿಲಾ ಪ್ರಶ್ನ ಮಜೂರಾಂವರ, ಉಪಾಸ ಮಾರೀಚಿ ಪಾಳೀ ಮೊದಲಾದವುಗಳಂಥ ಕವನಗಳು ಓಜಸ್ವಿತೆಯಿಂದ ಕೂಡಿದವುಗಳಾಗಿ ಮರಾಠಿ ವಾಙ್ಮಯದಲ್ಲಿ ಅಮರ ಪಟ್ಟವನ್ನು ಪಡೆದಿವೆ. ತುತಾರಿ ಎಂಬ ಕವಿತೆಯಂತೂ ಆಧುನಿಕ ಮರಾಠಿ ಕಾವ್ಯ ಕುಂಜದಲ್ಲಿ ಒಂದು ಚಿರಸ್ಥಾನ ಪಡೆದ ಕ್ರಾಂತಿ ಗೀತವೆನಿಸಿದೆ. ಕೇಶವಸುತರ ನವಯುಗದ ತತ್ವಜ್ಞಾನವನ್ನು "ಬ್ರಹ್ಮಣನಾಹೀ ಹಿಂದು ಹೀನಾಯಿ ನ ಮಿ ಏಕ ಪಂಥಾಚಾ, ತೇ ಜೆ ಪತಿತ ಕೀ ಜೇ
ಘಂಟಾಘೋಷವಾಗಿ ಸಾರಿದ್ದಾರೆ.

"ಸ್ಫೂರ್ತಿ" ಎಂಬ ಕವಿತೆಯಲ್ಲಿ ಕೇಶವಸುತರು ತೆಗೆದ ಉದ್ಗಾರಗಳು ಹೀಗಿವೆ.

ಅಡಪತೀಲಜರ ದೇವ ತರೀ
ರಘುಗಡು ತ್ಯಾಂಚಾಶಿ ನಿಕರಿ
ಹಾರ ನ ಖಾವೂ ರತೀಭರೀ।
ದೇವ ದಾನವ ನ ಕೀ ನಿರ್ಮಿಲೆ
ಹೇ ಮಾತ್ರ ಲೋಕಾ ಕಳವೂ ದ್ಯಾ

ಇವೆಲ್ಲ ಕವನಗಳನ್ನು ಅವಲೋಕಿಸಿದರೆ ನಾನಾ ಭಾವಗಳು, ನಾನಾ ಕಲ್ಪನೆಗಳ ರಸವನ್ನೇ ಓತಪ್ರೋತವಾಗಿ ಕೇಶವಸುತರು ಹರಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಕವಿಯ ಆತ್ಮನಿಷ್ಠ ದೃಷ್ಟಿಕೋನವನ್ನು ಸ್ಪಷ್ಟವಾಗಿ ರೂಪಿಸುವಂಥ ಇವರ ಕವನಗಳು ಮರಾಠಿ ಕಾವ್ಯಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನವಾಗಿರುವವೆಂಬಲ್ಲಿ ಸಂಶಯವಿಲ್ಲ. ಕೇಶವಸುತರ ಕವನಗಳು ಅರ್ಥವತ್ತಾಗಿಯೂ ರಸವತ್ತಾಗಿಯೂ ಇರುವವು. ಅಲ್ಲದೆ ಮರಾಠಿ ಕಾವ್ಯ ಸೌಂದರ್ಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನಾಡಿವೆ ಎಂದು ಹೇಳಬಹುದು.


ಕೇಶವಸುತರ ಕಾವ್ಯ ನಿರ್ಮಿತಿಯು ಮರಾಠಿ ಸಾಹಿತ್ಯದಲ್ಲಿ ಚಿರಸ್ಮರಣೀಯವಾಗಿದೆ. ಆಧುನಿಕ ಮರಾಠಿ ಕವಿತೆಯ ಹೊಸ ಸಂಪ್ರದಾಯವನ್ನು ಕೇಶವಸುತರೇ ನಿರ್ಮಿಸಿದವರು. ಇದೇ ಸಂಪ್ರದಾಯವೇ ಮುಂದುವರಿಯಿತು. ಈ ಸಂಪ್ರದಾಯದಲ್ಲಿಯೇ ಬೆಳೆಯುತ್ತಾ ಆ ಮುಂದೆ ಟಿಳಕ, ವಿನಾಯಕ, ಗೋವಿಂದಾಗ್ರಜ, ಬಾಲಕವಿ ಮೊದಲಾದವರು ನವಯುಗದ ಕವಿಗಳೆಂದು ಹೆಸರು ಪಡೆದಿದ್ದಾರೆ. ಇಂದಿನ ಮರಾಠಿ ಕವಿತೆಯ ಮೂಲವು ಕೇಶವಸುತರಲ್ಲಿಯೇ ದೊರೆಯುತ್ತದೆ. ವೈಚಾರಿಕ ಪ್ರಾಗಲ್ಭ್ಯತೆ, ಭಾವನೆಯ ಉತ್ಕಟತೆ, ಓಜಸ್ವಿತೆ ಮೊದಲಾದ ಗುಣಗಳ ಮೂಲಕ ಕೇಶವಸುತರ ಕವಿತೆಗೆ ಒಂದು ತೆರದ ಶಕ್ತಿ ಬಂದಿದೆ.

"ಸುನೀತ" ಎಂಬ ಹೊಸ ಕಾವ್ಯ ಪ್ರಕಾರವನ್ನು ಆಧುನಿಕ ಮರಾಠಿ ಕವಿತೆಗೆ ಪರಿಚಯಿಸಿಕೊಟ್ಟ

ಯಾಗಿದ್ದಾಳೆ. ನಿಜವಾದ ಕಾವ್ಯವೆಂದರೆ ಕವಿಯ ಅಂತಃಕರಣವೇ ಎಂದು ಇಮರ್ಸನ್ನನು ಅಂದಿರುವ ಹಾಗೆ ಅದನ್ನು ಸ್ಪಷ್ಟಪಡಿಸಬೇಕೆನ್ನುವಂತೆ ಕೇಶವಸುತರು ಮರಾಠಿ ಕವಿಗಳಿಗೆ ಹೇಳಿದರು. ಕಾವ್ಯವೆಂದರೆ ಕವಿಯ ಅತ್ಯಂತಿಕ ಅನುಭವ ಅವನ ಜೀವನಕ್ಕೆ ಉದ್ಭವಿಸುವ ಪ್ರತಿಕ್ರಿಯೆ ಎಂಬುದರ ಪ್ರತೀತಿಯು ಕೇಶವಸುತರ ಕವನಗಳಲ್ಲಿ ದೊರೆಯುವದು. ಕೇಶವಸುತರು ಆ ಕಾಲಕ್ಕೆ ರೂಪವನ್ನು ಆರಂಭಿಸಿದ್ದರೋ ಅದಲ್ಲದರ ಕ್ರಮಪ್ರಾಪ್ತವಾದ ಪರಿಣಾಮವೆಂಬಂತೆ ಇಂದಿನ ಮರಾಠಿ ಕಾವ್ಯದೇವತೆಯು ಸುಂದರವಾಗುತ್ತಿರುವಳು.

ಕೇಶವಸುತರ ಕಾಲದಿಂದ ಮಾತ್ರ ಮರಾಠಿ ಕವಿತೆಯ ಲೋಕಾಭಿಮುಖದ ದಾರಿ ಸರ್ವಸ್ವವಾಗಿ ಸಷ್ಟವಾಯಿತು. ಸ್ವಾಭಾವಿಕವಾಗಿ ನಿಶ್ಚಿತ ವೃತ್ತದ ಬಂಧನವನ್ನು ತೆಗೆದೊಗೆಯದೆ ನಡುವಿನ ಶೃಂಗಾರ ಹಾಗು ಐಹಿಕದ ಕಲೆಗೆ ಕಟಾಕ್ಷವನ್ನು ಬೀರುತ್ತಿದ್ದರೋ ಮುಖ್ಯವಾಗಿ ತಮ್ಮ ದೃಷ್ಟಿಯನ್ನು ಪಾರಮಾರ್ಥಿಕದಲ್ಲಿಟ್ಟು ದೀರ್ಘವಾಗಿ ಕವಿತೆಯನ್ನು ರಚಿಸುವ ಸಂಪ್ರದಾಯ ಬಂದಿತ್ತು. ಹೀಗಿರುವ ಕವಿತಾ ರಚನೆಯನ್ನು ಕೇಶವಸುತರು ಮುರಿದರು. ವೃತ್ತದ ಬಂಧನದಿಂದ ಮುಕ್ತವಾಗಬೇಕು, ಲೌಕಿಕ ಜೀವನದೊಳಗಿನ ಸಾಂದರ್ಭಿಕ ವಿಷಯದಲ್ಲಿ ಬಹು ದೊಡ್ಡ ಅರಿವನ್ನು ಶೋಧಿಸುವ ಪ್ರಯೋಗಶೀಲತೆಯು ಅವಶ್ಯಕವೇ ತಮ್ಮ ವೈಶಿಷ್ಟ್ಯವನ್ನಾಗಿ ತೋರಿಸುವಂಥ ಮತ್ತು ಕ್ರಿಯಾಶೀಲತೆಯೇ ಕವಿತೆಯ ಸ್ವಾಭಾವಿಕ ವೃತ್ತಿಯಾಗಿದೆ ಎಂದು ತಿಳಿದುಕೊಳ್ಳುವ ಇಂಗ್ಲಿಷ್ ಪದ್ಧತಿಯ ಸುಂದರ ಕವಿತೆಗಳನ್ನು ಮರಾಠಿಯಲ್ಲಿ ರೂಢಿಸುವ ಕೆಲಸವನ್ನು ಕೇಶವಸುತರು ಮಾಡಿದರು. ಆದುದರಿಂದ ಅವರನ್ನು ಆಧುನಿಕ ಮರಾಠಿ ಕವಿತೆಯ ಜನಕ ಎಂದು ಮರಾಠಿ ಕಾವ್ಯ ಸಮೀಕ್ಷಕರು ಗೌರವವನ್ನು ಅವರಿಗೆ ನೀಡಿರುವದು ಸಾರ್ಥಕವಾಗಿದೆ. ✡

[ಹುಬ್ಬಳ್ಳಿಯ ಕೇಶವಸುತ ಭಾವೈಕ್ಯ ಸದನದ ಆಶ್ರಯದಲ್ಲಿ ಶ್ರೀ ಚುಳಕಿಯವರು ಮಾಡಿದ ಭಾಷಣವೇ ಈ ಲೇಖನ. ನಮ್ಮ ಸೋದರ ಭಾಷೆಯೊಂದರ ಸಾಹಿತ್ಯಕ್ಕೆ ಕಾರಣಪುರುಷನೆನಿಸಿದ ವ್ಯಕ್ತಿಯೊಬ್ಬ ಕರ್ನಾಟಕದ ಹುಬ್ಬಳ್ಳಿಯಲ್ಲಿ ಕೊನೆಯುಸಿರೆಳೆದರೆಂಬ ಘಟನೆ, ಅಂತೆಯೆ ಕನ್ನಡದ ವರಕವಿ ಬೇಂದ್ರೆಯವರು ಮಹಾರಾಷ್ಟ್ರದ ಮುಂಬಯಿಯಲ್ಲಿ ಕಾಲವಾದರೆಂಬುದನ್ನು ನೆನಪಿಗೆ ತರುತ್ತದಲ್ಲವೆ ? ಈ ಲೇಖನವನ್ನು 'ಕಸ್ತೂರಿ'ಯಲ್ಲಿ ಉಪಯೋಗಿಸಲು ಅವಕಾಶವಿತ್ತ ಭಾವೈಕ್ಯ ಸದನದ ಸಂಚಾಲಕ ಶ್ರೀ ಗೋಪಾಲ ಸೋಹಾನಿ ಅವರಿಗೆ ಕೃತಜ್ಞತೆಗಳು. -ಸಂಪಾದಕ]



ಬದುಕಿನ ಆದರ್ಶ

ಬೀಚಿ ಅವರ ಕೊನೆಯ ದಿನಗಳಲ್ಲೊಂದು ದಿನ ಅವರೊಂದಿಗೆ ಆ ಮಾತು ಈ ಮಾತು ಆಡುತ್ತಾ ಅವರ ಆರೋಗ್ಯ ಕ್ಷೀಣಿಸುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ "ನೀವು ಇನ್ನೂ ನೂರು ವರ್ಷ ಬದುಕಿ, ಬೆಳೆಯುತ್ತಿರುವ ವೈಚಾರಿಕ ಸಮಾಜಕ್ಕೆ ಮಾದರಿಯಾಗಿರಬೇಕು"- ಎಂದ್ಹೇಳಿದೆ. ಆ ಬೀಚಿ ಮುಖದಲ್ಲಿ ನಗುವನ್ನು ಕಂಡುಕೊಂಡು, "ನಾನು ನೂರು ವರ್ಷ ಬದುಕುವುದು ಮುಖ್ಯವಲ್ಲ. ಎಷ್ಟು ದಿನ ನನ್ನ ಸ್ವಯಂಶಕ್ತಿಯಿಂದ ನನ್ನ ಕೆಲಸ ಪೂರೈಸಿಕೊಳ್ಳುವುದರೊಂದಿಗೆ ಇತರರಿಗೆ ಉಪಯೋಗಿ ಆಗಿರ್ತೇನೆ ಎನ್ನುವುದು ಮುಖ್ಯ" ಎಂದರು. ಅಬ್ಬಾ! ಸಾವಿನ ಸಮೀಪದಲ್ಲಿದ್ದರೂ ತಮ್ಮ ಆದರ್ಶವನ್ನು ಬಿಟ್ಟಿಲ್ಲವಲ್ಲ ಇವರು! ಎಂದು ನಾನು ಆಶ್ಚರ್ಯದಿಂದ ಮೌನವಾದೆ.

-ಬಿ. ಲಕ್ಷ್ಮಣ

ರೋಹಿಣಿಗೇಕಿಷ್ಟು ಮಹತ್ವ?

ರೋಹಿಣಿಗೇಕಿಷ್ಟು ಮಹತ್ವ? ಹೆಚ್ಚಿನ ತೂಕದ್ದಾಗಿದೆಯೆಂದೆ? ಖಂಡಿತವಾಗಿಯೂ ಅಲ್ಲ. ೧೯೭೫ ರಲ್ಲಿ ಹಾರಿಬಿಟ್ಟ ಆರ್ಯಭಟನ ತೂಕ ಮುನ್ನೂರಾ ಅರವತ್ತು ಕಿಲೋಗಳಷ್ಟಿದ್ದರೆ ಮುಂದೆ ನಾಲ್ಕು ವರ್ಷಗಳ ನಂತರ ಹಾರಿಸಿದ ಭಾಸ್ಕರನ ತೂಕ ನಾಲ್ಕುನೂರಾನಾಲ್ವತ್ತುನಾಲ್ಕು ಕಿಲೋಗಳಷ್ಟಿತ್ತು. ಮೊನ್ನೆ ಏಪ್ರಿಲ್ ೧೮ ರಂದು ಹಾರಿಸಿದ ರೋಹಿಣಿಯ ತೂಕ ಇವುಗಳ ಸರಿ–ಸಮಕ್ಕೂ ಬಾರದು. ಅದರ ತೂಕ ಬಹಳವೆಂದರೆ ನಾಲ್ವತ್ತೊಂದೂವರೆ ಕಿಲೋಗಳಷ್ಟಾಗಬಹುದು ಅಷ್ಟೆ.


ಹಾಗಾದರೆ ಅಂಥಾ ವಿಶೇಷವೇನು ಈ ಉಪಗ್ರಹದಲ್ಲಿ? ಮೊಟ್ಟಮೊದಲನೆಯದಾಗಿ ಇದು ಸಂಪೂರ್ಣ ಸ್ವದೇಶಿ ತಂತ್ರಜ್ಞಾನದಿಂದ ತಯಾರಾದ ಉಪಗ್ರಹ. ಈ ವರೆಗೆ ಹಾರಿಬಿಟ್ಟ ಉಪಗ್ರಹಗಳೆಲ್ಲ ಮುಂದುವರಿದ ದೇಶಗಳ, ಅದರಲ್ಲೂ ಮುಖ್ಯವಾಗಿ ರಶಿಯ ಅಮೇರಿಕ ಹಾಗೂ ಫ್ರಾನ್ಸ್‌ಗಳ ಸಹಕಾರದಿಂದ ತಯಾರಿಸಿ, ಅನುಕೂಲವಾದ ವಿದೇಶಿ ನೆಲೆಯಿಂದ ಇವುಗಳನ್ನು ಹಾರಿಬಿಡುತ್ತಿದ್ದರೆ ರೋಹಿಣಿಯನ್ನು ಇಲ್ಲಿನ ವಿಜ್ಞಾನಿಗಳೇ ರೂಪಿಸಿ ಭಾರತದ್ದೇ ಆದ ಶ್ರೀಹರಿಕೋಟದಿಂದ ಅದನ್ನು ಯಶಸ್ವಿಯಾಗಿ ಹಾರಿಸಲಾಯಿತು.

ಈ ಮೊದಲು ಹಾರಿಬಿಟ್ಟ ಭಾಸ್ಕರನಾಗಲಿ ಆರ್ಯಭಟನಾಗಲಿ ಹಾಕಿಕೊಟ್ಟ ಕಾರ್ಯಕ್ರಮಗಳನ್ನು ಸರಿಯಾಗಿ ನಿರ್ವಹಿಸಲಿಲ್ಲ, ಫ್ರೆಂಚ್ ಹಾಗೂ ಅಮೇರಿಕನ್ನರ ನೆರವಿನಿಂದ ತಯಾರಿಸಿ ಬಾಹ್ಯಾಂತರಿಕ್ಷದಲ್ಲಿ ತೇಲಿಬಿಟ್ಟ ಆ್ಯಪಲ್ ಹಾಗೂ ಇನ್ಸಾಟ್–೧ಎ ಇವುಗಳೂ ಕಾರ್ಯಕ್ಷಮತೆಯಲ್ಲಿ ಸರಿಯಾದ ಮಟ್ಟಕ್ಕೆ ಬರಲಿಲ್ಲ. ಆದರೆ ಸಂಪೂರ್ಣ ಸ್ವದೇಶಿಯಾಗಿ ತಯಾರಾದ ರೋಹಿಣಿ ಯಾವ ಅಡೆತಡೆಯೂ ಇಲ್ಲದೆ ಸರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಭಾರತೀಯ ವಿಜ್ಞಾನಿಗಳು ಮುಂದುವರಿದ ದೇಶಗಳ ವಿಜ್ಞಾನಿಗಳಿಗಿಂತ ಚೆನ್ನಾಗಿ ಕೆಲಸ ಮಾಡಬಲ್ಲರೆನ್ನುವುದಕ್ಕೆ ರೋಹಿಣಿಯೊಂದು ಜೀವಂತ ಸಾಕ್ಷಿ. ಈ ಉಪಗ್ರಹದ ಉಡ್ಡಯನದಿಂದಾಗಿ ಜಗತ್ತಿನ ಮುಂದುವರಿದ ಆರು ರಾಷ್ಟ್ರಗಳ ಪೈಕಿ ಭಾರತಕ್ಕೂ ಒಂದು ಸ್ಥಾನ.


ಉಳಿದ ಉಪಗ್ರಹಗಳು ಮಾಡುವ ಕೆಲಸವನ್ನೇ ಇದೂ ಮಾಡುವುದು– ತೈಲನಿಕ್ಷೇಪವನ್ನು ಪತ್ತೆ ಹಚ್ಚುವುದು, ಹವಾಮಾನ ಮುನ್ಸೂಚನೆಯನ್ನು ಕೊಡುವುದು, ಒಕ್ಕಲುತನದ ಸ್ಥಿತಿಗಳನ್ನು ತಿಳಿಸುವುದು, ಶತ್ರುಪ್ರದೇಶದ ಮೇಲೆ ಹಾರುವಾಗ ಫೋಟೋ ತೆಗೆದುಕೊಳ್ಳುವುದು ಇತ್ಯಾದಿ. ಈ ಬಗೆಗೆ ಪತ್ರಿಕೆಗಳಲ್ಲಿ ಸಾಕಷ್ಟು ವರದಿಯೂ ಬಂದಿದೆ.

ಆದರೆ ಬಹುಜನರ ಕಣ್ಣಿನಿಂದ ತಪ್ಪಿಹೋದ ಒಂದು ಅಂಶವೆಂದರೆ ರೋಹಿಣಿಯ ಯಶಸ್ವಿ ಉಡ್ಡಯನ ಭಾರತದಲ್ಲಿ ರಾಕೆಟ್ ತಂತ್ರಜ್ಞಾನಕ್ಕೆ ಭದ್ರವಾದ ಅಡಿಪಾಯವನ್ನು ಒದಗಿಸಿದೆಯೆನ್ನುವುದು. ಇದನ್ನು ಸರಿಯಾಗಿ ಅಭಿವೃದ್ಧಿಪಡಿಸುವ ಮೂಲಕ ಇನ್ನು ಕೆಲವೇ ವರ್ಷಗಳಲ್ಲಿ ಭಾರತವೂ ಖಂಡಾಂತರ ಕ್ಷಿಪಣಿಗಳನ್ನು [illegible] ಬಲಾಢ್ಯ ರಾಷ್ಟ್ರಗಳ [illegible].

[ಇದರೊಂದಿನ ಚಿತ್ರಗಳು ಪಿಐಬಿ ಕೃಪೆ]







೩. ಎಸ್‌ಎಲ್‌ವಿ-೩ರ ನಾಲ್ಕನೆಯ ಹಂತ-ಕೆನ್ನಾರ್ ಮೋಟರ್



೪. ಇಸ್ರೋ ಎಸ್ ಎಲ್ ವಿ-೩ಯು ಕಕ್ಷೆಗೆ ಸೇರಿದ ರೋಹಿಣಿ ಉಪಗ್ರಹ

ದಾವಣಗೆರೆ

ಹೊಸ ಒಲವಿನ ಗೆಲುವು ಅನುಪಮ... ಅಂದ-ಆಕರ್ಷಣೆಗಳ ಅಮೋಘ ಸಂಘಮ!



* ಟೆರೀನ್—CAFI ಅವರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ದಾವಣಗೆರೆ
ಬೆಡಗಿನ ಬಟ್ಟೆಗಳು

ದಿ. ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್
ಹನುಮಂತಪ್ಪ ಬಿಲ್ಡಿಂಗ್,
ಚಿತ್ರದುರ್ಗ ರೋಡ್, ದಾವಣಗೆರೆ 577 002

ಷೋ ರೂಮ್
ಕಾವೇರಿ ಭವನ ಬೆಂಗಳೂರು-560 009.
ದಾಜಿಬಾನ್ ಪೇಟ್, ಹುಬ್ಬಳ್ಳಿ-580 020
ಚಿತ್ರದುರ್ಗ ರೋಡ್, ದಾವಣಗೆರೆ-577 002.



ಸ್ವರಕ್ಷಣೆಯ ಈ ಕಲೆಗಳು

ಡಾ. ಸುನಂದಾ ಕುಲಕರ್ಣಿ

ಸ್ವರಕ್ಷಣೆಯ ಕಲೆಗಳಾದ ಕುಂಗ್ ಫೂ, ಸಾವೊಲಿನ್ ಕುಂಗ್ ಫೂ, ಕರಾಟೆ, [illegible] ಜೂಡೋಗಳು ಪ್ರದರ್ಶಿತಗೊಂಡಾಗ ರೋಮಾಂಚನ ಗೊಳ್ಳುತ್ತೇವಷ್ಟೆ. ಈಗಿನ ಯುವ ಜನಾಂಗ ಕ್ಕಂತೂ ಈ ಕಲೆಗಳು ಒಡಿಸಿದಷ್ಟು ಹುಚ್ಚನ್ನು [illegible] ಬೆಳೆದದ್ದೆಲ್ಲಿ ಎನ್ನುವುದಂತೂ ಇನ್ನೂ ಅಸ್ಪಷ್ಟವಾದ ವಿಚಾರ. ಕೆಲವರ ಪ್ರಕಾರ ಈ ಸ್ವರಕ್ಷಣೆಯ ಕಲೆ [illegible] ಸನ್ಯಾಸಿಗಳಿಂದ. ಅದೂ ಅಹಿಂಸಾ ವಾದಿಗಳಾದ ಬೌದ್ಧ ಸನ್ಯಾಸಿಗಳಿಂದ. ಬೌದ್ಧ ಧರ್ಮ ಭಾರತದಲ್ಲಿ ಹುಟ್ಟಿ ಚೀನ, ಜಪಾನ್, ಸಿಂಹಳ ಮುಂತಾದ ಹೊರನಾಡುಗಳಲ್ಲಿ ಪ್ರಸಾರ ಗೊಂಡು ಸ್ಥಾಯಿಯಾದಂತೆ ಮತ್ತು ಹುಟ್ಟಿದ [illegible] ಈ ಕಲೆಗಳು ಕೂಡ ಆದುವು ಎನ್ನುತ್ತಾರೆ ಇನ್ನು ಕೆಲವರು.

ಭಾರತದಲ್ಲಿ ಹುಟ್ಟಿದ ಕರಾಟೆ, ಕುಂಗ್ ಫೂಗಳು ಬೌದ್ಧ ಧರ್ಮದ ಪ್ರಚಾರಕ್ಕಾಗಿ [illegible] ಭಿಕ್ಕುಗಳು ಕರಗತಗೊಳಿಸಿಕೊಂಡಂಥ ಸ್ವರಕ್ಷಣೆಯ ಕಲೆಗಳು. ಸ್ವರಕ್ಷಣೆಗೆ [illegible] ಆಯುಧಗಳನ್ನು ಹಿಡಿಯುವುದು ಅಪರಾಧವೆನಿಸಿದ್ದ ಆ ಕಾಲದಲ್ಲಿ ಬೌದ್ಧ ಗುರುಗಳು ಕಂಡುಕೊಂಡು ಶಿಷ್ಯರಿಗೆ ಹೇಳಿಕೊಟ್ಟ ಗತ್ತುಗಳಿವು. ೬ನೆಯ ಶತಮಾನದಲ್ಲಿ ತಾಮೊ ಎಂಬ ಬೌದ್ಧ ಭಿಕ್ಷುವೊಬ್ಬ




[illegible]ದಿಂದ ಚೀನಕ್ಕೆ ಹೋಗುತ್ತಿದ್ದಾಗ ಬೌದ್ಧ [illegible] ಕುಂಗ್ ಫೂ ಸಹಾಯದಿಂದ ರಕ್ಷಿ [illegible] ಬಂದ [illegible] ಈ ವಿದ್ಯೆಯ ಮಹತ್ವವನ್ನು [illegible] ಪ್ರತಿಪಾದಿಸಿದ. ಕೊನೆಯ [illegible] ಮಾತ್ರ [illegible] ಪ್ರಯೋಗ [illegible]ವಂತೆ.

[illegible]ದಲ್ಲಿ ಹುಟ್ಟಿದ ಕರಾಟೆಗೆ ಮೂಲ ಕಳರಿ [illegible]. (ಕಳರಿ ಎಂದರೆ ಸ್ವರಕ್ಷಣಾ ವಿದ್ಯೆಯನ್ನು ಕಲಿಸುವ ಶಾಲೆ. ಇಂಥ ಅನೇಕ ಕಳರಿಗಳು ಕೇರಳದಲ್ಲಿ ಪರಂಪರಾನುಗತವಾಗಿ ಬಂದಿವೆ) ಒಂದು ದಂತ ಕಥೆ ನೋಡಿ– ಧನುರ್ವೇದದ ಸಂಹಿತೆಯ ಪ್ರಕಾರ ಪರಶುರಾಮನು ಕೇರಳವನ್ನು ಸಮುದ್ರದಿಂದ ಮೇಲೆತ್ತಿದ ಮತ್ತು ಅದರ [illegible] ೨೧ ಜನರಿಗೆ ಈ ಕ್ಷಾತ್ರವಿದ್ಯೆಯನ್ನು ಕಲಿಸಿಕೊಟ್ಟ. ಹೆಂಗಸರೂ ಈ ವಿದ್ಯೆಯನ್ನು ಕಲಿಯಬೇಕಾಗಿ ಬಂದು. ಅದಕ್ಕೆ ಕಾರಣ ತಮ್ಮ [illegible]ರು ಯುದ್ಧಕ್ಕಾಗಿ ಬೇರೆಡೆ ಹೋದಾಗ [illegible] ಹಾಗೂ ರಾಜ್ಯದ ರಕ್ಷಣೆಯ ಹೊಣೆ ಅವರ ಮೇಲೇ ಇರುತ್ತಿದ್ದುದು. (ಕಳರಿಪಯಟ್‌ನಂತೆಯೇ [illegible]ದಲ್ಲಿ ಪಟ್ಟಿಸುತ್ತು ಕಲೆ ಅದೇ [illegible] ಹುಟ್ಟಿತೆಂದೂ ಹೇಳುತ್ತಾರೆ. ಆದರೆ [illegible] ಕಲೆ ನಶಿಸಿದೆ.)

ಕಳರಿಪಯಟ್ಟಿನಲ್ಲಿ ದೇಹವೇ ಸರ್ವಸ್ವ; ಅದೇ ಥಾಯ್, ಟಿಬೇಟಿನ್ನ. ಕೆಲ ಸಲ ಬಿಲ್ಲು (ಹಾವ್ರಗತಿ) ಮತ್ತು ಚೇಂಬಟ(ಚಿಕ್ಕ ಬಡಿಗೆ)ಗಳಂಥ ಆಯುಧಗಳ ಬಳಕೆಯೂ ಆಗುವುದುಂಟು. ಕಳರಿಪಯಟ್ಟಿನ ಮೊದಲ ಭಾಗ ಮೈಯಿಪಯಟ್ಟು. ಇದರಲ್ಲಿ ೧೨ ತರಹದ ವ್ಯಾಯಾಮಗಳಿವೆ. ದೇಹವನ್ನು ಯಾವ ದಿಕ್ಕಿನಲ್ಲಾದರೂ ತಿರುಗಿಸಲು ಬರುವಂಥ ಕಸರತ್ತುಗಳೂ ಇವೆ.

ಸುವೆಟಾ ಕೇವಲ ಕಾಲುಗಳ ಉಪಯೋಗದಿಂದ ಸ್ವರಕ್ಷಣೆ ಮಾಡಿಕೊಳ್ಳುವ ಕ್ಷಾತ್ರ ಕಲೆ. ಕರಾಟೆಯಲ್ಲಿ ಮುಷ್ಟಿಗೆ ಪ್ರಾಮುಖ್ಯವಿದ್ದರೆ ಜೂಡೋದಲ್ಲಿ ಒದೆತವೇ ಮುಖ್ಯವಾಗುತ್ತದೆ. ಕುಂಗ್ ಫೂದಲ್ಲಿ ದೇಹದ ಎಲ್ಲ ಅವಯವಗಳೂ ಬಳಸಲ್ಪಡುತ್ತವೆ. ಈ ಕಲೆಗಳು ಅದೆಷ್ಟು ಜನಪ್ರಿಯವೆಂದರೆ ಒಲಿಂಪಿಕ್ಸ್‌ನಲ್ಲೂ ಇವಕ್ಕೆ ಸ್ಥಾನವುಂಟು. ಭಾರತದ ರಕ್ಷಣಾ ದಳದಲ್ಲಿ ಇವು ಕಡ್ಡಾಯದ ಕಲೆಗಳು. ಚೀನ–ಜಪಾನುಗಳಲ್ಲಂತೂ ಶಾಲೆಗಳಲ್ಲಿ ಈ ಕಲೆಗಳು ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಕಡ್ಡಾಯಗೊಳಿಸಲ್ಪಟ್ಟಿವೆ. ಚೀನದಲ್ಲಿ ರೈತರು ಬೆಳೆಯ ರಕ್ಷಣೆಗಾಗಿ ಕಳ್ಳರನ್ನೋಡಿಸಲು ಕುಂಗ್ ಫೂ ಕಲಿಯುತ್ತಾರೆ.

ಈ ಕಲೆಗಳಲ್ಲಿ ಐದು ಶ್ರೇಣಿಗಳು. ಒಂದೊಂದು



ತ್ರಿಯನೆ ಬಂದೊಂದು ಬಣ್ಣದ ನಡುಪಟ್ಟಿ ನಿಗದಿಗೊಳಿಸಲ್ಪಟ್ಟಿದೆ. ಬಿಳಿ, ಹಳದಿ, ಹಸಿರು, ಕಂದು ಹಾಗೂ ಕರಿಯ ನಡುಪಟ್ಟಿಗಳು ಆ ವಿದ್ಯೆಯಲ್ಲಿ ಎಷ್ಟು ಎಷ್ಟು ಪ್ರಾವೀಣ್ಯ ಗಳಿಸಿಕೊಂಡಿರುವನೆಂಬುದನ್ನು ಸೂಚಿಸುತ್ತವೆ. ಬಂಧ, ಪ್ರತಿಬಂಧ, ಮುನ್ನುಗ್ಗುವಿಕೆ, ಎದುರಿಸುವಿಕೆ ಮತ್ತು ಕಾಲುಗಳ ವ್ಯಾಯಾಮವೇ ಈ ಕಲೆಗಳ ಮುಖ್ಯ ಅಂಶಗಳು. ನೋಡಲು ಸೊರಕಲು ಶರೀರ ಆದರೆ ಬಲವೋ ಭಯಂಕರ. (ಬ್ರೂಸ್ ಲಿ ಬರುವ ಚಿತ್ರ ನೆನಪಿಸಿಕೊಳ್ಳಿ) ಎದುರಾಳಿಯ ಶಕ್ತಿಯನ್ನೇ ಬಳಸಿಕೊಂಡು ಆತನನ್ನೇ ಕುಂಯ್ಯೋ ಮುರ್ರ್ಯೋ ಎನಿಸಬಹುದಾದ ಚಾಕಚಕ್ಯ ಪಡೆಯುವುದು ಅಗತ್ಯ. "ಇಲ್ಲಿ ಬರಿ ದೈಹಿಕ ಬಲಕ್ಕೆ ಮಹತ್ವವಿಲ್ಲ, ಸಂಯಮ-ದೃಢತೆಗಳೂ ಅವಶ್ಯ. ಮನೋಧೈರ್ಯವೂ ಬೇಕು," ಎನ್ನುತ್ತಾನೆ ಬ್ರೂಸ್ ಲಿ.


ಕುಂಗ್ ಫೂ ಒಂದು ಯೋಗವಿದ್ದಂತೆ. ಇದರಲ್ಲಿ ಉಸಿರಾಟ, ಸ್ನಾಯುಗಳು ಹಾಗೂ ಕಣ್ಣುಗಳ ಮೇಲೆ ನಿಯಂತ್ರಣ ಸಾಧಿಸಿಕೊಳ್ಳಬೇಕಾಗುತ್ತದೆ. ಶರೀರದ ಎಲ್ಲ ಅವಯವಗಳೂ ಹೇಗೆಂದರೆ ಹಾಗೆ, ಎಲ್ಲೆಂದರೆ ಅಲ್ಲಿ ನಮ್ಮ ಮಾತು ಕೇಳುವ ಹಾಗಿರಬೇಕು— ಅಂಥ ನಿಯಂತ್ರಣ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕೆನ್ನುತ್ತಾರೆ ಕರಾಟೆ ಪಟುಗಳು. ಇದನ್ನು 'ಚಿ' ಎಂದು ಕರೆಯುತ್ತಾರೆ ಇದರ ದ್ರಷ್ಟಾರರು. 'ಚಿ' ಎಂದರೆ ಅಂತಃಶಕ್ತಿ ಅಥವಾ ನಿಯಂತ್ರಣ ಶಕ್ತಿ. ಇದು ದೇಹವನ್ನು ಸೇರಿದ ಮೇಲೆ ಬೇಕೆಂದಾಗ ಬೇಕಾದ ಅವಯವಕ್ಕೆ ಬರಬೇಕಂತೆ. ಈ 'ಚಿ' ಯೋಗದಲ್ಲಿಯ 'ಪ್ರಾಣ'ಕ್ಕೆ ಸಮ.

ಕರಾಟೆ ಎಂದರೆ ಖಾಲಿ ಕೈ ಎಂದರ್ಥ. ನಿರಾಯುಧವಾಗಿ ಸ್ವರಕ್ಷಣೆ ಮತ್ತು ಶತ್ರು ಉಚ್ಚಾಟನೆ ಮಾಡುವುದೇ ಈ ಕಲೆಯ ಮಹತ್ವ.

ಈ ಕಲೆಯನ್ನು ಕಲಿ[illegible] ಗುರು ಒಂದು ನೀತಿ ಬೋಧಿಸುತ್ತಾನೆ— [illegible] ವಿದ್ಯೆಯನ್ನು ಸಕಾರಣವಿಲ್ಲದೆ [illegible] ಇತರರ ಮೇಲೆ ಪ್ರಯೋಗಿಸಬೇಡ. [illegible] ರಕ್ಷಣೆಗಾಗಿ ಇದನ್ನು ಉಪಯೋಗಿಸಿಕೊಳ್ಳಬೇಕು.

[illegible] ಈ ಕಲೆಯ ಅಭ್ಯಾಸದಲ್ಲಿ [illegible] ಒಂದು ಉದಾಹರಣೆ: ತಾವೋ ಇದನ್ನು ಕಲಿಯುವಾಗ [illegible] ವರ್ಷ ಕಣ್ಣಿನ [illegible] ಮಾತ್ರ ಬಂದರೆ ಕ್ಷಣ ನಿದ್ರೆ [illegible] ಭಾಗವನ್ನು [illegible] ದಂತೆ. ಆದರ ಪ್ರಾಯಶ್ಚಿತ್ತಕ್ಕೋಸ್ಕರ [illegible] ತನ್ನ ಕಣ್ಣ ರೆಪ್ಪೆಗಳನ್ನೇ ಕತ್ತರಿಸಿದನಂತೆ (ಆ ರೆಪ್ಪೆಗಳೇ ಚಹದ ಗಿಡಗಳಾಗಿ ಬೆಳೆದುವೆಂದೂ ನಿದ್ದೆ ಬರುವಂತಾದಾಗ ಚಹ ಕುಡಿದರೆ ನಿದ್ರೆ ಹಾರಿ ಹೋಗುವುದೆಂದೂ ಹೇಳುವುದುಂಟು).

ತಾವೊ ಮತ್ತು ಪೈಫೆಂಗ್ (ಎಂಬುವನೊಬ್ಬ) ಸೇರಿಕೊಂಡು ಈ ಕಲೆಗಳಲ್ಲಿ ೧೭೦ ತರಹದ ವ್ಯಾಯಾಮ ಮತ್ತು ಸಾಹಸಗಳನ್ನು ಯೋಜಿಸಿದರು. ಆ ಕಾಲಕ್ಕೆ ಪೈಫೆಂಗ್ ೮೦ ವರ್ಷದ



* ತಾವೋ ಯಾರು ಗೊತ್ತೆ? ಭಾರತದ ಒಬ್ಬ ರಾಜಕುಮಾರ. 'ಸುಗಂಧ' ಎಂಬ ರಾಜನ ಮಗ. ಬೌದ್ಧ ಧರ್ಮದಿಂದ ಆಕರ್ಷಿತನಾದ. ಭಿಕ್ಕುವಾಗಿ ಆ ಧರ್ಮದ ಪ್ರಚಾರಕ್ಕೆ ದೇಶಾಂತರ ಹೊರಟ. ಚೀನಕ್ಕೆ ಹೋಗಿ ಬರುವಾಗ ತನ್ನೊಂದಿಗೆ ಕ್ಷಾತ್ರಕಲೆಗಳ ಮೇಲೆ ಬರೆದ ಕೆಲ ಗ್ರಂಥಗಳನ್ನು ಭಾರತಕ್ಕೆ ತಂದ. 'ತಾವೊ ತೆ ಚಿಂಗ್' ಎಂಬ ಗ್ರಂಥದಲ್ಲಿ ಈ ಕಲೆಗಳ ಪೂರ್ಣ ವಿವರಗಳಿದ್ದುವಂತೆ.
* ವಜ್ರಮುಷ್ಟಿ ಕಲೆಯನ್ನು ಕಲಿಯುವವರು ಮುಷ್ಟಿಗಳನ್ನು ಗಟ್ಟಿಮಾಡಿಕೊಳ್ಳಲು ಏನು ಮಾಡುತ್ತಿದ್ದರು ಗೊತ್ತೆ? ಹಾಲಲ್ಲಿ ಮುಷ್ಟಿಗಳನ್ನು ನೆನೆಸಿಕೊಂಡು ಕಟ್ಟಿಗೆಗಳಿಂದ ಬಡಿದುಕೊಳ್ಳುತ್ತಿದ್ದರಂತೆ!
* ಕಳರಿ ಪಯಟ್ಟುವಿನಿಂದಲೆ ಕೇರಳದ ನಾಟ್ಯಗಳಿಂದ ಕಥಕ್ಕಳಿ ಮತ್ತು ಚವಿಟ್ಟು ನಾಟಕಮ್ ಮುಂತಾದವು ಹುಟ್ಟಿವೆಯಂತೆ.
* ಈ ಕ್ಷಾತ್ರಕಲೆಗಳಿಗೂ ಚೀನೀ ವೈದ್ಯಕೀಯಕ್ಕೂ ಬಹು ಹಳೆಯ ಸಂಬಂಧ. ಹುಂ ಆಗಟಿ ರಾಜವಂಶದ ಕಾಲದಲ್ಲಿ ಪ್ರಜೆಗಳ ಆರೋಗ್ಯ ರಕ್ಷಣೆಗಾಗಿ ಏನಾದರೂ ಮಾಡಬೇಕೆಂದೆನಿಸಿದಾಗ ಈ ಕಲೆಗಳತ್ತ ಹೆಚ್ಚು ಲಕ್ಷ್ಯ ಪೂರೈಸಲ್ಪಟ್ಟಿತಂತೆ.
* ಹ್ಯಾನ್ ಸಮ್ರಾಟರ ಕಾಲದಲ್ಲಿ ಹ್ಯುಟೋ ಎಂಬ ವೈದ್ಯಾಧಿಕಾರಿ ಕರಡಿ, ಮಂಗ, ಪಕ್ಷಿ, ಹುಲಿ ಮತ್ತು ಜಿಗರೆಗಳ ಚಲನವಲನಗಳನ್ನು ನೋಡಿಕೊಂಡು ಕೆಲವು ಕರಾಟೆ, ಕುಂಗ್ ಫೂಗಳಲ್ಲಿ ಅಳವಡಿಸಿಡಲಾಗತ್ತದೆ.
* ಟೋಯಿಸ್ಟ್ ಎಂಬೊಬ್ಬ ವೈದ್ಯ ೪ನೆಯ ಶತಮಾನದಲ್ಲಿ ಈ ಕ್ಷಾತ್ರಕಲೆಗಳ ಮಹತ್ವವನ್ನು ಬಹುವಾಗಿ ಹೇಳಿದ್ದಾನೆ.

ಕೈ ಬೆರಳುಗಳ ಸಹಾಯದಿಂದ ಪ್ರತಿಪಕ್ಷೀಯರನ್ನು ಹಿಡಿಯುತ್ತಿದ್ದನಂತೆ. ಆತನದು ಬಹುವಿಧ ಬಲವಂತೆ. ಹುಲಿ, ಡ್ರ್ಯಾಗನ್, ಚಿರತೆ ಮತ್ತು ಹಾವುಗಳ ಚಾಕಚಕ್ಯವೂ ಆತನಲ್ಲಿತ್ತಂತೆ. ಒಂದು ಸಾವಿರ ವರ್ಷಗಳ ಪೂರ್ವದಲ್ಲಿ ಟಾ ಟ್ಸು-ಟ್ಸೇನ ರಾಪ್ಸೋಡಿಗಳಲ್ಲಿ ಚೀನೀ ಮಲ್ಲಯುದ್ಧಗಳನ್ನು ಈ ರೀತಿ ವರ್ಣಿಸಿದ್ದಾರೆ: "ನಮಗೆ ಬಾಕುಗಳಿರಲಿಲ್ಲ. ಆದರೆ ಹತ್ತು ಬೆರಳುಗಳಿವೆ. ನಮ್ಮ ಬಳಿ ಢಾಲುಗಳಿರಲಿಲ್ಲ, ಆದರೆ ಎರಡು ತೆರೆದ ಕೈಗಳಿವೆ. ಅವನ್ನೇ ಆಯುಧವನ್ನಾಗಿಸಿದೆವು."

ಸಾಮಾನ್ಯವಾಗಿ ಮೊಳಕೈಯಿಂದ ಮೊಣಕೈಯನ್ನು ಚಾಕುವಿನಂತೆ ಉಪಯೋಗಿಸುವುದುಂಟು. ಸತತ ಅಭ್ಯಾಸದಿಂದ ಕೈ ಹಾಗೂ ಕಾಲುಗಳು ಕಬ್ಬಿಣದ ಕೋಲುಗಳಂತಾಗಿಬಿಡುತ್ತವೆ.

ಈ ಕಲೆಗಳು ಆಶ್ಚರ್ಯಕಾರಕ ರೀತಿಯಲ್ಲಿ ಭಾರತದಲ್ಲಿ ಜನಪ್ರಿಯತೆಯನ್ನು ಪಡೆಯುತ್ತಿವೆ. ಈಗ ಹೆಂಗಸರೂ ಕರಾಟೆ ಕಲಿಯಲು ಬರುತ್ತಿದ್ದಾರೆ. ಅಪರಾಧಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಈ ಕಲೆಗಳನ್ನು ರೂಢಿಸಿಕೊಳ್ಳುವುದು ಬಹುವಿಧ ಉಪಯೋಗಿ ಕ್ರಮವಲ್ಲವೆ? ✡



ಪರಿಹಾರ

'ಗಂಗಾ' ಪಾದೇಕಲ್

[illegible]

[illegible]


ತುಂಬಿದ ಬೇಸರದೊಡನೇ ಎದ್ದು ಬಚ್ಚಲಿಗೆ ನಡೆದೆ. ಒಲೆಗೆ ಉರಿ ಹಾಕಿ, ಮುಖ ತೊಳೆಯು ಕಾಫಿ ಕಾಸಿದಾಗ ಆರಾಗುತ್ತ ಬಂದಿತ್ತು. ಇನ್ನರ್ಧ ಗಂಟೆಯೊಳಗೆ ಮನೆ ಬಿಡಬೇಕು. ಇಲ್ಲವಾದರೆ ಸಮಯಕ್ಕೆ ಸರಿಯಾಗಿ ತಲಪಲಾರೆ. ಪ್ರಜ್ಞೆ ತಿವಿಯುತ್ತಲಿದ್ದಂತೇ ಬೇಗ ಸ್ನಾನ ಮುಗಿಸಿ ಕಾಫಿ ಹೀರಿದೆ. ನಿನ್ನೆ ಬರುವಾಗ ತಂದ ಬ್ರೆಡ್ ಇತ್ಯಾದರೂ ತಿನ್ನಲು ಬೇಜಾರು. ನನಗೆ ಡೇ ಡ್ಯೂಟಿ ಇರುವಾಗೆಲ್ಲ ಇದೇ ಗೋಳು. ಬೆಳಗ್ಗಿನ ತಿಂಡಿ ಮಾಡಿಟ್ಟು ಆಸ್ಪತ್ರೆಗೆ ಹೋಗಲು ಕೂಡಾ ತಡವಾಗುತ್ತದೆ. ಹಾಗೆಂದು ಅತ್ತೆಯವರು ಒಂದು ದಿನವಾದರೂ ಆರೂವರೆಗೆ ಮುನ್ನ ಏಳುವವರಲ್ಲ. ಇನ್ನು ವಿಮಲಳಿಗೆ ಎಂಟು ಘಂಟೆಗೇ ಬೆಳಗಾಗುವುದು. ಇವರೂ, ಸುರೇಶ ಏಳು ಏಳೂವರೆಯಲ್ಲದೇ ಏಳುವವರಲ್ಲ. ಹೀಗಾಗಿ ಬೆಳಗಿನ ತಿಂಡಿ ನನಗೆ ಖೋತಾ. ಹಗಲಿಡೀ ಆಸ್ಪತ್ರೆ ಕೆಲಸ ಮುಗಿಸಿ ರಾತ್ರಿ ಅಷ್ಟು ತಿಂದು ಹಾಸಿಗೆ ಸೇರುವ ನನಗೂ ತೀರ ಮುಂಚೆ ಏಳಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ನನ್ನ ಬೆಳಗಿನ ತಿಂಡಿಯು ಸಡಗರ ಬ್ರೆಡ್ಡಿಗೇ ಮುಕ್ತಾಯವಾಗುತ್ತಿತ್ತು.

ಕಾಫಿ ಕುಡಿದು ರೂಮಿಗೆ ಬಂದು ಬಟ್ಟೆ ಬದಲಿಸಿದೆ. ಇನ್ನು ಮಗುವನ್ನೊಮ್ಮೆ ನೋಡಿಬಿಡುತ್ತೇನೆ. ಮತ್ತೆ ನೋಡುವುದು ರಾತ್ರಿಯೇ ಸರಿ. ಬೆಳಗ್ಗೆ ನಾನು ಹೊರಡುವಾಗ ಅವನು ಮಲಗಿರುತ್ತಾನಾದರೆ ರಾತ್ರಿ ಬಂದಾಗ ನಿದ್ರಿಸಿರುತ್ತಾನೆ.

ಅವನಿಗೆ ಮೊನ್ನೆ ಇಪ್ಪತ್ತಕ್ಕೆ ಏಳು ತಿಂಗಳು ತುಂಬಿತು. ಮನೆಯಲ್ಲಿ ಅಂಬೆಗಾಲಿಡುವ ಅವನಿಗೂ ಈಗೀಗ ಅಮ್ಮನ ಗುರುತು ಚೆನ್ನಾಗಿದೆ. ಈ ಸಲ ಡೇ ಡ್ಯೂಟಿ ಬಿದ್ದು ಹದಿನೈದು ದಿನಗಳಾಗುವಷ್ಟೇ. ಅದಕ್ಕೆ ಮುನ್ನ ಇಡೀ ಹಗಲು ಮನೆಯಲ್ಲಿ ಇರುತ್ತಿದ್ದೆನಲ್ಲಾ, ಆಗ ಹಟ ಕಲಿತು ಬಿಟ್ಟಿದ್ದ. ಆ ಪುಟ್ಟ ಮಗುವಿಗೂ ತಾಯಿ ತನನ್ನು ಬಿಟ್ಟು ಹೋಗುತ್ತಾಳೆ ಎಂಬ ಅರಿವು ಹೇಗಾಯಿತೋ? ನನ್ನ ತೋಳು ಸೇರಿದರೆ ಕೆಳಗಿಳಿಯಲೇ ಕೇಳಲಾರ.

ಬೇಗಿದೆ. ಮುರಲಿಗೆ ಎಚ್ಚರವಾಗಿತ್ತು. ಆಗಷ್ಟೇ ನಿದ್ದೆಯಿಂದೆದ್ದವನು ನನ್ನ ಮುಖ ಕಂಡು ತೋಳೆತ್ತಿದ. ಅತ್ತೆಯವರ ಪೋಷಣೆಯಲ್ಲಿ ದುಂಡು ದುಂಡಗಾಗೇ ಬೆಳೆದಿದ್ದ ಪೋರನನ್ನು ನೋಡಿ ಎದೆ ತುಂಬಿ ಬಂತು. ಇಂಥ ಕಂದನನ್ನು ಬಿಟ್ಟು ದಿನವಿಡೀ ಪರರ ಚಾಕರಿಗೆ ಹೋಗಬೇಕೆ? ಇಲ್ಲ, ನಾನು ಕೆಲಸಕ್ಕೆ ಹೋಗಿಯೇ ತೀರಬೇಕು ಎನ್ನುವಂಥ ಪರಿಸ್ಥಿತಿ ಇಲ್ಲವಲ್ಲಾ? ಮದುವೆಯಾದ ಹೊಸದರಲ್ಲಿ ಅತ್ತೆಯವರು ಒಮ್ಮೆ ಹೇಳಿದ್ದಿತ್ತು: "ಹಾಯಾಗಿ ಕುಳಿತಿರೋ ಬದಲಿಗೆ ನೀನು ಕಂಡೋರ ಚಾಕರಿ ಮಾಡಬೇಕ? ನಮ್ಮ ಸಂಸಾರಕ್ಕೆ ಮಾಧು ತರ್ತಾ ಇರೋದೇ ಸಾಕು. ನೀನು ಸುಮ್ಮನೇ ಮನೇಲಿರಮ್ಮ." ಆದರೆ ನನಗಾಗ ಪ್ರಾಯದ ಹುಮ್ಮಸ್ಸು. ಜೊತೆಗೆ ಇವರೂ ಹೇಳಿದ್ದರು: "ಹೋಗಲಿ ಬಿಡಮ್ಮ, ವಿಮಲೂ ಮದುವೆ. ಸುರೇಶನ ಓದು. ಇನ್ನೂ ಬೆಳೆಯೋ ಸಂಸಾರ. ಇದಕ್ಕೆಲ್ಲ ಸುಮ್ಮನೇ ಆಗುತ್ತೇನು? ಈಗೇನೂ ಮಕ್ಕಳು ಮರಿ ಅಂತ ತಾಪತ್ರಯ ಇಲ್ಲವಲ್ಲಾ? ನಾಲಕ್ಕಾಸು ಕೈಗೆ ಬರೋದನ್ನ ಯಾಕೆ ಬೇಡಾ ಅನ್ತೀಯ?" ನನಗೂ ಹೌದೆನ್ನಿಸಿತ್ತು. ಅತ್ತೆಯವರೂ ನಂತರ ತುಟಿ ಬಿಚ್ಚಿರಲಿಲ್ಲ. ಆದರೆ ವರ್ಷ ಉರುಳಿದಂತೆ ಒಂದೇ ರೀತಿಯ ಜೀವನ ಬೇಸರವೆನ್ನಿಸಿತು. ಡೇ ಡ್ಯೂಟಿ ನೈಟ್ ಡ್ಯೂಟಿ, ಡೇ ಡ್ಯೂಟಿ ನೈಟ್ ಡ್ಯೂಟಿ. ಬದಲಾಗದ ಬಾಳು ಬದಲಿಸುವ ಸೂಚನೆ ಕಂಡಾಗ ಹಿರಿ ಹಿರಿ ಹಿಗ್ಗಿದ್ದೆ. ಆಸ್ಪತ್ರೆ ನರ್ಸ್ ಆಗಿದ್ದರಿಂದ ಉಚಿತವಾಗೇ ಉಪಚಾರ ಸಿಕ್ಕಿತ್ತು. ವೇತನ ಸಹಿತದ ಹೆರಿಗೆ ರಜಾದಲ್ಲಿ ಮನೆ ಸೇರಿದಾಗ ಆಗಲೇ ರಾಜೀನಾಮೆ ಬರೆದುಬಿಡಲೇ ಎನ್ನುವಷ್ಟು ತವಕವಾಗಿತ್ತು.

ಆದರೂ ಸಮೀಪದಲ್ಲಿ ಗೀಚಿ ಎಸೆಯಬಹುದಾದ ರಾಜೀನಾಮೆಗೆ ಇಷ್ಟು ಅವಸರವೇಕೆ ಎನ್ನಿಸಿ ಸುಮ್ಮನಾಗುಳಿದಿದ್ದೆ. ನಂತರ ಹೆರಿಗೆ ಸುಸೂತ್ರವಾಗಿ ಜರುಗಿ ಮುರಲಿಗೆ ಎರಡು ತಿಂಗಳಾಗುತ್ತ ಬರುವಾಗ ಮತ್ತೆ ಕಾತರ ಶುರುವಾಗಿತ್ತು. ಇವರಾದರೂ ಹೇಳಬಾರದೇ? ಪುಟ್ಟ



ನನ್ನ ರಜಾ ನಾಡಿದ್ದಿಗೆ ಮುಗಿಯುತ್ತದೆ ಏನು ಮಾಡಲಿ? ಒಳಗೊಳಗೆ ಯೋಚಿಸಿ ಕುದಿಯುತ್ತಾ ಇದ್ದಾಗ ಹೇಳಿದ್ದರು, ಅತ್ತೆ "ಮುರಲಿಗೆ ಬಾಟಲು ಹಾಲು ಅಭ್ಯಾಸ ಮಾಡಿಸಬಹುದಿತ್ತು." ಪೀಠಿಕೆ ಅರ್ಥವಾಗಿ ಅವರ ಮುಖವನ್ನೇ ನೋಡಿದಾಗ ಹೇಳಿದ್ದರು. "ನೀನು ಕೆಲಸಕ್ಕೆ ಹೋದಾಗ ಸುಮ್ನೆ ತೊಂದರೆ. ಎದೆ ಹಾಲು ಬಿಡಿಸಿಬಿಡು. ಈಗೇನು ಪೌಷ್ಟಿಕ ಆಹಾರ ಧಾರಾಳ ಸಿಗುತ್ತಲ್ಲ. ಅದನ್ನೇ ತಂದು ಕೊಟ್ಟರಾಯ್ತು, ಮನೇಲಿ ನಾನೂ, ವಿಮಲ ಇದೀವಲ್ಲ. ಹೇಗೋ ಆಗುತ್ತೆ." ನಾನು ಪ್ರತಿಭಟಿಸಲಿಲ್ಲವಾದರೂ ಒಳಗೊಳಗೇ ಕರುಳು ಬೆಂದಿತ್ತು. ಸಾಕಷ್ಟು ಎದೆ ಹಾಲು ಇರುವಾಗಲೂ ಮುರಲಿ ಬಾಟಲು ಹಾಲಿಂದ ಬೆಳೆಯಬೇಕೆ? ಆದರೆ ಬಂಡಾಯವೇಳುವ ಪ್ರಕೃತಿಯೇ ನನ್ನದಾಗಿರಲಿಲ್ಲವಲ್ಲ? ಆದರೂ ಇವರಲ್ಲಿ "ನಾನು ನಾಳೆಯಿಂದ ಕೆಲಸಕ್ಕೆ ಹೋಗಬೇಕೂಂತಿದೀನಿ," ಎಂದಾಗ ಇನ್ನು 'ಇನ್ನೂ ಎಂಥ ಕೆಲಸ? ಬಿಟ್ಟುಬಿಡು' ಎನ್ನುತ್ತಾರೇನೋ ಏನೋ ಎಂಥದ್ದು? ಹೇಳಿಯೇ ಹೇಳುತ್ತಾರೆ ಎನ್ನುವ ನಿರೀಕ್ಷೆ ಇದ್ದುದು [illegible]. ಆದರೆ ಅವರು ಹಾಗೇ ಹೇಳದೆ [illegible] ಎಂದಾಗ ಎಂಥ ಆಘಾತವಾಗಿತ್ತು ನನಗೆ. ಆದರೆ ಮರುಕ್ಷಣವೇ "ಮಗು ಚಿಕ್ಕದು. ನಿನ್ನ ವರ್ಷದ ರಜಾ ಎಲ್ಲ ಈಗಾಗಲೇ ತೆಗೆದರೆ ಒಳ್ಳೆ ಯದಲ್ವಾ?" ಎಂದೂ ಹೇಳಿದಾಗ ಸ್ವಲ್ಪ ಸಮಾಧಾನವೂ ಆಗಿತ್ತು. ಹಾಗೇ ಮುರಲಿಗೆ ನಾಲ್ಕು ತಿಂಗಳಾಗುವ ತನಕ ಕಾಲ ತಳ್ಳಿ ಮತ್ತೆ ಕೆಲಸ ಸೇರಿದಾಗ ಕೆಲಸಕ್ಕೆ ಸೇರಿದ ಆ ಮೊದಲ ದಿನಗಳಲ್ಲಿದ್ದ ಹುರುಪು ಉತ್ಸಾಹಗಳ ಲವಲೇಶ ಕೂಡಾ ಇದ್ದಿರಲಿಲ್ಲ ಎನ್ನುವುದು ನನ್ನ ಪರಿಚಯವಿದ್ದ ಯಾರೂ ಹೇಳಬಹುದಾದ ವಿಷಯವಾಗಿತ್ತು.

ಮತ್ತೆ ಯಂತ್ರದಂಥ ಬಾಳು ಶುರುವಾಗಿ ತಿಂಗಳು ಮೂರೇ ಕಳೆದಿವೆ. ಈ ಅವಧಿಯಲ್ಲಿ ಸುರೇಶನಿಗೆ ಕೆಲಸ ಸಿಕ್ಕಿತು. ದೂರದ ನಗರದಲ್ಲಿ ಸಾಕಷ್ಟು ಒಳ್ಳೇ ವೇತನದ ಕೆಲಸವೇ ಸಿಕ್ಕಿದಾಗ ಮೊದಲು ಹಿಗ್ಗಿದವಳು ನಾನು. ಇನ್ನಾದರೂ ಮನೆಯೊಳಗೆ ನನ್ನ ಮುದ್ದು ಕಂದನೊಂದಿಗೆ ಹಾಯಾಗಿರಬಹುದು ಎಂದುಕೊಂಡಿದ್ದೇ ಬಂತು. ಅದರ ವಿಚಾರವೇ ಮನೆಯೊಳಗೆ ಸುಳಿಯದಾದಾಗ ನಿರುಪಾಯಳಾಗಿದ್ದೆ.

ಯೋಚನೆ ಸಾಗಿದ್ದಾಗ ಮುರಲಿ ಕುಸು ಕುಸು ಮಾಡಿದ. ನಾನು ವಾಚು ನೋಡಿದೆ. ಆಗಲೇ ಆರೂವರೆಯಾಗುತ್ತ ಬರುತ್ತಿತ್ತು. ನನ್ನ ಬಸ್ಸು ಹೊರಡುವುದು ಆರೂಮುಕ್ಕಾಲಿಗೆ. ಅದು ತಪ್ಪಿದರೆ ಬೇರೆ ಬಸ್ಸಿಲ್ಲ. ಇಲ್ಲಿಂದ ಸ್ಟಾಪಿಗೆ ನಡೆಯಲು ಐದು ನಿಮಿಷಗಳಾದರೂ ಬೇಡವೆ? ಆತಂಕದಿಂದಲೇ ಅವನನ್ನೆತ್ತಿಕೊಂಡಾಗ ಕೈಗೆ [illegible] ತಗಲಿ ಬೆಚ್ಚಿದೆ. ಮತ್ತೆ ಮುರಲಿಗೆ ಜ್ವರ! ಕೇವಲ ಎಂಟು ದಿನಗಳಿಗೆ ಹಿಂದೆಯೂ ಇದೇ ರೀತಿಯಾಗಿತ್ತು. ಆಗ ರಜಾ ಕೇಳಿದ್ದಕ್ಕೆ ಮೇಟ್ರನ್ "ಈ ರೀತಿ ರಜಾ ಕೇಳುವವಳು ಯಾಕಾದರೂ ಕೆಲಸಕ್ಕೆ ಬರಬೇಕು?" ಎಂದು ಕುಹಕವಾಡಿದ್ದಳೆ ವಿನಾ ರಜಾ ಕೊಟ್ಟಿರಲೇ ಇಲ್ಲ. ಇವತ್ತು ಕೂಡಾ ಹಾಗೇ ಆದೀತೇನೋ. ಆದರೆ ಅವಳದ್ದಲ್ಲ. ತಪ್ಪು ನನ್ನದೇ. ನನ್ನ ರಜೆ ಎಲ್ಲಾ ಮೊದಲೇ ಬಳಸಿಕೊಂಡಿದ್ದೇನಲ್ಲ? ಈಗೇನು ಮಾಡಲಿ ? ಅತ್ತೆ [illegible] ಹಾಗೆ ಕಾಣಿಸಲಿಲ್ಲ. ಅವರ ಬಳಿಗೆ ಹೋಗಿ ಎಬ್ಬಿಸಿದೆ. "ನೋಡಿ ಮಗೂ ಅಳ್ತವೆ. ಸ್ವಲ್ಪ [illegible] ? ನನಗೆ ಬಸ್ಸಿಗೆ ತಡ ವಾಯಿತು." ನನ್ನ ಸ್ವರ ಕೇಳಿ [illegible]

ಕುದಿಸಿದೆಯಾ?" ಎಂದರು. "ಇಲ್ಲ ಜ್ವರ ಜೋರೆ ಬಂದಿರೋ ಹಾಗಿದೆ. ಒಮ್ಮೆ ಜ್ವರ ಎಷ್ಟಿದೆಯೋ ನೋಡಿಬಿಟ್ಟು ಆ ಗೂಡಲ್ಲಿ ಮೊನ್ನೆ ತಂದಿರೋ ಮದ್ದು ಇದೆ, ಜ್ವರ ಇದ್ರೆ ಅದನ್ನು ಎರಡು ಚಮಚ ಕುಡಿಸಿ, ಹಾಲು ಸಂತ್ರ ಅತ್ತೆಯವರೇ ಹಾಕ್ತಾರೆ," ಎಂದೇನಾದರೂ ಹೇಳಿ ಮುಗಿಸುವ ಹೊತ್ತಿಗೆ ನನ್ನ ಅಸಹಾಯಕತೆಗೆ ಗಂಟಲುಬ್ಬಿ ಬಂದಿತ್ತು. ಅವರು ಮೌನವಾಗಿ ಎದ್ದು ಮುರಲಿಯನ್ನೆತ್ತಿಕೊಂಡಾಗ ಅವನು ಜೋರಾಗಿ ಅಳತೊಡಗಿದ. ಅವನ ಅಳು ಕೇಳಿಯೂ ಕೇಳಿಸದವಳಂತೆ ಬಸ್ ಸ್ಟಾಪಿಗೆ ಧಾವಿಸುತ್ತಿದ್ದಾಗ ಮನಸ್ಸಿನೊಳಗೆ ಅಳುವ ಮುರಲಿಯೇ ತುಂಬಿದ್ದ.

ಬೆಳಗಿನಿಂದಲೂ ಓಡಾಡಿ ದಣಿದು ಇನ್ನು ಸಹಿಸಲಾರೆ ಎಂದು ಮುಷ್ಕರ ಹೂಡಿದ್ದ ಕಾಲುಗಳನ್ನು ಬಲವಂತವಾಗಿ ಎತ್ತಿಡುತ್ತ ಸ್ಟಾಫ್ ರೂಮಿಗೆ ಬಂದಾಗ ಹಸಿವೆಯಿಲ್ಲದೇ ಮನಸ್ಸು ತುಂಬ ಬಳಲಿತ್ತು. ಮಧ್ಯಾಹ್ನದ ಊಟದ ಹೊತ್ತಾಗಿ ತುಂಬ ಸಮಯವೇ ಆಗಿದೆ ಎಂದು ಹೊಟ್ಟೆ ಬೇಡುತ್ತಿದ್ದರೂ ಗಮನಿಸದೇ ಕುರ್ಚಿಯಲ್ಲಿ ಕುಸಿದು ಕಣ್ಣು ಮುಚ್ಚಿದೆ. ಮುಚ್ಚಿದ ಕಂಗಳೊಳಗೆ ತೇಲಿ ಬಂತು — ಅದೇ ತಾನೇ ಮರಣಿಸಿದ ಎರಡು ವರ್ಷದ ಹುಡುಗನ ಚಿತ್ರ. "ಛೇ ಈ ಜನ ಕೊನೇ ಘಳಿಗೆಗೆ ಆಸ್ಪತ್ರೆಗೆ ಯಾಕಾದರೂ ಬರುತ್ತಾರೋ ಅಯಿತು, ಬಂದು ಪ್ರಾಣ ಬಿಡುವುದು ಅವರ ಹಕ್ಕೇನೋಣ. ಅದರೆ ಸಾಧ್ಯವಿದ್ದ ಯತ್ನಗಳನ್ನೆಲ್ಲ ಆಸ್ಪತ್ರೆಯವರು ಮಾಡಿಯೇ ಇರುತ್ತಾರೆಂದು ಏಕೆ ತಿಳಿದುಕೊಳ್ಳಲಾರರು? ತೀರಾ ಕೈ ಮೀರಿದ ಕೇಸನ್ನು ನಾವಾದರೂ ಏನು ಮಾಡಲು ಸಾಧ್ಯ? "ಜ್ವರ ಬರುವುದು ಎಷ್ಟು ದಿನವಾಯ್ತು" ಎಂದು ಕೇಳಿದಾಗ ಎಷ್ಟು ಸಿಸೂರಾಗಿ ಉತ್ತರ ಬಂದಿತ್ತು ಅಲ್ಲವೆ? "ಏಟು ದಿನಾ ಆತೋ? ಇದೀ ಒತ್ತು ಸೀರಾಗೇ ಅಬ್ತುತ್ತು. ಅಂಗಾಗೆ ಜನ ಬಂದಿರಬೋದು. ನೀವಷ್ಟು ಪರೀಕ್ಷೆ ಮಾಡಿ ಏಳ್ರಪಾ." ಉತ್ತರದ ಕೊನೆಯಲ್ಲಿ

ಅಭ್ಯಾಸವಾಗಿತ್ತು. ಅದರಿಂದಲೇ ಮೌನವಾಗಿ ಡಾಕ್ಟರ್ ಪರೀಕ್ಷೆ ಮಾಡಿ ತನ್ನತ್ತ ತಿರುಗಿ "ಪ್ರಯೋಜನವಿಲ್ಲಾನ್ಸುತ್ತೆ. ಆದ್ರೂ ಟ್ರೈ ಮಾಡೋಣ. ಇಂಜಕ್ಷನ್ ಬರೆದು ಕೊಡ್ತೀನಿ. ಅವರ ಕೈಲಿ ತರಿಸಿ ಚುಚ್ಚಿ ಬಿಡಿ. ಹೇಗಿದ್ರೂ ಹಾಗಾಗುತ್ತೆ," ಎಂದಿದ್ದರು ನಿರ್ವಿಕಾರವಾಗಿ. ಇಂಥವೆಷ್ಟು ಕೇಸು ನೋಡಿ ನೋಡಿ ರೂಢಿ ಆಗಿದ್ದರೂ ಅದೇಕೋ ಆ ಘಳಿಗೆಯಲ್ಲಿ ಮುರಲಿಯ ನೆನಪಾಗಿತ್ತು. ಡಾಕ್ಟರ್ ಹೇಳಿದ್ದು ಅಷ್ಟಿಷ್ಟು ಅರ್ಥವಾಗಿ ಮುದುಕಿ ಅಳುತ್ತ ಹೇಳುತ್ತಿದ್ದುದೂ ತನಗೂ ಕೇಳಿಸಿತ್ತು. "ಹಾಗಾ ಸ್ವಾಮಿ ಇಬ್ರೂ ಕೆಲ್ಸಕ್ಕೋಗೋರೇ. ನಾ ಒಬ್ಳೆ ಮುದಿ ಏನಂತ ಈ ಹೈಕಳನ್ನು ನೋಡಿಕೊಂಡೇನು? ಶಿವಾ, ಏನ ಪುಟ್ಟನ ಉಳಿಸಪ್ಪ." ಆ ಕ್ಷಣದಲ್ಲೆ ತನ್ನೊಡಲಲ್ಲಿ ವಿಚಿತ್ರ ಸಂಕಟವಾಗಿತ್ತು.

ಪುಟ್ಟಿಯ ಅವ್ವ ಅಪ್ಪನಂತೆ ತಾವಿಬ್ಬರೂ ಕೆಲಸಕ್ಕೆ ಹೋಗುವವರು. ಮುರಲಿ ಈಗ ಅಂಬೆಗಾಲಿಟ್ಟು ಮನೆಯಲ್ಲಿ ಸುತ್ತುತ್ತಾನೆ. ಮೊನ್ನೆ ತಾನೇ ವಿಮಲ ಹೇಳಿದ್ದಳು. "ಈ ತುಂಟ ಒಂದ್ನಿಮಿಷ ಕೂಡಾ ಕೂರೋಕೆ ಬಿಡೋದಿಲ್ಲ ಅತ್ಗೆ. ಈವತ್ತು ನೋಡಿ ಹೊಸಿಲು ದಾಟಿ ಅಂಗಳ ಇಳಿದಿದ್ದಾನೆ. ನನಗಂತೂ ಇವ್ನ ಜತೆ ಸುಸ್ತಾಗಿ ಹೋಗುತ್ತೆ." ನಿಜ ಇನ್ನೂ ಲಗ್ನವಾಗದ ಹುಡುಗಿ ಅಕೆ. ಇಡೀ ದಿನ ಮಗುವನ್ನಾಡಿಸಲು ಬೇಜಾರಾಗುವುದಿಲ್ಲವೆ? ಆಸ್ಪತ್ರೆಯವರೂ ಈಗೀಗ ಕೆಲಸ ನನ್ಕೈಲಾಗೋಲ್ಲ ಎಂದು ಗೊಣಗಿದ್ದು ತನಗೂ ಕೇಳಿಸಿತ್ತು. ಮುರಲಿ ಮೊದಲೇ ಜ್ವರ ಬಂದ ಮಗು. ಎಲ್ಲಾದರೂ ಅಂಗಳಕ್ಕಿಳಿದು ನೀರಾಟವಾಡಿದ್ದಲ್ಲಿ? ಮುಂದೆ? ಮುಂದೇನಾದೀತು? ಯೋಚಿಸಲೂ ಹೆದರಿಕೆಯಾಗಿ ಕಿಟಕಿ ಬಳಿಗೆ ಬಂದೆ. ಹೊರಗೆ ವಾರ್ಡಿನಿಂದ ಗಟ್ಟಿಯಾಗಿ ಅಳು ಕೇಳಿ ಬರುತ್ತಿತ್ತು. ಜೊತೆಗೇ ಮುದುಕಿಯ ಬೈಗುಳ. ಬೆಂದೆದೆಯ ಕೂಗೇ ಆ ಶಾಪವಾಗಿ ಪರಿಣಮಿಸಿದೆ ಎನ್ನುವುದರಲ್ಲಿ ನನಗೆ ಸಂಶಯ ಇರಲಿಲ್ಲವಾದರೂ ಆ ವಾಕ್ಯ

ಮಗುವಿನ ತಾಯಿ ಅಳುತ್ತ ಹೇಳುತ್ತಿದ್ದಳು. ಸುಮ್ನೆ ಇಲ್ಲಿಗೆ ತಂದ್ವಿ. ಆ ಬಿಳೀ ಸೀರೆ ನರ್ಸಮ್ಮ ಉದ್ದಾನೆ ಚೂಜೀಲಿ ಚುಚ್ಚಿಬುಟ್ಲು. ನನಾ ಕಂದ ಹಿಗೇ ಬುಡ್ತು. ಅವ್ರಿಗೇನಾರ ಮಕ್ಳು ಮರೀ ಅಂತ ಇದಾವೋ ಇಲ್ವೋ. ಇದ್ರೆ ಅವೂ ಇಂಗೇ ನೆಗದು ಬೀಳ್ಲಿ. ಅಯ್ಯೋ ಸಿವ್ನೆ ನನ್ ಕಂದನ ಕೊಂಡ್ಹೋಗಿ ನಿಂಗೆ ಏನು ಸಿಗ್ತೈತಪ್ಪಾ?" ಮುಂದೆ ಕೇಳುವ ಮನಸ್ಸಾಗದೇ ತಿರುಗಿ ಬಂದು ಕುಳಿತೆ. ಮೇಜಿನ ಮೇಲೆ ತಲೆ ಇಟ್ಟೆ. ನಾನೇನು ಬೇಕೆಂದೇ ಮಾಡಿದೆನೆ? ಅವಳು ಮಕ್ಳು ಇಂಗೆ ನೆಗೆದು ಬೀಳ್ಲಿ ಅಂದಳಲ್ಲಾ? ನನ್ನ ಮುರಲಿಗೇನಾದರೂ… ಹೊಟ್ಟೆಯ ಸಂಕಟ ಇಮ್ಮಡಿಯಾದಂತೆನಿಸಿ ತಡೆಯದೇ ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ.

ಅತ್ತು ಅತ್ತು ಮನಸ್ಸು ಸ್ವಲ್ಪ ಹಗುರ ವಾದಾಗ ರೂಮಿನ ಬಾಗಿಲು ತೆರೆಯಿತು. ಒಳಗೆ ಬಂದವಳು ನನ್ನ ಸಹೋದ್ಯೋಗಿ ನರ್ಸ್ ಕನಕ. ನನ್ನ ಸೋದರಿಯಂತೇ ಇದ್ದ ಅವಳು "ಏನು, ಇವತ್ತು ಊಟ ಬೇಡ್ವಾ?" ಎನ್ನುತ್ತ ಹತ್ತಿರ ಬಂದವಳು ನನ್ನ ಮುಖ ನೋಡಿ ಗಂಭೀರ ಳಾದಳು. ಬಹುಶಃ ಹೊರಗಿನ ಗದ್ದಲ ಅವಳಿಗೂ ಗೊತ್ತಾಗಿದ್ದೀತು.

ನಿಮಿಷ ಕಾಲದ ಮೌನವನ್ನು ಮುರಿದು ಅವಳು ಹೇಳಿದಳು. "ನೋಡು ವಸೂ, ಈ ವೃತ್ತಿಗೆ ಬಂದವರು ಇಷ್ಟೊಂದು ದುರ್ಬಲ ಮನಸ್ಸಿನ ವರಾದರೆ ತುಂಬ ಕಷ್ಟ. ಅವರೇನೋ ಮಗು ಹೋದ ದುಃಖಕ್ಕೆ ಹಾಗಂದ್ರು. ಹಾಗಂತ ನೀನೇನೂ ತಪ್ಪು ನಡೆದಿಲ್ಲವಲ್ಲಾ. ನಿನ್ನ ಕರ್ತವ್ಯ ನೀನು ಮಾಡಿದ್ದೀ. ಮತ್ಯಾಕೆ ಅಳು? ಇಷ್ಟೊಂದು ಸಿಲ್ಲಿಯಾಗಿ ವರ್ತಿಸಬೇಡ ಅಂತ ಎಷ್ಟು ಸಲ ಹೇಳಿದ್ದೀನಿ ನಿನಗೆ?"

ಅವಳ ಸ್ನೇಹಮಯ ಗದರುವಿಕೆಗೆ ಉತ್ತರ ವಾಗಿ ಹೇಳಿದೆ, "ಹಾಗಲ್ಲ ಮುರಲೀಗೆ ಇವತ್ತು ಜ್ವರ ಬಂದಿತ್ತು."

"ಅಷ್ಟೇ ತಾನೆ? ಅವರೆಲ್ಲ ನೋಡಿಕೋತಾರೆ ಕಡಿಮೆಯಾಗುತ್ತೆ" ಕನಕಳ ಮಾತಿಗೆ ಸಿಟ್ಟು ಬಂತು.

ಹೇನೂ ಇಲ್ಲದೇ ಒಂಟಿಯಾಗಿದ್ದಾಳೆ. ಅಂಥವ ಳಿಗೆ ಕರುಳ ಮಮತೆ ಹೇಗೆ ತಾನೇ ಗೊತ್ತಾ ದೀತು? ಮನಸ್ಸಿನಲ್ಲಿ ಯೋಚನೆ ಬರುತ್ತಿದ್ದ ಹಾಗೇ ಹೇಳಿಬಿಟ್ಟೆ "ನಿಂಗೇನು ಒಬ್ಬಳೇ ಹಾಯಾ ಗಿದ್ದೀ. ನನ್ನ ಕಷ್ಟ ಹೇಗೆ ತಿಳಿದೀತು? ಅವನಿಗೆ ಮೊನ್ನೆ ಕೂಡಾ ಜ್ವರ ಬಂದಿತ್ತು. ಮನೇಲಿ ಅವನು ಜ್ವರದಲ್ಲಿ ಬೇಯುತ್ತಿದ್ರೆ ನಾನು ಹೇಗೆ ಇಲ್ಲಿ ಸುಖ ವಾಗಿ ಊಟ ಮಾಡಲಿ?" ಅವಳು ಉತ್ತರಿಸದೇ ದೀರ್ಘವಾಗಿ ನನ್ನನ್ನೇ ದಿಟ್ಟಿಸಿದಳು. ಆ ಕಣ್ಣು ಗಳ ನೋವು ಅಸಹಾಯಕತೆ ಸಿಟ್ಟು… ನಾನು ನನಗರಿವಿಲ್ಲದೇ ತಲೆ ತಗ್ಗಿಸಿದೆ.

"ವಸೂ.."ಅವಳೇ ಕರೆದಾಗ ತಲೆ ಎತ್ತಿ "ಏನು?" ಎನ್ನುವಂತೆ ಅವಳನ್ನೇ ದಿಟ್ಟಿಸಿದಾಗ ಹೇಳಿದಳು, "ನೀನ್ಯಾಕೆ ರಾಜೀನಾಮೆ ಬರೆಯುವುದಿಲ್ಲ?"

ಬೆಚ್ಚಿದೆ ನನ್ನಂತರಂಗದ ಮಾತು ಅವಳಿಗೆ ಹೇಗೆ ಗೊತ್ತಾಗಿರಬಹುದು? ರಾಜೀನಾಮೆ ಕಾರಣವಿಲ್ಲದೇ? ಪದ್ದು ಪದ್ದಾಗಿ ತೊದಲಿದಾಗ ಕನಕ, "ನಕ್ಕಳು ಎಷ್ಟೋ ದಿನಗಳಿಂದ ನಿನ್ನನ್ನು ಗಮನಿಸ್ತಾ ಇದ್ದೀನಿ. ಮದುವೆಗೆ ಮುಂಚೆ ನಂತ ರವೂ ಅಷ್ಟೊಂದು ಹರ್ಷದಲ್ಲಿ ಇರುತ್ತಿದ್ದವಳು ನೀನು ಮುರಲಿ ಹುಟ್ಟಿದ ನಂತರ ಹೇಗೆ ...



"ಹಲೊ! ಕಂಗ್ರಾಟ್ಸ್ ನೀವು ಅಂಗವಿಕಲರ

ಲಾಗ್ತಾ ಇದ್ದೀ ಅನ್ನೋದನ್ನ ಅಚ್ಚರಿಯಿಂದ ನೋಡುತ್ತ ಇದ್ದೀನಿ. ಈ ಸಿಡುಕು ಮಾತಿಗೆ ಮುನ್ನವೇ ಹೊರನುಗ್ಗುವ ಅಳು ಇದೇ ರೀತಿ ಮುಂದುವರಿದರೆ ಕೊನೆಗೆ ಏನಾಗುತ್ತೊ ಅಂತ ಒಮ್ಮೊಮ್ಮೆ ಭಯವಾಗ್ತಿದೆ ಅಲ್ಲವೆ? ನೀನೇ ಹೇಳು, ನಾನು ಹೇಳಿದ್ದು ತಪ್ಪೆ?"

ಅವಳ ನೇರವಾದ ಪ್ರಶ್ನೆಗೆ ಉತ್ತರಿಸಲು ಹಿಂಜರಿದೆ. "ನೋಡು ವಸೂ, ಯಾರೇ ಆಗಲಿ ತಮಗೆ ತಾವೇ ಆತ್ಮವಂಚನೆ ಮಾಡಿಕೊಳ್ಳ-ಬಾರದು. ಕೆಲವು ದಿನಗಳಿಂದಲೂ ಹೇಳಬೇಕೆಂದು ಯೋಚಿಸಿದ್ದೆ. ಇವತ್ತು ಸರಿಯಾದ ಸಮಯ ಬಂತು. ಅಂಥ ಅನುಕೂಲ ಸಂಸಾರವಿದ್ದು ನೀನ್ಯಾಕೆ [illegible]ಬೇಕು? ಆಗ ನೀನೆಂದೆ 'ಒಂಟಿಯಾಗಿ ಹಾಯಾಗಿದ್ದೀಯ ನೀನು' ಎಂದು. ಆದರೆ..." ಅವಳು ಕ್ಷಣ ನಿಲ್ಲಿಸಿ ಮುಂದುವರೆದಳು. "ಮನೆಗೆ [illegible] ಹುಟ್ಟಿದ ತಪ್ಪಿಗೆ ಒಡಹುಟ್ಟಿದವರನ್ನೆಲ್ಲ ದಡ ಸೇರಿಸಿದೆ. ಈಗ ಅವರೆಲ್ಲ ಹಾಯಾಗಿ [illegible] ಸಂಸಾರದೊಂದಿಗೆ ಇದ್ದಾರೆ. ಆದರೆ, [illegible] ನನ್ನ ತ್ಯಾಗ ಮನೋಭಾವದ ತೀವ್ರತೆ [illegible] ಎಂದರೆ ನಾನೂ ಒಬ್ಬಳು ಮಾನವಳು [illegible] ಮರೆತುಬಿಟ್ಟಿದ್ದೆ. ಈಗ ಒಂಟಿ ಬಾಳು [illegible] ಹೋಗಿದೆಯಾದರೂ ಹೊಸ ಬಾಳನ್ನು ಆರಂಭಿಸುವ ವಯಸ್ಸು ಯಾವಾಗಲೋ [illegible]." ಅವಳು ವಿಷಾದದಿಂದ ನಕ್ಕು [illegible]. "ನನ್ನದೊಂದು ರೀತಿ ಸಮಸ್ಯೆಯಾದರೆ ನಿನ್ನದು ಮತ್ತೊಂದು ರೀತಿ. ಮೊದಲು [illegible] ಮಾಡುತ್ತಿದ್ದ ಕೆಲಸವೇ ಈಗ ನಿನಗೆ [illegible]. ಮನೆ–ಆಸ್ಪತ್ರೆ ಎರಡರ ಮಧ್ಯೆ ನಿನ್ನ ಮಾನಸಿಕ ನೆಮ್ಮದಿ ಹಾಳಾಗುತ್ತಿದೆ. ನಿನ್ನ [illegible] ಮುರಲಿಯ ಸ್ಥಿತಿ ಮತ್ತೊಂದು [illegible] ಅವನು ಆ ಮಮತೆಯಿಂದ ವಂಚಿತನಾಗಬೇಕೆ? ಬಹುಶಃ ನೀನೂ ಅದೇ ರೀತಿ ಯೋಚಿಸುತ್ತಿದ್ದಿ ಎಂದು ನನ್ನ ಭಾವನೆ. ಆದರೆ ಹೇಳಲು ಹಿಂಜರಿಯುತ್ತಿದ್ದೀ ಅಲ್ಲವೆ?" ಮಾತನಾಡುತ್ತ ಅವಳು ಹತ್ತಿರ ಬಂದು ಸ್ನೇಹದಿಂದ ತಲೆ ಸವರಿದಳು. ಆ ಒಂದು ಸವರುವಿಕೆಗೆ ಎಷ್ಟೋ ದಿನಗಳಿಂದ ನನ್ನಲ್ಲಿ ಕುದಿದ ತಳಮಳ ಕಣ್ಣೀರಾಗಿ ಹೊರಬಿತ್ತು. ಬಳಿಯಲ್ಲೇ ಕುಳಿತ ಕನಕಳ ಮಡಿಲಲ್ಲಿ ಮುಖವಿಟ್ಟು ಬಿಕ್ಕಿದೆ. "ಅತ್ತು ಬಿಡು ವಸೂ. ಎಲ್ಲ ಇವತ್ತೆ ಮುಗಿಯಲಿ ಈ ಸೆರೆಮನೆ ವಾಸ ನಿನಗಿವತ್ತೇ ಕೊನೆಯಾಗಲಿ. ಇಂದೇ ನಿನ್ನವರಲ್ಲಿ ಈ ವಿಚಾರ ಚರ್ಚಿಸು. ಒಬ್ಬ ಮಗನ ತಂದೆಯಾಗಿ ಅವರು ನಿನ್ನ ಸಲಹೆಯನ್ನು ತಿರಸ್ಕರಿಸಲಾರರು. ಇನ್ನು ನಿನ್ನ ಅತ್ತೆ ವಿರೋಧ ಪ್ರತಿಭಟಿಸಿದರೆ ಹೇಳು, 'ಮಗುವಿನ ಭವಿಷ್ಯವನ್ನು ರೂಪಿಸುವುದರಲ್ಲಿ ತಾಯಿಯ ಪಾತ್ರವೇ ಹಿರಿದು. ಯಾರೆಷ್ಟೇ ಪ್ರೀತಿಯಿಂದ ಅವನನ್ನು ನೋಡಿಕೊಂಡರೂ ಅವನನ್ನು ಹೆತ್ತ ತಾಯಿಯಾಗಲು ಸಾಧ್ಯವಿಲ್ಲವಷ್ಟೇ.' ಇನ್ನು [illegible] ನಿರ್ದಾಕ್ಷಿಣ್ಯವಾಗಿ ಹೇಳು 'ಇದುವರೆಗೆ ಬಿಟ್ಟು ಕುಟುಂಬಕ್ಕಾಗಿ ಹೊರಗೆ ದುಡಿದೆ. ಇನ್ನು ನನ್ನ ಕರುಳ ಕುಡಿ [illegible] ಮನೆಯೊಳಗೆ ದುಡಿಯುತ್ತೇನೆ' ಅನ್ನು. ಹೆದರಬೇಡ. ನಿನಗಿನ್ನೂ ಚಿಕ್ಕ ವಯಸ್ಸು. ಮಕ್ಕಳು ದೊಡ್ಡವರಾದ ಮೇಲೆ ಬೇಕೆನ್ನಿಸಿದರೆ, ಮರಳಿ ಉದ್ಯೋಗಕ್ಕೆ ಸೇರಿಸಿಕೊಳ್ಳುವೆಯಂತೆ."

ತಲೆ ನೇವರಿಸುತ್ತ ಮಾತಾಡುತ್ತಿದ್ದ ಕನಕಳ ಮಾತುಗಳು ನನ್ನಲ್ಲಿ ತುಂಬಿದ್ದ ಅಳುಕನ್ನು ಓಡಿಸುತ್ತಿದ್ದಂತೆ ಇಂದಿನಿಂದಲೇ ಮನೆಯಲ್ಲಿ ನಡೆಯಬೇಕಾದ ಯುದ್ಧವನ್ನೆದುರಿಸಲು ಸಿದ್ಧಳಾಗಲು ಬೇಕಾದ ಸ್ಥೈರ್ಯವನ್ನು ತುಂಬುತ್ತಿದ್ದುದು ನನಗೇ ವೇದ್ಯವಾಯಿತು. ✿



[illegible]ರ್ಘಾವಧಿಯ ನಂತರ ಭೇಟಿಯಾದ ಗೆಳೆಯನನ್ನು ಕೇಳಿದ, "ಏನಯ್ಯಾ, [illegible] ? ಏನು ಸುದ್ದಿ ? ಅಂದ್ಹಾಗೆ ಈಗ ಯಾವ ಕಂಪನೀಲಿ ಕೆಲಸಕ್ಕಿದ್ದೀ ? ಬಹಳ [illegible] ಹೋಗಿ ಬಿಟ್ಟಿದ್ದೀ."

"ಗೆಳೆಯ [illegible]ಳಿದ, "ಇದೀನಪ್ಪ ಅದೇ ಕಂಪನೀಲಿ, ಆರ್ಕೈಳ ತಾಯಿ

ಇದುವೇ ಜೀವ ಇದು ಜೀವನ

ನನ್ನ ಮಿತ್ರನೊಬ್ಬನ ಅನುಭವ. ಬೆಂಗಳೂರಲ್ಲಿ ಆತ ಕೆಲಸದಲ್ಲಿದ್ದಾನೆ. ಮದುವೆಯಾದ ಹೊಸತರಲ್ಲಿ ಅವನಿಗೆ ಅಲ್ಲಿ ಸಿಕ್ಕಿದ್ದು ಒಂದೇ ಒಂದು ಕೋಣೆಯ ಮನೆ. ಹೆಂಡತಿಯನ್ನು ಕರೆದುಕೊಂಡು ಹೋಗಿ ಮನೆ ಮಾಡಿದ್ದೂ ಆಯಿತು. ಅಷ್ಟರಲ್ಲಿಯೇ ಅವನ ಸಮೀಪದ ಆಪ್ತರೊಬ್ಬರಿಂದ (ಸ್ತ್ರೀ) ಪತ್ರ ಬಂದು ಪೇಚಿಗಿಟ್ಟುಕೊಂಡಿತು. ಬೆಂಗಳೂರಿಗೆ ಏನೋ ಕಾರ್ಯಾರ್ಥ ಬರಲಿದ್ದ ಅವರಿಗೆ ಈ ಹೊಸ ಸಂಸಾರವನ್ನು ಕಣ್ಣುತುಂಬ ನೋಡಿ ಸಂತೋಷಪಡುವ ಆಸೆ. ಆದರೆ ನನ್ನ ಸ್ನೇಹಿತ ಕೂಡಲೇ ಅವರಿಗೊಂದು ಕಾಗದ ಬರೆದು, ಮನೆ ತೀರ ಚಿಕ್ಕದಾಗಿರುವುದರಿಂದ ಸದ್ಯ ಬರುವ ವಿಚಾರ ಕೈ ಬಿಡಬೇಕೆಂದೂ ದೊಡ್ಡ ಮನೆ ಸಿಕ್ಕೊಡನೆಯೇ ತಾನೇ ಕರೆಸಿಕೊಳ್ಳುವುದಾಗಿಯೂ ತಿಳಿಸಿದ. ನಾಲ್ಕನೆಯ ದಿನವೇ ಅವರಿಂದ ಉತ್ತರ ಬಂದುಬಿಟ್ಟಿತು—"ಮನೆ ಚಿಕ್ಕದಿದ್ದರೇನಾಯಿತು, ಮನ ದೊಡ್ಡದಿದ್ದರೆ ಸಾಕು, ಹೇಗೂ ನಡೆದುಹೋಗುತ್ತದೆ," ಎಂದು ಅವರು ತಮ್ಮ ಪ್ರವಾಸ ಕಾರ್ಯಕ್ರಮವನ್ನು ಇನ್ನೂ ದೃಢಪಡಿಸಿದ್ದರು.

ನನ್ನ ಸ್ನೇಹಿತ ಪಟ್ಟನೆ ಉತ್ತರಿಸಿದ, "ನೀವು ನನ್ನ ಮನಸ್ಸಿನಲ್ಲೇ ಮಲಗುವ ಹಾಗಿದ್ದರೆ ಧಾರಾಳವಾಗಿ ಬನ್ನಿ," ಎಂದು.

—ನಾರಾಯಣ ಹೇಮಾದ್ರಿ

ಇದು ನಮ್ಮಣ್ಣನ ಕಾರಖಾನೆಯಲ್ಲಿ ಇತ್ತೀಚೆಗೆ ನಡೆದದ್ದು. ಅವರ ಸಂಬಳ ಬಟವಡೆಯ ದಿನವಾದ ೭ ನೇ ತಾರೀಖಿನಂದು ಕಾರಖಾನೆಯ ಹೊರ ಆವರಣದಲ್ಲಿ ವಸೂಲಿಗಾಗಿ ಬಂದ ಸಾಲಗಾರರು, ಸಿಹಿ ತಿಂಡಿ ಮಾರುವವರು, ಸೌತೇಕಾಯಿ-ಕಡ್ಲೆಕಾಯಿ ಗಾಡಿಗಳವರು-ಇವೇ ಮುಂತಾದ ಮಾಮೂಲು ವ್ಯಕ್ತಿಗಳು ಹಾಜರಿರುವರು. ವಾಡಿಕೆಯಂತೆ ಈ ತಿಂಗಳೂ ಅವರೆಲ್ಲ ಬಂದಿದ್ದರು. ಮಧ್ಯಾಹ್ನದ ಊಟದ ವಿರಾಮದ ವೇಳೆಗೆ, ಒಂದು ದೊಡ್ಡ ಬುಟ್ಟಿಯಲ್ಲಿ ಸುಮಾರು ವಿದ್ಯುತ್ ತೂಗುದೀಪಗಳನ್ನು ತುಂಬಿಕೊಂಡು ಮಾರಾಟಕ್ಕಾಗಿ ಒಬ್ಬ ಕೈ ಕೆಲಸದ ಸ್ವಂತ ಉದ್ಯೋಗಿ ವ್ಯಾಪಾರಿ ಬಂದ. ಮುಗ್ಧನಾಗಿ ಕಾಣುತ್ತಿದ್ದ ಅವನು ತಂದಿದ್ದ ವಸ್ತು ಏನಿರಬಹುದೆಂದು ಕಾರ್ಮಿಕರು ಪರಿಶೀಲಿಸತೊಡಗಿದರು. ಎರಡು ಕೆಂಪು ಪಾರದರ್ಶಕ ಗಂಗಾಳದಂತಿರುವ ಪ್ಲಾಸ್ಟಿಕ್ ತಟ್ಟೆಗಳು, ಅದರೊಳಗೆ ಹೊಂದುವ ತ್ರಿಕೋಣದ ಮೂರು ಶಿರೋಬಿಂದುಗಳಲ್ಲಿ ರಂಧ್ರಗಳು. ಸುಮಾರು ೫ ಸೆಂಟಿಮೀಟರಿನಷ್ಟು ಎತ್ತರವಿದ್ದ ಹಲವು ಬಿಳಿ ಮತ್ತು ನೀಲಿ ಗಾಜಿನ ಬಿಲ್ಲೆಗಳನ್ನು ಒಂದರ ಪಕ್ಕ ಒಂದನ್ನು ವರ್ತುಲಾಕಾರವಾಗಿ ಜೋಡಿಸಿದ್ದ. ೬ ಸೆಂಟಿಮೀಟರಿನಷ್ಟು ಒಳಜಾಗವಿದ್ದ ಒಂದು ಸ್ತಂಭ. ೧೦ ಸೆಂಟಿಮೀಟರು ಉದ್ದದ ೩ ಸೈಕಲ್ ಚಕ್ರದ ಕಡ್ಡಿಗಳು ಮತ್ತು ಅದರ ಕೆಳ ತಿರುಪುಗಳು ೧೫ ವ್ಯಾಟ್ಸ್ ಬಲ್ಬ ಸಮೇತ ಒಂದು ವಿದ್ಯುತ್ ಹೋಲ್ಡರ್ ಮತ್ತು ವೈರು. ಹೋಲ್ಡರನ್ನು ಸ್ತಂಭದ ಒಳಗೆ ಇಟ್ಟು, ಅತಿ ಚಮತ್ಕಾರವಾಗಿ ಎರಡು ತಟ್ಟೆಗಳ ಮಧ್ಯೆ ಜೋಡಿಸಿ, ರಂಧ್ರಗಳ ಮೂಲಕ ಸೈಕಲ್ ಕಡ್ಡಿಗಳನ್ನು ಹಾಯಿಸಿ ಕೆಳಗೆ ತಿರುಪನ್ನು ಹಾಕಿ ಭದ್ರಪಡಿಸಿದ. ಮೇಲಿನ ತಟ್ಟೆಯ ಮಧ್ಯೆ ಇನ್ನೊಂದು ರಂಧ್ರದಿಂದ ವಿದ್ಯುತ್ ವಾಹಕವನ್ನು ಹೊರತೆಗೆದು ಅಲ್ಲೊಂದು ಹಳದಿ ಪ್ಲಾಸ್ಟಿಕ್ ಕಮಲದ ಹೂ ಮತ್ತು ತೂಗಲು ಒಂದು ಉಂಗುರ ಹಾಕಿತ್ತು. ನೋಡಲು ಬಹು ಸುಂದರವಾಗಿದ್ದ ಆ ದೀಪ

ವನ್ನು ಹಚ್ಚಿದಾಗ ಇನ್ನೂ ಅಂದವಾಗಿ ಕಾಣುತ್ತಿತ್ತು. ಮಾರುಕಟ್ಟೆಯ ಯಾವ ಅಂಗಡಿಯಲ್ಲೂ ೧೮-೨೦ ರೂಪಾಯಿ ಬೆಲೆಯಾಗುತ್ತಿದ್ದ ಅದಕ್ಕೆ ಅತ ಹೇಳಿದ ಬೆಲೆ ಎಷ್ಟು ಗೊತ್ತೆ? ಕೇವಲ ೮ ರೂಪಾಯಿ!

ಸರಿ, ಕಾರ್ಮಿಕರು ನಾ ಮುಂದು ತಾ ಮುಂದು ಎಂದು ಆ ದೀಪಗಳನ್ನು ಒಬ್ಬರ ಮೇಲೊಬ್ಬರು ಬಿದ್ದು ಖಾಲಿ ಮಾಡಿಬಿಟ್ಟರು. ವ್ಯಾಪಾರವಾದ ಮೇಲೆ ಲೆಕ್ಕ ಹಾಕಲು ೫೦ ರೂಪಾಯಿ ಕಡಿಮೆ ಬಂದದ್ದನ್ನು ನೋಡಿ ಅವನು ಪಡಲಾರದ ಸಂಕಟಪಟ್ಟ. ಕೆಲವರು ಅತ ಹೇಳಿದ್ದನ್ನು ಸುಮ್ಮನೆ ಕೇಳಿದರು. ಕೆಲವರು ಏನಾಗಿದೆಯೆಂದು ವಿಚಾರಿಸಿದರು. ಮತ್ತೆ ಹಲವರು ತನ್ನ ಸರಕನ್ನು ಸರಿಯಾಗಿ ನಿಭಾಯಿಸಲಿಲ್ಲವೆಂದು ಆ ವ್ಯಾಪಾರಿಯನ್ನೇ ದೂಷಿಸಿದರು. ಆದರೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಹಲವು ಸಹೃದಯಿಗಳು ಒಂದುಗೂಡಿ ತಮ್ಮಲ್ಲೇ ಚಂದಾ ಎತ್ತಿ ಅವನಿಗೆ ಸೇರಬೇಕಾದ ಹಣವನ್ನು ಕೊಟ್ಟಾಗ ವ್ಯಾಪಾರದ ಗಲಾಟೆಯಲ್ಲಿ ದುಡ್ಡು ಕೊಡದೇ ದೀಪಗಳನ್ನು ಅಪಹರಿಸಿದ ಪುಂಡರ ಮೇಲೆ ಕೋಪ ಬರುತ್ತಿದ್ದ ಹಾಗೆಯೇ ದುರುಳರಿಂದ ತುಂಬಿದ ಈ ಜಗತ್ತಿನಲ್ಲಿ ಇಂತಹ ಸಹೃದಯಿಗಳೂ ಇದ್ದಾರಲ್ಲ ಎಂದು ಆನಂದಪಟ್ಟೆ.

– ಜಿ. ಮುರಳೀಧರ್

ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ, ಸಂಪೂರ್ಣ ಸ್ವಯಂಚಾಲಿತ ಯಂತ್ರವೊಂದನ್ನು ಮಿಲ್ಲು ಆಮದು ಮಾಡಿಕೊಂಡಿತ್ತು. ಭಾರಿ ಮೊತ್ತ ತೆತ್ತು ತರಿಸಿದ್ದ ಆ ಯಂತ್ರ ಉದ್ಯೋಗಾವಕಾಶಗಳನ್ನು ಮೊಟಕುಗೊಳಿಸುವದಷ್ಟೆ ಅಲ್ಲದೆ, ಮುಂದೆ ಅಭಿವೃದ್ಧಿಯ ಹಂತಗಳಲ್ಲಿ ಅದೇ ಮಾದರಿಯ ಆಧುನಿಕ ಯಂತ್ರಗಳನ್ನು ಮಿಲ್ಲು ತರಿಸಿದರೆ, ಇದ್ದ ಜನರಿಗೂ ಪೂರ್ಣ ಕೆಲಸ ಸಿಗುತ್ತಿರಲಿಲ್ಲ. ಇದರಿಂದಾಗಿ ಕಾರ್ಮಿಕರ ಯೂನಿಯನ್ ಕೆರಳಿತು. ಆಮದಾದ ಆ ಯಂತ್ರದ ಪೂಜಾ ಸಮಾರಂಭವಿದ್ದ ಆ ದಿನವೇ ಸಂಪೂರ್ಣ ಯಾಂತ್ರೀಕರಣದ ವಿಚಾರ ಹೊಂದಿದ ಆಡಳಿತ ವರ್ಗವನ್ನು ವಿರೋಧಿಸಲೆಂದು ಕರಪತ್ರಗಳನ್ನು ಹಂಚಿತು. ಬಂಡವಾಳ ಹೂಡುವಿಕೆಗೂ ಉದ್ಯೋಗಾವಕಾಶಕ್ಕೂ ಇದ್ದ ಅಂತರವನ್ನು ಅಂಕಿ ಅಂಶಗಳೊಂದಿಗೆ ಉದಾಹರಣೆ ಸಹಿತವಾಗಿ ವಿವರಿಸುತ್ತಾ, ಕೊನೆಗೆ ದಪ್ಪ ಅಕ್ಷರಗಳಲ್ಲಿ, 'ಸಂಪೂರ್ಣ ಯಾಂತ್ರೀಕರಣಕ್ಕೆ ಧಿಕ್ಕಾರ' ಮತ್ತು 'ಸಂಪೂರ್ಣ ಯಾಂತ್ರೀಕರಣವನ್ನು ನಾವು ಪೂರ್ಣ ವಿರೋಧಿಸುತ್ತೇವೆ' ಎಂದು ಕರಪತ್ರದಲ್ಲಿ ಬರೆದಿತ್ತು. ಆದರೆ ಆ ಘೋಷಣೆಯ ಕೆಳಗೇ ಅತಿ ಚಿಕ್ಕ ಅಕ್ಷರಗಳಲ್ಲಿ, 'ಶ್ರೀ ಮಹಾಲಕ್ಷ್ಮಿ ಆಟೊಮ್ಯಾಟಿಕ್ ಪವರ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತ' ಎಂದು ಪ್ರಕಟವಾಗಿದ್ದದ್ದು ನನ್ನ ಗಮನಕ್ಕೆ ಬಾರದಿರಲಿಲ್ಲ.

—ವಿ. ಎಂ. ಜೋಶಿ

ಮೊನ್ನೆ ನನ್ನ ಅಣ್ಣನವರಿಗೆ ವಿವಾಹ ಆಮಂತ್ರಣ ಪತ್ರಿಕೆಯೊಂದು ಬಂತು. ಅವನ ಕಿರಿಯ ಮಗ ಅದನ್ನು ಒಮ್ಮೆ ಲಕ್ಷ್ಯಕೊಟ್ಟು ಓದಿ ಸಂಭ್ರಮದಿಂದ ಓಡಿ ಬಂದವನೆ, "ಅಣ್ಣಾ, ನಮ್ಮಮ್ಮನಿಗೆ ಕೋಲಾರದಲ್ಲಿ ಮದುವೆ-ಇಲ್ನೋಡು!" ಎಂದು ಆಮಂತ್ರಣ ಪತ್ರಿಕೆಯಲ್ಲಿ ವಧುವಿನ ಹೆಸರಿನ ಮೇಲೆ ಬೆರಳಿಟ್ಟು ತೋರಿಸಿದ. ವಧುವಿನ ಹೆಸರೂ ಅವನ ತಾಯಿಯ ಹೆಸರೂ ಒಂದೇ ಆಗಿತ್ತು!

–ಘಟ್ಟು ಗೋವರ್ಧನರಾಜು

ವಿಜ್ಞಾನದಲ್ಲಿ ಹೊಸತೇನು?

ಎ. ಪಿ. ರಾಧಾಕೃಷ್ಣ

ನಿಸರ್ಗವನ್ನರಿಯುವ ಜ್ಞಾನ ವಿಜ್ಞಾನ ಸದಾ ಹೊಸತೆ. ನೂತನ ಸಿದ್ಧಾಂತಗಳು, ಆವಿಷ್ಕಾರಗಳು, ಉಪಜ್ಞೆಗಳು ವಿಜ್ಞಾನಕ್ಕೆ ಹೊಸ ರೂಪ ನೀಡುತ್ತವೆ. ಯಾವುದೆ ಸಿದ್ಧಾಂತ ಅಥವಾ ಆವಿಷ್ಕಾರ ಪೂರ್ಣ ಸಾಫಲ್ಯ ಹೊಂದಲು ತಂತ್ರವಿಜ್ಞಾನದ ಸಹಕಾರ ಅತ್ಯಗತ್ಯ. ಎತ್ತರದಿಂದ ಧುಮುಕುವ ನೀರಿನಿಂದ ಚಕ್ರ ತಿರುಗಿಸಿ ವಿದ್ಯುತ್ತು ಉತ್ಪಾದನೆ ಸಾಧ್ಯವೆನ್ನುವುದು ವಿಜ್ಞಾನವಾದರೆ, ತಿರುಗಿದ ಚಕ್ರದಿಂದ ವಿದ್ಯುತ್ತನ್ನು ಉತ್ಪಾದಿಸುವುದೇ ತಂತ್ರಜ್ಞಾನ. ಘನವಸ್ತುಗಳ ತೀಡುವಿಕೆಯಿಂದ ಕಿಡಿ ಉಂಟಾಗುತ್ತದೆನ್ನುವುದು ವಿಜ್ಞಾನವಾದರೆ, ಕಿಡಿಯಿಂದ ಬೆಂಕಿಯುರಿಸುವುದು ತಂತ್ರಜ್ಞಾನ. ಒಂದಕ್ಕೊಂದು ಪೂರಕ ವಿಜ್ಞಾನ – ತಂತ್ರಜ್ಞಾನಗಳು.

ಮರುಭೂಮಿ ಹಸಿರು

ಬ್ರಿಟಿಷ್ ಎಂಜಿನಿಯರ್ ಅಲೆನ್ ಕಾಕ್ ಇತ್ತೀಚೆಗೆ ಸಂಶೋಧಿಸಿದ ಎರಡು ನಮೂನೆಯ ಪ್ಲಾಸ್ಟಿಕ್ಕುಗಳು ಮರುಭೂಮಿಯ ಹಣೆಬರಹವನ್ನೆ ಪರಿವರ್ತಿಸಬಲ್ಲ ತಾಕತ್ತು ಹೊಂದಿವೆ.

ಕಾಕ್ಕನ ಪ್ಲಾಸ್ಟಿಕ್ಕುಗಳು ಸ್ಪಂಜಿಗೆ ಅನುರೂಪವಾಗಿವೆ. ಆದರೆ, ನೀರು ಮತ್ತು ಲವಣಾಂಶಗಳನ್ನು ಹೀರಬಲ್ಲ ಸಾಮರ್ಥ್ಯ ಇವುಗಳಲ್ಲಿ ಸ್ಪಂಜಿಗಿಂತ ಅಧಿಕ. ಅಲೆನ್ ಕಾಕನ ಬುದ್ಧಿ ಮೂಸೆಯಿಂದ ಪ್ರಕಟವಾದ ಈ ಪ್ಲಾಸ್ಟಿಕ್ಕುಗಳು ಪಾಲಿಕ್ರಿಸೈಡ್ಸ್ ಎಂಬ ವರ್ಗದ ಪಾಲಿಮರುಗಳು. (ಪಾಲಿಮರ್ ಎಂದರೆ ಎರಡು ಅಥವಾ ಹೆಚ್ಚು ಅಣುಗಳ ವ್ಯವಸ್ಥಿತ ಜೋಡಣೆಯಿಂದುಂಟಾಗುವ ದೊಡ್ಡ ಅಣು–ಬಿಡಿಕೊಂಡಿಗಳು ಸೇರಿ ಸರಪಳಿಯಾದಂತೆ.)

ಕಾಕ್ಕನ ಒಂದು ವಿಧದ ಪ್ಲಾಸ್ಟಿಕ್ಕುಗಳಿಗೆ ಎಗ್ರೊಸೋಕ್ ಎಂದು ಹೆಸರು. ಇವು ಚಿಕ್ಕ ಗೋಲಿಯಾಕಾರದಲ್ಲಿವೆ. ಇವುಗಳನ್ನು ಮರಗಿಡಗಳ ಬುಡದ ಮಣ್ಣಿನೊಂದಿಗೆ ಮಿಶ್ರಗೊಳಿಸಬೇಕು. ಊಡುವ ನೀರು ಮತ್ತು ರಸಗೊಬ್ಬರಗಳನ್ನೆಲ್ಲ ಈ ಪ್ಲಾಸ್ಟಿಕ್ಕುಗಳು ಹೀರಿಕೊಂಡು ಸಸ್ಯಗಳು ಇಚ್ಛಿಸಿದಾಗ ಉತ್ಸರ್ಜಿಸುತ್ತವೆ. ಎಗ್ರೊಸೋಕ್‌ನಿಂದ ಎರಡು ವಿಧದ ಪ್ರಯೋಜನಗಳಿವೆ. ಒಂದು, ಸಸ್ಯ ಸೇವಿಸಿ ಉಳಿದ ನೀರು ನಂತರ ಪೋಲಾಗದಂತೆ ಇವು ತಡೆ ಹಿಡಿಯುತ್ತವೆ. ಎರಡು, ಫಲಭಾಗವನ್ನು ಸಾಧ್ಯವಾದಷ್ಟು ತೀವ್ರವಾಗಿರಿಸುತ್ತವೆ.

ಇನ್ನೊಂದು ವಿಧದ ಪ್ಲಾಸ್ಟಿಕ್ಕಿಗೆ ವಿರೋಸೋಲ್ ಎನ್ನುತ್ತಾರೆ. ಇವು ಸಕ್ಕರೆಯ ಹರಳಿನಂತಿವೆ. ಬೀಜದೊಡನೆ ವಿರೋಸೋಲನ್ನು ಮಿಶ್ರಗೊಳಿಸಿ ಬಿತ್ತಬೇಕು. ಬೀಜಗಳಿಗೆ ನೀರು ಸಿಂಪಡಿಸುವಾಗ ಒದ್ದೆಯಾದ ವಿರೋಸೋಲ್ ಸುಂದರ ಪದರವೊಂದನ್ನು ರಚಿಸುತ್ತದೆ. ಸಸಿಯ ತಳದಲ್ಲಿ ಪ್ಲಾಸ್ಟಿಕ್ ಹಾಸು! ಈ ಹಾಸಿನೊಳಕ್ಕೆ ಸಸ್ಯಗಳ ಬೇರು [illegible]

ನುಸುಳುತ್ತವಾದರೂ ಹಾಸು ಸವೆಯದು; ಹಾರಿ ಹೋಗದು. ಗಡಿ ಮೀರಿ ಉಸುಕು ಎರಚಿ ಮರುಭೂಮಿ ವಿಸ್ತರಿಸುತ್ತಿರುವುದಕ್ಕೆ ಇದು ರಾಮಬಾಣವಾದೀತು.

ಸಾಮಾನ್ಯ ಮಣ್ಣಿನಲ್ಲಿ ಬೆಳೆಸಿದುದಕ್ಕಿಂತ ವಿಗ್ರೋಸೋರ್ ಮಿಶ್ರಿತ ಮಣ್ಣಿನಲ್ಲಿ ಬೆಳೆಸಿದ ಸಸ್ಯಗಳು ಅಧಿಕ ಇಳುವರಿ ಕೊಡುತ್ತವೆಂದು ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಸಂಶೋಧನೆಗಳಿಂದ ಸಿದ್ಧವಾಗಿದೆ. ಅಲೆನ್ ಕಾಕ್ಸನ ಕೊಡುಗೆಗಳು ಯುರೋಪಿನ ಮಾರುಕಟ್ಟೆಗಳಲ್ಲೆಲ್ಲ ಈಗಾಗಲೆ ಕಾಣಿಸತೊಡಗಿವೆ.

ಆಕಾಶಲಾಳಿ

ತಂತ್ರಜ್ಞಾನದ ಸಾಧನೆಗೆ 'ಆಕಾಶಲಾಳಿ' ಉತ್ತಮ ನಿದರ್ಶನ. ಆಕಾಶಲಾಳಿಗೆ ಆಂಗ್ಲ ಭಾಷೆಯಲ್ಲಿ 'ಸ್ಪೇಸ್ ಶಟಲ್' ಎಂದು ಹೆಸರು. ಇದು ಇತರ ಎಲ್ಲ ರಾಕೆಟ್ಟುಗಳಿಗಿಂತ ತೀರ ಭಿನ್ನ, ನೋಡುವುದಕ್ಕೆ ಜೆಟ್ ವಿಮಾನಗಳ ತದ್ವತ್ತು ರೂಪ. ಬಾಹ್ಯಾಂತರಿಕ್ಷಕ್ಕೆ ನೂಕುಬಲದ ಮೂಲಕ ರಾಕೆಟ್ಟಿನಂತೆ ಜಿಗಿದರೆ ನೆಲಕ್ಕೆ ಮರಳುವಾಗ ನಿರ್ದಿಷ್ಟ ತಂಗುದಾಣದಲ್ಲಿ ವಿಮಾನದಂತೆ ಮೆತ್ತಗೆ ಇಳಿಯುತ್ತದೆ. ಆದುದರಿಂದ ಇದು ರಾಕೆಟ್ಟೂ ಹೌದು, ವಿಮಾನವೂ ಹೌದು.

ಆಕಾಶಲಾಳಿಯ ಪ್ರಮುಖ ಭಾಗಗಳು ಮೂರು. ಒಂದು, ಅತಿ ಭಾರವಾದ ಇಂಧನದ ತೊಟ್ಟಿ, ಬಳಸುವ ಇಂಧನ ಅತ್ಯಂತ ಪರಿಶುದ್ಧ ದ್ರವಜಲಜನಕ ಮತ್ತು ಆಮ್ಲಜನಕ. ಎರಡು, ಪರಿಭ್ರಮಿಸುವ ಲಾಳಿ: ಇದು ಯಾತ್ರಿಕರ ವಾಸಸ್ಥಾನ, ಪ್ರಯೋಗದ ತಾಣ. ಇದಕ್ಕೆ ಮೂರು ರಾಕೆಟ್ಟುಗಳನ್ನು ಜೋಡಿಸಲಾಗಿದೆ. ಮೂರು, ಘನ ಇಂಧನ ಭರ್ತಿಯಾದ ಎರಡು ನೂಕು ರಾಕೆಟ್ಟುಗಳು. ಇವುಗಳ ಕಾರ್ಯ ಏನು ಗೊತ್ತೆ? ಲಂಕೆಗೆ ಜಿಗಿಯಲು ಜಾಂಬುವಂತ ಹನುಮಂತನನ್ನು ಹುರಿದುಂಬಿಸಿದಂತೆ, ಲಾಳಿಯನ್ನು ಹೊತ್ತು ಬಾಹ್ಯಾಕಾಶಕ್ಕೆ ಉಡ್ಡಯಿಸಲು ಅಗತ್ಯವಾದ ನೂಕು ಬಲವನ್ನು ಉತ್ಪಾದಿಸುವುದು.

ಗಳು ಉರಿದು ಅಗಾಧ ಒತ್ತಡ ಸಂಚಯಿತವಾಗುತ್ತಲೆ ಘನ ಇಂಧನ ರಾಕೆಟ್ಟುಗಳು ಮಹಾ ಶಬ್ದದೊಡನೆ ಉರಿಯುತ್ತ ಆಕಾಶ ಲಾಳಿಯನ್ನು ಬಾಹ್ಯಾಕಾಶಕ್ಕೆ ಒಯ್ಯುತ್ತವೆ.

೧೯೮೧ರ ಏಪ್ರಿಲಿನಲ್ಲಿ ಕೇಪ್ ಕ್ಯಾವರಿನ್ ನಿಂದ ಜಾನ್ ಯಂಗ್ ಮತ್ತು ರಾಬರ್ಟ್ ಕ್ರಿಪನ್ ಎಂಬಿಬ್ಬರು ಸಾಹಸಿಗರನ್ನು ಹೊತ್ತು ಕೊಲಂಬಿಯ ಆಕಾಶಲಾಳಿ ಗಗನಮಂಡಲವನ್ನೈದಿತು. ಎರಡು ದಿನ, ಆರು ಗಂಟೆ, ಇಪ್ಪತ್ತು ನಿಮಿಷಗಳ ಕಾಲ ಭೂಮಿಯನ್ನು ಪರಿಭ್ರಮಿಸಿದ ಈ ನೌಕೆ ಕ್ಯಾಲಿಫೋರ್ನಿಯದ ಮೊಜೇವ್ ಮರುಭೂಮಿಯಲ್ಲಿ ನಿರ್ಮಿತವಾದ ತಂಗುದಾಣದಲ್ಲಿಳಿದು ಇತಿಹಾಸ ಬರೆಯಿತು. ಈಗೊಂದು ಪ್ರಶ್ನೆ – ಆಕಾಶಲಾಳಿಯಿಂದ ಪ್ರಯೋಜನವೇನು?

ಅಂತರಿಕ್ಷ ಪಯಣದ ಕನಸು ನನಸಾದ ಮೇಲೆ, ಮಾನವ ಕುಲದ ಜೀವನ ವಿಧಾನ ಬದಲಾಗಿದೆ. ಭೂಮಿಯ ಸುತ್ತ ಪರಿಭ್ರಮಿಸುತ್ತಿರುವ ನಾನಾ ನಮೂನೆಯ ಕೃತಕ ಉಪಗ್ರಹಗಳು, ಬಾನ ಕಮ್ಮಟಗಳು ವಾತಾವರಣದ ಅಧ್ಯಯನ ಮಾಡಿ ಪ್ರವಾಹ, ಭೂಕಂಪ, ಚಂಡಮಾರುತಗಳಂಥ ಭೀಕರ ಪ್ರಕೃತಿ ವಿಕೋಪಗಳ ಬಗ್ಗೆ ಕಣಿ ನುಡಿಯುತ್ತಿವೆ; ತೈಲ, ಜಲ ಸಂಪತ್ತುಗಳ ಬಗ್ಗೆ ಅಮೂಲ್ಯ ಸಲಹೆ ಕೊಡುತ್ತಿವೆ. ಸಂಪರ್ಕ ಸಾಧನಗಳಲ್ಲೂ ಇವುಗಳ ಹಸ್ತಕ್ಷೇಪ ಇಂದು ಗಣನೀಯ: ಇಂಥ ಪ್ರಾಯೋಗಿಕ ಆಕಾಶ ನೌಕೆಗಳನ್ನೊಯ್ಯುವ ರಾಕೆಟ್ಟು ಉರಿದು ನಾಶವಾಗುವುದರಿಂದ ನೂತನ ರಾಕೆಟ್ ನಿರ್ಮಿಸಲು ತಗಲುವ ವೆಚ್ಚ ಅತಿ ದುಬಾರಿ. ಆಕಾಶಲಾಳಿಯಾದರೊ, ಒಮ್ಮೆಲೆ ಐದು ಉಪಗ್ರಹಗಳನ್ನು ಸಲೀಸಾಗಿ ಒಯ್ಯುವುದು ಮಾತ್ರವಲ್ಲ, ಇನ್ನೊಮ್ಮೆ ಹಾರಾಟಕ್ಕೆ ಅನುವಾಗಬಲ್ಲದು. ಇದರಿಂದ ಪ್ರಯೋಗ ವೆಚ್ಚದಲ್ಲಿ ಕಡಿತ ಖಂಡಿತ.

ಗುರುತ್ವಬಲ ಕ್ಷೀಣವಿರುವ ಬಾಹ್ಯಾಕಾಶದಲ್ಲಿ ಹಗುರ ವಸ್ತುಗಳನ್ನಳವಡಿಸಿ ಬೃಹತ್ ಪ್ರಯೋಗಶಾಲೆಗಳ ನಿರ್ಮಾಣ ಸಾಧ್ಯವೆನ್ನುವ ತಂತ್ರದ

ಸ್ಥಾವರ ಸ್ಥಾಪಿಸಿ, ಶಕ್ತಿಮೂಲಕ್ಕಾಗಿ ಪರದಾಡುತ್ತಿರುವ ಭೂಮಿಗೆ ಶಕ್ತಿಯೂಡುವ ಕಲ್ಪನೆಯನ್ನು ವಾಸ್ತವಕ್ಕಿಳಿಸುವ ಪ್ರಯತ್ನ ಸಾಗಿದೆ. ವಿಶಿಷ್ಟ ಮಿಶ್ರಲೋಹ ಮತ್ತು ಪರಿಶುದ್ಧ ಔಷಧದ್ರವ್ಯಗಳನ್ನು ತಯಾರಿಸಲು ಭೂಮಿಯ ಗುರುತ್ವ ಅಡ್ಡಿಯಾಗುತ್ತಿರುವಾಗ, ಆಕಾಶದಲ್ಲಿ ಮನುಷ್ಯರ ವಸಾಹತು, ಪ್ರಯೋಗಶಾಲೆಯ ಸ್ಥಾಪನೆಯತ್ತ ಗಮನ ಹರಿದಿದೆ. ೧೯೮೫ರ ಸುಮಾರಿಗೆ ಬಾಹ್ಯಾಕಾಶದಲ್ಲಿ ದೂರದರ್ಶಕವೊಂದನ್ನು ಸ್ಥಾಪಿಸಿ, ನಮ್ಮ ನೆರೆ ಗ್ರಹ, ನಕ್ಷತ್ರ, ಆಕಾಶಗಂಗೆ–ಒಟ್ಟಿನಲ್ಲಿ ವಿಶ್ವವನ್ನೆ ಬಗೆದು ತಪಾಸಿಸುವ ಗುರಿಯಿದೆ. ಈ 'ಆಕಾಶ ವರದಿಗಾರ' ನೀಡುವ ವಿವರ ಭೂಮಿಯಿಂದ ಸಿಕ್ಕುವುದಕ್ಕಿಂತ ಅದೆಷ್ಟೋ ಪಟ್ಟು ಉತ್ತಮವಾದುದರಿಂದ, ವಿಶ್ವದ ಬಗ್ಗೆ ಹೊಸ ಕಾಣ್ಕೆ ಒದಗಲಿದೆ. ಈ ಯೋಜನೆಗಳಲ್ಲೆಲ್ಲ ಆಕಾಶಲಾಳಿ ಗಮನಾರ್ಹ ಪಾತ್ರ ವಹಿಸುವುದಂತೂ ಖಾತ್ರಿ.

ಮಾನವ ಚಂದ್ರನ ಮೇಲಿಳಿದು ಹಾರಾಡುವುದು, ಉಪಗ್ರಹ ಉಡ್ಡಯಿಸುವುದು, ಮನುಷ್ಯ ರಹಿತ ಮತ್ತು ಆಕಾಶನೌಕೆ ಸತತ ಭೂಮಿಯ ಸುತ್ತ ಪರಿಭ್ರಮಿಸುವುದು ಇಂದು ಆಶ್ಚರ್ಯ ಹುಟ್ಟಿಸದಷ್ಟು ಸಹಜ. ಆದರೆ ಶಾಶ್ವತವಾದ ಆಕಾಶಲಾಳಿಯ ಹೊಸ ರೀತಿಯ ಹಾರಾಟ ಖಗೋಳ ವಿಜ್ಞಾನದ ಮುನ್ನಡೆಗೆ ನೂತನ ವೇದಿಕೆಯನ್ನು ನಿರ್ಮಿಸಿದೆ.

'ಏಕಧ್ರುವ' – ಕಣ

ಪರಮಾಣು ಪ್ರಪಂಚಕ್ಕೆ ಸಂಬಂಧಿಸಿದಂತೆ ಈ ಶತಮಾನದ ಕ್ರಾಂತಿಕಾರಿ ಆವಿಷ್ಕಾರ ಬೆಳಕಿಗೆ ಬಂದಿದೆ. ಸಮಸ್ತ ವಸ್ತುಗಳ ಸಾಧ್ಯ ಸೂಕ್ಷ್ಮತಮ ರೂಪ ಪರಮಾಣುವಾದುದರಿಂದ ಇವು ವಿಶ್ವ ನಿರ್ಮಾಣದ ಇಟ್ಟಿಗೆಗಳೆಂದು ಪರಿಗಣಿಸಲಾಗಿದೆ. ಬಿಡಿಯಾದ ಇದುವರೆಗಿನಂತೆ $೧೦^{-೮}$ ಸೆಂಟಿಮೀಟರುಗಳಷ್ಟು ಕಲ್ಪನಾತೀತ ಸೂಕ್ಷ್ಮ ಪರಮಾಣುವಿಗೂ ರಚನೆ ಇದೆ. ಪರಮಾಣುವಿನ ಕೇಂದ್ರ ಭಾಗದಲ್ಲಿ ಧನಾವೇಶ ಪ್ರೋಟಾನ್ ಮತ್ತು ರಾನ ನ್ಯೂಕ್ಲಿಯಸ್ ಅಥವಾ ಬೀಜಕೇಂದ್ರವಿದೆ. ಇದರ ಸುತ್ತ ಗರ್ಭಗುಡಿಗೆ ಸುತ್ತುವ ಭಕ್ತನಂತೆ ಇಲ್ಲವೆ ಮನೆ ಕಾಯುವ ಕಾವಲುಗಾರನಂತೆ ಋಣಾವೇಶ ಭರಿತ ಎಲೆಕ್ಟ್ರಾನುಗಳೆಂಬ ಕಣಗಳು ವಿವಿಧ ಕಕ್ಷೆಗಳಲ್ಲಿ ಸುತ್ತುತ್ತಿವೆ. ಆವೇಶವೆಂದರೆ ಕಣ ಹೊಂದಿರುವ ವಿದ್ಯುತ್‌ಪರಿಮಾಣ. ಓಹ್! ಎಂಥ ಸುಂದರ ಚಿತ್ರ! ಆದರೆ ಇದು ೧೯೩೨ರಷ್ಟು ಹಿಂದಿನದು.

ಇಂದು? ಅರಿದು ಗೊತ್ತಿದ್ದ ಮೂರು ಪ್ರಾಥಮಿಕ ಕಣಗಳ ಸಾಲಿಗೆ ಪಾಸಿಟ್ರಾನ್, ಮಿಸಾನ್ ಹೀಗೆ ಎಂಬತ್ತಕ್ಕೂ ಹೆಚ್ಚು ಇತರ ಕಣಗಳು ಸೇರಿದಂತೆ ಕೃಷ್ಣನ ಬಾಯೊಳಗಿನ ಹಿಡಿ ಮಣ್ಣಿನಲ್ಲಿ ಬ್ರಹ್ಮಾಂಡ ಕಂಡ ಯಶೋದೆಯಂತಾಗಿದೆ ನಮ್ಮ ಸ್ಥಿತಿ! ಕಣಮಾಲೆಗೆ ಸೇರುವತ್ತ ಹೊಸ ಕಣ – ಏಕಧ್ರುವ ಅಥವಾ ಮೊನೋಪೊಲೋ ಮುನ್ನಡಿ ಇಡತೊಡಗಿದೆ.

ಭೌತಶಾಸ್ತ್ರಜ್ಞರ ಊಹೆಯಂತೆ ಇದೊಂದು ಕಾಂತ ಕಣ. ಕಬ್ಬಿಣ, ನಿಕೆಲ್ ಮೊದಲಾದ ಲೋಹಗಳನ್ನಾಕರ್ಷಿಸುವ ಕಾಂತಕ್ಕೆ ಉತ್ತರ ಮತ್ತು ದಕ್ಷಿಣ ಧ್ರುವಗಳಿದ್ದರೆ ಇದಕ್ಕಿರುವುದು ಏಕ ಧ್ರುವ ಮಾತ್ರ. ಅಂದರೆ, ಇದು ಏಕಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಧ್ರುವಗಳಂತೆ ವರ್ತಿಸುತ್ತದೆ. ಏಕಧ್ರುವ ಕಾಂತದ ಅಸ್ತಿತ್ವ ಅಸಾಧ್ಯವೆಂಬ ಪರಿಕಲ್ಪನೆಗಿದು ವ್ಯತಿರಿಕ್ತ. ವೈಜ್ಞಾನಿಕ ದೃಷ್ಟಿ ಬದಲಾಗುವುದೆನ್ನುವುದಕ್ಕೆ ಉತ್ತಮ ಉದಾಹರಣೆ ಇಲ್ಲಿದೆ. ಈ ವಿಶಿಷ್ಟ ಕಣದ ಅಸ್ತಿತ್ವವನ್ನು ಖ್ಯಾತ ಭೌತಶಾಸ್ತ್ರಜ್ಞ ಪಿ. ಎಂ. ಡಿರಾಕ್ ೧೯೩೧ರಲ್ಲಿ ಸೂಚಿಸಿದ.

ಏಕಧ್ರುವ ಕಣದ ಅಸ್ತಿತ್ವಕ್ಕೆ ಮತ್ತಷ್ಟು ಒತ್ತು, ಚಾಲನೆ ದೊರೆತದ್ದು ೧೯೭೪ರಲ್ಲಿ. ನಿಸರ್ಗ ನಿಯಮಗಳನ್ನು ನಿಯಂತ್ರಿಸುವ ವಿದ್ಯುತ್ಕಾಂತ ಬಲ ಮತ್ತು ಪರಮಾಣು ಬಲಗಳು (ದುರ್ಬಲ ಬೀಜಕೇಂದ್ರ ಬಲ ಮತ್ತು ಪ್ರಬಲ ಬೀಜಕೇಂದ್ರ ಬಲ) ಒಂದೇ ಬಲದ ಮೂರು ಭಿನ್ನ ಶಾಖೆಗಳೆಂದು ಸಾರ್ವತ್ರಿಕ ಏಕೀಕೃತ ಕ್ಷೇತ್ರ ಸಿದ್ಧಾಂತ ಪ್ರತಿಪಾದಿಸುತ್ತದೆ. ಈ ಸಿದ್ಧಾಂತದಲ್ಲಿ ತಥ್ಯವಿರ

ವಾಯುರ್ವಮನು ಅಮೇರಿಕನ್ ವಿಜ್ಞಾನಿ ಗೆರಾಲ್ಡ್ ಟಿ. ಹಾಫ್ಟ್ ಮತ್ತು ರಷ್ಯನ್ ವಿಜ್ಞಾನಿ ಅಲೆಗ್ಸಾಂಡರ್ ಪಾಲಿಕಾವ್. ೧೯೭೪ರಲ್ಲಿ ಪ್ರತ್ಯೇಕವಾಗಿ ರುಜುವಾತಿಸಿದ್ದಲ್ಲದೆ ಕಣದ ಅಸಾಧಾರಣ ದ್ರವ್ಯರಾಶಿಯನ್ನವರು ಅಂದಾಜಿಸಿದರು. ಬ್ರಹ್ಮಾಂಡದ ಮಹಾ ಆಸ್ಫೋಟನೆಯ ಪರಿಣಾಮವಾಗಿ ಏಕಧ್ರುವ ಕಣಗಳು ಜನಿಸಿರಬಹುದೆಂದು ಇವರ ತರ್ಕ.

ಈ ಹೊಸ ಪರಿಕಲ್ಪನೆ ಭೌತಶಾಸ್ತ್ರಜ್ಞರನ್ನು ಆಕರ್ಷಿಸಿತು. ಕಣವು ಕಾಂತಭರಿತವಾದುದರಿಂದ, ಕಾಂತಕ್ಷೇತ್ರದಿಂದ ವೇಗೋತ್ಕರ್ಷಗೊಂಡು ಭೂಮಿಗೆ ರಭಸದಿಂದ ಪಾತವಾಗುವ ಸಂಭಾವ್ಯವನ್ನು ಊಹಿಸಿ ಪರ್ವತ ಶೃಂಗದ ಮೇಲೆ, ಸಮುದ್ರದಂತರಾಳದಲ್ಲಿ ಪ್ರಯೋಗ ನಡೆಸಿದರು. ಬಲೂನುಗಳ ಛಾಯಾಫಲಕಗಳನ್ನು ಕೂಲಂಕಷವಾಗಿ ಅಭ್ಯಸಿಸಿದರು. ಉಹುಂ! ಈ ಎಲ್ಲ ಪ್ರಯೋಗಗಳು ಋಣ ಫಲಿತಾಂಶ ಮಾತ್ರ ನೀಡಿದವು.


ಆದರೆ, ಏಕಧ್ರುವ ಕಣದ ಗವಿಗೆ ಸಿಸೇಮ ತೆರೆಯುವ ಅಲಿಬಾಬ ಅಲ್ಲಿದ್ದ. ಆತ ಮೂವತ್ತೈದರ ಹರೆಯದ–ಅಮೇರಿಕನ್ ಭೌತ ವಿಜ್ಞಾನಿ ಬ್ಲಾಸ್ ಕಾಬ್ರೆರಾ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಸುಸಜ್ಜಿತ ಪ್ರಯೋಗಶಾಲೆಯಲ್ಲಿ ತನ್ನ ಪತ್ತೆದಾರಿಕೆ ಪ್ರಾರಂಭಿಸಿದ. ವಿದ್ಯುತ್ತಿನ ಬಗ್ಗೆ ಅನೇಕ ಪ್ರಯೋಗಗಳನ್ನು ಮಾಡಿದ ಮೈಕೇಲ್ ಫ್ಯಾರಡೆಯ ಪ್ರಯೋಗವೊಂದನ್ನು ಅನುಸರಿಸಿದ. ಸುರುಳಿಯೊಂದರ ಮೂಲಕ ಕಾಂತಕ್ಷೇತ್ರ ಹಾದುಹೋದರೆ, ಆ ಕ್ಷೇತ್ರ ವಿದ್ಯುತ್ತನ್ನು ಪ್ರೇರಿಸುತ್ತದೆನ್ನುವುದು ಫ್ಯಾರಡೆಯ ಪ್ರಯೋಗದ ತಿರುಳು.

ಇಲ್ಲೂ ಅಷ್ಟೆ. ಸೀಸದ ಕೊಳವೆಯೊಂದರೊಳಗೆ ನಿಯೋಬಿಯಮ್ ತಂತಿ ಸುರುಳಿಯನ್ನಿರಿಸಿ, ಆ ಸುರುಳಿಗೆ ವಿದ್ಯುನ್ಮಾಪಕ ಸೀವನಿಯನ್ನು ಸಿಲುಕಿಸಿ, ಸೀವನಿಯನ್ನು ನಕ್ಷೆಯ ಮೇಲಿರಿಸಿದ. ಕಾಂತ ಕಣ ಸುರುಳಿ ಮೂಲಕ ಹಾಯ್ದರೆ, ಸೀವನಿ ನಕ್ಷೆಯ ಮೇಲೆ ಗೆರೆ ಎಳೆದು, ಕಣ ಪ್ರೇರಿಸುವ ವಿದ್ಯುತ್ ಪರಿಮಾಣವನ್ನು ಸೂಚಿಸಬೇಕೆಂದು ಹಂಚಿಕೆಯಾಗಿತ್ತು. ಕಾಂತ ಕಣವನ್ನು ಕೆಡಹುವ ಬಲೆ ತೋರಿಕೆಗೆ ತೀರ ಸರಳವೆನಿಸಿದರೂ, ವಾಸ್ತವವಾಗಿ ಭೂ ಕಾಂತ ಕ್ಷೇತ್ರ ಪ್ರಯೋಗದ ಮೇಲೆ ಕಿಂಚಿತ್ತೂ ಪರಿಣಾಮ ಬೀರದಂತೆ ಮಾಡಲು ಕಾಬ್ರೆರಾ ಅನುಸರಿಸಿದ ಕ್ರಮ ಅತ್ಯಂತ ಜಟಿಲ ಮತ್ತು ತಾಂತ್ರಿಕ ಬುದ್ಧಿಮತ್ತೆಯ ಪ್ರತೀಕ.

ರಾಮನ ಬರವಿಗೆ ಶಬರಿ ಕಾದಂತೆ, ವಿಚಿತ್ರ ಕಣದ ಆಗಮನವನ್ನೇ ನಿರೀಕ್ಷಿಸುತ್ತ ಕಾಬ್ರೆರಾ ಕುಳಿತ. ೧೯೮೨ರ ಫೆಬ್ರವರಿ ೧೪, ಅಪರಾಹ್ನ ೧ ಗಂಟೆ ೫೩ ನಿಮಿಷ. ಹಟಾತ್ತನೆ ಸೀವನಿ ತಕಪಕ ಕುಣಿದು ನಕ್ಷೆಯ ಮೇಲೆ ನೀಲ ಗೆರೆ ಎಳೆಯಿತು. ಕಾಬ್ರೆರಾ ದಿಗ್ಭ್ರಮೆಯಿಂದ ತಲೆ ಅಲುಗಿಸಿದ. ಸೀವನಿ ಚಲನೆಗೆ ಯಾವುದೇ ತಾಂತ್ರಿಕ ದೋಷ ಕಾರಣವಲ್ಲವೆಂದು ಕೂಲಂಕಷ ಪರಿಶೀಲನೆಯಿಂದ ಮನದಟ್ಟಾಯಿತು. ನಕ್ಷೆಯಲ್ಲಿ ಮೂಡಿದ ವಿದ್ಯುತ್ ಪರಿಮಾಣ ಏಕೀಕೃತ ಕ್ಷೇತ್ರ ಸಿದ್ಧಾಂತ ಸೂಚಿಸಿದ ಪರಿಮಾಣಕ್ಕೆ ಸಮಾನವಾಗಿತ್ತು!

ಪತ್ರಿಕೆ, ಟೆಲಿವಿಷನ್ನುಗಳಲ್ಲಿ ಈ ಪ್ರಯೋಗ ಫಲಿತಾಂಶಕ್ಕೆ ದಕ್ಕಿದ ಪ್ರಚಾರ ಅಭೂತಪೂರ್ವ. ಖ್ಯಾತ ಭೌತ ವಿಜ್ಞಾನಿ ಯುಜಿನಿ ಪಾರ್ಕರ್ ಉದ್ಗರಿಸಿದ– "ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಪ್ರಯೋಗ ಸುಳ್ಳೆನ್ನಲಾರೆ. ಆದರೆ ಒಂದು ವೇಳೆ ಸತ್ಯವಾದರೆ? ಓ ಅಣುಗ! ಇದು ಸತ್ಯವಾದೀತೆ?" ಪಾರ್ಕರನ ಕಾತರದ ನುಡಿಗಳ ಹಿಂದೆ ಕಾಬ್ರೆರಾನ ಪ್ರಯೋಗಕ್ಕಿರುವ ಮಹತಿ ಅಡಗಿದೆ. ಪ್ರಯೋಗ ಫಲಿತಾಂಶ ಇನ್ನೂ ಹಲವು ಪ್ರಯೋಗಗಳ ನಿಕಷಕ್ಕೊಳಪಟ್ಟು ಜಯಗಳಿಸಿದರೆ, ಈ ಶತಮಾನದ ಕ್ರಾಂತಿಕಾರಿ ಆವಿಷ್ಕಾರವಾಗುತ್ತದೆ. ವಿಜ್ಞಾನಕ್ಕೆ ನೂತನ ಆಯಾಮ ಸಿಗುತ್ತದೆ. ✡

(ಕೃಪೆ : ಆಕಾಶವಾಣಿ ಮಂಗಳೂರು)



ಮೀನುಗಾರ ಹದ್ದುಗಳು

ಹ[illegible] ವರ್ಷಗಳ ಹಿಂದೆ ಜರ್ಮನಿಯ ಸರೋವರ ಒಂದರಲ್ಲಿ ಹಿಡಿದ 'ಕಾರ್ಪ್' (ದೊಡ್ಡ ಗಾತ್ರದ ಸಿಹಿ ನೀರಿನ ಮೀನು) ಒಂದರ ಬೆನ್ನಿಗೆ ಹಕ್ಕಿಯ ಅಸ್ಥಿಪಂಜರವೊಂದು ಸಿಲುಕಿಕೊಂಡಿತ್ತು! ಮೀನಿನ ಬೆನ್ನ ಮೇಲೆ ಹಕ್ಕಿಯ ಅಸ್ಥಿಪಂಜರ ಬಂದುದು ಹೇಗೆ? ಆಶ್ಚರ್ಯ ಎನಿಸುತ್ತದೆಯೇ? ಆ ಮೀನನ್ನು [illegible] ಮೀನುಗಾರರಿಗೂ ಅದೊಂದು ಬಿಡಿಸಲಾರದ [illegible]ತಂತೆ. ಆದರೆ ಒಗಟೆಂದು ಕ್ಷಣ ಮಾತ್ರ.

ಮೀನನ್ನು ಕೊಯ್ದೊಡನೆ ತಿಳಿಯಿತು ಅದು 'ಮೀನುಗಾರ'ನದೇ ತಪ್ಪೆಂಬುದು. ಆ 'ಮೀನುಗಾರ' ಇನ್ನಾರೂ ಅಲ್ಲ, ಅದೇ ಅಸ್ಥಿಪಂಜರವಾಗಿದ್ದ ಹಕ್ಕಿ! ಅದೊಂದು 'ಆಸ್ಪ್ರೇ.' ಅತ್ಯುತ್ತಮ ಮೀನುಗಾರ ಹಕ್ಕಿ ಇದು. ಕಡಲಲ್ಲಿ, ಸರೋವರಗಳಲ್ಲಿ ನೀರ ಮೇಲೆಯೇ ಹಾರಾಡುತ್ತಾ, ನೀರೊಳಕ್ಕೆ ಧುಮುಕಿ ಮೀನು ಹಿಡಿಯುವ ಧೀರ. ಪ್ರತಿ ಹತ್ತು ಪ್ರಯತ್ನಗಳಲ್ಲಿ ಒಂಭತ್ತನ್ನು ಯಶಸ್ವಿಗೊಳಿಸುವ ಚಾಣಾಕ್ಷ.


ಆದರೆ ಅಪರೂಪದ ದುರದೃಷ್ಟದಿಂದ ಈ [illegible] ಒಂದು ತಪ್ಪು ಮಾಡಿತು. ತಾನು ನೀರಿನಿಂದ ಮೇಲೆತ್ತಲಾಗದಷ್ಟು ದೊಡ್ಡ [illegible] ಮೀನನ್ನು ಹಿಡಿದುದೇ ಅದರ ತಪ್ಪು. ಆದರೆ ಆಸ್ಪ್ರೇಗಳು ಇಂತಹ ತಪ್ಪು ಮಾಡುವುದು [illegible]

ಮೀನುಗಾರ ಹದ್ದುಗಳಲ್ಲಿ ಪ್ರಮುಖವಾದ ಆಸ್ಪ್ರೇಗಳ ಕಣ್ಣುಗಳು ಮತ್ತು ಕಾಲುಗಳು ಮೀನು [illegible] ಮೇಲ್ಮೈ ಮಟ್ಟದಿಂದ ೩೦ ರಿಂದ ೬೦ ಮೀಟರುಗಳ ಎತ್ತರದಲ್ಲಿ ಹಾರಾಡುತ್ತಾ ಉಳಿಯುವ ಆಸ್ಪ್ರೇಗೆ ನೀರೊಳಗೆ ಈಜುತ್ತಾ ಹೋಗುವ

ಮೀನುಗಳೂ ಕಾಣಿಸಿಬಿಡುತ್ತವೆ. ತಕ್ಷಣ ಸದ್ದಿಲ್ಲದೆ ಶರವೇಗದಲ್ಲಿ ನೀರೊಳಕ್ಕೆ ನುಗ್ಗಿ ಬಿದ್ದು ಮೀನಿನ ದೇಹದೊಳಕ್ಕೆ ತನ್ನ ಕಾಲುಗುರುಗಳನ್ನು ಇಳಿಸಿಬಿಡುತ್ತದೆ. ಆಸ್ಪ್ರೇಯ ಉಗುರುಗಳಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಬಲಿಯಾದ ಮೀನಿಗೆ ಸೊನ್ನೆ. ನಂತರ ಬೇಟೆಯನ್ನು ನಿರ್ದಿಷ್ಟ ತಂಗು ನೆಲೆಗೊಯ್ದು ಭಕ್ಷಿಸುತ್ತದೆ. ಆಸ್ಪ್ರೇಗಳದೊಂದು ವಿಸ್ಮಯಕರ ಕ್ರಮ – ಮೀನನ್ನು ಎತ್ತಿ ಹಿಡಿಯಲು, ಕೊಕ್ಕಿನ ಬಳಿಗೊಯ್ಯಲು ಮುಂತಾಗಿ ಎಲ್ಲ ಕೆಲಸಗಳಲ್ಲೂ 'ಬಲಗೈ'ದೇ ಉಪಯೋಗ !

ಆಸ್ಪ್ರೇಗಳು ಮರಗಳ ಮೇಲಾಗಲಿ ಕಡಿದಾದ ಪ್ರಪಾತಗಳಲ್ಲಾಗಲಿ ಗೂಡು ಕಟ್ಟುತ್ತವೆ. ಪ್ರತಿ ವರ್ಷವೂ ಹಿಂದಿನ ವರುಷದ ಗೂಡಿಗೇ, ಮೊಟ್ಟೆಯಿಟ್ಟು ಮರಿಮಾಡಲು, ಹಿಂದಿರುಗುವುದು ಆಸ್ಪ್ರೇ ದಂಪತಿಗಳ ಸಹಜ ಪರಿಪಾಠ. ಪ್ರತಿ ಬಾರಿಯೂ ಸೇರಿಸಲ್ಪಡುವ ಹೊಸ ಕಡ್ಡಿಗಳಿಂದಾಗಿ ಗೂಡು ದೊಡ್ಡದಾಗುತ್ತಾ ವಿಚಿತ್ರವಾದ ರೂಪವನ್ನು ಪಡೆಯುತ್ತದೆ. ಮೊಟ್ಟೆಗಳಿಗೆ ಕಾವು ಕೊಡುವ, ಮರಿ ಸಾಕುವ ಕೆಲಸ ಯಥಾಪ್ರಕಾರ ಸಂಪೂರ್ಣವಾಗಿ ಹೆಣ್ಣಿನದೇ. ಗೂಡಿನಿಂದ ಸ್ವಲ್ಪ ದೂರದಲ್ಲಿ ಎತ್ತರದಲ್ಲಿ ಕೊಂಬೆಯೊಂದರ ಮೇಲೆ ಕುಳಿತು ಕಾಲ ಕಳೆಯುವುದು ಗಂಡು ಆಸ್ಪ್ರೇಯ ಕೆಲಸ! ಏಕಪತ್ನೀವ್ರತಸ್ಥನಷ್ಟೇ ಅಲ್ಲದೆ ಬಹು ವಿಧೇಯ ಈ ಪತಿ. ತನಗೆ ಹಸಿವಾದಾಗ ಹೆಣ್ಣು ಸೂಚನೆ ಕೊಟ್ಟೊಡನೆಯೇ ಆಕೆಗೆ ಮೀನು ಹಿಡಿದು ತರಲು ಹಾರಿಹೋಗುತ್ತಾನೆ ಈ ಪತಿರಾಯ!

ಮೊದಲಲ್ಲೇ ಹೇಳಿದ ಅಸ್ಥಿಪಂಜರವಾಗಿ ಹೋದ ಆಸ್ಪ್ರೇ ತನ್ನ ಉಗುರುಗಳನ್ನು ತಾನೇ ಬಿಡಿಸಿಕೊಳ್ಳಲು ಆಗದಷ್ಟು ಆಳವಾಗಿ ಆರು ಕಿಲೋಗ್ರಾಂ ತೂಕದ ಆ ಮೀನಿನ ದೇಹದೊಳಕ್ಕೆ ಇಳಿಸಿದುದರಿಂದಲೇ ಮೀನನ್ನು ಮೇಲೆತ್ತಲಾಗದೆ ತಾನೂ ತಪ್ಪಿಸಿಕೊಳ್ಳಲಾಗದೆ ನೀರಲ್ಲೇ ಮುಳುಗಿ ಸತ್ತಿರಬೇಕು. ಆದರೆ ಆ ಕಾರ್ಪ್ ಆಸ್ಪ್ರೇಯ ಉಗುರುಗಳ ಭಯಂಕರ ಗಾಯವನ್ನು ಹೊಂದಿಯೂ ಅದು ಹೇಗೆ ಬದುಕಿ ಉಳಿದಿತ್ತೋ, ಅದಿನ್ನೊಂದು ಅದ್ಭುತ!



ಆಸ್ಪ್ರೇಯೇ ಅಲ್ಲದೆ ಇನ್ನೂ ಹಲವಾರು ವಂಶಗಳ ಮೀನುಗಾರ ಹದ್ದುಗಳಿವೆ. ಎಲ್ಲವುಗಳ ಬೇಟೆಯ ಕ್ರಮ ಹೆಚ್ಚು ಕಡಿಮೆ ಆಸ್ಪ್ರೇಯಂತೆಯೇ. ಆದರೆ ಆಫ್ರಿಕದ ಮೀನುಗಾರ ಹದ್ದೊಂದು ಹಾಗಲ್ಲ. ತಾನೇ ಮೀನು ಹಿಡಿಯುವ ತೊಂದರೆ ಅದಕ್ಕೆ ಬೇಕಿಲ್ಲ. ಹೊಂಚಿ ಕಾದಿದ್ದು ಬೇಟೆಯೊಂದಿಗೆ ಬರುತ್ತಿರುವ ಆಸ್ಪ್ರೇಗಳ ಮೇಲೆ ದಾಳಿ ನಡೆಸಿ ಮೀನನ್ನು ಕಸಿದು ತಾನು ತಿನ್ನುತ್ತದೆ ಈ ದರೋಡೆಕೋರ.

ಹಲವಾರು ಬಾರಿ ಆಸ್ಪ್ರೇ ಹಿಡಿದು ತರುವ ಪ್ರತಿ ಮೂರರಲ್ಲಿ ಎರಡು ಮೀನುಗಳು ಇಂತಹ 'ದರೋಡೆಕೋರ'ರ ಪಾಲಾಗುತ್ತವೆ.

'ಕಡಲ ಹದ್ದು'ಗಳು ಉತ್ತಮ ಮೀನುಗಾರರಾದರೂ ಅದೇಕೋ ಅವೂ ಆಸ್ಪ್ರೇಗಳ ಮೇಲೆ ಯುದ್ಧ ಮಾಡಿ ಆಹಾರ ಕಸಿಯುವುದೇ ಸಾಮಾನ್ಯ.

ಜನವಸತಿಯಿಂದ ಬಹು ದೂರದಲ್ಲಿ ಬದುಕುವ ಆಸ್ಪ್ರೇಯ ಮೇಲೂ ಜನರ 'ಹದ್ದುಕಣ್ಣು' ಇದ್ದೇ ಇದೆ. ಆಸ್ಪ್ರೇಗಳ ಮೊಟ್ಟೆಗಳನ್ನು ಗೂಡಿನಿಂದ ಕದ್ದೊಯ್ಯುವ ಕಳ್ಳರು ಅಪರೂಪವಲ್ಲ. ಮನುಷ್ಯರ ಇಂತಹ ಸರ್ವನಾಶಕ ಕ್ಷುದ್ರ ಪ್ರವೃತ್ತಿಯಿಂದಾಗಿ ಆಸ್ಪ್ರೇಗಳ ವಂಶ ವಿನಾಶದ ಹಾದಿ ಹಿಡಿದಿದೆ!



‘ಏಬಿಸಿ’— ಹಾಗಂದರೇನು ?

ಆಧುನಿಕ ಜೀವನದಲ್ಲಿ ಪ್ರಚಾರ ಮಾಧ್ಯಮಕ್ಕೆ
ದಿನ ದಿನಕ್ಕೆ ಹೆಚ್ಚೆಚ್ಚು ಮಹತ್ವ ಪ್ರಾಪ್ತವಾಗುತ್ತಿದೆ.
ಹಿಗ್ಗುತ್ತಿರುವ ಉದ್ಯಮಕ್ಕೆ ಖಚಿತತೆಯ
ಅಡಿಪಾಯ ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿರುವ
ಸಂಸ್ಥೆ ಇದು.

ವಸಂತ ಕಲಕೋಟಿ

ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಶನ್ ಭಾರತೀಯ ಪತ್ರಿಕಾ ರಂಗದಲ್ಲಿ, ಜಾಹೀರಾತು ಪ್ರಪಂಚದಲ್ಲಿ ಅತ್ಯಂತ ಪ್ರಭಾವ ಬೀರುವ ಹಿರಿಯ ಹಾಗೂ ವೈಶಿಷ್ಟ್ಯಪೂರ್ಣ ಸಂಸ್ಥೆ. ಜಾಹೀರಾತು ಸಂಸ್ಥೆಗಳು ಪತ್ರಿಕೆಗಳು, ಕೆಲವು ಸರಕಾರೀ ಮತ್ತು ಖಾಸಗೀ ಸಂಸ್ಥೆಗಳು ಈ ಸಂಸ್ಥೆಯ ಸದಸ್ಯರುಗಳು.

ಜಾಹೀರಾತುದಾರರು ಪತ್ರಿಕೆಗಳಲ್ಲಿ ತಮ್ಮ ಜಾಹೀರಾತು ಪ್ರಕಟಿಸಿ ತಮ್ಮ ಉದ್ಯೋಗ ವ್ಯವಸಾಯಗಳನ್ನು ವಿಕಾಸಗೊಳಿಸುವುದು ಬಳಕೆದಾರರಿಗೆ ತಮ್ಮ ಉತ್ಪಾದನೆಯ ಬಗ್ಗೆ ಸರಿಯಾದ ತಿಳಿವಳಿಕೆ ಕೊಡುವುದು ಅವಶ್ಯವಿರುತ್ತದೆ. ಆದರೆ ಯಾವ ಪತ್ರಿಕೆ ಜನರಲ್ಲಿ ಹೆಚ್ಚು ಪ್ರಭಾವ ಬೀರುತ್ತದೆ ಅಥವಾ ಯಾವ ಪತ್ರಿಕೆಯ ಪ್ರಸಾರ ಹೆಚ್ಚಿಗೆ ಎಂಬುದನ್ನು ಸ್ಪಷ್ಟವಾಗಿ ತಿಳಿಯುವದು ಕಷ್ಟದ ಕೆಲಸ. ಕಾರಣ ಪತ್ರಿಕೆ ದೊಡ್ಡದೇ ಇರಲಿ ಚಿಕ್ಕದೇ ಇರಲಿ ಅದು [illegible] ತನ್ನ ಪ್ರಸಾರ ಸಂಖ್ಯೆಯನ್ನು ಖಚಿತ [illegible] ತಿಳಿಯಪಡಿಸುವುದಿಲ್ಲ. ಪ್ರತಿಯೊಂದು ಪತ್ರಿಕೆಯು ರಜಿಸ್ಟ್ರಾರ್ ಆಫ್ ನ್ಯೂಜ್ ಪೇಪರ್ಸ್ ಕಚೇರಿಯಲ್ಲಿ ಹೆಸರು ನೊಂದಾಯಿಸಬೇಕು. ರಜಿಸ್ಟ್ರಾರ್ ಆಫ್ ನ್ಯೂಜ್ ಪೇಪರ್ಸ್ ಕಚೇರಿಯು ಪ್ರತಿಯೊಂದು ಪತ್ರಿಕೆಯ ಸರಾಸರಿ ಪ್ರಸಾರ ಸಂಖ್ಯೆ, ಓದುಗರ ಮೇಲೆ ಅದು ಬೀರುವ ಪ್ರಭಾವ, ಯಾವ ವರ್ಗದ ಜನ ಈ ಪತ್ರಿಕೆಯನ್ನು ಹೆಚ್ಚಾಗಿ ಮೆಚ್ಚುತ್ತಾರೆ ಇತ್ಯಾದಿ ವಿವರಗಳನ್ನು ಪ್ರತಿ ವರುಷ ವರದಿಯ ರೂಪದಲ್ಲಿ ಪ್ರಕಟಿಸುವದುಂಟು. ಆದರೆ ಈ ವರದಿಯಲ್ಲಿ ಪ್ರಕಟವಾಗುವ ಪತ್ರಿಕೆಯ ಪ್ರಸಾರ ಸಂಖ್ಯೆಗೂ ಪತ್ರಿಕೆಯ ನಿಜವಾದ ಪ್ರಸಾರ ಸಂಖ್ಯೆಗೂ ತುಂಬ ವ್ಯತ್ಯಾಸವುಂಟು. (ಪತ್ರಿಕಾ ವ್ಯವಸಾಯದಲ್ಲಿ ಉಳಿದ ಉದ್ದಿಮೆಗಳಲ್ಲಿ ತೋರಿ ಬರುವ ದೋಷಗಳು ಸಾಕಷ್ಟಿವೆ. ಅನೇಕ ಪತ್ರಿಕೆಗಳು ತಮ್ಮ ಪತ್ರಿಕೆಗಳಿಗಾಗಿ ದೊರೆತ ನ್ಯೂಜ್‌ಪ್ರಿಂಟ್ [illegible] ಕಾಗದವನ್ನು ಕಾಳಸಂತೆಯಲ್ಲಿ ಮಾರಿಕೊಂಡು ಪತ್ರಿಕಾ ಪ್ರಸಾರ ಹೆಚ್ಚಿಸಿದ [illegible] ಗೊಳಿಸಿ ಲಾಭಾಂಶವನ್ನು ಹೆಚ್ಚಿಸುವದುಂಟು.)

ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಶನ್ ಪತ್ರಿಕಾ ಪ್ರಸಾರವನ್ನು ಖಚಿತಪಡಿಸುವ ಒಂದು ಸಂಸ್ಥೆ. ೧೯೪೮ರಲ್ಲಿ ಜಾಹೀರಾತುದಾರರು ಉದ್ದಿಮೆದಾರರಿಗೆ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟನೆಗೆ ಅನುಕೂಲ ಮಾಡಿಕೊಡಲು ಈ ಸಂಸ್ಥೆ ಹುಟ್ಟಿತು. ಸಂಸ್ಥೆಯ ಸದಸ್ಯ–ಪತ್ರಿಕೆಯ ನಿಜವಾದ ಪ್ರಸಾರ ಸಂಖ್ಯೆಯನ್ನು, ಸಮಾಜದಲ್ಲಿ ಪತ್ರಿಕೆಯು ಬೆಳೆಸಿಕೊಂಡ ಪ್ರಭಾವವನ್ನು ಪ್ರತಿಬಿಂಬಿಸುವದು ಸಂಸ್ಥೆಯ ಪ್ರಮುಖ ಧೋರಣೆ. ಅದರಂತೆ ಸದಸ್ಯ–ಪತ್ರಿಕೆಗಳಿಗೆ ಜಾಹೀರಾತು ಸಂಸ್ಥೆಗಳ ಹಾಗೂ ಉದ್ದಿಮೆ ವ್ಯವಸಾಯ ಸಂಸ್ಥೆಗಳ ಸದಸ್ಯರ ಸಹಕಾರ ಕಲ್ಪಿಸುವದು ಮತ್ತು ತನ್ನ ಎಲ್ಲ ಸದಸ್ಯರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಿ ಸಮಸ್ಯೆಗಳನ್ನು ಬಗೆಹರಿಸುವತ್ತ ಪ್ರಯತ್ನಿಸುವದು, ಸಹಕಾರದೊಂದಿಗೆ ಈ ದಿಸೆಯಲ್ಲಿ ಏಜೆನ್ಸಿ ಸದಸ್ಯರಿಗೆ ಅನುಕೂಲಗಳನ್ನು ಉಂಟು ಮಾಡುವದು ಈ ಸಂಸ್ಥೆಯ ಇತರ ಉದ್ದೇಶಗಳು.

ಈ ಸಂಸ್ಥೆಯ ಕಾರ್ಯಕಾರಿ ಮಂಡಳಿಯಲ್ಲಿ ಎಂಟು ಸದಸ್ಯರು ಪತ್ರಿಕಾ ವ್ಯವಸಾಯವನ್ನು ಪ್ರತಿನಿಧಿಸಿದರೆ ನಾಲ್ಕು ಸದಸ್ಯರು ಜಾಹೀರಾತುದಾರರನ್ನು, ಮತ್ತು ನಾಲ್ವರು ಜಾಹೀರಾತು ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ. ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ, ಒಬ್ಬ ಗೌರವ ಕಾರ್ಯದರ್ಶಿ ಮತ್ತು ಒಬ್ಬ ಗೌರವ ಖಜಾಂಚಿ, ಹನ್ನೆರಡು ಜನ ಸದಸ್ಯರು–ಇದು ಬ್ಯೂರೋದ ಕಾರ್ಯಕಾರಿ ಮಂಡಳಿ. ರಾಷ್ಟ್ರದ ಸುಮಾರು ೨೫೧ ಪ್ರಮುಖ ಪತ್ರಿಕೆಗಳು ಹಾಗೂ ೨೬೪ ಪ್ರಮುಖ ಜಾಹೀರಾತು ಸಂಸ್ಥೆಗಳು, ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಶನ್ ಸಂಸ್ಥೆಯ ಸದಸ್ಯತ್ವ ಪಡೆದಿವೆ. ಭಾರತೀಯ ದಿನಪತ್ರಿಕೆಗಳ ಸುಮಾರು ೭೩% ರಷ್ಟು ಪ್ರಸಾರ ಸಂಖ್ಯೆಯನ್ನು ಈ ಸಂಸ್ಥೆ ಪ್ರತಿನಿಧಿಸುತ್ತಿದೆ.

ರಾಷ್ಟ್ರದ ಸುಪ್ರಸಿದ್ಧ ಚಾರ್ಟರ್ಡ್ ಅಕೌಂಟಂಟ್ ಸಂಸ್ಥೆಗಳ ಸಹಾಯದಿಂದ ಒಂದು ಸಮಗ್ರ ರೂಪದ ಆಡಿಟ್ ಪದ್ಧತಿಯನ್ನು ರೂಪಿಸಿದೆ. ಪ್ರತಿ ಸದಸ್ಯ– ಪತ್ರಿಕೆಯು ತಾನು ಬೇಕಾದ ಮಾಹಿತಿಯ ಸರ್ಟಿಫಿಕೇಟಿನ ಪ್ರಮಾಣ, ಪ್ರತಿಗಳ ವಿತರಣೆ, ಮುದ್ರಣ ಸಂಖ್ಯೆ ಹಾಗೂ ಲೆಕ್ಕಪತ್ರಗಳ ಹೊಂದಾಣಿಕೆ ಇತ್ಯಾದಿ ವಿವರಗಳನ್ನು ನಿಯಮಿತವಾಗಿ ಅಧಿಕೃತ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಫಾರಂಗಳಲ್ಲಿ ನಮೂದಿಸುವುದು ಅವಶ್ಯ. ಸದಸ್ಯತ್ವಕ್ಕೆ ಬಂಧನವಿರದಿದ್ದರೂ ಸದಸ್ಯತ್ವ ಪಡೆದ ನಂತರ ಪತ್ರಿಕೆಯು ಕೆಲವು ದಾಖಲೆಗಳನ್ನು ಕ್ರಮಬದ್ಧ ರೀತಿಯಲ್ಲಿ ಇಡುವದು ಅವಶ್ಯವಿದೆ. ಪ್ರತಿ ಆರು ತಿಂಗಳಿಗೊಮ್ಮೆ ಪತ್ರಿಕೆಯ ದಾಖಲೆಗಳು ಮತ್ತು ಪರೀಕ್ಷಕರು ಪರಿಶೀಲಿಸಲು ಸ್ಥಳೀಯ ಚಾರ್ಟರ್ಡ್ ಸಂಸ್ಥೆಯನ್ನು ನಿಯಮಿಸಲಾಗುತ್ತದೆ. ಪತ್ರಿಕೆಗಳು ಲೆಕ್ಕ ಪತ್ರಗಳನ್ನು ಮತ್ತು ಗೊತ್ತುಪಡಿಸಿದ ಫಾರಂಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಷ್ಕರಿಸಿದ ನಂತರ ಚಾರ್ಟರ್ಡ್ ಅಕೌಂಟಂಟ್ ಸಂಸ್ಥೆಯು ವರದಿಯನ್ನು ಆಡಿಟ್ ಬ್ಯೂರೋಗೆ ಕಳುಹಿಸುತ್ತದೆ. ಆ ವರದಿಯ ಆಧಾರದ ಮೇಲೆ ಸಂಸ್ಥೆಯು ಆ ಪತ್ರಿಕೆಯ ಪ್ರಸಾರ ಸಂಖ್ಯೆಯ ಸರ್ಟಿಫಿಕೇಟ್ ನೀಡುತ್ತದೆ. ಕೇವಲ ಸ್ಥಳೀಯ ಚಾರ್ಟರ್ಡ್ ಅಕೌಂಟಂಟ್ ವರದಿಯನ್ನು ನಂಬಿ ಕೊಳ್ಳದೇ ಆಗಾಗ ಆಡಿಟ್ ಬ್ಯೂರೋದ ಕೇಂದ್ರ ಸಮಿತಿಯು ಚಾರ್ಟರ್ಡ್ ಅಕೌಂಟಂಟ್ ಸಲಹಾ ಸಮಿತಿಯೂ ಆಕಸ್ಮಿಕ ಭೆಟ್ಟಿಯಿಂದ ಪತ್ರಿಕೆಯ ಪ್ರಸಾರವನ್ನು ಖಚಿತಪಡಿಸುವದುಂಟು.

ಹೀಗಾಗಿ ಅಸತ್ಯ ಲೆಕ್ಕಪತ್ರ ಅಸತ್ಯ ಕ್ರಮಗಳಿಗೆ ಇಲ್ಲಿ ಅವಕಾಶ ಕಡಿಮೆ. ಇಷ್ಟೇ ಅಲ್ಲದೇ ಪ್ರತಿ ನಾಲ್ಕು ವರುಷಗಳಿಗೊಂದು ಸಲ ಪತ್ರಿಕೆಗಳು ಪ್ರಸಾರ ಸಂಖ್ಯೆಯನ್ನು ಪುನಃ ಪರಿಷ್ಕರಿಸುವ ಪದ್ಧತಿಯಿದೆ. ಲೆಕ್ಕ ಪತ್ರಗಳನ್ನು ಹಾಗೂ ವಿಧಾನಗಳನ್ನು ಪರಿಶೀಲಿಸಲು, ಪರೀಕ್ಷಿಸಲು ಮತ್ತು ಪರಿಷ್ಕರಿಸಲು ರಾಷ್ಟ್ರದ ಮೇಧಾವೀ ಹಾಗೂ ಪ್ರತಿಭಾವಂತ ಚಾರ್ಟರ್ಡ್ ಅಕೌಂಟಂಟ್ ಸಂಸ್ಥೆಗಳನ್ನು ಈ ಸಂಸ್ಥೆ ನಿಯಮಿಸಿದರೂ ಅವುಗಳು ಈ ಸಂಸ್ಥೆಯ ಅಧೀನದಲ್ಲಿರದೇ ಪ್ರತ್ಯೇಕವಾಗಿ ಕೆಲಸ ಮಾಡಿ ವರದಿ ನೀಡಲು ಅವಕಾಶವಿದೆ. ಪತ್ರಿಕೆಗಳು ನಿಜವಾದ ಪ್ರಸಾರ ಸಂಖ್ಯೆಯನ್ನು ಖಚಿತಪಡಿಸಿ ಪ್ರಸಿದ್ಧಿಸುವ ವಿಧಾನ

ವಲ್ಲಿ ಸಂಸ್ಥೆಯು ತುಂಬ ದಕ್ಷತೆ ಹಾಗೂ ಜಾಗ್ರತೆ ವಹಿಸುವದುಂಟು.

ಭಾರತದ ಎಲ್ಲ ಪತ್ರಿಕೆಗಳೂ ಸಂಸ್ಥೆಯ ಸದಸ್ಯರಾಗಬೇಕೆಂಬ ಉದ್ದೇಶದಿಂದ ಹದಿನೈದು ಸಾವಿರ ಪ್ರಸಾರ ಸಂಖ್ಯೆಗೆ ಕಡಿಮೆಯಿರುವ ಪತ್ರಿಕೆಗಳಿಗೆ ವಿಶೇಷ ರಿಯಾಯತಿ ನೀಡುವಲ್ಲಿ ಸಂಸ್ಥೆ ಮುಂದಾಗಿದೆ. ಭಾರತದ ಪ್ರಮುಖ ಉದ್ದಿಮೆ ಸಂಸ್ಥೆಗಳು, ವ್ಯವಸಾಯ ಸಂಸ್ಥೆಗಳು ವಾಣಿಜ್ಯ ಸಂಸ್ಥೆಗಳು 'ಏಬಿಸಿ' ಸದಸ್ಯತ್ವ ಹೊಂದಿವೆ. ಅನೇಕ ಪ್ರಮುಖ ಜಾಹೀರಾತು ಸಂಸ್ಥೆಗಳು 'ಏಬಿಸಿ' ಪ್ರಕಟಿಸುವ ವರದಿಗಳ ಆಧಾರದ ಮೇಲೆ ಜಾಹೀರಾತು ನೀತಿಯನ್ನು ರೂಪಿಸುವದುಂಟು. ತನ್ನ ಸದಸ್ಯ- ಪತ್ರಿಕೆಗಳ ಬಜೆಟ್ ಪ್ರಸಾರ ಸಂಖ್ಯೆಯ ವರದಿ ಅಧಿಕೃತ ವರದಿ. ಇದನ್ನು ಎಲ್ಲರೂ ಗುರುತಿಸಿದ್ದಾರೆ. ಮನ್ನಣೆ ನೀಡಿದ್ದಾರೆ. ಕರ್ನಾಟಕ ಗುಜರಾತ ತಮಿಳುನಾಡು ಕೇರಳ ಆಂಧ್ರ ಪ್ರದೇಶ ಉತ್ತರ ಪ್ರದೇಶ ರಾಜ್ಯ ಸರಕಾರಗಳ ಪ್ರಚಾರ ಇಲಾಖೆಗಳು ಈ ಸಂಸ್ಥೆಯ ನೆರವು ಪಡೆದು ತಮ್ಮ ಜಾಹೀರಾತು ನೀತಿಯನ್ನು ಪ್ರಸಿದ್ಧಗೊಳಿಸುತ್ತವೆ.

ಈ 'ಏಬಿಸಿ' ಅಂತಾರಾಷ್ಟ್ರೀಯ ಸಂಸ್ಥೆಗಳ ಸ್ಥಾಪಕ ಸದಸ್ಯತ್ವವನ್ನೂ ಹೊಂದಿದೆ. ಇಂಗ್ಲಂಡ್ ಅಮೇರಿಕ, ಫ್ರಾನ್ಸ್, ಜಪಾನ್, ಜರ್ಮನಿ ಮುಂತಾದ ಮುಂದುವರಿದ ರಾಷ್ಟ್ರಗಳ ಆಡಿಟ್ ಬ್ಯೂರೋಗಳೊಂದಿಗೂ ಸಂಸ್ಥೆ ಸಂಪರ್ಕ ಪಡೆದಿದೆ.

ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಇನ್ ಇಂಡಿಯಾ ಎನ್ನುವುದು ಕೇಂದ್ರ ಸರಕಾರದ ಪತ್ರಿಕಾ ಪ್ರಸಾರ ಪರಿಶೀಲನೆಯ ಒಂದು ಹಿರಿಯ ಸಂಸ್ಥೆ. ಸಾವಿರಾರು ಪತ್ರಿಕೆಗಳ ಪ್ರಸಾರವನ್ನು ಪರಿಶೀಲಿಸಿ ಪ್ರತಿ ವರುಷ ಪ್ರಸಾರ ಸಂಖ್ಯೆಯನ್ನು ಪ್ರಕಟಿಸುವ ಅಧಿಕಾರ ಈ ಸಂಸ್ಥೆಗಿದೆ. ಹಲವು ಸಾರಿ ಈ ಸಂಸ್ಥೆಯು 'ಏಬಿಸಿ' ಸಂಸ್ಥೆಯ ವರದಿಗಳ ಸಹಾಯ ಕೋರುವುದುಂಟು.



ಈ ಮಹತ್ವದ ಸಂಸ್ಥೆಯ ಅಧ್ಯಕ್ಷ ಪದವಿಯನ್ನು ಕಳೆದ ವರುಷ ಮುಂಬಯಿ ಮಹಾನಗರದ ಹಿರಿಯ ಕನ್ನಡಿಗರೂ ಕರ್ನಾಟಕ ಸಂಘದ ಅಧ್ಯಕ್ಷರೂ ಆದ ಶ್ರೀ. ವರದರಾಜ ಆದ್ಯರು ಪಡೆದರು. ಈ ವರುಷ ಶ್ರೀ ಡಿ. ಕೆ. ರಾಯನ್ ಅವರು ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ.

ಬಹ್ವಂಶ ಭಾರತೀಯ ದಿನಪತ್ರಿಕೆಗಳ ಪ್ರಸಾರ ಸಂಖ್ಯೆಯನ್ನು ಈ ಸಂಸ್ಥೆ ಪ್ರತಿನಿಧಿಸುತ್ತಿದ್ದರೂ ಬಹು ಪ್ರಮಾಣದಲ್ಲಿ ಚಿಕ್ಕ ಪತ್ರಿಕೆಗಳು ಈ ಸಂಸ್ಥೆಯ ಸದಸ್ಯತ್ವ ಪಡೆದಿಲ್ಲ. ಇದಕ್ಕೆ ಕಾರಣವೆಂದರೆ ಸಂಸ್ಥೆಯು ಅತಿ ಕಠಿಣವೆನಿಸುವ ಕಟ್ಟುನಿಟ್ಟುಗಳನ್ನು ಪಾಲಿಸುವಲ್ಲಿ ನಿಗದಿಪಡಿಸಿದ ಕ್ರಮದಲ್ಲಿ ಲೆಕ್ಕಪತ್ರಗಳನ್ನು ಇರಿಸುವಲ್ಲಿ ಚಿಕ್ಕ ಪತ್ರಿಕೆಗಳು ಆರ್ಥಿಕ ದೌರ್ಬಲ್ಯದಿಂದಾಗಿ ಅಸಮರ್ಥವಾಗಿವೆ. ಸಂಸ್ಥೆಯ ಸದಸ್ಯತ್ವ ಪಡೆದ ಮೇಲೂ ಜಾಹೀರಾತು ದೊರಕುವ ಪ್ರಮಾಣ ಅವಕಾಶದಲ್ಲಿ ಹೆಚ್ಚಳ ಕಂಡುಬರುವ ಲಕ್ಷಣಗಳಿಲ್ಲ ಎಂಬುದು ಕೆಲವು ಪತ್ರಿಕೆಗಳ ವಾದಸರಣಿಯಾಗಿದೆ. 'ಎಬಿಸಿ'ಯಿಂದ ಕೇವಲ ಹಿರಿಯ ಪತ್ರಿಕೆಗಳು ಲಾಭ ಪಡೆದಿವೆ ಎಂಬ ಟೀಕೆಯೂ ಇದೆ. ಬೆರಳೆಣಿಕೆಯಷ್ಟು ಕನ್ನಡ ಪತ್ರಿಕೆಗಳು ಮಾತ್ರ ಈ ಸಂಸ್ಥೆಯ ಸದಸ್ಯತ್ವ ಪಡೆದಿವೆ. ('ಕಸ್ತೂರಿ' ಈ ಸಂಸ್ಥೆಯ ಸದಸ್ಯ–ಪತ್ರಿಕೆ.) ಒಟ್ಟಿನಲ್ಲಿ ಭಾರತದಲ್ಲಿ ದಿನಪತ್ರಿಕೆಗಳೇ 'ಎಬಿಸಿ' ಸಂಸ್ಥೆಯ ಸದಸ್ಯತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿವೆ. ವಾರಪತ್ರಿಕೆಗಳ, ಪಾಕ್ಷಿಕ ಹಾಗೂ ಮಾಸಪತ್ರಿಕೆಗಳ ಸಂಖ್ಯೆ ಕಡಿಮೆ.

ಜಾಹೀರಾತು ಮಾಧ್ಯಮದಲ್ಲಿ ಈಗ ದೊಡ್ಡ ಕ್ರಾಂತಿಯೇ ನಡೆಯುತ್ತಿದೆ. ಆಕಾಶವಾಣಿಯೊಂದಿಗೆ ಈಗ ದೂರದರ್ಶನವೂ ಒಂದು ಪ್ರಮುಖ ಜಾಹೀರಾತು ಮಾಧ್ಯಮವೆನಿಸಿದೆ. ದೂರದರ್ಶನದ ಜಾಹೀರಾತು ವೆಚ್ಚ ಹೆಚ್ಚೆನಿಸಿದರೂ ಅದು ಬೀರುವ ಪ್ರಭಾವದ ಪರಿಣಾಮವೂ ಪ್ರಬಲ. ಹೀಗಾಗಿ ಪತ್ರಿಕಾ ಜಾಹೀರಾತುಗಳ ಮಾಧ್ಯಮಕ್ಕೆ ಇದು ಪ್ರಮುಖ ಪ್ರತಿಸ್ಪರ್ಧಿಯೂ ಹೌದು. ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳ ವೆಚ್ಚ ಹೆಚ್ಚಾದ ಪ್ರಮಾಣದಲ್ಲಿ ಪತ್ರಿಕೆಯ ಪ್ರಸಾರದಲ್ಲಿ ಹಾಗೂ ಓದುಗರ ಮೇಲೆ ಜಾಹೀರಾತು ಬೀರುವ ಪ್ರಮಾಣ ಹೆಚ್ಚಾಗಿಲ್ಲ. ಹಲವು ಪತ್ರಿಕೆಗಳು ಹುಟ್ಟಿಕೊಳ್ಳುವ ಆರಂಭದಲ್ಲಿಯೇ ಕಣ್ಣು ಮುಚ್ಚಿಕೊಳ್ಳುತ್ತವೆ. ರಾಷ್ಟ್ರದಲ್ಲಿ ಸಾಕ್ಷರತಾ ಪ್ರಮಾಣ ಗಣನೀಯವಾಗಿ ನಡೆದಿಲ್ಲ. ಒಟ್ಟಿನಲ್ಲಿ ಪ್ರಸಾರ ಹೆಚ್ಚಿಸಿದರೂ ಪತ್ರಿಕೆಗಳ ಪ್ರಸಾರದಲ್ಲಿ ದೊಡ್ಡ ಬದಲಾವಣೆ ಕಂಡುಬಂದಿಲ್ಲ. ಹೀಗಾಗಿ ಪತ್ರಿಕೆಗಳ ಜಾಹೀರಾತು ಮಾಧ್ಯಮ ಇನ್ನೂ ಗಟ್ಟಿಯಾಗಿ ನಿಂತು ಆಕಾಶವಾಣಿ, ದೂರದರ್ಶನ ಚಲನಚಿತ್ರ ಜಾಹೀರಾತು ಪ್ರದರ್ಶನ. ಮುಂತಾದ ಭರದಿಂದ ಬೆಳೆಯುತ್ತಿರುವ ಜಾಹೀರಾತು ಮಾಧ್ಯಮಗಳ ಪ್ರಭಾವವನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ಅದಕ್ಕೆ ಬಂದಿಲ್ಲ.

ಇದು ಅತ್ಯಂತ ಪ್ರಮುಖವಾದ ಸಂಸ್ಥೆಯೇನೋ ನಿಜ. ಪತ್ರಿಕಾ ಜಾಹೀರಾತು ಮಾಧ್ಯಮದ ಪ್ರಮುಖ ಪರುಷ ಓಲಿಯೂ ಹೌದು. ಆದರೆ ಕೆಲವೇ ಹಿರಿಯ ಪತ್ರಿಕೆಗಳ ಜಾಹೀರಾತು ಸಂಸ್ಥೆಗಳು ಹಾಗೂ ಉದ್ಯಮ ವಾಣಿಜ್ಯ ವ್ಯವಹಾರ ಸಂಸ್ಥೆಗಳ ಸದಸ್ಯತ್ವದ ಬಲದೊಂದಿಗೆ ಅದು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ರಾಷ್ಟ್ರದಲ್ಲಿ ಎಲ್ಲ ಚಿಕ್ಕಪುಟ್ಟ ಹಿರಿಯ ಪತ್ರಿಕೆಗಳು, ಜಾಹೀರಾತು ಸಂಸ್ಥೆಗಳು ಉದ್ಯಮಗಳು ವ್ಯವಹಾರಗಳು ಈ ಸಂಸ್ಥೆಯ ಸದಸ್ಯತ್ವ ಹೊಂದಿ ಪತ್ರಿಕಾ ಜಾಹೀರಾತು ಮಾಧ್ಯಮವನ್ನು ವಿಕಾಸಗೊಳಿಸುವ ಪ್ರಯತ್ನ ವಿಧಾನ ರೀತಿ–ನೀತಿಗಳನ್ನು ಸಂಸ್ಥೆ ರೂಪಿಸಿಕೊಳ್ಳುವದು ಲೇಸು.

★



ಡಾ. ಶ್ರೀನಿವಾಸ ಹಾವನೂರ

ಕನ್ನಡದಲ್ಲಿ ಹನಿಗತೆಗಳು

'ಅಲ್ಪಾಕ್ಷರ ರಮಣೀಯಂ ಯಃ ಕಥಯತಿ ಖಲು ವಾಗ್ಮೀ'

ಸಣ್ಣ ಕತೆಗಳು ನಮಗೆ ಗೊತ್ತಿದ್ದ ವಿಷಯ. ಅವಕ್ಕಿಂತಲೂ ಸಣ್ಣದಾದ ಕತೆಗಳು? ನಮ್ಮ ಸಾಹಿತ್ಯದಲ್ಲಿ ಇದೊಂದು ಹೊಸ ಸಸಿ. ಇದನ್ನು ನೆಟ್ಟು ಐವತ್ತು ವರ್ಷಗಳಾದರೂ ನಾಮಕರಣವೇ ಆಗಿಲ್ಲ! ಹೆಸರಿರದ ಮಗುವಿಗೆ ಬೇಬಿ, ಅಪ್ಪಚ್ಚಿ ಎಂದ ಹಾಗೆ ಇಂಥ ಸಣ್ಣದಾದ ಕತೆಗಳಿಗೆ ಲಘು ಕತೆ, ಕಿರುಕತೆ, ನಿಮಿಷದ ಕತೆ, ಪೋಸ್ಟ್ ಕಾರ್ಡಿನ ಕತೆ ಎಂದು ತಮತಮಗೆ ಕಂಡಂತೆ ಕರೆದರು. ಈ ಸಸಿಯನ್ನು ಮೊದಲಿಗೆ ನೆಟ್ಟವರು ರಾಜರತ್ನಂ, 'ಹನಿಗಳು' ಎಂಬ ಸಂಗ್ರಹದ ಮೂಲಕ (೧೯೩೩). ತುಂಬಾ ಅರ್ಥವತ್ತಾದ ಹೆಸರು. ಈ ಬಗೆಯ ಕತೆಗಳಿಗೆ ಜೀವನ ಪ್ರವಾಹದ ಒಂದು ಹನಿಯ ಸ್ವರೂಪವಿದೆ, ನೀರ ಹನಿಯಂತೆಯೇ ಚೆಲುವಾದ ಮಾಟವಿದೆ, ಹೊಳಪು ಇದೆ. ಇದು ತಂಪನ್ನು ಕೊಡಬಲ್ಲದು. ಕಣ್ಣೀರ ಹನಿಯೂ ಆಗಬಹುದು. ಮತ್ತೊಮ್ಮೆ ಅಮೃತದ ಬಿಂದುವಿನಂತೆ ಚೇತೋಹಾರಿಯೆನಿಸಬಹುದು. ಹೇಗೂ ರಾಜರತ್ನಂ ಈ ಹೊಸ ಪ್ರಕಾರದ ಕತೆಗಳನ್ನು 'ಹನಿಗಳು' ಎಂದು ಹೆಸರಿಸಿ ಆರಂಭಿಸಿದರು. ಆದ್ದರಿಂದ ಇನ್ನು ಮೇಲೆ ಈ ಬಗೆಯ ಕತೆಗಳನ್ನು **ಹನಿಗತೆಗಳು** ಎಂದೇ ಕರೆಯೋಣ*

ಇದು ಇಪ್ಪತ್ತನೆಯ ಶತಮಾನದ ಸೃಷ್ಟಿಯಾದರೂ, ನಮ್ಮ ಪಂಚತಂತ್ರ, ಜಾತಕ, ಉಪನಿಷತ್ತುಗಳಲ್ಲಿ ಕಾಣಿಸಿಕೊಂಡಿದ್ದೇ ಇದೆ. (ಹಾಗೆ ನೋಡಿದರೆ ಆ ಕೃತಿಗಳಲ್ಲಿ ಹೆಚ್ಚಿನವು ಸಣ್ಣಕತೆಗಳಲ್ಲ; ಹನಿಗತೆಗಳೇ) ಆದರೆ ಈ ಹಳೆಯ ಕತೆಗಳಲ್ಲಿ ನೀತಿತತ್ವಗಳಿಗೇ ಪ್ರಾಧಾನ್ಯ. ಗಾತ್ರವೊಂದರಲ್ಲಿ ಇವೆರಡು ಪ್ರಕಾರಗಳಲ್ಲಿ ಸಾಮ್ಯವು ಕಂಡುಬರುವುದು. ಇಪ್ಪತ್ತನೆಯ ಶತಮಾನದ ಇಂಥ ಕತೆಗಳಲ್ಲಿ ನೀತಿಬೋಧೆ, ತತ್ವಪ್ರಣಾಳಿಗಿಂತ, ಕಲಾತ್ಮಕತೆಗೆ, ಜೀವನ ದರ್ಶನಕ್ಕೆ ಪ್ರಾಧಾನ್ಯ ಬಂದು ವಿಶಿಷ್ಟ ಸ್ವರೂಪವನ್ನು ಪಡೆದಿದೆ.

* ಇಂಗ್ಲಿಶನಲ್ಲಿ ಇದು short short story, ಮರಾಠಿಯಲ್ಲಿ ಲಘೂತ್ತಮ ಕಥಾ, ಹಿಂದಿಯಲ್ಲಿ ಸಣ್ಣ ಕತೆಗೆ ಬರಿ ಕಥಾ ಎಂದೇ ಇದ್ದು ಇಂಥ ಸಣ್ಣದಾದ ಕತೆಗಳನ್ನು ಅವರು ಲಘು ಕಥಾ ಎಂದು ಕರೆಯುತ್ತಾರೆ.

ಇದರ ಉಗಮವೆಲ್ಲಿ? ನಮ್ಮ ಸಣ್ಣಕತೆಯಂತೆ ಇದಾದರೂ ಪಾಶ್ಚಾತ್ಯ ದೇಶದಿಂದ ಬಂದುದು. ಲಿಬರ್ಟಿ, ಪಾಸಿಂಗ್ ಶೋ, ಕಾಲಿಯರ್ಸ್ ಮುಂತಾದ ಪತ್ರಿಕೆಗಳು ಇಂಥವನ್ನು ಪ್ರಕಟಿಸುತ್ತ ಬಂದವು. ಎಂಬ್ರೂಸ್ ಬಾಯರ್ಸ್, ಒಲಿವರ್ ಹಿನ್ನರ್ ಮೊದಲಾದವರ ಹೆಸರು ಈ ದಿಶೆಯಲ್ಲಿ ಕೇಳಬಂದವು. ಖಲೀಲ ಜಿಬ್ರಾನನ ರೂಪಕ ಕಥೆಗಳಾದರೂ ಇದೇ ಮಾದರಿಯವು. ನಮ್ಮ ನೆರೆಯ ಮರಾಠಿಯಲ್ಲಿ ವಿ.ಸ.ಖಾಂಡೇಕರ್ ಮತ್ತು ಹಿಂದೀಯಲ್ಲಿ ಸುದರ್ಶನರು ಇಂಥ ಹನಿಗತೆಗಳನ್ನು ಆಗೀಗ ಬರೆದಿದ್ದಾರೆ.

ಹನಿಗತೆಗಳ ಸ್ವರೂಪ, ಲಕ್ಷಣವನ್ನು ವಿವರಿಸುವ ಮುನ್ನ ಮಾದರಿಯೆಂದು ಬಾಯರ್ಸರ ಕತೆಯೊಂದನ್ನು ಇಲ್ಲಿ ಕೊಟ್ಟಿದೆ.

"ಒಂದು ಸಲ ಸಿಂಹದ ಕೈಯಲ್ಲಿ ಇಲಿಯೊಂದು ಸಿಕ್ಕಿಕೊಂಡಿತು. ಇಲಿ, 'ನನ್ನನ್ನೀಗ ಬದುಕಿಸಿದರೆ ನಾನೂ ನಿನಗೆ ಉಪಕಾರ ಮಾಡುವ ಪ್ರಸಂಗ ಬಂದೀತು' ಎಂದಿತು. 'ಏನೋ ಸಣ್ಣ ಪ್ರಾಣಿ. ಇದನ್ನು ತಿಂದು ನನ್ನ ಹೊಟ್ಟೆ ಅದೆಷ್ಟು ತುಂಬೀತು.' ಎಂದು ಯೋಚಿಸಿ, ಸಿಂಹವು 'ಹೋಗಲಿ ಪಾಪ' ಎಂದು ಇಲಿಯನ್ನು ಬಿಟ್ಟಿತು.

ಕೆಲವು ದಿನಗಳ ಅನಂತರ, ಬೇಡನೊಬ್ಬನ ಬಲೆಯಲ್ಲಿ ಆ ಸಿಂಹವು ಸಿಕ್ಕಿಕೊಳ್ಳುವ ದುರ್ಧರ ಪ್ರಸಂಗ ಒದಗಿತು. ಅಲ್ಲಿಯೆ ಹಾದು ಹೋಗುತ್ತಿದ್ದ ಇಲಿಯು, ಎಲ್ಲೋ ಪರಿಚಯದ ಮುಖ ಕಂಡಂತಾಗಿ, ಬಳಿಗೆ ಬಂದಿತು. ಆಗ ಸಿಂಹವು ತಾನು ಅದಕ್ಕೆ ಮಾಡಿದ ಉಪಕಾರವನ್ನು ಗಮನಕ್ಕೆ ತಂದುಕೊಟ್ಟು. 'ಅಯ್ಯಾ, ಈ ಬಲೆಯ ಎಳೆಗಳನ್ನು ಕಡಿದು ನನ್ನನ್ನು ಮುಕ್ತ ಮಾಡುವಿಯಾ?' ಎಂದು ಅಂಗಲಾಚಿತು – ತಾನು ವನರಾಜನೆಂಬುದನ್ನು ಮರೆತು. ಸಿಂಹವು ಬಲೆಯಲ್ಲಿ ಸಿಕ್ಕಿಬಿದ್ದುದನ್ನು ಖಾತ್ರಿ ಮಾಡಿಕೊಂಡು ಇಲಿಯು ಹಿಂದಿನಿಂದ ಬಂದು ಅದರ ಬಾಲವನ್ನು ಕಡಿಯತೊಡಗಿತು!"

ಇಲಿ–ಸಿಂಹದ ಕತೆ ಜಗತ್ತಿನಲ್ಲೇ ಪರಿಚಿತವಾದದ್ದು. ಆದರೆ ಈ ಹನಿಗತೆಯಲ್ಲಿ, ಅದು ನಮ್ಮ ಇಂದಿನ ಜೀವನದ ಒಂದು ಬಗೆಯನ್ನು, ನಮ್ಮ ಮನೋವರ್ತನೆಯನ್ನು ಚಿತ್ರಿಸಲು ಹೇಗೆ ಮಾರ್ಪಟ್ಟಿದೆಯೆಂಬುದನ್ನು ಗಮನಿಸಬೇಕು.

ಹನಿಗತೆಗೆ ಇಂದಿನ ಸಣ್ಣಕತೆಯ ತಂದೆಯೆನ್ನಿರಿ, ಬೇಕಿದ್ದರೆ ಹಿರಿಯಣ್ಣನೆನ್ನಿರಿ. ಎರಡಕ್ಕೂ ಸಾಕಷ್ಟು ಸಾಮ್ಯವಿದೆ. ಆದರೆ ಕಾದಂಬರಿಯು ಗಾತ್ರದಲ್ಲಿ ಕುಗ್ಗಿದರೆ ಸಣ್ಣಕತೆ ಹೇಗೆ ಆಗಲಾರದೋ ಹಾಗೆಯೇ ಸಣ್ಣಕತೆ ಗಾತ್ರದಲ್ಲಿ ಕಿರಿದಾದ ಮಾತ್ರಕ್ಕೆ ಅದೇನು ಹನಿಗತೆಯಾಗಲಾರದು. ಅರ್ಥಾತ್ ಗಾತ್ರವೆಂಬುದು ಬಾಹ್ಯ ಲಕ್ಷಣ ಮಾತ್ರ. ಹನಿಗತೆಗೆ ತನ್ನದೇ ಆದ ಅಂತಃಸ್ಸತ್ವವಿದೆ. ಆ ದೃಷ್ಟಿಯಿಂದ ಇದು ಭಾವಗೀತೆಗೆ ಹೆಚ್ಚು ಸಮೀಪವಾದುದು.

ಗಾತ್ರವೆಂದಾಗ, ಆರೆಂಟು ಸಾಲಿನಿಂದ ೨–೩ ಪುಟಗಳ ವರೆಗೆ ಹನಿಗತೆಯ ಹರಹು ಇರಬಹುದು. ಗಾತ್ರ ಎಷ್ಟೇ ಇರಲಿ, ಹನಿಯ ಪರಿಮಿತಿ ಒಡೆಯದೇ. ಅದು ಅಂತ್ಯದಲ್ಲಿ ಪರಿಣಾಮಕಾರಿಯಾಗಿರತಕ್ಕದು, ಅದಕ್ಕೆ ಇದೊಂದು ಮರಾಠೀ ಕತೆ ನಿದರ್ಶನವಾಗಬಲ್ಲುದು:

"ಜನಸಂದಣಿ. ಒಬ್ಬಳು ಒಯ್ಯಾರದಿಂದ ಮುಂದೆ ಸಾಗಿದ್ದಳು. ಹಿಂಭಾಗದಿಂದ ಚೆಲುವಾಗಿ ಕಂಡ ಅವಳನ್ನು ಒಬ್ಬ ಹಿಂಬಾಲಿಸಿದ. ಜನರನ್ನು ಸರಿಸಿ ಹತ್ತಿರ ಬಂದಂತೆ ತನ್ನ ವೇಗ ಹೆಚ್ಚಿಸಿದ. ಹೆಜ್ಜೆಯ ಸಪ್ಪಳ ಕೇಳಿ, ಆಕೆ ಹೊರಳಿ ನೋಡಿದಳು. 'ನೀವೇ?' ಎಂದಳು. ಆಕೆ ಆತನ ಹೆಂಡತಿಯಾಗಿದ್ದಳು!"

ಈಗ ಇಷ್ಟೇ ಚಿಕ್ಕದಾದ ಇನ್ನೊಂದು 'ಕತೆ'ಯನ್ನು ನೋಡೋಣ:

"ಹಳ್ಳಿಗೆ ಹೋಗುವ ದಾರಿಯಲ್ಲಿ ಬಸ್ಸು ಭರದಿಂದ ಹೊರಟಿತ್ತು–ಧೂಳೆಬ್ಬಿಸುತ್ತ. ದೂರದಲ್ಲಿ ಶುಭ್ರವಸ್ತ್ರ ಧರಿಸಿದ್ದ ಶಾಸ್ತ್ರಿಗಳೊಬ್ಬರು ಕೈತೋರಿಸಿದರು. ಬಸ್ಸು ತನ್ನ ವೇಗವನ್ನು ಕಡಿಮೆಗೊಳಿಸಿ, ಅವರ ಬಳಿ ನಿಂತಿತು. 'ಯಾವೂರಿಗೆ?' ಕಂಡಕ್ಟರ್ ಕೇಳಿದ. 'ಯಾವ ಊರೂ ಇಲ್ಲ. ಇನ್ನು ಹೋಗಬಹುದು,' ಎಂದರು ಶಾಸ್ತ್ರಿಗಳು. ಸಿಟ್ಟಿಗೆದ್ದ ಕಂಡಕ್ಟರ್ ಏನೇನೋ ಅಂದಾಗ ಶಾಸ್ತ್ರಿಗಳು ಮುಗುಳ್ನಕ್ಕು ತಮ್ಮ ಟಿಕ್ಕೆ ನೋಡಿಕೊಂಡರು." (ಇದುವೆ ಜೀವ ಇದು ಜೀವನ

-ಕಸ್ತೂರಿ ಫೆಬ್ರುವರಿ ೧೯೭೨ರಲ್ಲಿ ಬಂದದ್ದು.)

ಎರಡನ್ನೂ ಹನಿಗತೆಗಳೆಂದು ಕರೆಯಬಹುದಾದರೂ, ಶಾಸ್ತ್ರಿಗಳ ವೃತ್ತಾಂತದಲ್ಲಿ ಘಟನೆ ಮುಖ್ಯವಾಗಿದೆ. ಎರಡರಲ್ಲೂ ಮಾನವ ಸ್ವಭಾವದ ಚಿತ್ರಣ ಇದೆ. ಆದರೆ ಮೊದಲಿನದರಲ್ಲಿ ಅದರ ಆಳವಿದೆ, ಕಲಾವಂತಿಕೆ ಇದೆ. ಆದ್ದರಿಂದ ಆ ಕತೆ ಹನಿಗತೆಯ ವ್ಯಾಖ್ಯೆಗೆ ಹೆಚ್ಚು ಸಮೀಪವರ್ತಿಯಾಗಿದೆ.

ಮಾರ್ಚ್ ೧೯೭೫ರ ಕಸ್ತೂರಿಯಲ್ಲಿ ಇಷ್ಟೇ ಗಾತ್ರದ ಇನ್ನೊಂದು ನಿರೂಪಣೆಯಿದೆ. ಒಬ್ಬ ಕಾಲೇಜ್ ಲೆಕ್ಚರರ್ ಉಡುಪಿಯಿಂದ ಧಾರವಾಡಕ್ಕೆ ರಾತ್ರಿ ಬಸ್ಸಿಗೆ ಹೊರಟಿದ್ದಾನೆ. ಬಸ್ ಕುಮಟಾ ಮುಟ್ಟುವಾಗ ಬೆಳಕು ಹರಿದಿರಲಿಲ್ಲ. ಚಳಿ ಇದ್ದುದರಿಂದ ಮಫ್ಲರ್ ಸುತ್ತಿಕೊಂಡು ಎಸ್. ಟಿ. ಕ್ಯಾಂಟೀನಿನಲ್ಲಿ ಚಹಾ ಕುಡಿಯುತ್ತಾನೆ. ಆದರೆ ಮಾಣಿ ಬಿಲ್ ಕೊಡುವುದಿಲ್ಲ. ಬಿಲ್ ಕೇಳಿದ್ದಕ್ಕೆ "ನೀವೆಲ್ಲೋ ಈ ಲೈನಿಗೆ ಹೊಸಬರೆಂದು ಕಾಣುತ್ತೀರಿ. ಡ್ರೈವರ್-ಕಂಡಕ್ಟರರ ಕಡೆಯಿಂದಾ ನಾವು ಹಣ ಇಸಕೊಳ್ಳೊಲ್ಲ." ಎನ್ನುತ್ತಾನಂತೆ ಮಾಣಿ. ಇದೊಂದು ಶುದ್ಧ ಘಟನೆಯಲ್ಲದೆ, ಹನಿಗತೆ ಎನಿಸಿಕೊಳ್ಳುವುದಿಲ್ಲ.

ಪತ್ರಿಕೆಗಳಲ್ಲಿ ಬರುವ 'ನಗೆ ಮಲ್ಲಿಗೆ' 'ನಗೆಹನಿ' ಇವು ಕೂಡ ಗಾತ್ರದಲ್ಲಿ ಚಿಕ್ಕವೇ. ಆದರೆ ಹನಿಗತೆ ಮತ್ತು ಜೋಕುಗಳಲ್ಲಿ ಅಜಗಜಾಂತರವಿದೆ. ಹೆಚ್ಚಿನ ಜೋಕುಗಳು ಸಂಭಾಷಣಾ ರೂಪದಲ್ಲಿರುತ್ತವೆಯಷ್ಟೆ. ಹನಿಗತೆಗಳಲ್ಲಿಯೂ ಸಂಭಾಷಣೆ ಪ್ರಧಾನವಾಗಿಯೇ ಬರಬಹುದು. ಆದರೆ ಅವುಗಳ ಅಂತರವನ್ನು ಗಮನದಲ್ಲಿರಿಸಿಕೊಳ್ಳಬೇಕು.

ಇದೊಂದು ಉದಾಹರಣೆ : ಗೊಗ್ಗರ ಧ್ವನಿಯ ಹಾಡುಗಾರನೊಬ್ಬ ಹಾಡುತ್ತಿದ್ದ. ಅನೇಕರು ಎದ್ದುಹೋದರು. ಒಂದು ಮಗು ಮಾತ್ರ "ಇನ್ನಷ್ಟು ಹಾಡಿರಿ" ಎಂದಿತು. "ನಿನಗಾದರೂ ಮೆಚ್ಚಿಕೆಯಾಯಿತಲ್ಲ" ಎಂದರವರು. "ಹೌದು. ನೀವು ಹಾಡುವಾಗ ನಿಮ್ಮ ಮೀಸೆ ಕುಣಿಯುವದನ್ನು ನೋಡಲು ಬಲು ಚೆಂದ," ಎಂದಿತಂತೆ ಮಗು. ಇದು ಶುದ್ಧ ಜೋಕೇ ಸರಿ; ಹನಿಗತೆಯಲ್ಲ.

ಹನಿಗತೆಯ ಇನ್ನೊಂದು ಲಕ್ಷಣ, ಅದರ ತೀವ್ರಗತಿಯ ಓಟ. ಸಣ್ಣಕತೆಗೆ ಇರುವ ಆದಿ-ಮಧ್ಯ-ಅಂತ್ಯಗಳು ಇದರಲ್ಲಿ ಇರಬಹುದಾದರೂ ಅಂತ್ಯವೊಂದೇ ಸ್ಫುಟವಾಗಿರುತ್ತದೆ. ಅತ್ತಿತ್ತ ಸ್ವಲ್ಪವೂ ಅಲುಗದೆ ನೇರವಾಗಿ ವಿಷಯಕ್ಕೆ ಧುಮುಕಿ, ವಿಚಾರಗಳನ್ನು ಅಲ್ಪಾಕ್ಷರತ್ವದಲ್ಲಿ ಅಡಕಗೊಳಿಸಿ ಅಂತ್ಯದ ಕಡೆಗೆ ಧಾವಿಸಲಾಗುತ್ತದೆ. 'ಕಿರಿದರಲ್ಲಿ ಪಿರಿದರ್ಥ' ಎಂಬ ಕಾವ್ಯಲಕ್ಷಣ ಗದ್ಯಪ್ರಕಾರದಲ್ಲಿ ಹನಿಗತೆಗೆ ಮಾತ್ರ ಅನ್ವಯಿಸುವುದು. ಆದುದರಿಂದ ಭಾವನೆ ಅಥವಾ ಚಿತ್ರಣ ಎಷ್ಟೇ ಸುಂದರವಾಗಿ ಮತ್ತು ಸ್ವಲ್ಪದರಲ್ಲಿ ಬಂದಿದ್ದರೂ, ಹನಿಗತೆಯ ವಿಧಾನದಲ್ಲಿ ಪ್ರಯೋಜನಕ್ಕೆ ಬಾರವು. ಈ ದೃಷ್ಟಿಯಿಂದ ಆನಂದರ 'ಪಕ್ಷಿಗಾನ'ದ ಅನೇಕ ಕಥನಗಳು ಹನಿಗತೆಗಳಾಗಲಾರವು.

ಹನಿಗತೆಯು ಹೀಗೆ ತೀವ್ರಗತಿಯದಾದರೆ, ಅದರ ಕೊನೆಯು ಅನಪೇಕ್ಷಿತವಾಗುವುದು ಸಹಜವಾದದ್ದು. ಮೇಲೆ ಹೇಳಿದ, ಜನಸಂದಣಿಯ ಕತೆ ಆದರ್ಶವಾದ ಹನಿಗತೆ. ಹೀಗೆ ಅಂತ್ಯದ ಗೌಪ್ಯವು ಸ್ಫೋಟವಾಗಿ, ಓದುಗ ಮತ್ತೆ ಇಡೀ ಕತೆಯನ್ನು ನೆನೆದುಕೊಂಡು ಆದಿ-ಅಂತ್ಯಗಳನ್ನು ಸಮನ್ವಯಗೊಳಿಸಿಕೊಳ್ಳುವಂತಾದರೆ, ಅದು ಅತ್ಯುತ್ತಮ ಹನಿಗತೆಯೆನ್ನಿಸಿಕೊಳ್ಳುವುದು. ಹಾಗೆ ಇಲ್ಲದುದಕ್ಕೆ ವಿ.ಜಿ. ಭಟ್ಟರ 'ಫೋಟೋ' ಎಂಬ ಕತೆಯನ್ನು ಗಮನಿಸಬಹುದು.

"ಮಹಾರಾಣಿಯ ಎದುರಿಗೆ ಕ್ಯಾಮರಾ ಸಜ್ಜಾಗಿ ನಿಲ್ಲಿಸಿ 'ಸ್ವಲ್ಪ ಬಲಕ್ಕೆ...ಹ್ಞಾ ಸರಿ... ಸ್ಟೆಡಿ ಪ್ಲೀಜ್...ಸ್ವಲ್ಪ, ಹೀಗೆ ಇನ್ನಷ್ಟು ಕಣ್ಣೀರು, ಪ್ಲೀಜ್ ಕೊಂಚ ಜೋರಾಗೆ ಅಳಬೇಕು ಮ್ಯಾಡಮ್...ಸರಿ...ಸ್ಟೆಡಿ ಪ್ಲೀಜ್, ಒನ್... ಟೂ...ಥ್ರೀ...' ಅನ್ನಲಿಕ್ಕೂ ಮಹಾರಾಣಿಯವರು ಗೊಳೋ ಎಂದು ಅಳಲಿಕ್ಕೂ ಸರಿಯಾಯಿತು. ಫೋಟೋ ಚೆನ್ನಾಗಿ ಮೂಡಿತೆಂದು ಬಗ್ಗಿ 'ಥ್ಯಾಂಕ್‌ಯೂ' ಅಂದ ಫೋಟೋಗ್ರಾಫರ್.

ಕ್ಯಾಮೆರಾವನ್ನು ಕಟ್ಟಿಕೊಂಡು ಅವನು ಹೊರಗೆ ನಡೆದ. ತನ್ನ ಗಂಡನು [ಹಳೆಯ ಕಾಲದ ಒಬ್ಬ ಮಾಜಿ ಸಂಸ್ಥಾನಿಕ] ಸತ್ತುದಕ್ಕಾಗಿ ತನಗಾದ ದುಃಖದ ಫೋಟೋ ತೆಗೆಯಿಸಿ, ಹರಿಸಿದ ಕಂಬನಿಯನ್ನು ಒರಸಿಕೊಳ್ಳುತ್ತ ಮಹಾರಾಣಿಯವರು

ಒಳಸೇರಿದರು. ಮಹಾರಾಣಿಯ ದುಃಖದ ಪೋಜ್ ಬಹಳ ಚೆನ್ನಾಗಿ ಆಯಿತೆಂದೂ ಅದನ್ನು ಕಂಡು ತಮಗೂ ಅಳು ಬಂದಿತೆಂದೂ ಸೇವಕಿಯರು ಮಾತನಾಡಿಕೊಂಡರು."

ಇಲ್ಲಿ ಮುಖ್ಯಾಂಶ ಅನಿರೀಕ್ಷಿತವಾದುದಲ್ಲ- ಅಷ್ಟೇ ಅಲ್ಲ, ಈ ಕತೆಯಲ್ಲಿ ಇನ್ನೊಂದು ಕೊರತೆಯಿದೆ. ಅದೆಂದರೆ ಕಥಾನಕದಲ್ಲಿ ಯಾವುದೇ ಘರ್ಷಣೆ ಅಥವಾ ವಿರೋಧ (Conflict, contrast) ಇಲ್ಲದುದು. ಸಣ್ಣಕತೆಗೆ ಹೇಗೋ ಹಾಗೆಯೇ ಹನಿಗತೆಗೂ ಅದರ ಅಗತ್ಯವಿದೆ. 'ಫೋಟೋ' ಕತೆಯಲ್ಲಿ ರಾಣಿಯ ಕೃತ್ರಿಮ ಪ್ರೇಮ ಕಂಡುಬಂದಿದ್ದರೂ ರಾಜ ರಾಣಿಯರ ದಾಂಪತ್ಯದ ಅಭಾಸದ ಒಂದು ಸಣ್ಣ ನಿದರ್ಶನ ಇದ್ದಿದ್ದರೆ, ಈ ಕತೆಗೆ ಮೆರುಗು ಬರುತ್ತಿತ್ತು.

ಈ ಲಕ್ಷಣವನ್ನು ಒಳಗೊಂಡ, ಒಂದು ಪರಿಪೂರ್ಣ ಹನಿಗತೆಯೆನ್ನಬಹುದಾದ ಕತೆ ಇಲ್ಲಿದೆ:

"ಎಡಬಿಡಂಗಿ

ಜರಿ ರುಮಾಲು ರಾಮರಾಯರು ಪತ್ನೀ ಪುತ್ರ ಸಮೇತರಾಗಿ ರೈಲಿನಲ್ಲಿ ಬಿಜಯ ಮಾಡಿಸಿದ್ದರು. ಅವರು ಕುಳಿತಿದ್ದ ಗಾಡಿಯ ಬಳಿ ಕುರುಡನೊಬ್ಬನು ಬಂದು 'ಧರ್ಮ ಸೋಮಿ!' ಎಂದ. ರಾಯರು ಪಂಚೆಯ ಜರಿಯನ್ನು ತೀಡುತ್ತ, 'ಸೂ–ಮಗನೆ ಧರ್ಮವಂತೆ ಧರ್ಮ! ನಾವು ಧರ್ಮ ಎಂದು ಕೊಡುವುದು; ಈ ಸೂ- ಮಗ ಬೀಡಿ ಹೊಡೆಯುವುದು. ಏನೂ ಇಲ್ಲ ಹೋಗು.' ಎಂದು ಗದರಿಸಿದರು. 'ಒಂದು ಕಾಸು, ಸೋಮಿ' ಎಂದು ಭಿಕ್ಷುಕನು ಪುತ್ತೆ ಹಲುಬಿದನು. 'ಒಂದು ಕಾಸೂ ಇಲ್ಲ. ಆರು ಕಾಸೂ ಇಲ್ಲ! ತೊಲಗು.' ಭಿಕ್ಷುಕನು ತೊಲಗಿದನು. ರೈಲೂ ತೊಲಗಿತು. 'ಈ ಸೂ–ಮಕ್ಕಳಿಗೆ ಕೊಡುವುದಕ್ಕೇ ನಾವು ಕಷ್ಟಪಟ್ಟು ಸಂಪಾದಿಸುವುದು' ಎಂದರು ರಾಯರು.

*

'ಅಣ್ಣ, ಕಾವೇರಿ ಬಂತು ಕಾವೇರಿ' ಎಂದು ರಾಯರ ಮಕ್ಕಳೆಲ್ಲ ಕೂಗಿದರು. 'ಕಾವೇರಿಗೆ ಹಾಕುವುದಕ್ಕೆ ಕಾಸು ಎಲ್ಲಾ ಇಟ್ಟುಕೊಂಡಿದೀರಿ, ತಾನೆ?' ಎಂದು ರಾಯರು ಕೇಳಿದರು. ಕಾವೇರಿಗೆ ಕಾಸೆಸೆಯುವುದು ಕೈವಲ್ಯಕ್ಕೆ ಕಾಲುದಾಣೆ ಎಂದವರು ಕಲಿತಿದ್ದರು, ಮಕ್ಕಳಿಗೂ ಕಲಿಸಿದ್ದರು.

'ಅಣ್ಣ, ನನ್ನ ಕಾಸೆಲ್ಲೋ ಕಾಣೆ. ಅಣ್ಣಾ' ಎಂದು ರಾಯರ ಮುದ್ದಿನ ಮಗಳು ಅಳತೊಡಗಿದಳು. 'ಪರವಾ ಇಲ್ಲಮ್ಮ. ಇನ್ನೊಂದು ಕಾಸು ಕೊಡುತ್ತೇನೆ. ಅಳಬೇಡ' ಎಂದು ರಾಯರು, ಕಾವೇರಿ ಎಲ್ಲಿ ಕಳೆದು ಹೋಗುತ್ತದೆಯೊ – ಎಂದು ಅವಸರದಿಂದ ಗಣೇಶನ ಹೊಟ್ಟೆಯಂತಿದ್ದ ತಮ್ಮ ಹಣದ ಚೀಲವನ್ನು ಮಡಲಿಗೆ ಬಗ್ಗಿಸಿಕೊಂಡು ಬೆದಕಿದರು. ಅದರಲ್ಲಿ ಬೆಳ್ಳಿಯ ಎಂಟಾಣೆಗಿಂತ ಚಿಕ್ಕ ನಾಣ್ಯ ಕಣ್ಣಿಗೆ ಕಾಣಿಸಲಿಲ್ಲ. ಮತ್ತೆ ಮತ್ತೆ ಬೆದಕಿದರು. ಊಂಹು. ರಾಯರು 'ತಗೊ ತಗೊ, ಇದನ್ನೇ ಹಾಕು' ಎಂದು ಅವಸರದಲ್ಲಿ ಎಂಟಾಣೆಯ ನಾಣ್ಯವನ್ನೇ ಕಾವೇರಿಗೆ ಬಿಸಾಡಿಸಿ ಬೆಟ್ಟ ಕಡಿದವರಂತೆ ನಿಟ್ಟುಸಿರಿಟ್ಟರು.

ಆ ಚೀಲಕ್ಕೆ ಪುನಃ ಹಣವನ್ನು ತುಂಬಿಕೊಳ್ಳುವಾಗ ರೂಪಾಯಿಗಳ ಮರೆಯಿಂದ ಒಂದು ಬಿಡಿಕಾಸು ಇಣಿಕಿ, 'ನೋಡಿದೆಯಾ! ಕೊಟ್ಟೆ ನಿನಗೆ ಗೆಸ್ತು!' ಎಂದು ಕಣ್ಣು ಹಾರಿಸಿತು. (ರಾಜರತ್ನಂ: ಹನಿಗಳು.)"

ಒಂದೇ ಒಂದು ಪುಟದ ಕತೆ ಇದು. ಇದರಲ್ಲಿ ಮಧ್ಯ ಎಂಬುದು ಇಲ್ಲವೆ ಇಲ್ಲ. ನಿರೂಪಣೆ ಕೊನೆಯ ಘಟ್ಟದತ್ತ ಧಾವಿಸುತ್ತಿದೆ. ಬಿಡಿ ಕಾಸೊಂದು ಆ ರೀತಿ ಕಾಣಿಸಿಕೊಂಡ ತಿರುವಿನಿಂದಾಗಿ ನಮಗೆ ಮೋಜೆನಿಸುವುದು. ಜೊತೆಗೆ ಧರ್ಮಾಚರಣೆಯಲ್ಲಿ ಈ ಬಗೆಯ ವಿರೋಧಾಭಾಸವುಳ್ಳ ಬೇರೆ ಹಲವಾರು ರಾಮರಾಯರು ನಮ್ಮ ಮನಸ್ಸಿನಲ್ಲಿ ಸುಳಿದು ಹೋಗುವರು.

ನಮ್ಮ ಬಾಳಿನಲ್ಲಿ ಇಂಥ ವಿರೋಧಾಭಾಸಗಳು ಲೆಕ್ಕವಿಲ್ಲದಷ್ಟು. ನಾವು ಆಡುವುದೊಂದು, ಮಾಡುವುದೊಂದು. ಎಣಿಸುವುದೊಂದು; ಆಗುವುದು ಮತ್ತೊಂದು. ಹೀಗೆ ಮಾತು–ಕೃತಿ, ಅಪೇಕ್ಷೆ–ಸತ್ಯ ಸ್ಥಿತಿ ಇವುಗಳಲ್ಲಿನ ದ್ವಂದ್ವ– ವಿರೋಧಗಳು ನಮ್ಮ ಇಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಕೌಟುಂಬಿಕ – ಈ ಯಾವುದೇ ಮುಖವನ್ನು ...

ಅಪಾರವಾದ ಸಾಮಾಗ್ರಿಯನ್ನು ಒದಗಿಸಬಲ್ಲುವು.

ಅನಿರೀಕ್ಷಿತ ಮುಕ್ತಾಯ ಹನಿಗತೆಯಲ್ಲಿ ಯಾವ ಕಾಲಕ್ಕೂ ಅಪೇಕ್ಷಣೀಯ. ಆದರೆ ಹಾಗಿದ್ದರೇನೇ ಹನಿಗತೆ ಪರಿಣಾಮಕಾರಿಯಾಗು ತ್ತದೆಂದೇನಲ್ಲ. ರಾಜರತ್ನಂ ಅವರ ಅದೇ 'ಹನಿಗಳು' ಸಂಗ್ರಹದಲ್ಲಿ ಬಂದಿರುವ ಕೊನೆಯ ದನ್ನು ಆ ದೃಷ್ಟಿಯಿಂದ ಗಮನಿಸುವುದು:

"ಒಂದು ಹನಿ

ಮಹಾಸಾಗರವು ಅಸಾಧ್ಯವಾಗಿ ಘೂರ್ಣಿಸು ತ್ತಿತ್ತು. ಹತ್ತೂ ಕಡೆಗಳಿಂದ ಹೊಳೆಗಳು ಬಂದು ಸಾಗರವನ್ನು ಉಕ್ಕಿಸುತ್ತಿದ್ದುವು. ಸಾಗರಕ್ಕೆ ಹತ್ತು ಭುಜ ಬಂದಂತಿತ್ತು. ಹೀಗೆ ಮಹಾಪ್ರವಾಹಗಳು ಬಂದು ಸಂಗಮವಾಗುತ್ತಿರುವಾಗ ಮಳೆ ಮೋಡ ದಿಂದ ಒಂದು ಹನಿಯು ಜಾರಿತು. ಜಾರಿ, ತಾನು ಸೇರಲಿರುವ ಸಮುದ್ರವನ್ನೂ ಅದನ್ನು ಉಕ್ಕಿಸುತ್ತಿರುವ ಹೊನಲುಗಳನ್ನೂ ಕಂಡು ಬೆರಗಾಗಿ ತನ್ನನ್ನೂ ಅವುಗಳನ್ನೂ ತುಲನೆ ಮಾಡಿಕೊಂಡು ಸಿಗ್ಗಾಗಿ ಹಾಗೆಯೇ ನಡುದಾರಿ ಯಲ್ಲಿ ನಿಂತಿತು.

ಆದರ ತಡೆಯನ್ನು ಕಂಡು ಗಂಭೀರ ಹೃದ ಯದ ಕಡಲು ಪ್ರೀತಿಯ ನಗುವುಕ್ಕಿಸುತ್ತ 'ಬಾ! ಬಾ! ಇಷ್ಟು ಸಿಗ್ಗೇಕೆ? ನಿನ್ನಂತಹ ಹನಿಗಳು ಕೂಡಿಯೇ ಅಲ್ಲವೆ ನಾನು ಹೀಗೆ ಬೆಳೆದಿರುವುದು.' ಎಂದು ಕೈ ನೀಡಿ ಕರೆಯಿತು. ಆಗ ಹನಿಯು ಆನಂದದಿಂದ ಪರವಶವಾಗಿ ಕಣ್ಣು ಮುಚ್ಚಿಕೊಂಡು ಜಾರಿತು, ಸಾಗರವನ್ನು ಸೇರಿತು."

ಖಲೀಲ ಜಿಬ್ರಾನನ ಅನೇಕ ರೂಪಕ ಕಥೆ ಗಳನ್ನು ಈ ಮಾನದಿಂದ ಹನಿಗತೆಗಳ ಬಳಗಕ್ಕೆ ಸೇರಿಸಿಕೊಳ್ಳಬಹುದು.

ಹನಿಗತೆಯ ವಸ್ತುವಿನ ಘರ್ಷಣೆ ಅಥವಾ ನಮ್ಮ ನಡೆವಳಿಕೆಯಲ್ಲಿಯ ವಿರೋಧಾಭಾಸ ಇರಬೇಕು. ಹಾಗೆ ಬಂದಾಗ ಹಾಸ್ಯ, ವಿಡಂಬನೆ ತಂತಾನೆ ಮೂಡಿ ಬಂದು, ಹನಿಗತೆಯು ವಾಚನೀಯ ಹಾಗೂ ಮಾನನೀಯವಾಗುತ್ತದೆ. ಎಷ್ಟೋ ಹನಿಗತೆಗಳಲ್ಲಿ ವಿನೋದ – ವ್ಯಂಗ್ಯ ನಿರೂಪಣೆಯೊಡನೆ ಹಣೆದುಕೊಂಡೇ ಇರುತ್ತದೆ. ಆದ್ದರಿಂದ ದೊಡ್ಡದಾದ ಹಾಸ್ಯದ ಚುಟುಕಗಳನ್ನು ಹನಿಗತೆಗಳೆಂದು ಭ್ರಮಿಸಿಯಾರು. ಬೀಚಿ ಅವರ 'ಮಾತ್ರೆಗಳು' ಹನಿಗತೆಗಳ ಸಂಕಲನವಾಗಿದ್ದರೆ, ಅವರದೇ 'ತಿಂಮನ ತಲೆ'ಯಲ್ಲಿ ಹನಿಗತೆಗಳಿಲ್ಲ. ಹಾಸ್ಯ, ವಿಡಂಬನೆಗಳುಳ್ಳ, ನಾ. ಕಸ್ತೂರಿಯ ವರ ಕಥನಾತ್ಮಕ ಬರಹಗಳಲ್ಲಿ ಹನಿಗತೆಗಳುಳ್ಳವು ತೀರ ಕಡಿಮೆ.

ಈ ಸಾಹಿತ್ಯ ಪ್ರಕಾರದಲ್ಲಿ ವಿಡಂಬನೆ ಅದೆಂತು ವಿಜೃಂಭಿಸುವುದೆನ್ನುವದಕ್ಕೆ ವಿ.ಜಿ. ಭಟ್ಟರ ಈ ಹನಿಗತೆಯನ್ನು ನೋಡಬಹುದು!

"ಎಂಜಲು ಬೋರೆ

ಶ್ರೀರಾಮಚಂದ್ರ ದೇವರು ಶಬರಿಯು ಕೊಟ್ಟ ಎಂಜಲು ಬೋರೆಯನ್ನು ತಿಂದ ಸುದ್ದಿಯು ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತು. ಕೇಳುವದೇನು? ಬುಟ್ಟಿ ತುಂಬ ಎಂಜಲು



"ನಾವು ನೋಡೋಕೆ ಹೋಗ್ತಿರೋ ಹುಡ್ಗೀ ಕಣ್ಣು ತುಂಬ ಕಾಂತಿಯುಕ್ತವಾಗಿದೆಯಂತೆ ಅಪ್ಪಾ..."

ಬೋರೆಯನ್ನು ಹೊತ್ತುಕೊಂಡು, ಬೇಡತಿಯರ ದಂಡೇ ಅವರ ಪರ್ಣಶಾಲೆಗೆ ಬಂದು ಆ ಹಣ್ಣನ್ನು ತಿನ್ನಲು ಪ್ರಾರ್ಥಿಸಿಕೊಂಡಿತು. 'ಶಬರಿಯು ಕೊಟ್ಟದ್ದನ್ನು ಮಾತ್ರ ತಿನ್ನಬೇಕೇ?' ಎಂದವರು ಬೇಡಿಕೊಂಡರು. ಶ್ರೀರಾಮಚಂದ್ರನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಹೇಗಾದರೂ ಅವರನ್ನು ಕಳಿಸುವ ಯತ್ನ ಮಾಡಿದನು. ಆದರೆ ಬೇಡತಿಯರು ಬಿಡುತ್ತಾರೆಯೇ? 'ನೀವು ನಮ್ಮ ಕಾಣಿಕೆಯನ್ನು ಸ್ವೀಕರಿಸದಿದ್ದರೆ ಇಲ್ಲೆ ಸಾಲು ಹಿಡಿದು ಕುಳಿತು ನಿಮ್ಮ ಹೆಸರನ್ನು ಭಜಿಸುತ್ತ ಕಾಲ ಕಳೆಯುವೆವು' ಎಂದರು.

ಬೋರೆಗಳನ್ನು ಪರ್ಣಶಾಲೆಯೊಳಗೆ ಇಟ್ಟು ಹೋಗೆಂದು ಸೀತಾಪತಿಯು ಸೂಚಿಸಲು, ಒಬ್ಬೊಬ್ಬರ ಬುಟ್ಟಿಯಿಂದ ಒಂದೊಂದಾದರೂ ಬೋರೆಯನ್ನು ತಿನ್ನಲೇಬೇಕೆಂದು ಬೇಡತಿಯರು ಪಟ ಹಿಡಿದರು. ಅವರ ಸತ್ಯಾಗ್ರಹಕ್ಕೆ ಸೋತು ದಶರಥತನಯನು ಒಂದೊಂದು ಬೋರೆಯನ್ನು ತಿನ್ನಹತ್ತಿದನು. ಅದನ್ನು ಕಂಡ ಸೀತಾದೇವಿ 'ಬೇಡ' ಅಂದಳು. ಲಕ್ಷ್ಮಣನೂ ಅದೇ ಅಭಿಪ್ರಾಯ ವ್ಯಕ್ತಪಡಿಸಿದನು. ಆದರೆ ಭಕ್ತವತ್ಸಲನಾದ ರಾಮಚಂದ್ರನು ಕೇಳಲಿಲ್ಲ. ಎಲ್ಲ ಬುಟ್ಟಿಗಳಿಂದಲೂ ಒಂದೊಂದು ಎಂಜಲು ಬೋರೆಯನ್ನು ತಿಂದು ಮುಗಿಸಿದನು.

ಸಂಜೆಯ ಹೊತ್ತಿಗೆ ಶ್ರೀ ರಘುಪತಿಯ ಮುಖಕಮಲವು ತುರಿಸಹತ್ತಿತು! 'ನಾವು ಹೇಳಲಿಲ್ಲವೆ?' ಎಂದು ಸೀತಾದೇವಿಯು ಕೇಳಿದಳು. 'ಅವುಗಳನ್ನು ತಿಂದುದರಿಂದಲೇ ಹೀಗೆ ತುರಿಸುತ್ತಿದೆಯೆಂದು ನಿಮ್ಮ ಅಭಿಪ್ರಾಯವೇ? ಛೆ. ಆತ್ಮಾರ್ಪಣೆಯ ಭಾವದಿಂದ ನಿರ್ಮಲ ಹೃದಯದ ಬೇಡತಿಯರು ಕೊಟ್ಟ ಹಣ್ಣಿನಿಂದ ಇಂಥ ಅನಿಷ್ಟವಾಗಲು ಸಾಧ್ಯವೇ ಇಲ್ಲ' ಎಂದನು. ಆದರೇನು? ಮೂರು ದಿನ ಆತನ ತುಟಿಗಳು ಬಾತು ಅವುಗಳಲ್ಲಿ ಬೊಕ್ಕೆಗಳು ಕಾಣಿಸಿಕೊಂಡವು.

ಗಿಡಮೂಲಿಕೆಯನ್ನು ಅರೆಯುತ್ತ ಲಕ್ಷ್ಮಣನು ಅಂದುಕೊಂಡನು. 'ಬೇಡತಿಯರ ಹೃದಯವೇನೋ ನಿರ್ಮಲ. ಆದರೆ ಅವರ ಎಂಜಲು ಬೋರೆ? [illegible]

ನೈರ್ಮಲ್ಯಕ್ಕೆ ಹೆದರುತ್ತದೆಯೆ? ಭಾವನೆಯ ಜೊತೆಗೆ ಬುದ್ಧಿಯನ್ನು ಒಂದಿಷ್ಟು...'

ಸೀತಾಮಾತೆಯು ಈ ಪಾಠವನ್ನು ತನ್ನ ಪತಿದೇವನಿಗೆ ಇರುಳಿನಲ್ಲಿ 'ಕಾಂತಾ ಸಮ್ಮಿತತಯಾ' ತಿಳಿಸಿ ಹೇಳಿದಳು. ಅಂದಿನಿಂದ ಶ್ರೀರಾಮಚಂದ್ರದೇವರು ಭಕ್ತರ ಎಂಜಲು ಗಿಂಜಲು ತಿಂದ ಉದಾಹರಣೆ ಇಲ್ಲ."

ಕನ್ನಡದಲ್ಲಿ ಹನಿಗತೆಗಳನ್ನು ಬರೆದವರು ಯಾರು ಯಾರು? ಮೊತ್ತ ಮೊದಲಿನ ಹೆಸರು ರಾಜರತ್ನಂ ಅವರದು, ಎಂದು ಹೇಳಿಯೇ ಇದೆ. ಅವರ ಹನಿಗಳು 'ಮಾನಸ್ಸಿನ ವಿಚಿತ್ರ ವ್ಯಾಪಾರ ಚಕ್ರದಿಂದ ಹುಟ್ಟಿದವುಗಳು.' ಅವರ 'ಎಡಬಿಡಂಗಿ'ಯಲ್ಲಿ ಕಂಡುಬರುವ ಧಾರ್ಮಿಕ ವೃತ್ತಿಯ ದ್ವಂದ್ವವನ್ನು ಅವರ ಇನ್ನೂ ಹಲವು ಹನಿಗತೆಗಳಲ್ಲಿಯೂ ಕಾಣುತ್ತೇವೆ. 'ಜಮೀನುದಾರರ ಧರ್ಮ'ದಲ್ಲಿ ಒಂದಕ್ಕೆ ಯಾರೋ ಒಬ್ಬ ಪುಣ್ಯಾತ್ಮರು ದೊಡ್ಡ ಕೆರೆ ಕಟ್ಟಿಸಿ 'ಕಿರು ಗಂಟೆ' ಎಂಬ ಸಾದಾ ಹೆಸರಿಟ್ಟರು. ಆದರೆ ಜಮೀನುದಾರರೊಬ್ಬರು ಆ ಕೆರೆಗೆ ಕಲ್ಲಿನ ಗೋಡೆಯನ್ನು ಮಾತ್ರ ನಿಲ್ಲಿಸಿ, ಅಲ್ಲಿ ತಮ್ಮ ಹೆಸರನ್ನು ದೊಡ್ಡದಾಗಿ ಕೆತ್ತಿಸಿದುದರ ಪ್ರಸ್ತಾಪವಿದೆ. ಬಡವಿಯಾದ ನಿಂಗಿ ತನ್ನ ಮಗ ಕಾಲರಾದಿಂದ ತೀರಿದಾಗ ಪುರೋಹಿತರು 'ಜಾತಸ್ಯ ಮರಣಂ ಧ್ರುವಂ' ಎಂದು ಉಪದೇಶಿಸುತ್ತಾರೆ. ಮುಂದೆ ತಮ್ಮ ತಮ್ಮ ಮಗನಿಗೇ ಕಾಲರಾ ವಿಪತ್ತು ಬಂದಾಗ...? ಹಳ್ಳಿಯ ಜನರ ಮೌಢ್ಯದ ಕುರಿತ ಹನಿಗತೆಗಳೂ ಕೆಲವಿವೆ. ಯಾರಿಗಾದರೂ ಸೀನು ಬಂದರೆ 'ಶತಾಯುಸ್, ದೀರ್ಘಾಯುಸ್' ಹೇಳಬೇಕಂತೆ. ಅಂದರೆ ಆಯುಷ್ಯ ಕಡಿಮೆಯಾಗುವುದಿಲ್ಲವಂತೆ. ಸರಿ; ಆದರೆ ಮಗ ಮನೆ ಬಿಟ್ಟು ಹೊರಗೆ ಇದ್ದ ಕಾಲದಲ್ಲಿ ಸೀತರೆ? ಅವನ ಆಯುಷ್ಯ ಕಡಿಮೆಯಾಗಬಾರದೆಂದು ಮುದುಕಿಯೊಬ್ಬಳು ಸದಾ 'ಶತಾಯುಸ್, ದೀರ್ಘಾಯುಸ್' ಎಂದು ಮಟಗುಟ್ಟುತ್ತಿದ್ದುದು ಮತ್ತೊಂದು ಕತೆಯಲ್ಲಿ ಬಂದಿದೆ. 'ಆರು ದೋಸೆ, ಆರು ಇಡ್ಲಿ, ಆರು ಕಾಫಿ' ಎಂಬುದು ಘಟನಾತ್ಮಕ ಹಾಸ್ಯವುಳ್ಳ ಕತೆ [illegible]


ಯಾರಿಗೂ ಖುಶಿ. ಆದರೆ ಒಂದೇ ದಿನಕ್ಕೆ ೬ ಜನ ಸ್ನೇಹಿತರು ಹಾಗೆ ಮಾಡಿದ್ದಾವರೆ? ಅಂತೂ ತಿಂದದ್ದನ್ನು ಜೀರ್ಣಿಸಲಾರದೆ ತೂರಾಡಿಕೊಂಡು ಒಬ್ಬ ಮನೆಗೆ ಬಂದ. ಮರುದಿನ ಡಾಕ್ಟರರೂ ಬಂದು ಹೋದರು. ಅದಾಗಿ ಒಂದುದಿನ ಅವರ ಬಿಲ್ ಕೂಡಾ ಬಂದು ಹೋಯಿತು—ಅವನು ತಿಂದ ೩ × ೬ ಪದಾರ್ಥಗಳ ಬೆಲೆಗಿಂತ ಹೆಚ್ಚಾಗಿ!

ರಾಜರತ್ನಂ ತಾತ್ವಿಕ ತಳಹದಿಯುಳ್ಳ ಕತೆಗಳನ್ನೂ ಬರೆದಿದ್ದಾರೆ. ಬದುಕಿನ ಮರ್ಮ ಎಲ್ಲಿದೆ—ಎಂಬುದನ್ನು ತಿಳಿಸುವ ಒಂದು ಹನಿಗತೆಯ ಸಾರ ಹೀಗಿದೆ: "ಅನ್ನ ಕುದಿಯುತ್ತಿತ್ತು. ಕುದಿಯುತ್ತಿದ್ದ ಅಕ್ಕಿಯ ಕಾಳುಗಳು. ಉರಿಯುತ್ತಿದ್ದ ಸೌದೆಹೊಟ್ಟುಗಳಿಗೆ ಹೇಳಿದುವು: 'ನೀವೇ ತಿನಿಸಿ, ಬೆಳಿಸಿ ನಮ್ಮನ್ನು ಹೀಗೆ ಕುದಿಸುವುದು ನ್ಯಾಯವೆ?' ಅದಕ್ಕೆ ಸೌದೆ-ಹೊಟ್ಟುಗಳು ಅಂದವು: 'ನಮಗೇನು ಹೀಗೆ ಹತ್ತಿ ಉರಿಯುವುದು ಪ್ರಿಯವಾದ ಕೆಲಸವಲ್ಲ. ಇಕೋ ಇಲ್ಲಿ ಕುಳಿತಿದ್ದಾನಲ್ಲ, ಅವನದು ಈ ಕೆಲಸ.' ಈ ಸಂಭಾಷಣೆಯನ್ನು ಕೇಳಿಕೊಂಡ ಆ ವ್ಯಕ್ತಿ ಉರಿಯನ್ನು ಆರಿಸಿದ. ಅನ್ನದ ಪಾತ್ರೆಯನ್ನು ಕೆಳಗಿಳಿಸಿದ. ಕುದಿಯುವುದು ನಿಂತಿತು. ಆದರೆ ಅವನ ಹೊಟ್ಟೆ ಕುದಿಯತೊಡಗಿತು! ಆದ್ದರಿಂದ ಮತ್ತೆ ಉರಿ ಮಾಡಿದ..." 'ಹನಿಗಳು' ಹೊಸಗನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು. ಅದರಲ್ಲಿಯ ಕತೆಗಳಲ್ಲಿ ಯಾವ ಕಾಲಕ್ಕೂ ಹೊಸತನ ತೋರಿಬಂದಿತು. ದುರ್ದೈವಕ್ಕೆ ರಾಜರತ್ನಂ ಇಂಥ ಕತೆಗಳನ್ನು ಮುಂದಕ್ಕೆ ಹೆಚ್ಚಾಗಿ ಬರೆಯಲಿಲ್ಲ. ಅವರ ಪ್ರಯೋಗಶೀಲ ವೃತ್ತಿ ಬೇರೊಂದು ದಿಕ್ಕಿನಲ್ಲಿ ಹರಿದಿರಬೇಕು.

ಮುಂದೆ ಹಲವಾರು ವರ್ಷಗಳು ಸಂದ ಮೇಲೆ ಎಸ್. ಪ್ರಹ್ಲಾದರಾಯರ 'ಅವತಾರದ ಅವತಾರವಾಯಿತು (೧೯೪೬). ಅದರಲ್ಲಿ ಕೆಲವು ಮಾತ್ರ ಹನಿಗತೆಗಳೆನಿಸಿಕೊಳ್ಳಲು ಯೋಗ್ಯವಾಗಿವೆ. ಪುಸ್ತಕದ್ದೇ ಹೆಸರಿನ 'ಅವತಾರ' ಕತೆಯಲ್ಲಿ ಅಮೃತ-ವಿಷಗಳ ಸ್ನೇಹದ ರೂಪಕಾತ್ಮಕವಾದ ವಿವೇಚನೆ ಇದೆ. ಅಮೃತವು ವಿಷದ ಸ್ನೇಹ ಮಾಡುವುದನ್ನು ತಿರಸ್ಕರಿಸುತ್ತದೆ. ಆಗ ಒಬ್ಬ

ಎರಡನ್ನು ಒಂದೊಂದು ಕೈಯಲ್ಲಿ ಹಿಡಿದುಕೊಂಡು ಬೆರೆಸಿ ಕುಡಿದುಬಿಟ್ಟನಂತೆ. ಅವನು ವಾಸ್ತವವಾಗಿ ಕುಡಿದದ್ದು-ಕಾಫಿ! ಕಾಫಿಯ ಹನಿಸಮೂಹ ಇನ್ನೊಂದು ಹನಿಗತೆಗೆ ಕಾರಣವಾಗಿದೆ. ಅದರಲ್ಲಿ ಕಾಫಿಗೆ ಸಕ್ಕರೆಯನ್ನೇ ಹಾಕದಿದ್ದರೂ ಸಕ್ಕರೆ ಜಾಸ್ತಿ ಎಂದು ಎಗರಾಡುವ ಗಂಡಗೆ ಅವನ ಹೆಂಡತಿ ಪಾಠ ಕಲಿಸುವ ಸಂದರ್ಭವಿದೆ. ವಿವರಗಳಿಗೆ ಆ ಸಂಗ್ರಹದಲ್ಲಿಯ 'ಹುಲಿ ಜಾತಿಗೆ ಸೇರ್ದನೆಂದು—' ಹನಿಗತೆಯನ್ನು ನೋಡಬಹುದು. ಪ್ರಹ್ಲಾದರಾಯರು ಇಂಥ ಹನಿಯ ಗಾತ್ರದ ಕೃತಿಗಳನ್ನು ರಚಿಸಬಲ್ಲವರಾಗಿದ್ದರೆನ್ನುವುದಕ್ಕೆ ಈಚಿನ ಅವರ 'ಅಮಲಿನ ವಚನಗಳು' ಎಂಬ ಸೂಕ್ತಿ-ಕಾವ್ಯವನ್ನು ಜ್ಞಾಪಿಸಿಕೊಳ್ಳಬಹುದು.

ಬೀಚಿಯವರ ಮೊದಲ ಪುಸ್ತಕವೇ ಹನಿಗತೆಗಳ ಸಂಕಲನವಾಗಿದೆ. ಅವರ 'ಮಾತ್ರೆಗಳು' ೧೯೪೭ರಲ್ಲಿಯೇ ಪ್ರಕಟವಾಯಿತು. ಅವೆಲ್ಲ ಸತ್ಯದ ಕಹಿಮಾತ್ರೆಗಳು. ರಾಜಕೀಯ, ಸಾಮಾಜಿಕ



"ಸಣ್ಣ ಕತೆ ಬರೆಯೋದು ಬಿಟ್ಟು ಕಾದಂಬರಿ ಬರೆಯೋಕೆ ಶುರು ಮಾಡಿದೀರಲ್ಲಾ ಸಾರ್, ಭಾಳಾ ಸಂತೋಷ...ಭಾಳಾ ಸಂತೋಷ."

ಹಾಗೂ ಧಾರ್ಮಿಕ–ಈ ಮೂರೂ ರಂಗಗಳಲ್ಲಿ ಸತ್ಯಕ್ಕೆ ಚ್ಯುತಿ ಬಂದುದರ ಹಾಗೂ ನಮ್ಮ ಬದುಕಿನ ವಿರೋಧಾಭಾಸದ ಚಿತ್ರಣಗಳು ಇಲ್ಲಿವೆ. ಮನುಷ್ಯಧರ್ಮದ ಮೇಲೆ ಉಪನ್ಯಾಸ ಕೊಡುತ್ತಲಿದ್ದ ಸ್ವಾಮಿಗಳು ಗೂರಲು ಹಿಡಿದು ಕೆಮ್ಮುತ್ತಿದ್ದ ಮುದುಕನೊಬ್ಬನನ್ನು ಸಭಾಗೃಹದಿಂದ ಹೊರಗೆ ಹಾಕಿಸುತ್ತಾರೆ. ಲಂಚ–ಭೋಕ್ಷ್ಯಗಳಿಂದ ಬೊಜ್ಜು ಬೆಳೆಸಿಕೊಂಡ ಕಾರಕೂನ–ಭಟ್ಟರು ಪಾಡಿಯಲ್ಲೇ ಸಾಬಿಯ ಕೈಯಿಂದ ರೂಪಾಯಿ ಇಸಿದುಕೊಳ್ಳುತ್ತಾರೆ. ಆದರೆ, ತಮ್ಮ ಮಗ ಸಾಬಿಯು ಕುಳಿತ ಬೆಂಚಿನ ಮೇಲೆ ತಾನೂ ಕುಳಿತು ಒಟ್ಟೊಟ್ಟಿಗೆ ಕಾಫಿ ಕುಡಿದನಲ್ಲ – ಎಂದು ಎಗರಾಡುತ್ತಾರೆ. ಇಂಥ ನಡವಳಿಕೆ ಅತಿ ಸಹಜ ಎನ್ನುವಷ್ಟು ನಮ್ಮ ಜೀವನದಲ್ಲಿ ಒಂದಾಗಿಬಿಟ್ಟಿದೆ. ಬದುಕಿ ಇದ್ದಾಗ ಮುದಿ ತಾಯಿಯನ್ನು ಮನೆಯ ಹೊರಗಿಟ್ಟು ಒಬ್ಬ ಪ್ರತಿಷ್ಠಿತನು ಅವಳು ಸತ್ತ ಮೇಲೆ, ದೊಡ್ಡದಾಗಿ ಅವಳ ಫೋಟೋ ಮನೆಯಲ್ಲಿ ತೂಗ ಹಾಕಿದನಂತೆ. ಹೀಗೆ ಮುಪ್ಪಿನ ತಂದೆ–ತಾಯಿಯನ್ನು ಅನೇಕ ಶಿಕ್ಷಣವಂತರು ಅಲಕ್ಷ್ಯ ಮಾಡುವುದನ್ನು ನಿತ್ಯವೂ ನಾವು ಕಾಣುತ್ತೇವೆ. ಹೀಗೆಯೇ ಪಾನನಿರೋಧ, ಸಮತಾವಾದ ಮುಂತಾದ ರಾಜಕೀಯ ವಿಷಯಗಳ ಬಗ್ಗೆಯೂ ಬೀಚಿ ತಮ್ಮ ಕೊಂಕು ನೋಟವನ್ನು ಹರಿಯಿಸಿದ್ದಾರೆ.

'ಒಳಗೊಂದು ಹೊರಗೊಂದು' ಎಂಬ ಈ ನಡತೆಯನ್ನು ಎದುರು ಬದುರಾಗಿ ಚಿತ್ರಿಸುವಲ್ಲಿ ಸೂಕ್ಷ್ಮತೆಗೆ ಗಮನ ಕೊಡಬೇಕು. ಅದರಂತೆ ವಿಡಂಬನೆ ಅತಿಯಾಗಿ ಬರಬಾರದು; ಹಾಗೇ ಅದೇ ಪ್ರಾಧಾನ್ಯವಾಗಿ ಬಂದರೆ, ಅದು ವಿಡಂಬನಾತ್ಮಕ ಪ್ರಬಂಧ / ಘಟನೆಯಾದೀತಲ್ಲದೆ ಹನಿಗತೆಯಲ್ಲ. ಇಂಥ ಕೆಲವು ಕಥನಗಳನ್ನೂ 'ಮಾತ್ರೆಗಳು' ಒಳಗೊಂಡಿದೆ. ಆದರೂ ಜೀವನದ ಸಣ್ಣ ತಿರುವು ತೊಡಕುಗಳನ್ನು ಕಾಣುವ ಸೂಕ್ಷ್ಮ ದೃಷ್ಟಿ ಅವರಿಗೆ ಇತ್ತು. ಹಾಗೂ ಅದನ್ನು ಮಾರ್ಮಿಕವಾಗಿ ಕಥಿಸುವುದರಲ್ಲಿ ಅವರು ಸಿದ್ಧಹಸ್ತರಾಗಿದ್ದರು. ಅವರ ಮುಂದಿನ ಸಣ್ಣಕತೆಗಳ ಸಂಕಲನಗಳಲ್ಲಿ ಕೆಲವಾದರೂ ಹನಿಗತೆಗಳು ಹಣಿಕಿ ಹಾಕಿವೆ. ಉದಾಹರಣೆಯಾಗಿ, ಸಂಶಯಖೋರ ಹೆಂಡತಿಯೊಬ್ಬಳು ತನ್ನ ಗಂಡನ ಕಿಸೆಯಲ್ಲಿದ್ದ ರಿಬ್ಬನ್ ಖರೀದಿಯ ಒಂದು ರಸೀದಿ ನೋಡಿ, ಅದಾವ ಪ್ರಿಯತಮೆಗಾಗಿ ಅದನ್ನು ತಂದುದೆಂದು ಗಲಾಟೆ ಮಾಡುತ್ತಾಳೆ. ಆ ರಸೀದಿಯೋ ಟೈಪ್‌ರೈಟರಿನ ರಿಬ್ಬನ್ನಿನದು!

ವಕ್ರಕವಿ ವಿ. ಜಿ. ಭಟ್ಟರು ಮಾತ್ರ ನೂರಕ್ಕೆ ನೂರು ಪೈಸೆ ಹನಿಗತೆಗಾರರು. ಅವರಿಗೆ ನಿಯಮಿತವಾದ ಸಣ್ಣ ಕತೆಗಳನ್ನು ಬರೆಯಲಿಕ್ಕೆ ಬರುವುದೇ ಇಲ್ಲ– ಎನ್ನುವ ಹಾಗೆ ಹನಿಗತೆಗಳನ್ನು ರಚಿಸಿದರು. ೧೯೫೦ನೆಯ ದಶಕದಲ್ಲಿ, ಅಂಥ ಸಂಗ್ರಹಗಳು– 'ಬುರುಕಿ' 'ದಿವ್ಯಕತೆಗಳು' 'ಪದ್ದಂಕತೆಗಳು' ಮತ್ತು 'ಸಹ್ಯಾದ್ರಿ' ಒಂದರ ಮೇಲೊಂದು ಹೊರಬಂದವು. (ಆ ಮೇಲೆ ಅವರು ಬರೆಯಲೇ ಇಲ್ಲ!) ಹನಿಗತೆಯ ಚಾತುರ್ಯ ಅವರ ಕವನಗಳಲ್ಲಿಯೂ ಆಗಾಗ ಕಾಣಿಸಿಕೊಂಡಿದ್ದಿತು.

ನಿರೂಪಣೆಯಲ್ಲಿ ಅವರು ಹೊಸ ವಿಧಾನಗಳನ್ನು ರೂಪಿಸಿಕೊಂಡಿದ್ದಾರೆ. ಅವೆಂದರೆ ಮಗು, ಪ್ರಾಣಿ ಮತ್ತು ಪೌರಾಣಿಕ ಘಟನೆಗಳು. ಮಗುವಿನ ಮುಗ್ಧ ಪ್ರಶ್ನೆಗಳ ಮೂಲಕ ಭಟ್ಟರು ಬದುಕನ್ನು ಕೆಣಕಿ ನೋಡಿದ್ದಾರೆ. ಸಾಮಾಜಿಕ ವಿಡಂಬನೆಗೆ 'ಮಗು'ವನ್ನು ತಂದಿದ್ದರೆ, ರಾಜಕೀಯ ಶ್ಲೇಷೆಗಾಗಿ ಪಶು–ಪಕ್ಷಿಗಳ ಅರಣ್ಯ ರಾಜ್ಯವನ್ನು ಸೃಷ್ಟಿಸಿದ್ದಾರೆ. ಆಗಿನ ಕಾಲದಲ್ಲಿ ನಡೆದ ಭಾಷಾವಾರು ಪ್ರಾಂತ ರಚನೆಯ ಕುರಿತು ಕನ್ನಡಿಗರ ಗೊಳ್ಳು ಕೂಗನ್ನು ಪ್ರಾಣಿಲೋಕದ ಮೂಲಕ ವಿಡಂಬಿಸುವ ಒಂದು ಕತೆಯ ಸಾರ ಹೀಗಿದೆ:

ವಿಕಾಸಕ್ರಮದಲ್ಲಿ ಕತ್ತೆಯ ಕಿವಿಗಳು ಕುಳ್ಳ ಆದವು. ಆಗ ಅರಣ್ಯ ರಾಜ್ಯದಲ್ಲಿ ಕಿವಿವಾರು–ಪ್ರಾಂತ ರಚನೆಯ ಚಳುವಳಿ ಎದ್ದಿತು. ಉಳಿದ ಪ್ರಾಣಿ ವರ್ಗಗಳು ತಂತಮ್ಮ ಕಿವಿಗಳನ್ನು ಎಳೆದು ಉದ್ದವಾಡಿಕೊಂಡು 'ನಮ್ಮ ಜಾಗ ಇಷ್ಟು' ಎಂದು ಕೇಳಿದವು. ಇತ್ತ ಕತ್ತೆಗಳು, 'ರಾಮಾಯಣ'ದ ಕಾಲದಲ್ಲಿ ತಮ್ಮ ಕಿವಿಗಳೂ ಉದ್ದವಾಗಿದ್ದುವು–ಎಂದೆನ್ನುತ್ತ ಹೆಚ್ಚಿನ ಪ್ರದೇಶವನ್ನು ಕೇಳಿದುವು.

ಆ ಕಿರಿಚುವ ಆವೇಶಕ್ಕೆ ಕತ್ತೆಗಳ ಕಿವಿಗಳು ಉದ್ದವಾಗಿಬಿಟ್ಟವು! ಆಗ ಇತರ ಪ್ರಾಣಿಗಳ ಮುಂದಾಳುಗಳು ಹೆದರಿದವು. ಆದರೆ ಕಿರಿಚುವ ಆವೇಶ ತಗ್ಗಿದಾಗ ಕತ್ತೆಗಳ ಕಿವಿಗಳ ಗಾತ್ರ ಮೊದಲಿನಷ್ಟೇ! ಹೀಗಾಗಿ ಕತ್ತೆಗಳಿಗೆ ಸಿಗಬೇಕಾದಷ್ಟೇ ಜಾಗ ಸಿಕ್ಕಿತು. ಮೋಜೆಂದರೆ, ಆ ಮೊದಲು ಕಿರಿಚಿದಾಗ ತಮ್ಮ ಕಿವಿಯೂ ಉದ್ದವಾಗಿ, ತಾವು ಇತರ ಪ್ರಾಣಿಗಳನ್ನು ಹೆದರಿಸಬಹುದೆಂಬುದು ಕತ್ತೆಗಳಿಗೆ ತಿಳಿದಿರಲಿಲ್ಲವಂತೆ! ಹೀಗೆ ಕನ್ನಡಿಗರ ಬಾಯಿಬಡಾಯಿಯ ಗೊಳ್ಳು ಪರಿಣಾಮವನ್ನೂ ಗತ ಕಾಲದ ಹಿರಿಮೆಯನ್ನೂ ನಾವು ಎತ್ತಿ ಹೇಳುವುದಕ್ಕೆ ಇತರರು ಅದೆಷ್ಟರ ಮಟ್ಟಿಗೆ ಬೆಲೆ ಕೊಟ್ಟಾರೆಂಬುದನ್ನೂ ಇಲ್ಲಿ ಕಟುವಾಗಿ ಟೀಕಿಸಿದ್ದಾಗಿದೆ. ಅದರ ನಿರೂಪಣೆ ಹನಿಗತೆಯ ನೇರ ಹಾದಿಯಲ್ಲೇ ಸಾಗಿದೆ. ಅದರಂತೆ ಪರದೇಶಗಳಿಗೆ ಹೋಗಿ ಇಲ್ಲದ, ಸಲ್ಲದ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ಬರುವ ಡೌಲಿನ 'ಪ್ರಾಣಿ'ಗಳನ್ನೂ 'ಬ್ರಾಹ್ಮಣ' 'ಅಬ್ರಾಹ್ಮಣ' ಎಂಬ ಬಟ್ಟೆಯ ಗಂಟುಗಳನ್ನು ಹೊತ್ತುಕೊಂಡಿದ್ದ ಆಗಸರ ಕತ್ತೆಗಳನ್ನೂ 'ಆದರ್ಶ', 'ಸಭ್ಯತೆ'ಗಳ ಹೆಸರಿನಲ್ಲಿ ಮೇಲಿಂದ ಮೇಲೆ ಕಾಯದೆಗಳನ್ನು ಮಾಡಿ ಮುರಿಯುತ್ತ ಹೋಗುವ ಹಿಂಸ್ರ ಪಶುಗಳನ್ನೂ ಭಟ್ಟರು ಸೃಷ್ಟಿಮಾಡಿದ್ದಾರೆ.

ಪೌರಾಣಿಕ ಪರಿಸರಕ್ಕೆ ಅವರು ರಾಮಾಯಣವನ್ನು ಆಯ್ದುಕೊಂಡಿದ್ದಾರೆ. ಅದರಲ್ಲಿಯ ಘಟನೆ ಹಾಗೂ ಪಾತ್ರಕಲ್ಪನೆಗಳನ್ನು ವಿಪರ್ಯಾಸಗೊಳಿಸಿ ಇಂದಿನ ಪರಿಸರಕ್ಕೆ ಮತ್ತು ಸಾಮಾನ್ಯ ಮಾನವರಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ. ಪಂಚವಟಿಯಲ್ಲಿ ರಾಮ–ಸೀತೆಯರ ಕುಟೀರದಲ್ಲಿ ತಿಗಣೆ ಸುಳಿದಾಗಿನ ವೈಪರೀತ್ಯ, ಲವ–ಕುಶರ ಅನಂತರ ಸೀತಾದೇವಿಗೆ ಮಕ್ಕಳಾಗದಿದ್ದುದರ ಕಾರಣ ಮೀಮಾಂಸೆ, ಶಬರಿಯ ಎಂಜಲನ್ನು ತಿಂದ ಮೇಲೆ ಇತರರ ಪ್ರತಿಕ್ರಿಯೆ– ಇವೇ ಭಟ್ಟರ ಹನಿಗತೆಗಳಲ್ಲಿ ಬಂದ ವಿಷಯಗಳ ಮಾದರಿಗಳು (ಅವುಗಳಲ್ಲಿ 'ಎಂಜಲು ಬೋರೆ' ಎಂಬುದನ್ನು ಮೇಲೆ ಕೊಡಲಾಗಿದೆ).

ಪ್ರಾಣಿಲೋಕವನ್ನು ಇಲ್ಲವೆ ಪೌರಾಣಿಕ ಪರಿಸರವನ್ನು ತಾರದೇ ರಚಿತವಾದ ಹತ್ತಾರು ಹನಿಗತೆಗಳಿವೆ – ಭಟ್ಟರ ಸಂಗ್ರಹಗಳಲ್ಲಿ. ಹನಿಗತೆಗಳಿಗೆ ಅನಿರೀಕ್ಷಿತ ಮುಕ್ತಾಯವೇ ಬೇಕಾಗದೆನ್ನುವುದಕ್ಕೆ 'ಬಾರುಕಿ' ಎನ್ನುವ ಹನಿಗತೆ ಉದಾಹರಣೆಯಾಗಬಲ್ಲುದು. ಓರ್ವ ಸ್ತ್ರೀಯ ಹಿಂಭಾಗವನ್ನು ನೋಡಿ ಅವಳು ರೂಪವತಿಯೇ ಇರಬೇಕೆಂದು ಒಬ್ಬ ತರ್ಕಿಸಿದ. ಮನಸ್ಸಿನಲ್ಲಿ ಆ ಭಾವನೆಯನ್ನು ಬಲಿಯಗೊಟ್ಟ. ಅವಳ ಮುಖವನ್ನು ನೋಡಿದಾಗ ಹೇಸಿಗೆ ಬರುವಂತಾಯ್ತು. ಆದರೇನು ಅದರಲ್ಲಿ ಇಲ್ಲದ ಚೆಲುವನ್ನು ಕಂಡುಕೊಂಡು ಸುಖಿಸಿದನಂತೆ. 'ಕಾಣದ ಚೆಲುವಿಗಾಗಿ ಪ್ರೀತಿಯೆಂಬ ಉರುಲಿಗೆ ಕೊರಳು ಕೊಟ್ಟ; ರಾತ್ರಿಯೂ ಆಗಿತ್ತು.' ಎಂದು ಕತೆ ಕೊನೆಗೊಳ್ಳುತ್ತದೆ. ಪ್ರೇಮದ ಹೆಸರಿನಲ್ಲಿ ಎಳೆ ಹರೆಯದವರ ಕಾಮುಕ ಭಾವನೆಯನ್ನು ಈ ಹನಿಗತೆ ಹೆಚ್ಚು ಮಾರ್ಮಿಕವಾಗಿ ಪ್ರಕಟಿಸಿದೆ. ಅಂತೂ ರಾಜರತ್ನಂ, ಬೀಚಿಯವರು ವಿಶೇಷವಾಗಿ ತಂದಿರದ, ಪ್ರೇಮ–ಕಾಮದ ಹಿನ್ನೆಲೆಯಲ್ಲಿ ಭಟ್ಟರು ಇನ್ನೂ ಅನೇಕ ಕತೆಗಳನ್ನು ಕೊಟ್ಟಿದ್ದಾರೆ.

"ಇಲ್ಲಿಯ ಕಿರುಗತೆಗಳಲ್ಲಿ ಒಂದು ನೀತಿ ಇದೆ. ಆದರೆ ಅದನ್ನು ಹೇಳುವ ರೀತಿ– ಬುದ್ಧಿಯನ್ನು ಕೆಣಕುವಂತಹುದು, ಅವಮಾನಗೊಳಿಸುವಂತಹುದಲ್ಲ. ಶ್ರೀ ಭಟ್ಟರಿಗೆ ಜೀವನದ ವಿಷಯವಾಗಿ ಒಂದು ತಾತ್ವಿಕ ಕಳಕಳಿ ಇದೆ." ಎಂದು 'ಬಾರುಕಿ' ಪುಸ್ತಕದ ಮುನ್ನುಡಿಯಲ್ಲಿ ಹೇಳಲಾಗಿದೆ. ಆದರೆ ಬುದ್ಧಿಗೆ ಅಪಮಾನವಾಗುವಂಥ ಮತ್ತು ತಾತ್ವಿಕ ಕಳಕಳಿಯು ಗೌಣವಾಗಿರುವ ಹಲವು ಕತೆಗಳು ಭಟ್ಟರಿಂದ ರಚಿತವಾಗಿವೆ. ಸತ್ತ ಹೆಂಡತಿಗಾಗಿ ಒಬ್ಬ ಶೋಕಿಸುತ್ತಿದ್ದಾಗ ಗೆಳೆಯ ಸಮಾಧಾನ ಹೇಳುತ್ತ, 'ಕೆಲವು ಕಾಲದ ಮೇಲೆ ಈ ಪತ್ನೀ ವಿಯೋಗ ಸಹ್ಯವಾಗುವುದು. ನೀನಿನ್ನೂ ಮೂವತ್ತು ವರುಷದ ತರುಣ. ಯಾರು ವಿಧುರರಾಗುತ್ತಾರೆಂದು ಕಾಯುವ ಕನ್ಯಾಪಿತೃಗಳಿಗೆ ಕೊರತೆಯಿಲ್ಲ. ಒಂದೆರಡು ವರ್ಷ ತಡೆ.' ಎಂದನಂತೆ. 'ಒಂದೆರಡು ವರ್ಷ? ಒಂದೆರಡು ದಿನ ಹೆಂಡತಿ ಇಲ್ಲದೆ ತಡೆಯುವುದು ಹೇಗೆಂದು ನನ್ನ ಚಿಂತೆ.' ಎಂದನಂತೆ. ಇದು ಅತ್ಯಂತ ಒರಟಾದ ನಿರೂಪ–

ಣಿಯೆನಿಸುವುದು. ಇದನ್ನೇ ಸೂಚ್ಯವಾಗಿ ಹೇಳುವುದು ಸಾಧ್ಯವಿತ್ತು. ಭಟ್ಟರ ಅತಿ ವಕ್ರತೆಗೆ ಇನ್ನೊಂದು ಉದಾಹರಣೆಯಾಗಿ, 'ಬೀಜ' ಎನ್ನುವ ಕತೆಯನ್ನು ಗಮನಿಸಬಹುದು. ಗರ್ಭಪಾತದ ಶಿಶುಪಿಂಡವನ್ನು ತಂದೆಯು ತೋಟದಲ್ಲಿ ಹೂಗಿದು ಬಂದ. ಅವನ ಇನ್ನೊಬ್ಬ ಚಿಕ್ಕ ಮಗ, ಅದೇನೆಂದು ತಿಳಿಯದೆ, 'ಸಸಿ ಬೆಳೆಯಲಿ' ಎಂದು ನೀರು ಹಾಕಿ ಬಂದನಂತೆ!

ಏನಿದ್ದರೂ ಬಾಳಹೊಳೆಯಿಂದ ಹನಿಗಳನ್ನು ಎತ್ತಿಕೊಳ್ಳುವ ಹದ ಭಟ್ಟರಿಗೆ ಇತರರಿಗಿಂತ ಚೆನ್ನಾಗಿ ಸಾಧಿಸಿದೆ. ಕೆಲವೆಡೆಗೆ ಮಾತ್ರ, ಅವರು ಒಡಿದ, ವಕ್ರತೆಯ ದುರ್ಬೀನಿನಿಂದಾಗಿ ಹನಿಯ ಗಾತ್ರ, ರೂಪ ವಿಕೃತಗೊಂಡಿದೆ. ಅವರು ಆ ಮುಂದೆ ಹನಿಗತೆಗಳನ್ನು ಬರೆಯಲೇ ಇಲ್ಲ ಎನ್ನುವುದು ವಿಷಾದನೀಯ.

ಇಷ್ಟೇ ಅಲ್ಲ. ಇನ್ನಾರೂ ಹನಿಗತೆಗಳ ಸಂಗ್ರಹವನ್ನು ಇದುವರೆಗೆ ಹೊರತಂದೇ ಇಲ್ಲ. ಅಲ್ಲಿ ಇಲ್ಲಿಯ ಕಥಾ ಸಂಗ್ರಹಗಳಲ್ಲಿಯೋ, ವಾರಪತ್ರಿಕೆಗಳಲ್ಲಿಯೋ ಹನಿಗತೆಗಳು ಕಂಡು ಬಂದಾವಲ್ಲದೆ, ಇದೊಂದು ಸಾಹಿತ್ಯ ಪ್ರಕಾರ ವೆಂದು ಯಾರೂ ಬೆಳೆಯಿಸಿಕೊಂಡು ಬರಲಿಲ್ಲ. ಕಸ್ತೂರಿಯ 'ಇದುವೆ ಜೀವ, ಇದು ಜೀವನ'ದ ಶೀರ್ಷಿಕೆಯಡಿ ಹನಿಗತೆಗಳೆಂದು ಕರೆಯಬಹುದಾದ ಜೀವನಾನುಭವಗಳು ಕಂಡುಬರುತ್ತವೆ. ಒಂದೆರಡನ್ನು ಮೇಲೆ ಉದಾಹರಿಸಿದ್ದಾಗಿದೆ. ಅದರ ಬೇರೊಂದು ಸಂಚಿಕೆಯಲ್ಲಿ ಬಂದ ಅನುಭವ ಕಥನ ಹನಿಗತೆಯಾಗಬಹುದು. ಅದರ ಸಾರ ಹೀಗಿದೆ:

"ಬೆಂಗಳೂರಿನಿಂದ ತುಮಕೂರಿಗೆ ತುಂಬಿದ ಬಸ್ಸು ಹೊರಟಿತ್ತು. ನಡುದಾರಿಯ ಹಳ್ಳಿಯೊಂದರಿಂದ ಇಬ್ಬರು ಬಸ್ ಹತ್ತಿದರು. ಒಬ್ಬ ಅಧಿಕಾರಿಯಂತಿದ್ದ. ಅವನಿಗೆ ಕಂಡಕ್ಟರ್ ಜಾಗ ಮಾಡಿಕೊಟ್ಟ. ಇನ್ನೊಬ್ಬವ ಮುದುಕ. ತನ್ನ ಶಕ್ತಿಯುಡಗಿದ್ದ ಕಾಲುಗಳ ಮೇಲೆ ನಿಂತೇ ಇದ್ದ. ಮೂರು ಜನ ಕೂಡುವ ಸೀಟಿನ ಮೇಲೆ ಒಬ್ಬ ತನ್ನ ಪಾಪು, ಅರ್ಧಪಾಪು, ಚಟಾಕುಗಳಂಥ ಮಕ್ಕಳನ್ನು ಕೂಡ್ರಿಸಿಕೊಂಡು ಕುಳಿತಿದ್ದ. ಯಾರೋ ಒಬ್ಬರು, ಆ ಮುದುಕನಿಗೆ ಜಾಗ ಮಾಡಲು ಸೂಚಿಸಿದರು. ಅದಕ್ಕೆ ಆ ತಂದೆ 'ಅಷ್ಟು ಕರುಣೆಯಿದ್ದರೆ ನೀವೇ ಬಿಟ್ಟುಕೊಡ್ರೀ ಸೀಟನ್ನ' ಎಂದ. ಆಗ ಒಬ್ಬ ಪಾಪು, ಇನ್ನೊಂದು ಅರ್ಧಪಾಪು ಎದ್ದು ಜಾಗ ಬಿಟ್ಟುಕೊಟ್ಟವು! ಅವರನ್ನು ತೊಡೆಯ ಮೇಲೆ ಕೂಡ್ರಿಸಿಕೊಂಡು ಮುದುಕ ಕೇಳಿದ, 'ಮಗೂ, ಏನು ಕಲೀತಿದ್ದೀ?' ಒಂದು ಮಗು ಹೇಳಿತು, 'ಮೂರನೇ ಕ್ಲಾಸ್.' ಇನ್ನೊಂದಕ್ಕೆ ಅದೇ ಪ್ರಶ್ನೆ ಕೇಳಿದಾಗ 'ಅ ಆ ಇ ಈ' ಬರೀಲಿಕ್ಕೆ ಬತ್ತದೆ' ಎಂದು ಉತ್ತರ ಬಂತಂತೆ.*

ಇದಿಷ್ಟೇ ಕನ್ನಡದ ಹನಿಗತೆಗಳ ಬಂಡವಲು. ನನಗಿದೇ ಆಶ್ಚರ್ಯ. ಮಿನಿ–ಭಾವಗೀತವೆಂಬಂತೆ ಚುಟುಕಗಳ ಸೃಷ್ಟಿಯಾಯಿತು. ಬಲು ಬೇಗ ನಮ್ಮಲ್ಲಿ ವಿಸ್ತಾರಗೊಂಡಿತು. ಆದರೆ ಆ ರೀತಿಯಾಗಿ ಹನಿಗತೆ ಬೆಳೆಯಲೇ ಇಲ್ಲ. ಹನಿಗತೆಗೆ ನಮ್ಮಲ್ಲಿ ಮೂಲದ್ರವ್ಯವಾದ ದ್ವಂದ್ವ ಮನೋಭಾವವು ನಮ್ಮ ಇಂದಿನ ಜಟಿಲ ಜೀವನ ಕ್ರಮದಲ್ಲಿ ಅವ್ಯಾಹತವಾಗಿ ಕಂಡುಬರುವಾಗ ನಮ್ಮ ಕತೆಗಾರರು ಇದರತ್ತ ಗಮನಹರಿಸಲಿಲ್ಲ. ಅವರ ಗಮನ ಸೆಳೆಯುವ ಉದ್ದೇಶದಿಂದಲೇ ಈ ಲೇಖನವನ್ನು ಬರೆದುದಾಗಿದೆ. ★

* ಕಸ್ತೂರಿಯಂತೆಯೇ ಉದಯವಾಣಿಯೂ ಈಚೆಗೆ ಪಂಚತಂತ್ರ ಮಾದರಿಯ ಆದರೆ ಆಧುನಿಕ ಜೀವನವನ್ನು ಪರ್ಯಾಯವಾಗಿ ವಿಡಂಬಿಸಿದ ಕತೆಗಳನ್ನು ಪ್ರಕಟಿಸಿತು. ಲೇಖಕರಾದ ಭಟ್ಟರು ಮೂಲತಃ ಅದನ್ನು ಸಂಸ್ಕೃತದಲ್ಲಿ ಬರೆದು ಪುಸ್ತಕವಾಗಿ ಪ್ರಕಟಿಸಿದ್ದರು.

(ಮೈಸೂರಿನ ಅನನ್ಯ ಪ್ರಕಾಶನ ಪ್ರಕಟಿಸಿದ ಡಾ. ಹಾವನೂರರ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ' ಪುಸ್ತಕದಿಂದ ಸಾಭಾರ ಆರಿಸಿಕೊಂಡಿದೆ.) –ಸಂ.



ನೈಜ ಘಟನೆ

ಮರಳುಗಾಡಿನ ನ್ಯಾಯ

ನೀಳಾದೇವಿ

ರಾಜಸ್ಥಾನದ ಬದ್ವಾಸಿ ಪಕ್ಕಾ ಮರಳು ಗಾಡು. ನಮ್ಮವರು ಅಲ್ಲಿ ಹಿಂದೊಮ್ಮೆ 'ಜಿಪ್ಸಮ್' ತಪಾಸಣೆಗಾಗಿ ಕ್ಯಾಂಪುಮಾಡಿದ್ದರು. ದಿಬ್ಬ ದಿಬ್ಬವಾಗಿ ಮರಳಿನ ಗುಡ್ಡೆಗಳು ಸಮುದ್ರದ ಅಲೆಗಳಂತೆ ಎಲ್ಲೆಲ್ಲಿಯೂ ಹರಿಳಿದಿದ್ದವು. ಆ ಮರಳಲ್ಲಿ ಹಸಿರೆಲ್ಲಿ? ಹೂವೆಲ್ಲಿ?! ಮರಳಿನದ್ದೇ ಬಣ್ಣದ, ಅದೇ ಗುಡ್ಡಗಳ ಡುಬ್ಬವುಳ್ಳ ಒಂಟೆಗಳು ನಿಧಾನವಾಗಿ ಚಲಿಸುತ್ತಿರುವವು. ಇಡೀ ಪ್ರಕೃತಿಗೇ ಬೇಸರ ತರುವಂಥ ಇದೊಂದೇ ಬಣ್ಣಕ್ಕೆ ವಿರುದ್ಧವಾಗಿ ಆಗಸ ತನ್ನ ನೀಲಿಮನ್ನು ಸಹ ತೀಕ್ಷ್ಣ ಮಾಡಿ ಬಿಸಿಲನ್ನು ಕಾಂತಿಯಿಂದ ರಾಚುವುದು. ಸಾಂಯರ್ ಎಂದು ಗಾಳಿ ಬೀಸಿದರೆ ಧಗೆ ಕಮ್ಮಿಯಾಗುವ ಬದಲು ಕಣ್ಣು, ಮೂಗು, ಬಾಯಿ ತುಂಬಾ ಮರಳಿನ ಕಣಗಳು ತುಂಬಿಹೋಗುವವು. ಆಗಿದರೆ ಬಾಯಲ್ಲಿ ಮರಳ ಕಣಗಳ ಕರ್_ಕರ್ ಶಬ್ದ ಸಹ ಕೇಳಬರುವುದುಂಟು! ಅಲ್ಲೊಂದಿಲ್ಲೊಂದು ಕಳ್ಳಿಜಾತಿ ಕತ್ತಾಳೆ ಗಿಡಗಳು.

ಬದ್ವಾಸಿ ಬಳಿ ಇನ್ನಾವ ಗ್ರಾಮಗಳೂ ಇರಲಿಲ್ಲ. ಇಲ್ಲಿ ಮರಳ ಹೊರತು ಮಣ್ಣೂ ಇಲ್ಲ, ನೀರೂ ಇರಲಿಲ್ಲ. ಮಳೆಗಾಲದಲ್ಲಿ ಸ್ವಲ್ಪ ಹನಿಸಿದರೂ ಅದು ಒಂದೇ ಮಟ್ಟದ ಮರಳಲ್ಲಿ ಇಂಗಿಯೇ ಹೋಗಿಬಿಡುತ್ತಿತ್ತು. ಆದರೆ ಕೆಲವೆಡೆ ಸಣ್ಣ ಸ್ಥಳ ತೋಡಿ ಅದರಲ್ಲಿ ಉಪಾಯವಾಗಿ ಮೂರು ನಾಲ್ಕು ವರ್ಷಕ್ಕೊಮ್ಮೆ ಸ್ವಲ್ಪ ಹೆಚ್ಚಿಗೆ ಮಳೆ ನೀರು ಬಿದ್ದರೆ ಶೇಖರಿಸಿ, ಕಾದಿಟ್ಟುಕೊಂಡು ಜಾಗರೂಕತೆಯಿಂದ ಜನ ಬಳಸುತ್ತಿದ್ದರು. ಅಲ್ಲಿ ನೀರಿನ ಉಪಯೋಗ ಅದೆಷ್ಟು ಕಮ್ಮಿ ಮಾಡುತ್ತಾರೆ ಎಂದರೆ ಒಂದು ಬೇಸಿನ್ನಿನಲ್ಲಿ ಒಂದು ಬಕೀಟು ಬಟ್ಟೆ ಸ್ವಚ್ಛವಾಗಿ ಒಗೆಯಬಲ್ಲರು! ಪಾತ್ರೆ, ತಟ್ಟೆ, ಬಟ್ಟಲುಗಳಿಗಂತೂ ಮರಳೇ ನೀರು! ಮರಳಲ್ಲಿ ಉಜ್ಜಿ ಉಜ್ಜಿ ಥಳ ಥಳ ಸ್ವಚ್ಛಮಾಡಿಟ್ಟು ಬಿಡುತ್ತಾರೆ.

ಕೆಲವಡೆ ಮಾತ್ರ ಗೋಡುಮಣ್ಣಿನ ಹೊಂಡಗಳಿರುವವು. ಅಲ್ಲಿ ಭಾವಿ ತೋಡಿ ಹಸಿರ ತೇಪೆ ಕಾಣುತ್ತಾರೆ. ಅಂಥಲ್ಲಿ ಜಿಂಕೆಗಳ ಗುಂಪು ನೀರಿಗಾಗಿ ಬಂದು ಮಿಂಚಿಹೋಗುವುದುಂಟು. ನವಿಲಜಾಗರ ಸಹ ನೋಡಬಹುದಿಲ್ಲಿ. ಜನ ಇಲ್ಲಿ ಕಂಡ ನೀರನ್ನು ಒಂಟೆಗಳ ಮೇಲೆ ಒಯ್ದು ಮಾರಾಟಮಾಡುತ್ತಾರೆ. ಎಲ್ಲೋ ಅಲ್ಲೊಂದು ಇಲ್ಲೊಂದು ನಾಲ್ಕಾರು ಗುಡ್ಡೆ ಕಟ್ಟಿಕೊಂಡಂತಹ ಗುಡಿಸಲುಗಳಿರುತ್ತಿದ್ದವು. ಅವುಗಳ ಆಕಾರವೂ ಮರಳಗುಡ್ಡೆ, ಒಂಟೆ ಡುಬ್ಬದಂಥದ್ದೇ! ಕತ್ತಾಳೆಯಿಂದ ಮಾಡಿದ ಗುಡ್ಲು. ಆ ಗುಡ್ಲಿನ ಜನ ಮಾತ್ರ ಸ್ಫುರದ್ರೂಪಿಗಳು. ಬಣ್ಣವಿಲ್ಲದ ಪ್ರಕೃತಿಗೆ ಬಣ್ಣ ಮೂಡಿಸಲು ಆ ಹೆಂಗಸರು ಹಳದಿ, ಕಿತ್ತಳೆ, ಹಸಿರು, ಕೆಂಪು ರಂಗಿನ ವಿವಿಧ ಬಟ್ಟೆಗಳನ್ನು ಕಲಾಕೌಶಲದಿಂದ ಧರಿಸುತ್ತಿದ್ದರು. ಮೈ ತುಂಬಾ ಘಣಗುಟ್ಟುವ ಬೆಳ್ಳಿ ಆಭರಣಗಳು. ಇದ್ದದ್ದರಲ್ಲೇ ತೃಪ್ತರಾಗಿ ನಗುತ್ತಾ ಹಾಡುತ್ತಾ ಇರುತ್ತಾರೆ. ಒಂಟೆಗಳನ್ನು ಸಾಕಿ ಊರಿಂದೂರಿಗೆ ಸರಕು ಸಾಮಾನು ಸಾಗಿಸುವುದು ಬಿಟ್ಟರೆ ಜಿಪ್ಸಮ್ ಗಣಿಯ ಕೂಲಿ ಕೆಲಸವಷ್ಟೇ ಇವರ ಉದ್ಯೋಗ.

ಬದ್ವಾಸಿಗೆ ಒಂದು ಸಣ್ಣ ರೇಲ್ವೆ ಠಾಣವಿತ್ತು. ಆದರೆ ಮನೆಗಳು, ಅಂಗಡಿ ಏನೂ ಇಲ್ಲ. ಒಂದು ಬೆಂಕಿ ಪೊಟ್ಟಣ ಬೇಕಾದರೂ ಮೂವತ್ತು ಮೈಲಿ ಹೋಗಬೇಕು. ಅಲ್ಲಿಗೆ ಹೋಗುವ ಅಧಿಕಾರಿಗಳಿಗೆ ಇಳಿದುಕೊಳ್ಳಲು ಒಂದು ಸೊಗಸಾದ ಗೆಸ್ಟ್ ಹೌಸ್ ಇದೆ! ಅದು ಏನು ಗೊತ್ತೆ? ...ಹಿಂದೆಂದೋ ಹಳಿ ತಪ್ಪಿಯೋ, ಡಿಕ್ಕಿ ಹೊಡೆದೋ ಊನವಾಗಿದ್ದ ಒಂದು ರೇಲ್ವೆ ಬೋಗಿ! ರೇಲ್ವೆ ಹಳಿಯು

ಪಕ್ಕದಲ್ಲಿ ಅವನ್ನು ಸ್ಥಾಪಿಸಿಬಿಟ್ಟು, ಸದಾಪೂಲಿ ಹೂಗಳ ಗಿಡ ನೆಟ್ಟು ಅಲಂಕರಿಸಿಬಿಟ್ಟಿದ್ದರು. ಅದು ಬಿಟ್ಟರೆ, ಬೇರೇನಾದರೂ ವಸತಿ ಬೇಕಿದ್ದರೆ ದೂರದ ನಾಗೋರ್‌ನಿಂದ ಬೊಂಬುಗಳನ್ನು ತಂದು 'ಮನೆ' ನಿರ್ಮಿಸಿಕೊಳ್ಳಬೇಕಿತ್ತಷ್ಟೆ.

ಇಲ್ಲಿ ಹೀಗೆ ನಮ್ಮಂತಹ ತಾತ್ಕಾಲಿಕ ಕೆಲಸಕ್ಕೆ ಬರುವ ವಿದ್ಯಾವಂತರನ್ನು ಬಿಟ್ಟರೆ ಯಾವ ಕಲಿತ ಜನರೂ ಉಳಿದುಕೊಳ್ಳುತ್ತಿರಲಿಲ್ಲ. ಒಂಟೆ ಬಿಟ್ಟರೆ ಬೇರೆ ಯಾವ ವಾಹನಗಳೂ ಓಡಾಡು ವುದು ಕಷ್ಟ: ನಮ್ಮ ಜೀಪು ಸಹ ಕಷ್ಟದಿಂದ ಚಲಿಸುತ್ತಿತ್ತು.

ಇಡೀ ಬೋಳು ಬೋಳಾಗಿರುವ ಪ್ರಕೃತಿ ಯಲ್ಲಿ ಗದ್ದಲ, ಮರಮರ, ಕಲರವ ಯಾವ ಶಬ್ದವೂ ಇಲ್ಲ. (ಹಾಗಂದುಕೊಳ್ಳಲು ಈಚೆಗೆ ಸಾಧ್ಯವಿಲ್ಲವೆನ್ನಿ!... ಕೆಲವೊಮ್ಮೆ ಈ ನಿರ್ಜನ ನೀರವತೆಯಲ್ಲಿ ಆ ಮರಳ ಅಲೆಗಳ ಮೇಲಿಂದ ಲತಾ ಮಂಗೇಶ್ಕರ್, ಕಿಶೋರ್‌ಕುಮಾರ ಗಾಯನ ಕೇಳಬರುವುದುಂಟು....ಟ್ರಾನ್ಸಿಸ್ಟರ್ ಭುಜದ ಮೇಲೆ ಇಳಿಬಿಟ್ಟುಕೊಂಡು ಒಂಟೆ ಸವಾರಿ ಮಾಡುತ್ತಾ ಹೋಗುತ್ತಿರುತ್ತಾರೆ ಹಳ್ಳೀ ಜನ, ಆದರೆ ಅದು ಅಪರೂಪವಾಗಿ.)

ಆ ದಿನ ಬೆಳಿಗ್ಗೆ ಬೇಗ ಎದ್ದು 'ಜಿಪ್ಸಮ್' ಕಂಡುಹಿಡಿಯಲೆಂದು ಜೀಪಿನಲ್ಲಿ ನಮ್ಮವರು ಹೊರಟರು. ಜೀಪು ಎಂಥ ಜಾಗದಲ್ಲಿ ಓಡುವು ದಕ್ಕೂ ತಯಾರಾದ ವಾಹನವಾದರೂ ಈ ಸೊಳ್ಳನೆ ಇಳಿದು ಹೋಗುವ ಮರಳಲ್ಲಿ ಚಲಿಸು ವುದಕ್ಕಾಗುತ್ತಿರಲಿಲ್ಲ. ಅದಕ್ಕಾಗಿ ಹೆದ್ದಾರಿಯಂಥ ಗಟ್ಟಿ ರಸ್ತೆ ಮಾಡಿಸಲಾಗಿತ್ತು. ಆ ರಸ್ತೆಯಲ್ಲಿ ಜೀಪು ಹೋಗುತ್ತಿದ್ದಾಗ ಒಂದು ತಿರುವು ತಿರುಗಿತು.

ಮುನ್ನೂರು ಅಡಿ ಆಚೆ ಜಿಂಕೆಯೊಂದು ಮುಲುಗುಟ್ಟುತ್ತಿರುವುದು ಕಂಡಿತು. ದೊಡ್ಡ ನಾಯಿಯೊಂದು ಜಿಂಕೆಯನ್ನು ಹಿಡಿದು ಹಿಂಸಿಸು ತ್ತಿರುವುದೂ ಕಂಡಿತು. ಅವರೂ ಜಿಂಕೆ ಏಕೆ ಓಡಿ ತಪ್ಪಿಸಿಕೊಂಡು ಹೋಗದೇ ಹೆಣಗುತ್ತಿದೆ ಎಂದು ಆಶ್ಚರ್ಯವಾಗಿ ಜೀಪನ್ನು ಸ್ವಲ್ಪ ಮೆಲ್ಲನೆ ಓಡಿ ಸುತ್ತಾ ನೋಡಿದಾಗ ಆ ಜಿಂಕೆ ಅದೇ ತಾನೇ ಮರಿಯೊಂದಕ್ಕೆ ಜನ್ಮ ಈಯುತ್ತಿರುವುದೂ ಕಂಡಿತು! ಆ ದುಷ್ಟ ನಾಯಿ ಅದಕ್ಕಾಗಿಯೇ ಕಾಯುತ್ತಿದ್ದಂತೆಯೇ ಇನ್ನೂ ನೆಲಕ್ಕೆ ಮರಿ ಬೀಳುವುದರಲ್ಲಿ ಅದನ್ನು ಕಚ್ಚಿಕೊಂಡು ಮಿಂಚಿನ ವೇಗದಲ್ಲಿ ಓಡಿಹೋಯಿತು. ಜೀಪನ್ನು ಗಕ್ಕನೆ ನಿಲ್ಲಿಸುವಂತೆ ಡ್ರೈವರನಿಗೆ ಹೇಳಿ ಇವರು ಕೆಳಗೆ ಧುಮುಕಿದರು. ಅಲ್ಲಿ ಏನಾದರೂ ಕಲ್ಲು ತೆಗೆದುಕೊಂಡು ಆ ನಾಯಿಗೆ ಬೀಸಿ ಒಗೆಯ ಬೇಕೆಂಬ ಸಿಟ್ಟು ಮೊದಲು ಅವರಲ್ಲಿ ಉತ್ಪತ್ತಿ ಯಾದದ್ದು, ಏಟು ಬಿದ್ದರೆ ನಾಯಿ ಆ ಜಿಂಕೆಮರಿ ಯನ್ನು ಬಾಯಿಂದ ಬೀಳಿಸಬಹುದೇನೋ ಎಂಬ ಆಸೆಯಾಗಿ ಬದಲಾಯಿತು.

ಆದರೆ ಆ ಕ್ಷಣಕ್ಕೆ ಅವರು ಮರೆತಿದ್ದರು– ಅದೊಂದು ಕಲ್ಲೇ ಇಲ್ಲದ ಮರಳ ಗಾಡು ಎಂಬು ದನ್ನು! ಪ್ರಕೃತಿ ನಕ್ಕು ನಾಯಿಗೆ ಆಹಾರ ದೊರಕಿಸಿ ಕೊಟ್ಟಿತ್ತು! ದೂರದಲ್ಲಿ ಜೊಲ್ಲು ಸುರಿಸುತ್ತಾ ಮರಿಯ ಹೊಸ ಮಾಂಸದಾಸೆಯಿಂದ ನಾಯಿ ಓಡಿ ಮಾಯವಾಗುವುದರಲ್ಲಿತ್ತು.

ಜೀಪಿನೊಳಗೆ ಇರುವವನಾದರೂ ಏನಾದರೂ ಒಗೆಯಬೇಕೆನ್ನುವಷ್ಟರಲ್ಲಿ ನಾಯಿ ಪೂರ್ತಿಯಾಗಿ ಮರೆಯಾಗಿಬಿಟ್ಟಿತು. ಹತಾಶರಾಗಿ ಜೀಪಿನಲ್ಲಿ ಕುಳಿತು ವಾಪಸ್ಸು ತಾಯಿ ಜಿಂಕೆ ಬಳಿಗೆ ಬಂದರು. ಗಿಡುಗನಂತೆ ಬಂದು ಸೆಳೆದು, ಮರಿಯನ್ನು ಪೂರ್ತಿ ಹುಟ್ಟುವ ಮೊದಲೇ ಕಿತ್ತುಕೊಂಡು ಹೋದ ಮೇಲೆ ಪಾಪ, ಆ ಬಾಣಂತಿ ಜಿಂಕೆ ಬದುಕುಳಿ ಯುವುದುಂಟೆ ?

ಎಂಥ ದುಷ್ಟ ನಾಯಿ! ಅಲ್ಲ, ಅದು ಪ್ರಕೃತಿ ದೊರಕಿಸಿಕೊಟ್ಟ ನ್ಯಾಯವೇ! ಆ ಮರಳು ಗಾಡಿನಲ್ಲಿ ನಾಯಿಗೆ ಇಂಥ ಗ್ರಾಸಗಳಲ್ಲದೆ ಮತ್ತಿನ್ನೇನು ದೊರಕೀತು! ದುರ್ಬಲರ ಮೇಲೆ ದಬ್ಬಾಳಿಕೆ ನಡೆಸಿ ಗೆಲ್ಲುವುದೇ ಪ್ರಕೃತಿಯ ಮೂಲ ಧರ್ಮವೇನು? ನಾಯಿಯ ದೃಷ್ಟಿಯಲ್ಲಿ ಅದು ನ್ಯಾಯವಾಗಿ ಕಂಡರೂ, ಜಿಂಕೆಗಾಗಿ ಒಂದೆರಡು ಹನಿ ನೀರು ಕಣ್ಣಲ್ಲಿ ತುಂಬಿಕೊಳ್ಳದೆ ಇರಲಿಲ್ಲ.

✡



ಅವು ನಮ್ಮ ಅತ್ಯಮೂಲ್ಯ
ಆಸ್ತಿಗಳಾಗಬಲ್ಲವು

ಅಭಿಲೇಖಗಳು ಮತ್ತು ಅವುಗಳ ಸಂರಕ್ಷಣೆ

ಸಣ್ಣನಂಜೇಗೌಡ

ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಗಳ, ವ್ಯಕ್ತಿಗಳ ಮತ್ತು ಕುಟುಂಬಗಳ ದಿನ ನಿತ್ಯ ವಾಹಿವಾಟುಗಳಲ್ಲಿ ದಾಖಲೆಗಳ ಸೃಷ್ಟಿ ನಿರಂತರ ಹಾಗೂ ಅನಿವಾರ್ಯ. ದೈನಂದಿನ ವಿಷಯಗಳ ಬಗ್ಗೆ ಹೇಳುವುದಾದರೆ ನಾವು ಯಾವುದೇ ತೆರಿಗೆ ಕೊಟ್ಟಿದ್ದಕ್ಕೆ ರಸೀತಿ ಪಡೆಯುತ್ತೇವೆ; ಏಕೆಂದರೆ ಅದು ನಾವು ಹಣಪಾವತಿ ಮಾಡಿದ್ದಕ್ಕೆ ಪುರಾವೆಯಾಗುತ್ತದೆ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಕ್ಕೆ ಪಡೆದ ಅಂಕಪಟ್ಟಿ ಅಥವಾ ಪ್ರಮಾಣ ಪತ್ರವನ್ನು ಜೋಪಾನವಾಗಿ ಕಾಯ್ದಿಡುತ್ತೇವೆ. ನಮ್ಮ ಆಸ್ತಿಪಾಸ್ತಿಗಳ ಮೇಲಿನ ಒಡೆತನವನ್ನು ಸಾಬೀತುಗೊಳಿಸಲು ದಾಖಲೆಗಳೇ ನಮಗೆ ಆಧಾರ.

ಶಾಶ್ವತ ರಕ್ಷಣೆ ಹಾಗೂ ಮೌಲ್ಯ

ದಾಖಲೆಗಳ ಸೃಷ್ಟಿ ಎಲ್ಲ ಹಂತಗಳಲ್ಲೂ ವಿವಿಧ ಪ್ರಮಾಣದಲ್ಲಿ ನಡೆಯುತ್ತಿರುತ್ತದೆ. ಆದರೆ ಸಾರ್ವಜನಿಕ ಸಂಸ್ಥೆಗಳಲ್ಲಿ ಅವುಗಳ ಸೃಷ್ಟಿ ಸತತ ಹಾಗೂ ಅಪಾರ. ಸೃಷ್ಟಿಗೊಂಡ ದಾಖಲೆಗಳೆಲ್ಲಾ ಶಾಶ್ವತ ಸಂರಕ್ಷಣೆಗೆ ಯೋಗ್ಯವಾಗುವುದಿಲ್ಲ; ಮೌಲ್ಯಗಳ ಆಧಾರದ ಮೇಲೆ ಅವುಗಳ ಶಾಶ್ವತ ರಕ್ಷಣೆ ಅಥವಾ ದಮನಕ್ರಿಯೆ ನಡೆಯುತ್ತದೆ. ನಮ್ಮ ದಿನನಿತ್ಯ ಜೀವನದಲ್ಲಿ ಎಲ್ಲ ದಾಖಲೆಗಳನ್ನೂ ಜೋಪಾನವಾಗಿ ಇಡುವ ಅಗತ್ಯವಿರುವುದಿಲ್ಲ. ವಿದ್ಯುಚ್ಛಕ್ತಿ ತೆರಿಗೆ ಅಥವಾ ಕಾಲೇಜು ಶುಲ್ಕ ಪಾವತಿ ಮಾಡಿದ್ದಕ್ಕೆ ಪಡೆದ ರಸೀತಿಯನ್ನು ವರ್ಷಾನುಗಟ್ಟಲೆ ಇಡುವ ಔಚಿತ್ಯವಿಲ್ಲ: ಆದರೆ ಜಮೀನು ಕೊಂಡದ್ದಕ್ಕೆ ಪಡೆದ ಪತ್ರವನ್ನಾಗಲಿ ಅಥವಾ ಪದವಿ ಪಡೆದುದಕ್ಕೆ ನೀಡಿದ ಪ್ರಮಾಣ ಪತ್ರವನ್ನಾಗಲಿ ಹೆಚ್ಚು ಜಾಗರೂಕತೆಯಿಂದ ಕಾಯ್ದಿಡುತ್ತೇವೆ. ಇದರಿಂದ ತಿಳಿಯುವುದೆಂದರೆ ಯಾವ ದಾಖಲೆ ನಿರಂತರ ಮೌಲ್ಯಗಳನ್ನು ಹೊಂದಿರುತ್ತದೆಯೋ ಹಾಗೂ ಹಕ್ಕನ್ನು ನಿರ್ಣಯಿಸುವ ಪುರಾವೆಗಳನ್ನು ಪಡೆದಿರುತ್ತದೆಯೋ ಅಂಥದು ಶಾಶ್ವತ ಸಂರಕ್ಷಣೆಗೆ ಯೋಗ್ಯವೆನಿಸುತ್ತದೆ. ಇದೇ ರೀತಿ, ಸಾರ್ವಜನಿಕ ದಾಖಲೆಗಳ ಅಳಿವು-ಉಳಿವು ಅವುಗಳು ಹೊಂದಿರುವ ಮೌಲ್ಯಗಳನ್ನು ಅವಲಂಬಿಸಿದೆ.

ಆಕಸ್ಮಿಕ ಸೃಷ್ಟಿ

ಸಾರ್ವಜನಿಕ ವ್ಯವಹಾರದಲ್ಲಿ ದಾಖಲೆಗಳ ಸೃಷ್ಟಿ ನಿರಂತರವಾಗಿದ್ದರೂ ಅದು ಕೇವಲ ಆಕಸ್ಮಿಕ. ಘಟನೆಗಳು ಕಡತದ ಸೃಷ್ಟಿಗೆ ಕಾರಣವಾಗುವಂತೆ ಅದು ಸೃಷ್ಟಿಯಾಗದ ಹೊರತು ಘಟನೆಗಳಿಗೆ ಸಂಬಂಧ ವಹಿವಾಟುಗಳು ಅಸಾಧ್ಯ. ಸಂವಹನ, ಪ್ರತಿಕ್ರಿಯೆ, ಬೆಳವಣಿಗೆ, ಸುಧಾರಣೆ–ಮಿಗಿಲಾಗಿ ಎಲ್ಲ ಕಾರ್ಯ–ಕಾರಣ ಸಂಬಂಧ ಚಟುವಟಿಕೆಗಳ ಚಿತ್ರಣ ದೊರೆಯುವುದು ದಾಖಲೆಗಳಲ್ಲಿಯೇ. ಮನುಷ್ಯನ ಮಿದುಳಿಗೆ ದಾಖಲು ಮಾಡಿಕೊಳ್ಳುವ ಶಕ್ತಿಯಿದ್ದರೂ ಮಾಡಿಕೊಂಡಿದ್ದನ್ನೆಲ್ಲ ಉಳಿಸಿಕೊಳ್ಳುವ ಶಕ್ತಿ ಅದಕ್ಕಿಲ್ಲ. ಆದ್ದರಿಂದಲೇ ಬರೆದಿಡುವುದು ಮನುಷ್ಯನ ಪ್ರವೃತ್ತಿ. ಹಾಗೆ ಮಾಡುವುದರಿಂದ ಅದೊಂದು ರೀತಿಯ ಸುಸಂಘಟಿತ ಜ್ಞಾಪಕ ಶಕ್ತಿಯಾಗಿ ಉಳಿಯುತ್ತದೆ. ಸಂಘ – ಸಂಸ್ಥೆಗಳ ವ್ಯವಸ್ಥಿತ ಜ್ಞಾಪಕ ಶಕ್ತಿ ಅವುಗಳು ಸೃಷ್ಟಿಸಿದ ಹಾಗೂ ಸಂರಕ್ಷಿಸಿದ ದಾಖಲೆಗಳು ಎನ್ನಬಹುದು. ಮುಂದಿನ ವ್ಯವಹಾರಗಳಿಗೆ ದೃಷ್ಟಾಂತವಾಗುವುದರಿಂದ ಕಾರ್ಯ ಚಟುವಟಿಕೆಗಳ ಸಮರ್ಥನೆಗೆ ಹಾಗೂ ಸುಗಮ ಆಡಳಿತ ನಿರ್ವಹಣೆಗೆ ಅಗತ್ಯವೆನಿಸಿದ ದಾಖಲೆಗಳನ್ನು ಜೋಪಾನವಾಗಿ ಇಡುವ ಕೆಲಸ ಅತ್ಯಗತ್ಯ.

ಅಭಿಲೇಖಗಳು, ದಾಖಲೆಗಳು

ಸಂಘ–ಸಂಸ್ಥೆಗಳು ಸೃಷ್ಟಿಸಿದ, ಮೌಲ್ಯ ಮಾಪನದ ಅನಂತರ ಉಳಿದ, ಸಂದರ್ಭದಲ್ಲಿ ಪರಾಮರ್ಶೆಗೆ ಬೇಕೆನಿಸುವ ಹಾಗೂ ಅವುಗಳ ಉಸ್ತುವಾರಿಯಲ್ಲಿಯೇ ಜೋಪಾನವಾಗಿ ಕಾಯ್ದಿರಿಸಿರುವ (Custody) ದಾಖಲೆಗಳು ಅಭಿಲೇಖಗಳಾಗುತ್ತವೆ. ಅಭಿಲೇಖಗಳಿಗೂ (Archives) ದಾಖಲೆಗಳಿಗೂ (Records) ಇರುವ ವ್ಯತ್ಯಾಸ ಮತ್ತು ಸಾಮ್ಯಗಳನ್ನು ಗುರುತಿಸುವುದು ಅಗತ್ಯ. ಎಲ್ಲ ಅಭಿಲೇಖಗಳು ದಾಖಲೆಗಳಾಗುತ್ತವೆ; ಆದರೆ ಎಲ್ಲ ದಾಖಲೆಗಳು ಅಭಿಲೇಖಗಳಾಗುವುದಿಲ್ಲ. ಎರಡೂ ಪ್ರಕಾರಗಳು ಆಯಾ ಸಂಘ–ಸಂಸ್ಥೆಗಳಿಂದ ಸೃಷ್ಟಿಗೊಂಡವುಗಳಾಗಿದ್ದರೂ ದಾಖಲೆಗಳು ಆಡಳಿತ ನಿರ್ವಹಣೆಯಲ್ಲಿ ಆಗಾಗ್ಗೆ ಬೇಕಿದ್ದು, ಅರೆ-ಚಾಲ್ತಿ (Semi-current) ಯಲ್ಲಿರುವ ಹಾಗೂ ಪತ್ರಾಗಾರಕ್ಕೆ ವರ್ಗಾವಣೆಯಾಗದವುಗಳಾಗಿರುತ್ತವೆ. ಅಭಿಲೇಖಗಳು ಸಂಶೋಧಕರಿಗೆ ಹೆಚ್ಚು ಅಗತ್ಯವಿದ್ದಂತೆ ದಾಖಲೆಗಳು ಆಡಳಿತ ನಿರ್ವಾಹಕರಿಗೆ ಅಗತ್ಯವೆನಿಸುತ್ತವೆ. ದಾಖಲೆಗಳು ತಮ್ಮ ಅರೆ-ಚಾಲನೆ ಘಟ್ಟವನ್ನು ಮುಗಿಸಿ ಮೌಲ್ಯಮಾಪನೆಯ ಅನಂತರ ಉಳಿದವುಗಳು ಅಭಿಲೇಖಗಳಾಗಿ ಪತ್ರಾಗಾರಗಳಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಬ್ರಿಟಿಷ್ ಅಭಿಲೇಖ ತಜ್ಞ ಹಿಲ್ಲರಿ ಜೆಂಕಿನ್‌ಸನ್ ಅಭಿಲೇಖಗಳನ್ನು ಕುರಿತಂತೆ ನೀಡುವ ವಿವರಣೆ ಈ ರೀತಿ ಇದೆ: "ಸಾರ್ವಜನಿಕ ಅಥವಾ ಖಾಸಗೀ ಸಂಸ್ಥೆಗಳ ಆಡಳಿತ ಅಥವಾ ಕಾರ್ಯನಿರ್ವಾಹಕ ಸಂಬಂಧ ವಹಿವಾಟಿನಲ್ಲಿ ಸೃಷ್ಟಿಸಿದ ಅಥವಾ ಬಳಸಿದ ಹಾಗೂ ಆ ವಹಿವಾಟು ತತ್ಸಂಬಂಧ ಕ್ರಿಯೆಯ ಭಾಗಗಳೇ ಆಗಿರುವ, ಕ್ರಮೇಣ ಸೃಷ್ಟಿಸಿದವರಿಗೇ ಅಗತ್ಯ ಬಿದ್ದಲ್ಲಿ ಅವುಗಳಿಂದ ಮಾಹಿತಿಯನ್ನು ಪಡೆಯುವ ಸಲುವಾಗಿ ತಮ್ಮ ರಕ್ಷಣೆಯಲ್ಲಿಯೇ ಕಾಯ್ದಿಟ್ಟ ಅನಂತರ ನ್ಯಾಯಬದ್ಧ ಉತ್ತರಾಧಿಕಾರಿಗಳಿಗೆ ವರ್ಗಾವಣೆ ಹೊಂದುವಂಥವುಗಳು ಅಭಿಲೇಖಗಳು."

ಶ್ರೇಷ್ಠ ದರ್ಜೆಯ ಪುರಾವೆ

ಅಭಿಲೇಖಗಳ ಉಪಯೋಗ ಹಲವಾರು. ಪ್ರಜಾಪ್ರಭುತ್ವ ಸಮಾಜಗಳಲ್ಲಿ ಸಾರ್ವಜನಿಕ ದಾಖಲೆಗಳು ಸರ್ಕಾರದ ರೀತಿ – ನೀತಿಗಳನ್ನು ಪರಿಚಯಿಸುವ ಸಾಧನಗಳಾಗುವುದರಿಂದ ಅವುಗಳ ಆಧಾರದ ಮೇಲೆ ಜನರು ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆಡಳಿತ ಸಂಬಂಧ ವಿಷಯಗಳನ್ನು ಕುರಿತ ವಿವಾದಗಳನ್ನು ಬಗೆಹರಿಸಲು ನೆರವಾಗುವುದಲ್ಲದೆ ಸಾಮಾನ್ಯ ನಾಗರಿಕನ ಹಕ್ಕುಬಾಧ್ಯತೆಗಳನ್ನು ರಕ್ಷಿಸುವ ಶ್ರೇಷ್ಠ ದರ್ಜೆಯ ಪುರಾವೆಗಳಾಗುತ್ತವೆ. ಮಿಗಿಲಾಗಿ, ಒಂದು ನಾಡಿನ ಅಥವಾ ದೇಶದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ

ಇತಿಹಾಸವನ್ನು ಸಮಗ್ರವಾಗಿ ನಿರೂಪಿಸುವ ಸಂಶೋಧಕರ ಗ್ರಾಸವಾಗುತ್ತವೆ. ಅಮೆರಿಕದ ಇತಿಹಾಸಕಾರ ಚಾರ್ಲ್ಸ್ ಎಂ. ಆಂಡ್ರ್ಯೂಸ್ ಅಭಿಪ್ರಾಯ ಪಡುವಂತೆ, "ಅಭಿಲೇಖಗಳ ಸಂರಕ್ಷಣೆ ಅಗತ್ಯವಾಗಿದ್ದು, ಅವು ದೇಶದ ನಾಗರಿಕತೆಯ ಹಂತಗಳನ್ನು ನಿರೂಪಿಸುವ ಮಾಪನಗಳಾಗಿವೆ; ಅವುಗಳನ್ನು ಸಂರಕ್ಷಿಸದಿದ್ದರೆ ಯಾವೊಬ್ಬ ವ್ಯಕ್ತಿಯೂ ಆ ದೇಶದ ಇತಿಹಾಸದ ಸಂಪೂರ್ಣ ಜ್ಞಾನ ಹೊಂದಿರುವನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ."

ಸಂಶೋಧಕನಿಗೆಂದೇ ಅಭಿಲೇಖಗಳು ಸೃಷ್ಟಿಯಾದವುಗಳಲ್ಲ. ಆದರೆ ಕ್ರಮೇಣ ಕಾಲ ಮತ್ತು ವಸ್ತುವಿನ ದೆಶೆಯಿಂದ ಐತಿಹಾಸಿಕ ಮಹತ್ವವನ್ನು ಪಡೆದುಕೊಳ್ಳುವುದರಿಂದ ಅವುಗಳಿಲ್ಲದೆ ಆಧುನಿಕ ಇತಿಹಾಸ ರಚನೆ ಅಸಾಧ್ಯ.

ಪುಸ್ತಕಗಳು ಅಭಿಲೇಖಗಳಿಂದ ವಿಭಿನ್ನವಾಗಿವೆ. ಮಾಹಿತಿಯನ್ನೊದಗಿಸುವುದು ಈ ಎರಡೂ ಪ್ರಕಾರಗಳ ಮೂಲ ಉದ್ದೇಶವಾಗಿದ್ದರೂ ವರ್ಗೀಕರಣ, ವಿವರಣೆ, ಪಾಲನೆ, ಶೇಖರಣೆ ಹಾಗೂ ಪರಾಮರ್ಶೆಯ ಸಂಬಂಧ ವಿಷಯಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಕಡತಗಳು (ಅಭಿಲೇಖಗಳಾಗಿ ಉಳಿದವುಗಳೂ ಸೇರಿ) ಕಾರ್ಯಕಲಾಪಗಳ ಉತ್ಪನ್ನಗಳಾದರೆ ಪುಸ್ತಕಗಳು ಪ್ರಮುಖವಾಗಿ ಭಾವನೆಗಳ ಅಥವಾ ಅಭಿಪ್ರಾಯಗಳ ನಿರೂಪಣೆಗಳಾಗಿವೆ. ಗ್ರಂಥಾಲಯಗಳಲ್ಲಿ ಪುಸ್ತಕವು ಪ್ರಮುಖ ಘಟಕವಾಗಿದ್ದರೆ ಪತ್ರಾಗಾರಗಳಲ್ಲಿ ಮಾಹಿತಿಯೇ ಮುಖ್ಯ ಘಟಕವಾಗಿರುತ್ತದೆ, ಗ್ರಂಥಗಳಿಗಿರುವಂತೆ ಕರ್ತೃ, ಶಿರೋನಾಮೆ, ಸೂಚಿ, ಪರಿವಿಡಿ, ಮುನ್ನುಡಿ ಇತ್ಯಾದಿಗಳು ಅಭಿಲೇಖಗಳಿಗಿರುವುದಿಲ್ಲ.

ಸಂರಕ್ಷಣೆ

ಅಭಿಲೇಖಗಳು ಹೊಂದಿರುವ ಮಹತ್ವ ಗುಣಗಳಿಂದಾಗಿ ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲ ನಾಗರಿಕ ಸಮಾಜಗಳ ಹೊಣೆ. ಅವುಗಳು ಗತಕಾಲವನ್ನು ಪ್ರತಿಬಿಂಬಿಸುವ ಅತ್ಯುತ್ತಮ ಸಾಧನಗಳಲ್ಲದೆ ಅವುಗಳನ್ನು ಸಂರಕ್ಷಿಸುವ ಪ್ರಮುಖ ಕೇಂದ್ರಗಳಾಗಿರುತ್ತವೆ. ಶತಮಾನಗಳ ಹಿಂದಿನಿಂದಲೂ ದಾಖಲೆಗಳು ಸೃಷ್ಟಿಯಾಗುತ್ತಲೇ ಬಂದಿವೆ. ಬಳಸುವ ಮಾಧ್ಯಮಗಳಿಗನುಗುಣವಾಗಿ ಸಂರಕ್ಷಣಾ ಪದ್ಧತಿಗಳೂ ಬದಲಾಗುತ್ತ ಬಂದಿವೆ. ಕಾಗದದ ಬಳಕೆ ಆರಂಭವಾಗುವುದಕ್ಕೆ ಮುನ್ನ ಶಿಲೆ (ಶಾಸನಗಳು), ಮಣ್ಣಿನ ಅಚ್ಚುಗಳು ಓಲೆಗರಿಗಳು, ತೊಗಲು, ಲೋಹಗಳು, ಬಟ್ಟೆ ಮುಂತಾದುವುಗಳ ಮೇಲೆ ರಾಜಾಜ್ಞೆಗಳು, ಕೊಡುಗೆಗಳು (ದಾನ ಶಾಸನ), ವೆಚ್ಚಗಳು ಇತ್ಯಾದಿ ವಿಷಯಗಳನ್ನು ದಾಖಲಿಸುವ ಪದ್ಧತಿ ಇತ್ತು. ಆದರೆ ಸುಮಾರು ಹದಿನಾರನೆಯ ಶತಮಾನದಿಂದೀಚೆಗೆ ಸಾರ್ವಜನಿಕ ಆಡಳಿತ ನಿರ್ವಹಣೆಯಲ್ಲಿ ಕಾಗದದ ಬಳಕೆ ಕ್ರಮೇಣ ಹೆಚ್ಚುತ್ತಾ ಬಂದಿರುವುದನ್ನು ಗುರುತಿಸಬಹುದು. ಅದರಲ್ಲೂ ಕೈಗಾರಿಕಾ ಕ್ರಾಂತಿಯ ಅನಂತರ ಕಾಗದದ ಬಳಕೆ ಜ್ಯಾಮಿತಿಯ ಅನುಪಾತದಲ್ಲಿ ಬಳಕೆಯಾಗುತ್ತಿದೆಯೆಂದೇ ಹೇಳಬಹುದು.

ಕಾಗದ ಅಥವಾ ಇನ್ನಾವುದೇ ಜೈವಿಕ ಘಟಕವನ್ನೊಳಗೊಂಡ ಬರವಣಿಗೆಯ ಮಾಧ್ಯಮಗಳ ಮೇಲೆ ರಚಿತವಾದ ದಾಖಲೆಗಳನ್ನು ಸಂರಕ್ಷಿಸುವುದು ಇಂದು ವಿಜ್ಞಾನಕ್ಕೆ ಸವಾಲೇನಲ್ಲ. ಕಾಗದದ ಪ್ರಮುಖ ಘಟಕ 'ಸೆಲ್ಯೂಲೋಸ್' ಆಗಿದ್ದು, ಅದು ಕ್ರಮೇಣ ವಾತಾವರಣದ ವೈಪರೀತ್ಯಗಳಿಂದಾಗಿ ನಶಿಸುವ ಸಂಭವಗಳೇ ಅಧಿಕ. ಉಚ್ಚಮಟ್ಟದ ಸೆಲ್ಯೂಲೋಸ್ (Alpha–Cellul(se)ನ್ನು ಹೊಂದಿದ ಹಾಗೂ ಆಮ್ಲಜನಕ ರಹಿತ ವಸ್ತುಗಳಿಂದ ತಯಾರಿಸಿದ ಕಾಗದದ ಮೇಲೆ ರಚಿತವಾದ ದಾಖಲೆಗಳು ದೀರ್ಘಕಾಲ ಉಳಿಯುವ ಸಂಭವಗಳಿದ್ದರೂ ವಾತಾವರಣ ಮಾಲಿನ್ಯದಿಂದ ಉಂಟಾಗುವ ಆಮ್ಲಜನಕ ಅನಿಲಗಳು, ಧೂಳು, ಹಾನಿಕಾರಕ ಬೆಳಕಿನ ಕಿರಣಗಳು (ultravoilet and infra–red rays), ಸೂಕ್ಷ್ಮ ಜೀವಿಗಳು, ಕೀಟಗಳು ಹಾಗೂ ಮನುಷ್ಯನ ನಿರ್ಲಕ್ಷ್ಯಗಳ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ವಹಿಸದಿದ್ದರೆ ಅವು ನಶಿಸುವ ಅವಕಾಶಗಳು ಹೆಚ್ಚು. ಅಭಿಲೇಖಗಳು ನಿರ್ಮಾಣವಾಗಿರುವ ಮಾಧ್ಯಮಗಳ–ಪ್ರಮುಖವಾಗಿ ಕಾಗದ, ಶಾಯಿ–ಘಟಕಗಳ ಬಗ್ಗೆ ಸಾಮಾನ

ಜ್ಞಾನದ ಜೊತೆಗೆ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕ ಸಲಕರಣೆಗಳನ್ನು ಬಳಸಿಕೊಳ್ಳುವ ಕೌಶಲಗಳಿಂದ ಅವುಗಳನ್ನು ರಕ್ಷಿಸಬಹುದು. ಅಭಿಲೇಖ ಸಂರಕ್ಷಣಾ ವಿಜ್ಞಾನ ಇತ್ತೀಚೆಗೆ ಗಣನೀಯವಾದ ಬೆಳವಣಿಗೆಯನ್ನು ಕಂಡುಕೊಳ್ಳುತ್ತಿದೆ. ಅಭಿಲೇಖಾತ್ಮಕ ತಂತ್ರಕೌಶಲ (Archival techniques) ಗಳಿಂದೇ ಈ ದಿಶೆಯಲ್ಲಿ ಅಭಿವೃದ್ಧಿ ಹೊಂದಿದ್ದು, ಅವು ವಿಜ್ಞಾನ ಮತ್ತು ಪತ್ರಾಗಾರಗಳ ಸಂಬಂಧ ಹೆಚ್ಚಿಸಿರುವ ಬಿಗಿ ಕೊಂಡಿಗಳಾಗಿ ಪರಿಣಮಿಸಿವೆ.

ವಿವಿಧ ಪದ್ಧತಿಗಳು

ದಾಖಲೆಗಳನ್ನು ಸಾಂಪ್ರದಾಯಿಕ ಹಾಗೂ ಆಧುನಿಕ ಪದ್ಧತಿಗಳಿಂದ ದುರಸ್ತೀಕರಣಗೊಳಿಸಬಹುದು. ಟಿಶ್ಯೂ ಕಾಗದದ ಹೊದಿಕೆ, ಪೂರ್ಣ ಅಂಟಿಸುವಿಕೆ (Handmade paper) ಕಟ್ಟಿನ ಮಧ್ಯೆ ದಾಖಲೆಗಳನ್ನು ಕೂರಿಸುವಿಕೆ(Inlaying), ತೆಳು ರೇಷ್ಮೆ ಹೊದಿಕೆ, ಲೀನಕಾರಿ ದ್ರಾವಕ (Solvents)ಗಳನ್ನು ಬಳಸಿ ಟಿಶ್ಯೂ ಕಾಗದ ಮತ್ತು ಸೆಲ್ಯುಲೋಸ್ ಅಸಿಟೇಟ್ ಪಟಲಗಳನ್ನು ಬಳಸಿ ಮೊಹರು ಮಾಡುವುದು– ಇವು ಸಾಂಪ್ರದಾಯಿಕ ಪದ್ಧತಿಗಳಾಗಿದ್ದು, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಪತ್ರಾಗಾರಗಳಲ್ಲಿ ಅನುಸರಿಸಬಹುದು. ಆಧುನಿಕ ಪದ್ಧತಿಗಳಲ್ಲಿ ಯಂತ್ರಗಳನ್ನು ಬಳಸಬೇಕಾಗುತ್ತದೆ. ಕೃತಕ ಸಂಯುಕ್ತಗಳನ್ನು ಬಳಸಿ ದಾಖಲೆಗಳನ್ನು ಬಿರುಸುಗೊಳಿಸುವಿಕೆ, ಫ್ಲ್ಯಾಟ್‌ಬೆಡ್ ಮತ್ತು ರೋಟರಿ ವಿಧದ ಲ್ಯಾಮಿನೇಟರ್ಸ್ ಬಳಸಿ ಮೊಹರು ಮಾಡುವುದು, ಕೋಶೀಕರಣ, ಲೀಫ್ ಕಾಸ್ಟಿಂಗ್– ಇವೇ ಮುಂತಾದವುಗಳು ಆಧುನಿಕ ಪದ್ಧತಿಗಳು.

ಅಭಿಲೇಖ ಸಂರಕ್ಷಣಾ ವಿಜ್ಞಾನ ಕೇವಲ ದುರಸ್ತೀಕರಣಕ್ಕೆ ಸೀಮಿತವಾದುದಲ್ಲ, ಆಗಬಹುದಾದ ಹಾನಿಗಳನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳನ್ನು ಸೂಚಿಸುವಂಥದೂ ಆಗಿದೆ. ಗಮನಾರ್ಹ ಸಂಗತಿಯೆಂದರೆ ಮನುಷ್ಯರಿಗೆ ಅನುಕೂಲವಾದ ಹವಾಮಾನವೇ ದಾಖಲೆಗಳಿಗೂ ಸರಿಹೊಂದುತ್ತದೆ. ಹೆಚ್ಚು ತೇವಾಂಶ, ಅತಿ ಉಷ್ಣತೆ, ಧೂಳು ಮತ್ತು ಆಮ್ಲಕಾರಕ ಅನಿಲಗಳು ದಾಖಲೆಗಳ ಜೀವಿತ ಅವಧಿಯನ್ನು ಕತ್ತರಿಸುತ್ತವೆ. ಆದ್ದರಿಂದ ಹವಾನಿಯಂತ್ರಣ ವ್ಯವಸ್ಥೆ ಅತ್ಯಾವಶ್ಯಕ. (ಉಷ್ಣಾಂಶ ೨೨°ಸಿ–೨೪°ಸಿ ಮತ್ತು ಆರ್. ಎಚ್. ಶೇಕಡ ೪೫ ರಿಂದ ೫೫ ಅನುಕೂಲವೆಂದು ಹೇಳಲಾಗಿದೆ) ಇದಲ್ಲದೆ, ಪ್ರಕೃತಿಯ ಆಕಸ್ಮಿಕ ಅನಾಹುತಗಳ (ಸಮರ, ಬೆಂಕಿ, ಪ್ರವಾಹ, ಭೂಕಂಪ) ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಬಹುಮುಖ್ಯ ಅಭಿಲೇಖ ಶ್ರೇಣಿ (Archival series) ಗಳನ್ನು ಸೂಕ್ಷ್ಮಛಾಯಾ ಪಟಲೀಕರಣ (Microfilming) ಮಾಡಿ ಸುರಕ್ಷಿತ ಸ್ಥಳಗಳಲ್ಲಿಡುವ ಪದ್ಧತಿ ಹೊರದೇಶಗಳಲ್ಲಿ ರೂಢಿಯಲ್ಲಿದೆ. ಹಾಗೆ ಮಾಡುವುದರಿಂದ ಮುಖ್ಯ ಮಾಹಿತಿಯನ್ನು ಮುಂದಿನ ಪೀಳಿಗೆಗೆ ಕಾಯ್ದಿಟ್ಟಂತಾಗುತ್ತದೆ. ಅಲ್ಲದೆ, ದುರಸ್ತೀಕರಣ ಅಸಾಧ್ಯವೆನಿಸಿದಾಗ, ಸ್ಥಳ ಅಭಾವದ ಪರಿಸ್ಥಿತಿಗಳು ತಲೆದೋರಿದಾಗ ದಾಖಲೆಗಳನ್ನು ಸೂಕ್ಷ್ಮಛಾಯಾ ಪಟಲೀಕರಣ ಮಾಡುವುದು ಅನಿವಾರ್ಯ.

ಅಭಿಲೇಖ ಸಂಬಂಧ ವಿಜ್ಞಾನ ಹಾಗೂ ಆಡಳಿತ ನಿರ್ವಹಣಾ ಪದ್ಧತಿಗಳು ಶೀಘ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿವೆ. ಜನಸಾಮಾನ್ಯರು, ಸಂಶೋಧಕರು ಹಾಗೂ ಆಡಳಿತ ನಿರ್ವಾಹಕರು ಈ ದಿಶೆಯಲ್ಲಿ ಕಾಳಜಿ ವಹಿಸುತ್ತಿರುವುದು ಹೆಮ್ಮೆಯ ವಿಷಯ. ನವದೆಹಲಿಯಲ್ಲಿರುವ ರಾಷ್ಟ್ರೀಯ ಪತ್ರಾಗಾರ ಏಶಿಯದಲ್ಲೇ ದೊಡ್ಡ ಪತ್ರಾಗಾರವಾಗಿದ್ದು, ಅದು ದೇಶದ ರಾಜ್ಯ ಪತ್ರಾಗಾರಗಳಿಗೆ ಸೂಕ್ತ ಸಲಹೆಗಳು ಹಾಗೂ ಮಾರ್ಗದರ್ಶನಗಳನ್ನು ನೀಡುತ್ತದೆ. ಉಷ್ಣವಲಯ ದೇಶಗಳಲ್ಲಿ ಅಭಿಲೇಖಗಳನ್ನು ಸಂರಕ್ಷಿಸಲು ಅದು ಕೈಗೊಂಡ ಸಂಶೋಧನೆಗಳ ಫಲದಿಂದಾಗಿ ನಶಿಸಿಹೋಗಬಹುದಾದ ಸಾರ್ವಜನಿಕರ ಅತ್ಯಮೂಲ್ಯ ಆಸ್ತಿ ಹಾಗೂ ರಾಷ್ಟ್ರದ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕಾಯ್ದಿಡಲು ಇಂದು ಸಾಧ್ಯವಾಗಿದೆ. ●



ಮಾನವ ಪ್ರಪಂಚದಲ್ಲೊಂದು ಸೂಕ್ಷ್ಮ ಪ್ರಪಂಚ!

ಹುದುಗೆಬ್ಬಿಸುವುದು (fermentation) ಸೂಕ್ಷ್ಮಾಣು ಜೀವಿಗಳ ಹಲವು ಕ್ರಿಯೆಗಳಲ್ಲಿ ಒಂದು. ಕಾಲಗರ್ಭದಲ್ಲಿ ಅಳಿದು ಹೋದ ಹಲವು ಸಂಸ್ಕೃತಿಗಳಲ್ಲಿ ಹುದುಗೆಬ್ಬಿಸಿ ತಯಾರಿಸಿದ ಹಲವು ಆಹಾರಗಳು ಬೆಳಕಿಗೆ ಬಂದಿವೆ. ಈಜಿಪ್ತ್ ಮತ್ತು ಸಿರಿಯಾದ 'ಲೇ ಬೆನ್' ಸ್ಕ್ಯಾಂಡಿನೇವಿಯನ್ ದೇಶಗಳ 'ಟೆಟೆಂಜೋಕ್,' ಅಮೇರಿಕದ ರೆಡ್‌ಇಂಡಿಯನರ 'ಪಟ್‌ಜೂವಪ್' ಲ್ಯಾಪ್‌ಲ್ಯಾಂಡಿನ 'ಪಿನೆರ್,' ಕೆನ್ಯಾದ 'ಚಾಕ್' ಮತ್ತು 'ಪೊಪ್‌ವೊ,' ಜಪಾನಿನ 'ಯೋಕಸ್ಟ್,' ಬಲ್ಗೇರಿಯಾದ 'ಕೆಫೀರ್' ಇವೆಲ್ಲ ಬಹುಪೂರ್ವದಲ್ಲೇ ಹುದುಗೆಬ್ಬಿಸುವಿಕೆಯಿಂದ ತಯಾರಾದ ಆಹಾರ ಪದಾರ್ಥಗಳು.

ಮೋಹನ ಕೋಟ್ಯಾನ್

ಸೂಕ್ಷ್ಮಾಣುಜೀವಿಗಳೆಂದರೆ ರೋಗಕಾರಕ ಮಾರಕ ಜೀವಿಗಳೆಂದೇ ಸಾಮಾನ್ಯ ಭಾವನೆ. ಆಧುನಿಕ ವಿಜ್ಞಾನವು ಸೂಕ್ಷ್ಮಾಣುಜೀವಿಗಳನ್ನು ಅರ್ಥವಿಸುವಲ್ಲಿ ಬಹಳಷ್ಟು ಮುಂದುವರಿದಂತೆ ಅವುಗಳ ಜೀವಕೋಶ ಸಂಕೀರ್ಣತೆ ಅತಿಸೂಕ್ಷ್ಮವೂ, ಜಟಿಲವೂ ಆದ ಕಾರಣ ಸಂಶೋಧಕರಿಗೆ ವರಪ್ರದವಾಗಿದೆ.

ನಮ್ಮ ಪೂರ್ವಜರಿಗೆ ಹಾಲಿನಿಂದ ಮೊಸರನ್ನು ಮಾಡುವ ವಿಧಾನ, ಉಪ್ಪಿನಕಾಯಿಯನ್ನು ಕೆಡದಂತೆ ಕಾಪಿಡುವ ರೀತಿ, ಸಾಂಕ್ರಾಮಿಕ ರೋಗಗಳ ಹರಡುವಿಕೆಯ ಪರಿಜ್ಞಾನವಿದ್ದರೂ, ಈ ಕ್ರಿಯೆಗಳಲ್ಲಿ ಸೂಕ್ಷ್ಮಾಣುಜೀವಿಗಳ ರಾಸಾಯನಿಕ ಪಾತ್ರ ಎಷ್ಟು ಪ್ರಧಾನವಾದೆಂಬುದರ ಅರಿವಿರಲಿಲ್ಲ. ಕ್ರಿಸ್ತ ಪೂರ್ವ ೬,೦೦೦ದಷ್ಟು ಹಿಂದೆಯೇ ಮೆಸಪೊಟೇಮಿಯಾದಲ್ಲಿ ಮದ್ಯ ತಯಾರಿಸಲು ಬಳಸುತ್ತಿದ್ದುದು ಸಕರೋ ಮೈಸಿಸ್ ಎಂಬ ಸೂಕ್ಷ್ಮಾಣುಜೀವಿಯನ್ನು ಎಂದು ತಿಳಿದುಬಂದಿದೆ. ತಾಡೋಲೆಯ ಬರಹದಲ್ಲಿ ನಮೂದಿಸಿದಂತೆ ಈಸ್ಟ್ ಎಂಬ ಸೂಕ್ಷ್ಮಾಣುಜೀವಿಗಳನ್ನು ಕ್ರಿಸ್ತ ಪೂರ್ವ ೧,೬೦೦ ರಷ್ಟು ಹಿಂದೆಯೆ ಔಷಧಿಯಾಗಿ ಬಳಸುತ್ತಿದ್ದುದುಂಟು.

ಸೂಕ್ಷ್ಮಾಣುಜೀವ ಜಗತ್ತು ಕೇವಲ ೩೦೦ ವರ್ಷಗಳಷ್ಟು ಹಿಂದೆ ಮಾತ್ರ ಗೋಚರವಾಯಿತು. ಡಚ್ ದೇಶದ ಆ್ಯಂಟೋನಿ ಫಾನ್

ಲಾನ್‌ಹಾಕ್ ಎಂಬ ನಾರು ಬಟ್ಟೆಯ ವ್ಯಾಪಾರಿ ಮಸೂರ ತಯಾರಿಸುವ ತನ್ನ ಹವ್ಯಾಸದಲ್ಲಿ ತೊಡಗಿದ್ದಾಗ ಸೂಕ್ಷ್ಮಾಣುಜೀವಿಗಳ ವಿಚಿತ್ರ ಜಗತ್ತನ್ನು ಮೊತ್ತಮೊದಲಾಗಿ ಕಂಡ. ಮಾನವ ಪ್ರಪಂಚದಲ್ಲಿರುವ ಈ ಸೂಕ್ಷ್ಮ ಪ್ರಪಂಚವು ಅಂದಿನವರೆಗೆ ಅಗೋಚರವಾಗಿತ್ತು.

ಮುಂದೆ ಲೂಯಿ ಪಾಶ್ಚರ್ ಮತ್ತು ರಾಬರ್ಟ್ ಕಾಕ್‌ರ ಸಂಶೋಧನೆಯಿಂದ ಪ್ರೋತ್ಸಾಹಿತರಾದ ಹಲವು ವಿಜ್ಞಾನಿಗಳ ಅವಿಶ್ರಾಂತ ಪ್ರಯತ್ನ, ಇಲೆಕ್ಟ್ರಾನ್ ಮೈಕ್ರೋಸ್ಕೋಪಿನ ಆವಿಷ್ಕಾರ, ನವ ನವೀನ ವಿಧಾನಗಳ ಬಳಕೆ ಹಾಗೂ ಹೊಸ ಹೊಸ ಸಂಶೋಧನೆಗಳಿಂದ ಕಳೆದ ಎರಡು ಶತಮಾನಗಳಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದ ಸೂಕ್ಷ್ಮಜೀವವಿಜ್ಞಾನವು ಇಂದು ಭೀಮ ವೇಗದಿಂದ ಮುಂದುವರಿಯುತ್ತ ಜೀವಸೃಷ್ಟಿಯ ಹಲವು ಕ್ಲಿಷ್ಟ ಸಮಸ್ಯೆಗಳನ್ನು ಅರ್ಥವಿಸುವಲ್ಲಿ ಸಹಕಾರಿಯಾಗಿದೆ. ಬರಿಗಣ್ಣಿಗೆ ಅಗೋಚರವಾಗಿದ್ದು ಸೂಕ್ಷ್ಮದರ್ಶಕದ ಸಹಾಯದಿಂದ ಮಾತ್ರ ಗೋಚರವಾಗುವ ಈ ಅಣುಜೀವಿಗಳಿಗೆ ಸೂಕ್ಷ್ಮಾಣುಜೀವಿಗಳೆನ್ನುತ್ತಾರೆ. ಪಂಚಭೂತಗಳಲ್ಲಿ ಅಗ್ನಿಯನ್ನು ಹೊರತುಪಡಿಸಿ, ಗಾಳಿ, ಮಣ್ಣು, ನೀರು, ವಾತಾವರಣ ಹಾಗೂ ಸಕಲ ಜೀವ-ನಿರ್ಜೀವ ವಸ್ತುಗಳಲ್ಲಿ ಇವುಗಳ ಅಸ್ತಿತ್ವವನ್ನು ಕಾಣಬಹುದು. ಅಗಾಧ ಸಂಖ್ಯೆಯಲ್ಲಿ ವಿಶ್ವವ್ಯಾಪಿಯಾಗಿ ನೆಲೆಸಿರುವ ಈ ಸೂಕ್ಷ್ಮಾಣುಜೀವಿಗಳ ಪ್ರಪಂಚದಲ್ಲಿ ಮಾನವ ತನ್ನ ಬದುಕನ್ನು ಕಂಡುಕೊಳ್ಳಬೇಕಾಗಿದೆ.

ಮಾನವನ ಶತ್ರುವೂ ಮಿತ್ರನೂ ಆಗಬಲ್ಲ ಜೀವಿಗಳಿವು. ಕ್ಲೋಸ್ಟ್ರಿಡಿಯಂ ಬೋಟುಲೈನಮ್ ಎಂಬ ಸೂಕ್ಷ್ಮಾಣುಜೀವಿಯಿಂದ ಸೃಜಿಸಲ್ಪಟ್ಟ ಮೂರು ಕಿಲೋ ಜೀವಾಣು ವಿಷದಿಂದ ಇಡಿ ಮನುಕುಲವನ್ನೇ ನಾಶಗೊಳಿಸಲು ಸಾಧ್ಯ. ಇಂತಹ ಪ್ರಯೋಗವೊಂದನ್ನು ಎರಡನೆಯ ಮಹಾಯುದ್ಧದಲ್ಲಿ ಹಿಟ್ಲರನು ನಿಯೋಜಿಸಿದ್ದು ಅದನ್ನು ಮಿತ್ರ ರಾಷ್ಟ್ರಗಳು ನಿಷ್ಕ್ರಿಯಗೊಳಿಸಿದ ಘಟನೆ ಬೇಹುಗಾರಿಕೆಯಲ್ಲಿ ಬಹು ದೊಡ್ಡ ರಮ್ಯ ಕಥೆ. ಮುಂದುವರಿದ ರಾಷ್ಟ್ರಗಳ ಸೈನಿಕ ಕಾರ್ಯಾಗಾರದಲ್ಲಿ "ಜೀವ ಸಮರ ವಿಜ್ಞಾನ" ಎಂಬ ವಿಭಾಗವಿದೆ. ಈ ಕಮ್ಮಟದಲ್ಲಿ ಸಂಸ್ಕರಿಸಲ್ಪಟ್ಟ ಸೂಕ್ಷ್ಮಾಣುಜೀವಿಗಳ ಸುಧಾರಿತ ತಳಿಗಳ ಮಾರಕ ಶಕ್ತಿ ಅಗಾಧವಾಗಿದ್ದು ಅವುಗಳನ್ನು ರಹಸ್ಯವಾಗಿ ಕಾಪಿಡಲಾಗಿದೆ. ಇವುಗಳನ್ನು ಯುದ್ಧದಲ್ಲಿ ಬಳಸಿದರೆ ಉದ್ಭವಿಸಬಹುದಾದ ರೋಗ ಪ್ರಕಾರಗಳನ್ನು ಆಧುನಿಕ ವೈದ್ಯ ವಿಜ್ಞಾನದಿಂದ ನಿವಾರಿಸಲು ಅಸಾಧ್ಯವಾಗಬಹುದು.

ಸೂಕ್ಷ್ಮಾಣು ಜೀವಿಗಳನ್ನು ಮಾನವನ ಉಪಯೋಗಾರ್ಥವಾಗಿಯೂ ಬಳಸಬಹುದು. ಪ್ರಸಕ್ತ ವೈದ್ಯವಿಜ್ಞಾನದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುವ ಪ್ರತಿಜೈವಿಕಗಳ ಉತ್ಪತ್ತಿಯಲ್ಲಿ ಸೂಕ್ಷ್ಮಾಣುಜೀವಿಗಳದೇ ಪ್ರಧಾನ ಪಾತ್ರ. ಹುದುಗಿಸಿ ಮದ್ಯ ತಯಾರಿಸಲು, ತ್ಯಾಜ್ಯ ವಸ್ತುಗಳು ಕೊಳೆತು ಮಣ್ಣಿನಲ್ಲಿ ಬೆರೆಯಲು, ಆಹಾರ ಬೆಳೆಗಳಿಗೆ ಅಗತ್ಯವಾದ ಮಣ್ಣಿನ ಸಾರವನ್ನು ಹೆಚ್ಚಿಸಲು ವಿವಿಧ ಪೋಷಕ ಆಹಾರಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುವ ಆಹಾರ ಅನುಬಂಧಗಳಲ್ಲಿ ಹಾಗೂ ಆಧುನಿಕ ಜೀವ ವಿಜ್ಞಾನದ ಕ್ಲಿಷ್ಟ ಸಂಶೋಧನೆಗಳಲ್ಲಿ ಪ್ರಧಾನ ಪಾತ್ರ ವಹಿಸುವ ಸೂಕ್ಷ್ಮಾಣುಜೀವಿಗಳು ಮಾನವನ ಮಿತ್ರ ವರ್ಗಗಳಲ್ಲಿ ಸೇರಿವೆ. ಅಣುಶಕ್ತಿಯು ಅದರ ಬಳಕೆಯನುಸಾರ ಶತ್ರುವೂ ಮಿತ್ರನೂ ಆಗುವಂತೆ, ಸೂಕ್ಷ್ಮಾಣುಜೀವಿಗಳ ಪರಿಜ್ಞಾನ ಮಾನವನಿಗೆ ಮಾರಕವೂ ವರಪ್ರದವೂ ಆಗಬಲ್ಲುದು.

ವಿವಿಧ ವರ್ಗಗಳ ಸೂಕ್ಷ್ಮಾಣುಜೀವಿಗಳಲ್ಲಿ ೨/೩ ಭಾಗದಷ್ಟು ಮಾನವ ಮಿತ್ರರಾದರೆ ಉಳಿದ ೧/೩ರಷ್ಟು ಮಾನವನ ಶತ್ರುಗಳು. ಇವುಗಳು ಬೆಳೆಗಳನ್ನು ಹಾಳು ಮಾಡುವ, ಆಹಾರವನ್ನು ಕೆಡಿಸುವ, ಮಾನವನಿಗೂ ಆತನ ಸಾಕುಪ್ರಾಣಿಗಳಿಗೂ ರೋಗಗಳನ್ನು ತರುವ ಮಾನವನ ಶತ್ರುಗಳು. ಮಾನವನ ಉತ್ಕ್ರಾಂತಿಯೊಡನೆ ಆತನಿಗೆ ತಗಲುವ ರೋಗಾಣುಗಳೂ ಬದಲಾವಣೆ ಹೊಂದಿದವು. ವಿಶಾಲ ಪ್ರಕೃತಿಯ ಮಡಿಲಲ್ಲಿ ಹಾಯಾಗಿ ರಚಿತವಾಗುತ್ತಿದ್ದ ಅನಾದಿ ಕಾಲದ ಸಮಾಜ ರಚನೆಯು ಪ್ರಾಥಮಿಕ ಹಂತದಲ್ಲಿ

ಜನಸಾಂದ್ರತೆ ತೀರ ವಿರಳ. ಅಂದು ಈ ರೋಗಾಣುಗಳ ಪ್ರಸಾರ ಸೀಮಿತವಾಗಿದ್ದುದರಿಂದ ಅವುಗಳ ಮಾರಕ ಶಕ್ತಿ ಪ್ರಬಲವಾಗಿ ಗೋಚರಿಸದೆ ಹೋಯಿತು. ಕಾಲ ಕ್ರಮೇಣ ಸಮಾಜ ಬೆಳೆಯುತ್ತಾ, ಜನಸಾಂದ್ರತೆ ಅಧಿಕವಾಗುತ್ತ ಹೋದಂತೆ ಈ ರೋಗಾಣುಗಳ ಸಾಂಕ್ರಾಮಿಕತೆ ಪ್ರಬಲವಾಯಿತು. ಸಾಂಕ್ರಾಮಿಕ ರೋಗಗಳು ಮಾನವನ ಚರಿತ್ರೆಯಲ್ಲಿ ಭೀಕರ ಅಧ್ಯಾಯಗಳನ್ನೇ ಸೃಷ್ಟಿಸಿವೆ. ರೋಗಗಳಿಗೂ ಈ ದೈವಿಕ ವಿಕೋಪಕ್ಕೂ ನಿಕಟ ಸಂಬಂಧವನ್ನು ಕಲ್ಪಿಸುವ ಮಾನವನ ಪ್ರವೃತ್ತಿ ೧೬ ಮತ್ತು ೧೭ನೇ ಶತಮಾನದ ಕೊನೆಯ ತನಕ ಪ್ರಚಲಿತವಿದ್ದು ನಂತರವೂ ಜನ ಸಂಖ್ಯೆಯನ್ನು ನಿಯಂತ್ರಿಸಲು ಬರುವ ಪ್ರಕೃತಿಯ ಶಾಪವೆಂಬ ನಂಬುಗೆ ಕೆಲವು ಕಾಲ ಪ್ರಬಲವಾಗಿತ್ತು.

ಭೀತಿಯನ್ನು ಹುಟ್ಟಿಸಿ ಮಾನವ ಜನಾಂಗವನ್ನು ನಡುಗಿಸಿದ ಸಾಂಕ್ರಾಮಿಕ ರೋಗಗಳು ಸಾಮಾಜಿಕ, ಆರ್ಥಿಕ ಬೆಳವಣಿಗೆಯನ್ನೇ ಕುಂಠಿತಗೊಳಿಸಿದ ಚಾರಿತ್ರಿಕ ಶತ್ರುಗಳು. ಇಂಗ್ಲೆಂಡಿನಲ್ಲಿ ೧೩೪೮ ರಲ್ಲಿ ತಲೆದೋರಿದ ಪ್ಲೇಗಿನಿಂದ ಜನಸಂಖ್ಯೆ ಬಹುವಾಗಿ ನಶಿಸಿ ಸಮಾಜದಲ್ಲಿ ಅಂದು ಪ್ರಚಲಿತವಿದ್ದ ಊಳಿಗಮಾನ್ಯ ಪದ್ಧತಿಯು ಬೇರೆ ದೇಶಗಳಿಗಿಂತ ೧೫೦ ವರ್ಷ ಮೊದಲೇ ಇಂಗ್ಲೆಂಡಿನಲ್ಲಿ ಕಣ್ಮರೆಯಾಗಿ, ಸಾಮಾಜಿಕ ಬದಲಾವಣೆಗೆ ಕಾರಣವಾಯಿತು. ಯಹೂದ್ಯರು ಪ್ಲೇಗ್ ರೋಗಾಣುಗಳನ್ನು ಕುಡಿಯುವ ನೀರಿಗೆ ಹಾಕಿ ಸಾಂಕ್ರಾಮಿಕ ರೋಗಕ್ಕೆ ಕಾರಣರಾದರೆಂಬ ಒಂದು ತಪ್ಪು ತಿಳುವಳಿಕೆಯು ಸ್ವೀಟ್ಜರ್‌ಲೆಂಡಿನಲ್ಲಿ ಪ್ರಚಲಿತವಾಗಿ ಯಹೂದ್ಯರನ್ನು ಕಂಡಕಂಡಲ್ಲಿ ಕೊಲ್ಲಲಾಯಿತು. ಚಿಲ್ಲೋನ್ ಮತ್ತು ಜಿನೀವದಲ್ಲಿ ೧೩೪೮ರಲ್ಲಿ ಭುಗಿಲೆದ್ದ ಈ ಹತ್ಯಾಕಾಂಡವನ್ನು ನಿಲ್ಲಿಸಬೇಕಾದರೆ ಆರನೇ ಪೋಪ್ ಕ್ಲೆಮೆಂಟ್‌ರು ಒಂದು ಹೇಳಿಕೆಯನ್ನು ಹೊರಡಿಸಿ ಯಹೂದ್ಯರು ನಿರ್ದೋಷಿಗಳು ಎಂದು ಸಾರಬೇಕಾಯಿತು. ಇದರ ಪರಿಣಾಮವಾಗಿ ಯಹೂದ್ಯರು ಪಶ್ಚಿಮ ಯುರೋಪಿನಿಂದ ಬಹುಸಂಖ್ಯೆಯಲ್ಲಿ ವಲಸೆ ಹೋಗಿ ಜರ್ಮನಿ, ಪೋಲೆಂಡ್, ಪೂರ್ವ ಮತ್ತು ಮಧ್ಯ ಯುರೋಪಿನ ಹಲವು ಭಾಗಗಳಲ್ಲಿ ಕೇಂದ್ರೀಕೃತರಾದರು. ಭಾರತದಲ್ಲೂ ಪ್ಲೇಗ್ ಹಾವಳಿಯಿಂದಾಗಿ ಜನರು ತಾವು ವಾಸಿಸುತ್ತಿದ್ದ ಹಳ್ಳಿಗಳನ್ನೇ ತ್ಯಜಿಸಿ ವಲಸೆ ಹೋಗುತ್ತಿದ್ದುದು ಹಿಂದೊಮ್ಮೆ ಪ್ರಚಲಿತವಾಗಿತ್ತು.

ಸಿಡುಬಿನ ಹಾವಳಿಯಿಂದಾಗಿಯೇ ಭಾರತದಲ್ಲಿ ಅದನ್ನು ಮಹಾಮಾರಿ ಎಂದು ಪರಿಗಣಿಸಲಾಗಿದೆ. ರೆಡ್ ಇಂಡಿಯನ್ ಜನಾಂಗದಲ್ಲಿ ಅಜ್ಞಾತವಾಗಿದ್ದ ಈ ಮಾರಿ ಅಮೇರಿಕವನ್ನು ಒಳಹೊಕ್ಕಿದ್ದು ವಸಾಹತು ಶಾಹಿಗಳ ವಲಸೆಯಿಂದ. ರೆಡ್ ಇಂಡಿಯನ್ ಜನಾಂಗವನ್ನು ನಿರ್ಮೂಲನಗೊಳಿಸುವಲ್ಲಿ ಬಿಳಿಯರೊಡನೆ ಬಂದ ಈ ಮಾರಿಯೇ ಹೆಚ್ಚಿನ ಕಾರ್ಯವೆಸಗಿತೆಂದರೆ



ತಪ್ಪಾಗದು. ಫ್ರಾಂಕೋ-ಪರ್ಶಿಯನ್ ಯುದ್ಧದಲ್ಲಿ ಸಿಡುಬಿಗೆ ತುತ್ತಾದ ೨೦೦,೦೦೦ ಸೈನಿಕರಲ್ಲಿ ೨೩,೦೦೦ ಜನರು ಮರಣಹೊಂದಿದರೆ ಅದೇ ಸಮಯದಲ್ಲಿ ೧೮,೦೦೦ ನಾಗರಿಕರು ಪ್ಯಾರಿಸಿನಲ್ಲಿ ಈ ವ್ಯಾಧಿಯಿಂದ ಸಾವನ್ನಪ್ಪಿದರು. ಸಾಂಕ್ರಾಮಿಕ ರೋಗಗಳಿಂದ ಸಾಯುತ್ತಿದ್ದ ಅಂದಿನ ಕರಾಳ ದಿನಗಳನ್ನು ಕುರಿತು ಲಾರ್ಡ್ ಮೆಕಾಲೇ ತನ್ನ ಪುಸ್ತಕದಲ್ಲಿ "ಈ ಸಾಂಕ್ರಾಮಿಕ ರೋಗಗಳು ನಮ್ಮ ಚರ್ಚಿನ ರುದ್ರಭೂಮಿಯನ್ನು ತುಂಬುವ ಮೃತ್ಯು ದೇವತೆಯ ಕರಾಳ ದೂತರು" ಎಂದು ಉಲ್ಲೇಖಿಸಿದ್ದಾನೆ. ಸಿಡುಬು ರೋಗದಿಂದ ಗುಣ ಹೊಂದಿದ ಬಹಳಷ್ಟು ಮಂದಿ ಅದರಿಂದಾಗಿ ಕುರುಡರಾಗಿ ಅಥವಾ ಕಲೆಗಳನ್ನು ಹೊಂದಿ ವಿಕೃತರಾಗುವುದು ಸರ್ವೇಸಾಮಾನ್ಯ.

ಕಾಲರಾ ಹರಡುವುದು ಬಹು ತೀವ್ರ. "ಪ್ರಪಂಚದಲ್ಲಿ ಎಲ್ಲೂ ಕಾಲರಾ ಕಾಣಸಿಗದಿದ್ದರೆ ಕಲ್ಕತ್ತೆಯ ಹೂಗ್ಲಿ ನದಿಯ ಪರಿಸರಕ್ಕೆ ಬಾ, ಅಲ್ಲಿ ಈ ಕಾಯಿಲೆ ಸದಾ ಅಂತರ್ಗತವಾಗಿದೆ" ಎಂಬುದು ಸೂಕ್ಷ್ಮಜೀವ ವಿಜ್ಞಾನದಲ್ಲಿ ಸೂಚಿಸಿದ ಒಂದು ವಿಡಂಬನೆ. ಹಿಂದೊಮ್ಮೆ ಕಾಲರಾ ತಂದ ಹಾವಳಿ ವಿಪರೀತ. ೧೮೬೩ರಲ್ಲಿ ಪ್ರಪಂಚದಾದ್ಯಂತ ಭಾಗಗಳನ್ನು ವ್ಯಾಪಿಸಿದ ಈ ಕಾಯಿಲೆಗೂ, ಕೈಗಾರಿಕಾ ಕ್ರಾಂತಿಯಿಂದಾಗಿ ಜನಾಂಗಗಳು ವಲಸೆಹೋಗುತ್ತ ಪರಸ್ಪರ ಬೆರೆಯುವುದಕ್ಕೂ ನೇರ ಸಂಬಂಧವನ್ನು ಕಲ್ಪಿಸಲಾಗಿದೆ. ಅದೇ ವರ್ಷ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ೧೪,೩೭೮, ರಷ್ಯದ ಯುರೋಪಿಯನ್ ಭಾಗದಲ್ಲಿ ೧೩೦,೦೦,ಹಂಗೇರಿಯಲ್ಲಿ ೧೯೦,೦೦೦ ಅಮೇರಿಕದಲ್ಲಿ ೫೦,೦೦೦ ಜನರನ್ನು ಬಲಿಗೊಂಡ ಈ ರೋಗ ಇಂಡೋನೇಷಿಯ, ಫಿಲಿಪಿನ್ಸ್, ಆಫ್ರಿಕ ಹಾಗೂ ಭಾರತದಲ್ಲೂ ಅಸಂಖ್ಯಾತ ಸಾವಿಗೆ ಕಾರಣವಾಯಿತು.

ಮಾನವ ಜನಾಂಗಕ್ಕೆ ಮಾರಕವಾದ ಈ ಮೂರು ಮಹಾಮಾರಿಗಳಲ್ಲದೆ ಸೂಕ್ಷ್ಮಾಣು ಜೀವಿಗಳಿಂದ ಬರಬಹುದಾದ ರೋಗಗಳ ಪಟ್ಟಿ ದೊಡ್ಡದು. ಈ ರೋಗಾಣುಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿ ಸಂಶೋಧನೆಗಳು ನಡೆದಿರುವುದರಿಂದ ಆಧುನಿಕರಾದ ನಾವು ಇಂದು ಭಯರಹಿತರಾಗಿದ್ದೇವೆ. ೧೯-೨೦ನೇ ಶತಮಾನದ ವಿಜ್ಞಾನಿಗಳ ಈ ಯಶಸ್ವೀ ಪ್ರಯತ್ನಕ್ಕೆ ಮಾನವ ಜನಾಂಗ ಚಿರಋಣಿ. ವೈದ್ಯಕೀಯ ವಿಜ್ಞಾನವು ನಮಗೊಂದು ವರವಾಗಿ ಬೆಳೆದು ದೀರ್ಘಾಯುಷ್ಯ ಹಾಗೂ ಆರೋಗ್ಯಕರ ಜೀವನಕ್ಕೆ ಭದ್ರ ಬುನಾದಿಯನ್ನು ಒದಗಿಸಿದೆ. ವೈಜ್ಞಾನಿಕ ಸಂಶೋಧನೆಯ ಫಲವಾಗಿ ಸೌಕರ್ಯಗಳನ್ನು ಪಡೆದು, ಕೆಲವೇ ಶತಮಾನಗಳ ಹಿಂದೆ ಚಕ್ರವರ್ತಿಗಳು ಸಹ ಕಂಡು ಕೇಳರಿಯದ ಸೌಕರ್ಯಗಳನ್ನು ಇಂದು ಜನಸಾಮಾನ್ಯನೂ ಅನುಭೋಗಿಸಲು ಶಕ್ತನಾಗಿದ್ದಾನೆ.

ಆದರೆ, ಚಾರಿತ್ರಿಕವಾಗಿ ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಮಹತ್ತರ ಪಾತ್ರವಹಿಸಿದ್ದ ಮಾನವನ ಹಳೇ ಶತ್ರುಗಳನ್ನು ನಿರ್ಮೂಲನಗೊಳಿಸುತ್ತಿರುವ ಸಂದರ್ಭದಲ್ಲೇ ತೀಕ್ಷ್ಣ ಅಪಾಯಕಾರಿಯಾದ ನವನವೀನ ಸೂಕ್ಷ್ಮಾಣು ಜೀವಿಗಳ ಉಗಮವಾಗುತ್ತಿದೆ. ಭಾರತದಲ್ಲಿ ಇತ್ತೀಚೆಗೆ ಕಂಡು ಬಂದ ಮಿದುಳು ಜ್ವರ, ಕರ್ನಾಟಕದಲ್ಲಿ ಹಾಯಿಲೆಬ್ಬಿಸಿದ ಮಂಗನ ಕಾಯಿಲೆ, ತೀಕ್ಷ್ಣತೆಯನ್ನು ಪಡೆದು ಮರು ಪ್ರವೇಶಿಸಿದ ಮಲೇರಿಯಾ, ಪ್ರತಿಜೈವಿಕಗಳಿಗೆ ಬಗ್ಗದ ಹಲವು ರೋಗಾಣುಗಳ ಹೊಸ ತಳಿಯ ರೂಪಾಂತರ, ಹಾಗೂ ರೋಗ ತಗಲಿದರೆ ಸಾವು ಶತಸ್ಸಿದ್ಧವೆಂಬಂತಿರುವ ಲಾಸಾ ಜ್ವರ ಮೊದಲಾದ ರೋಗಗಳನ್ನು ನಿಯಂತ್ರಿಸಬೇಕಾಗಿದೆ. ೧೯-೨೦ನೇ ಶತಮಾನದಲ್ಲಿ ಸೂಕ್ಷ್ಮಾಣುಜೀವಿಗಳ ನಿಯಂತ್ರಣಕ್ಕಾಗಿ ನಡೆದಂತಹ ಸಂಶೋಧನೆಗಳಿಗೆ ಸರಿಸಾಟಿಯಾದ ಸಂಶೋಧನೆಯನ್ನು ಅಳವಡಿಸಿ ಹೊಸ ಶತ್ರುಗಳನ್ನು ಹೊಡೆದೋಡಿಸುವಲ್ಲಿ ನಾವು ಯಶಸ್ವಿಯಾಗಬಲ್ಲೆವೇ ?


ಮಾನವನಿಗೆ ಉಪಕಾರಿಯಾಗಬಲ್ಲ ಸೂಕ್ಷ್ಮಾಣು ಜೀವಿಗಳನ್ನು ಇತ್ತೀಚೆಗೆ ಬಹುಸಂಖ್ಯೆಯಲ್ಲಿ ಗುರುತಿಸಲಾಗಿದೆ. ವಿಜ್ಞಾನಿಗಳಿಗೆ ತಿಳಿದಿರುವ ರಾಸಾಯನಿಕ ಸಂಯೋಜನೆಯ ಎಲ್ಲಾ ವಿಧಾನಗಳಿಗಿಂತಲೂ ಮಿಗಿಲಾಗಿ ಸೂಕ್ಷ್ಮಾಣುಜೀವಿಗಳ ಜೀವಕೋಶವು ಕಾರ್ಯವೆಸಗಬಲ್ಲದು. ವಿಪರೀತ

ಪರಿಸರದಲ್ಲೂ ಬದುಕಬಲ್ಲ ಈ ಜೀವಿಗಳನ್ನು ಅರ್ಥವಿಸುವಲ್ಲಿ ನಾವಿಟ್ಟಿರುವುದು ಮೊದಲನೆ ಹೆಜ್ಜೆ ಮಾತ್ರ. ಈ ನಿಟ್ಟಿನಲ್ಲಿ ಇತ್ತೀಚೆಗಿನ ವೈಜ್ಞಾನಿಕ ಬೆಳವಣಿಗೆಯ ಸೂಕ್ಷ್ಮ ಪರಿಚಯ ಹೀಗಿದೆ. ಅತ್ಯಧಿಕವಾಗಿ ಬಳಸಲ್ಪಟ್ಟು ವಾತಾವರಣವನ್ನು ಕಲುಷಿತಗೊಳಿಸಿದ ಡಿ.ಡಿ.ಟಿ. ಪಿ.ಸಿ.ಬಿ. ಮೊದಲಾದ ವಿಷಕಾರಿ ರಾಸಾಯನಿಕಗಳನ್ನು ನಾಶಗೊಳಿಸಲು ನಾವು ಅಸಮರ್ಥರು. ಸೂಕ್ಷ್ಮಾಣುಜೀವಿಗಳನ್ನು ಉಪಯೋಗಿಸಿ ಈ ವಿಷಕಾರಿ ರಾಸಾಯನಿಕ ನಿರ್ಮೂಲನ ಸಾಧ್ಯತೆಯನ್ನು ಎಲಿನಾಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕಂಡುಹಿಡಿದಿರುವರು.

ಮೃತ ಸಮುದ್ರದಲ್ಲಿ ಕಂಡುಬಂದ ಹಲೋಬ್ಯಾಕ್ಟೀರಿಯಮ್ ಹಲೋಬಿಯಂ ಉಪಯೋಗಿಸಿಕೊಂಡು ಸೂರ್ಯಶಕ್ತಿಯನ್ನು ಪಡೆಯುವ ಪ್ರಮುಖ ವಿಧಾನವೊಂದರ ಆವಿಷ್ಕಾರವು ಪ್ರಗತಿಪಥದಲ್ಲಿದೆ. ಈ ಶತಮಾನದ ಅಂತ್ಯದಲ್ಲಿ ಪ್ರಪಂಚದ ತೈಲ ಸಂಪನ್ಮೂಲಗಳು ಕೊನೆಗೊಳ್ಳುವವೆಂಬುದು ವೈಜ್ಞಾನಿಕ ವಿಶ್ಲೇಷಣೆ. ವಿಪುಲವಾದ ಸೂರ್ಯ ಶಕ್ತಿಯನ್ನು ಉಪಯೋಗಿಸಿಕೊಳ್ಳುವ ವಿಧಾನದಲ್ಲಿ ಸೂಕ್ಷ್ಮಾಣುಜೀವಿಗಳು ಪ್ರಧಾನಪಾತ್ರ ವಹಿಸುವ ಸಮಯ ಸನ್ನಿಹಿತವಾಗಲಿದೆ.

● ಡಚ್ ಎಲ್ಮ್ ಎಂಬ ರೋಗಕ್ಕೆ ಪರಿಣಾಮಕಾರಿ ಔಷಧಿಯ ಕೊರತೆಯಿತ್ತು. ಬ್ರಿಟನ್ನಿನ ವಿಜ್ಞಾನಿಗಳು ಒಂದು ವಿಶೇಷ ಬಗೆಯ ಸೂಕ್ಷ್ಮಾಣುಜೀವಿಯ ಜೀವದ್ರವವನ್ನು ಉಪಯೋಗಿಸಿ ಈ ರೋಗವನ್ನು ಹತೋಟಿಯಲ್ಲಿಡಲು ಶಕ್ತರಾದರು.

● ಜಪಾನಿನ ವಿಜ್ಞಾನಿಗಳು ಸ್ಯೂಡೋಮೋನಸ್ ಎಸಿಡೋಫಿಲಾ ಎಂಬ ಸೂಕ್ಷ್ಮಾಣು



ಜೀವಿಯಿಂದ ಅತ್ಯಾಧುನಿಕ ಜೀವರಕ್ಷಕವನ್ನೂ ಪಡೆಯಲು ಶಕ್ತರಾಗಿದ್ದಾರೆ.

● ಇಸ್ರೇಲಿನ ವಿಜ್ಞಾನಿಗಳು ಮಂಜನ್ನು ಒಡೆದು ನೀರಾಗಿ ಕರಗಿಸಬಲ್ಲ ಸೂಕ್ಷ್ಮಾಣು ಜೀವಿಯನ್ನು ಬಳಸಿ ಮೋಡಗಳಿಗೆ ಸಿಂಪಡಿಸಿ ಮಳೆಯನ್ನು ಬರಿಸುವ ಸಾಧ್ಯತೆಯನ್ನು ಮನಗಂಡಿದ್ದಾರೆ.

● ಸೂಕ್ಷ್ಮಜೀವಾಣುಗಳ ಜೀವಕೋಶವನ್ನು ಉಪಯೋಗಿಸಿಕೊಂಡು ಹಲವು ರಾಸಾಯನಿಕ ಸಿದ್ಧ ವಸ್ತುಗಳನ್ನು ತಯಾರಿಸಬಲ್ಲ ಜೀವಕೋಶ ತಾಂತ್ರಿಕತೆಯು ಮುಂದುವರಿದ ದೇಶಗಳಲ್ಲಿ ಬಹಳ ಪ್ರಗತಿ ಹೊಂದಿದೆ.

ಹೀಗೆ ಭವಿಷ್ಯತ್ತಿನಲ್ಲಿ ಸೂಕ್ಷ್ಮಾಣುಜೀವಿಗಳನ್ನು ವಿವಿಧ ರಂಗಗಳಲ್ಲಿ ಬಳಸಿ ಮಾನವ ಮಿತ್ರರನ್ನಾಗಿ ಪರಿವರ್ತಿಸುವ ಪ್ರಯತ್ನ ಅವ್ಯಾಹತವಾಗಿ ಸಾಗುತ್ತಲಿದೆ. ಇತ್ತೀಚೆಗೆ ಸೂಕ್ಷ್ಮಾಣುಜೀವಿಗಳನ್ನು ಬಳಸಿ ಲೋಹದ ಅದುರುಗಳಿಂದ ಲೋಹವನ್ನು ಪ್ರತ್ಯೇಕಿಸುವ ನವವಿಧಾನವೊಂದು ಅಭಿವೃದ್ಧಿ ಪಡೆದ ದೇಶಗಳಲ್ಲಿ ಬಳಕೆಗೆ ಬಂದಿದೆ. ಅತ್ಯಲ್ಪ ಲೋಹಾಂಶವಿರುವ ಅದುರಿನಿಂದ ಲೋಹವನ್ನು ಪ್ರತ್ಯೇಕಿಸುವುದು ಕೈಗಾರಿಕೆಯಲ್ಲಿ ಲಾಭದಾಯಕವಾಗುವದು. ನಿರ್ದಿಷ್ಟ ಸೂಕ್ಷ್ಮಾಣುಜೀವಿಗಳ ಬಳಕೆಯಿಂದ ಇಂತಹ ಲೋಹದ ಅದುರುಗಳನ್ನು ಲಾಭದಾಯಕವಾಗಿ ಸಂಸ್ಕರಿಸಬಹುದು. ತಾಮ್ರ ಯುರೇನಿಯಂ ಮೊದಲಾದ ಲೋಹಗಳನ್ನು ಸೂಕ್ಷ್ಮಾಣುಜೀವಿಗಳ ಬಳಕೆಯಿಂದ ಲಾಭದಾಯಕವಾಗಿ ಪ್ರತ್ಯೇಕಿಸುವ ಪ್ರಯತ್ನ ನಡೆದಿದೆ. ಆಶ್ಚರ್ಯದ ಸಂಗತಿ ಎಂದರೆ ಈ ಸೂಕ್ಷ್ಮಾಣುಜೀವಿಗಳ ದೇಹವನ್ನು ಪ್ರವೇಶಿಸಿ ಬೆಳೆಯಬಲ್ಲ ಅಥವಾ ಅವುಗಳಿಗೆ ಮಾರಕವಾಗಬಲ್ಲ ಬ್ಯಾಕ್ಟೀರಿಯೋ ಫೇಜ್ ಎಂಬ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳೂ ಕೂಡ ಅಸಂಖ್ಯಾತವಾಗಿವೆ ಎಂದರೆ ಈ ಸೃಷ್ಟಿ ಎಷ್ಟು ವಿಚಿತ್ರ ಎಂಬುದರ ಅರಿವಾಗುವುದು.

ಈ ಶತಮಾನದಲ್ಲಿ ಅಭೂತಪೂರ್ವ ಪ್ರಗತಿ ಹೊಂದುತ್ತಿರುವ ಜೀವವಿಜ್ಞಾನದ ಕಮ್ಮಟದಲ್ಲಿ ಸೂಕ್ಷ್ಮಾಣುಜೀವಿಗಳನ್ನು ಕೆಲಸದ ಕುದುರೆಗಳಂತೆ ಬಳಸಿ ಜೀವವಿಜ್ಞಾನದ ರಹಸ್ಯಗಳನ್ನು ಕಂಡು ಹಿಡಿಯಲಾಗಿದೆ. ನಿರ್ಜೀವ ವಸ್ತುಗಳಿಂದ ಕೃತಕವಾಗಿ ಜೀವಸೃಷ್ಟಿ ಸಾಧ್ಯವಾಗಲಿಲ್ಲ. ಅಂತೆಯೇ ಸತ್ತ ಜೀವಿಗಳನ್ನು ಪುನರ್ ನಿರ್ಮಾಣಗೊಳಿಸಲು ಅಸಾಧ್ಯ. ಜೈವಿಕ ಕ್ರಿಯೆ ಹಾಗೂ ಅದರ ಹಿಂದಿರುವ ಪ್ರೇರಕ ಶಕ್ತಿ ಇಂದೂ ಒಂದು ಸಿಗೂಢ ಸಮಸ್ಯೆ. ಜೀವಸೃಷ್ಟಿಯನ್ನೂ ಅರ್ಥವಿಸುವಲ್ಲಿ ವಂಶವಾಹಿನಿಯ ಕೃತಕ ಸಂಯೋಜನೆಯು ಒಂದು ಪ್ರಥಮ ಹೆಜ್ಜೆ. ಈ ಪ್ರಥಮ ಹೆಜ್ಜೆಗಾಗಿಯೇ ಹರಗೋವಿಂದ ಖೋರಾನಾರವರಿಗೆ ನೊಬೆಲ್ ಬಹುಮಾನವನ್ನಿತ್ತು ಪುರಸ್ಕರಿಸಲಾಯಿತು. ವಂಶವಾಹಿನಿಯ ಸಂಸ್ಕರಣದಲ್ಲಿ ವಿಜ್ಞಾನಿಗಳು ಬಹುವಾಗಿ ಬಳಸಿದ್ದು ಸೂಕ್ಷ್ಮಾಣುಜೀವಿಗಳನ್ನು. ಜಡದಿಂದ ಜೀವವನ್ನು ಸೃಷ್ಟಿಸುವ ಅಪೂರ್ವ ಸಾಹಸಕ್ಕೆ ಮಾನವ ತೊಡಗಿರುತ್ತಾನೆ. ಜೀವಸೃಷ್ಟಿಯಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಲು ಈ ಸೂಕ್ಷ್ಮಾಣುಜೀವಿಗಳ ಸಹಾಯದಿಂದ ಮಾನವ ಶಕ್ತನಾಗಬಲ್ಲನೇ?

ಮಂಗ, ಆದಿ ಮಾನವ, ಆಧುನಿಕ ಮಾನವ ಈ ವಿಕಾಸ ಪಥ ಅಲ್ಲಿಗೆ ನಿಲ್ಲದು. ಮಾನವನ ಮುಂದಿನ ವಿಕಾಸ ಎತ್ತ ಕಡೆಗೆ? ಭೌತಶಾಸ್ತ್ರ ರಾಸಾಯನಿಕ ಶಾಸ್ತ್ರ, ವೈದ್ಯ ವಿದ್ಯೆ, ಅಣುಶಕ್ತಿಯ ಜ್ಞಾನ, ಸೂಕ್ಷ್ಮಾಣುಜೀವ ವಿಜ್ಞಾನ ಹೀಗೆ ಹಲವು ವಿದ್ಯೆಗಳನ್ನು ಕರಗತ ಮಾಡಿರುವ ಮಾನವನ ಮುಂದಿನ ವಿಕಾಸವು ಬೌದ್ಧಿಕ ಕ್ಷೇತ್ರದಲ್ಲಿ ವಿಕಸನಗೊಳ್ಳುವುದು ಸಂಶಯಾತೀತ. ವಿಜ್ಞಾನದ ಬೆಳವಣಿಗೆಯೊಡನೆ ಷಡ್ವೈರಿಗಳನ್ನು ಜಯಿಸಿ ಭೂಮಿಯಲ್ಲಿ ಬಾಳಲು ಕಲಿತು ವಿಶ್ವ ಮಾನವನಾಗಿ, ದೇವಮಾನವನಾಗಿ ವಿಕಾಸ ಹೊಂದುವುದೇ ಮುಂದಿನ ಪಥ. ಇಲ್ಲದಿದ್ದರೆ ಜೀವಿಗಳ ಸರ್ವನಾಶಕ್ಕೆ ಕಾರಣೀಭೂತನಾಗಿ ನಮ್ಮ ಸುಂದರ ಪ್ರಪಂಚವು ಸೂರ್ಯನ ಸುತ್ತಲೂ ನಿರಂತರ ಪ್ರದಕ್ಷಿಣೆಗೈಯುವ ನಿರ್ಜೀವ ಗ್ರಹಗಳ ಸಾಲಿಗೆ ಸೇರಿಸಲ್ಪಡುವುದರಲ್ಲಿ ಸಂಶಯವಿಲ್ಲ. ●



ಗೌರೀಶ ಕಾಯ್ಕಿಣಿ

ಬೆಬೇಲ್ ಗೋಪುರ

ಮೈಕೇಲ್ ಓಕ್‌ಶಾಟ್ ಯಾರು ಗೊತ್ತೆ? ಇಲ್ಲ. ನಿಮ ನಮಗೆ ಅಷ್ಟೇ ಅಲ್ಲ, ಇಂಗ್ಲೆಂಡಿನಲ್ಲಿಯೂ ಈ ಇಂಗ್ಲಿಷ್ ಲೇಖಕ ಅಲ್ಲಿಯ ಪ್ರಸಿದ್ಧ ಗ್ರಂಥ ಪ್ರಕಾಶಕರಿಗೂ ಗೊತ್ತಿಲ್ಲ. ಪುಸ್ತಕಗಳ ಈ ಅಂಗಡಿಯಲ್ಲಿಯೂ ಅವನ ಪುಸ್ತಕ ಸುಲಭದಲ್ಲಿ ಸಿಗುವುದಿಲ್ಲ.

ಆದರೂ ಅವನೊಬ್ಬ ಮಹತ್ವದ ವಿಚಾರವೇತ್ತ. ಕಂಜರ್ವೆಟಿವ್ ಪಕ್ಷದ ತತ್ವಜ್ಞಾನಿಗಳಲ್ಲಿ ಒಬ್ಬ. ಆ ಪಕ್ಷದವರಿಗೆ ಗುರು ಸ್ಥಾನದಲ್ಲಿದ್ದವನು. ಈಗ ಮುಪ್ಪಡರಿದ. ಲಂಡನ್ ವಿಶ್ವವಿದ್ಯಾಲಯದಿಂದ ನಿವೃತ್ತನಾದ ಪ್ರಾಧ್ಯಾಪಕ. ಸದ್ಯ ಕೇಂಬ್ರಿಜ್ಜಿನಲ್ಲಿ ತನ್ನ ಶೇಷಾಯುಷ್ಯವನ್ನು ಸಾರ್ವಜನಿಕ ಜೀವನದ ಶೇಷ ಪ್ರಶ್ನೆಗಳ ಚರ್ಚೆಯಲ್ಲಿ ಕಳೆಯಲು ನಿರ್ಧರಿಸಿದ ಈ ಶತಮಾನದ ಬ್ರಿಟಿಶರ ಕಂಜರ್ವೇಟಿವ್ ಪಕ್ಷದ ಒಬ್ಬ ಗಣ್ಯ ಗಮನಾರ್ಹ ತತ್ವಜ್ಞ.

ಓಕ್‌ಶಾಟ್‌ನ ಈಚಿನ ಗ್ರಂಥ On History and Other Essays. ಇದು ಕಳೆದ ವರ್ಷದ ಇಂಗ್ಲೆಂಡಿನಲ್ಲಿಯ ಅತ್ಯಂತ ಅರ್ಥಪೂರ್ಣವಾದ ಬೌದ್ಧಿಕ ಘಟನೆ ಎನ್ನಬಹುದು ಅನ್ನುತ್ತಾನೆ ಧೀರೇನ್ ಭಗತ–ಸಂಡೇ ಆಬ್ಸರ್ವರ್ ಪತ್ರಿಕೆಯ ಅಂಕಣಕಾರ.

ಈ ಪ್ರಬಂಧ ಸಂಗ್ರಹದ ಕೊನೆಯ ಪ್ರಬಂಧದಲ್ಲಿ ಬೈಬಲಿನಲ್ಲಿ ಬರುವ ಪ್ರಸಿದ್ಧ ಬೆಬೆಲ್ ಗೋಪುರದ ಕಥೆಯನ್ನು ನಮ್ಮ ಇಂದಿನ ಕಾಲಮಾನಕ್ಕೆ ಪುನರಾಖ್ಯಾನಿಸಿದ್ದಾನೆ. ಇದೊಂದು ಚಿರಪರಿಚಿತ ಆಖ್ಯಾನ. ಒಬ್ಬರ ಮಾತು ಒಬ್ಬರಿಗೆ ಅರ್ಥವಾಗದ ಅನೇಕ ಪಂಡಿತರ ಬಹುಭಾಷಿಕ ಗುಂಪು ಗೊಂದಲಪುರದ ಗೋಪುರದಲ್ಲಿ ವಿತಂಡವಾದ ವ್ಯಾಜ್ಯಗಳಲ್ಲಿ ತೊಡಗಿ ಹಾಳಾಗುತ್ತದೆ.

ಬೆಬೆಲ್ ಗೋಪುರವನ್ನು ಆಕಾಶದೆತ್ತರಕ್ಕೆ ಕಟ್ಟಿ ನಿಲ್ಲಿಸಿ ಅಲ್ಲಿಂದ ಸ್ವರ್ಗದಮೇಲೆಯೇ ದಾಳಿ ನಡೆಸಿ ದೇವತೆಗಳನ್ನು ಅವರ ನ್ಯಾಯದ ಪೀಡೆಯನ್ನು ಒಮ್ಮೆಲೆ ನಾಶ ಮಾಡಲು ಮಾಡಿದ ಒಂದು ಪ್ರಚಂಡ ದೈತ್ಯಯತ್ನದ ಕಥೆ ಇದು.

ಈ ಯತ್ನ ನಡೆಸಿದ ಎದೆಗಾರ ನಿಮರಾದ. ಈ ದೊರೆ ಮನುಕುಲವನ್ನು ಮಹಾಪ್ರಳಯದಿಂದ ಉದ್ಧರಿಸಿದ ನೋವ್ಹಾನ ಮರಿಮಗ–ಮೊಮ್ಮಗನ ಮಗ. ಇವನಿಗೆ ದೇವರು ಅನುಗ್ರಹದಿಂದ ಆದಮನಿಗೆ ಇತ್ತ ಉತ್ತರೀಯವು ಬಳುವಳಿಯಾಗಿ ಬಂದಿತು. ಈ ದಿವ್ಯ ವಸ್ತ್ರದ ಪ್ರಾಪ್ತಿಯಿಂದ ಸೊಕ್ಕಿದ ನಿಮರಾದ ಅತ್ಯಂತ ದುಡುಕಿನ ದುಸ್ಸಾಹಸಿಯಾದ.

ಆದರೆ ಈ ದುಡುಕಿನ ಹಿಂದೆ ಒಂದು ಗಾಬರಿಯೂ ಇತ್ತು. ಅದು ದೇವರ ಕುರಿತೇ ದಿಗಿಲು. ಕೆಲವೇ ತಲೆಮಾರುಗಳ ಹಿಂದೆ ಇದೇ ದೇವರು ಮುತ್ತಜ್ಜ ನೊವ್ಹಾನ ಕಾಲದಲ್ಲಿ ಜಲಪ್ರಳಯವನ್ನುಂಟು ಮಾಡಿದ್ದನು. ಅಂದು ಈ ಪೃಥ್ವಿಯನ್ನು ಆಕ್ರಮಿಸಿದ್ದ ಮಾನವರೆಂಬ ಶಾಪಗ್ರಸ್ತ ಸಂತತಿಯನ್ನು ಮುಳುಗಿಸಿ ಸಾಯಿಸಲು ದೇವರ ಪ್ರಕೋಪ ಆ ಪ್ರಳಯವನ್ನು ಹರಿಬಿಟ್ಟಿತ್ತು. ಅದೇ ಇತಿಹಾಸದ ಪುನರಾವೃತ್ತಿ ಆಗಬಾರದೇಕೆ?

ಆದ್ದರಿಂದ ಧೂರ್ತ ನಿಮರಾದ ತನ್ನ ಪ್ರಜೆಯನ್ನು ಹುರಿದುಂಬಿಸಿದ ಹೊಸದೊಂದು ಸ್ವಾತಂತ್ರ್ಯದ ನಗರವನ್ನು ನಿರ್ಮಿಸಲಿಕ್ಕೆ. ಆ ನಗರದ ಹೆಸರೇ ಬೆಬೆಲ್. ಆ ನಗರದಲ್ಲಿ ಒಂದು ಗಗನ ಬೇದಿಯಾದ ಗೋಪುರ ನಿಲ್ಲಿಸಬೇಕು. ಅದನ್ನೇರಿ ಸ್ವರ್ಗವನ್ನು ಹೊಕ್ಕು ಅದನ್ನೇ ಧ್ವಂಸಗೊಳಿಸಬೇಕು.

ಸರಿ, ನಿಮರಾದನ ಕಟ್ಟಪ್ಪಣೆಯಂತೆ ಹೊಸ ನಗರ ನಿರ್ಮಾಣದ ಮಹತ್ಕಾರ್ಯ ಹೆಚ್ಚು ಹುಮ್ಮಸದಿಂದ ಆರಂಭವಾಯಿತು. ಈ ಕಾರ್ಯದ ಯೋಜನೆ ಯೋಚನೆ ಜನಕ್ಕೆಲ್ಲ ಒಂದು ಪಿಶಾಚದಂತೆ ಹಿಡಿಸಿತು. ಹಗಲಿರುಳು ಅದೊಂದೇ ಹಂಬಲ, ಹವ್ಯಾಸ, ಮಿದುಳಸನ್ನಿ. ದೇವರನ್ನು ಪ್ರಕೃತಿಯನ್ನು ಗೆದ್ದು ಸೋಲಿಸಿ ಗುಲಾಮರನ್ನಾಗಿ ಮಾಡುವ ಈ ಸಾಧನೆಯಲ್ಲಿ ಈ ಜನ ಒಂದು ಜೀವಾವಧಿಯ ಜಂಜಡವನ್ನೆ ಕಟ್ಟಿಕೊಂಡು ಆ ಒಂದು ಆದರ್ಶಕ್ಕೆ ತಾವೇ ಗುಲಾಮರಾಗಿ ಬಿಟ್ಟರು ಅನ್ನುತ್ತಾನೆ ಮೈಕೇಲ್ ಓಕ್‌ಶಾಟ್.

ಏಕೆಂದರೆ ಸ್ವರ್ಗಲೋಕವನ್ನು ನಿಲುಕುವ ತಲಪುವ ಈ ಕೆಲಸ ಏನೂ ಸುಲಭವಿದ್ದಿಲ್ಲ. ಅಲ್ಲದೆ ಈ ಪಾಷ್ಕರ್ಮಯೋಗಿ ನಿಮರಾದನೊಬ್ಬನೇ ಈಗ ಕಾರ್ಯನಿರತನಾಗಿದ್ದಿಲ್ಲ. ಕ್ರಿಯೆಯೊಂದಿಗೆ ಪ್ರತಿಕ್ರಿಯೆಯೂ ಆರಂಭವಾಗಿತ್ತು.

ಸಾತ್ವಿಕನಾದ ತಾತ ಅಬ್ರಹಂನು ಸದ್ದಿಲ್ಲದೆ ದೇವರಲ್ಲಿಗೆ ಹೋದನು. ಈ ದುರಹಂಕಾರಿ ದುಸ್ಸಾಹಸಿಗಳನ್ನು 'ದಂಡಿಸಬೇಕು' ಎಂದು ಬೇಡಿಕೊಂಡನು. ಅದೂ ಹೇಗೆ? ಇನ್ನೊಂದು ಜಲಪ್ರಳಯವೆಬ್ಬಿಸಿ ಅಲ್ಲ. ಆ ಉಪದ್ವ್ಯಾಪಿಗಳಲ್ಲಿ ಮಾತಿನ ಗೊಂದಲಬ್ಬಿಸಿ ನಿಮರಾದ ಹಾಗೂ ಅವನ ಜನರಿಗೆ ಒಬ್ಬರು ಅಂದದ್ದು ಇನ್ನೊಬ್ಬರಿಗೆ ಅರ್ಥವೇ ಆಗದಂತೆ ಮಾಡಿ !

ದೇವರಿಗೆ ಅಬ್ರಹಂನ ಸಲಹೆ ಸೂಕ್ತವೆನಿಸಿತು. ಅವನಿಗೆ 'ತಥಾಸ್ತು' ಎಂದನು. ಮತ್ತು ನಿಮರಾದನ ಸಾಮ್ರಾಜ್ಯ ಆತ ಕಟ್ಟಲು ಹೊರಟ ಆದರ್ಶ ಪ್ರಜಾರಾಜ್ಯ ಜಲ ಪ್ರಳಯದಿಂದ ಅಲ್ಲ ಅರ್ಥ ಶೂನ್ಯವಾದ ಮಾತುಗಳ ಹುಚ್ಚು ನೆರೆಹಾವಳಿಯಿಂದ ನಾಶಹೊಂದಿತು.

ಓಕ್‌ಶಾಟ್ ಬಣ್ಣಿಸುವ ನಿಮರಾದನ ರಾಜ್ಯ ಬರೇ ಭೋಗ ಭೂಮಿ. ಕೇವಲ ಬಯಕೆ ಬೇಡಿಕೆಗಳ ಹಾಗೂ ಅವುಗಳ ಪೂರೈಕೆಗಳ ಕೊನೆಯಿಲ್ಲದ ಬಹುಲೀಕರಣದ ಕಾಮರಾಜ್ಯ. ಅಲ್ಲಿಯ ಪ್ರಜೆಗಳೆಲ್ಲರೂ ಸುಸಂಪನ್ನರಿದ್ದಿಲ್ಲ. ಆದರೆ ಅವರೆಲ್ಲರಿಗೂ ಸಂಪತ್ತಿನ ವ್ಯಾಮೋಹ. ಹೊಸ ಹೊಸ ಸಾಧನ ಸೌಕರ್ಯಗಳ ಮೋಹ. ಅವರೆಲ್ಲರೂ ನವೀನತೆಯ ಹಾಗೂ ಧನಾಢ್ಯತೆಯ ಭಕ್ತರು ಅವರನ್ನೆಲ್ಲ ಸಲೀಸಾಗಿ ಆಳುವುದು ಹೇಗೆ ?

ಪಟ್ಟಕ್ಕೆ ಬಂದ ಒಂದು ವರ್ಷದಲ್ಲಿಯೇ ನಿಮರಾದ ಒಂದು ದರಬಾರ ನೆರೆಯಿಸಿ ಪ್ರಜಾ ಪ್ರತಿನಿಧಿಗಳ ಇದುರಿಗೆ ಈ ಸ್ವರ್ಗರೋಹಣದ ದೇವ ದಿಗ್ವಿಜಯದ ಧ್ಯೇಯವನ್ನಿಟ್ಟ ಅದಕ್ಕಾಗಿ ಬೆಬೆಲ್ ಗೋಪುರ ಕಟ್ಟುವ ಯೋಜನೆಯನ್ನು ಮುಂದಿಟ್ಟ. ಸ್ವರ್ಗವಾಸಿಗಳನ್ನು ಲೂಟಿಮಾಡಿ ನಾವೆಲ್ಲ ಸುಖಸಂಪತ್ತನ್ನು ಸಮವಾಗಿ ಹಂಚಿಕೊಳ್ಳೋಣ ಎಂದು ಅಶ್ವಾಸನೆಯಿತ್ತ.

ಯೋಜನೆಯ ಕಾರ್ಯ ಆರಂಭವಾಯಿತು. ದಿನೇ ದಿನೇ ಜನವೆಲ್ಲ ಆ ಕಾರ್ಯದಲ್ಲಿ ಎಡೆಬಿಡದೆ ತೊಡಗಿಕೊಂಡರು. ಗೋಪುರ ನಿರ್ಮಾಣ ಒಂದೇ ಅವರ ಬಾಳಿನ ಗುರಿ ಆಯಿತು. ಜನ ಬದುಕುವದೂ ದುಡಿಯುವುದೂ ಎಲ್ಲ ಒಂದು ಉದ್ದೇಶಕ್ಕಾಗಿ. ಆದರೆ ಗೋಪುರ ಮೇಲೇರಿದಷ್ಟು ಸ್ವರ್ಗವು ಹಿಂಜರಿಯುತ್ತಿತ್ತು. ಇನ್ನೂ ಎತ್ತರಕ್ಕೆ ಸರಿಯುತ್ತಿತ್ತು. ಆದರೆ ಜನತೆಯ ಪ್ರತಿಯೊಂದು ಚಟುವಟಿಕೆಯೂ ಈಗಾಗಲೇ ಬೆಬೆಲ್ ಗೋಪುರ ನಿರ್ಮಾಣ ಕಾರ್ಯದ ಒಂದು ಅಂಗವಾಗಿ ಬಿಟ್ಟಿತ್ತು. ಮತ್ತು ಈ ಉನ್ನತವೆನಿಸಿದ ವ್ಯಾಪಕವಾದ ಸಾಮುದಾಯಿಕ ಸಾಮಾಜಿಕ ಉದ್ದೇಶವು ಆ ಜನರ ವೈಯಕ್ತಿಕ ಬದುಕನ್ನು ಹಾಳುಗೆಡುಹುತ್ತ ಹೋಯಿತು.

ಮೈಕೇಲ್ ಇಲ್ಲಿ ಕೇವಲ ಆದರ್ಶವಾದ ರಾಮರಾಜ್ಯಗಳ ಹವ್ಯಾಸದಲ್ಲಿ ಹಾದಿತಪ್ಪಿದ. ಸಾಮಾಜಿಕ ಸ್ಥಾಪತ್ಯ ಯೋಜನೆಗಳು ಸ್ವರ್ಗವನ್ನೇ ಭೂಮಿಗೆ ತರುವ ವ್ಯಾಮೋಹದಲ್ಲಿ ನವನಿರ್ಮಾಣವೆಂದು ಹೊಸ ಮನೋದಾಸ್ಯದ ಪಂಜರ ಶಾಲೆಗೆ ತಳ್ಳುತ್ತವೆ ಎಂಬುದನ್ನು ಬೆಬೆಲ್ ಗೋಪುರದ ಕಥೆಯನ್ನು ತನ್ನದೇ ಆದ ರೀತಿಯಲ್ಲಿ ನಿರೂಪಿಸಿ ಎಚ್ಚರಿಸಿದ್ದಾನೆ—"ಓರ್ವೆಲ್ಲನ Animal Farm ಇಂದು ಅವಧಿ ಬಂಧಿತವಾದ ದಶಕದಲ್ಲಿ ನಂದನದಲ್ಲಿ ಉಳಿಯ ಬಯಸುವವರು ನರಕದ ಸೀಮೆಯನ್ನು ಚಿತ್ರಿಸುವರು." ●



ಮೊಸರು ಅವಲಕ್ಕಿ

ತಮಿಳು ಕಥೆ

ಮೂಲ: **ಸುಗಂಧಿ**

ಅನುವಾದ: **'ಅನುರಾಧಾ'**

"ಮದರಾಸು ಬಂದುಬಿಟ್ಟಿತೇನು?" ಎಂದು ಕೇಳಿದಳು ಅಜ್ಜಿ.

ವಿಮಾನ ನಿಂತಿದ್ದುದೇ ಅವಳು ಹಾಗೆ ಕೇಳಲು ಕಾರಣವಾಗಿತ್ತು.

ಸ್ವಲ್ಪ ಹೊತ್ತಿಗೆ ಮುಂಚೆ ತುಂಬಾ ಸೊಗಸಾಗಿ ಆಕಾಶದಲ್ಲಿ ಹಾರುತ್ತಿತ್ತು, ಡೆಲ್ಲಿಯಿಂದ ಹೊರಟಿದ್ದ ವಿಮಾನ.

ಎಲ್ಲರೂ ಅದು ಯಾವಾಗ ಮದರಾಸನ್ನು ತಲಪುತ್ತದೆ ಎಂದು ಕಾಯುತ್ತಿದ್ದರು.

'ಮದರಾಸಿನಲ್ಲಿ ತಾನೇ ಪ್ಲೇನ್ ಹೋಗಿ ನಿಲ್ಲುತ್ತದೆ. ನಿಧಾನವಾಗಿ ಇಳಿಯಬಹುದು.' ಎಂದುಕೊಂಡು ತನ್ನ ಜಾಗದಲ್ಲೇ ಸೀಟಿಗೊರಗಿ ಅಜ್ಜಿ ಕಣ್ಣು ಮುಚ್ಚಿದ ನಂತರವೇ ಆ ಘಟನೆ ನಡೆಯಿತು.

ಇದ್ದಕ್ಕಿದ್ದಂತೆ ವಿಮಾನದೊಳಗೆ ಇಬ್ಬರು ತರುಣರು ಪ್ರತ್ಯಕ್ಷರಾದರು. ಇಬ್ಬರ ಕೈಯ್ಯಲ್ಲೂ ತುಪಾಕಿಗಳಿದ್ದುವು. ಒಬ್ಬನ ಎಡಗೈಯಲ್ಲಿ ದುಂಡಾದ ವಸ್ತುವೂ ಒಂದಿತ್ತು.

"ಒಬ್ಬರೂ ಜಾಗ ಬಿಟ್ಟು ಕದಲಬಾರದು. ಸ್ವಲ್ಪ ಅಲುಗಾಡಿದರೂ ವಿಮಾನದೊಳಗಿರುವ ಎಲ್ಲರನ್ನೂ ಸುಟ್ಟು ಕೊಂದುಬಿಡುತ್ತೇವೆ," ಎಂದ ಒಬ್ಬ, ಪ್ರಯಾಣಿಕರ ಕಡೆಗೆ ತಿರುಗಿ.

ಇನ್ನೊಬ್ಬ ಪೈಲಟ್ ಹತ್ತಿರ ಹೋಗಿ ಅವನ ಬೆನ್ನಿಗೆ ತುಪಾಕಿಯಿಂದ ತಿವಿದು,

"ಕೆಳಗಿಳಿಸು ಪ್ಲೇನನ್ನು," ಎಂದ.

"ಇಲ್ಲೇನಾ?"

"ಹೌದು."

ದೂರದಲ್ಲಿ ಏರೊಡ್ರೊಮಿನ ರನ್‌ವೇ ಕಂಡು ಬಂತು. ಅಷ್ಟೇನೂ ದೊಡ್ಡ ಏರ್‌ಪೋರ್ಟಿನಂತೆ ಕಾಣಲಿಲ್ಲ. ಅವಸರ ಕಾಲದ ವಿಮಾನ ನಿಲಯ ದಂತೆ ಇತ್ತು.

"ನಮಗೆ ಐದು ಲಕ್ಷ ರೂಪಾಯಿ ಕ್ಯಾಷಾಗಿ ಬೇಕು. ಅದಕ್ಕೆ ಇಪ್ಪತ್ತು ನಾಲ್ಕು ಗಂಟೆಗಳ ಕಾಲ ಅವಕಾಶ ಕೊಡುತ್ತೇವೆ. ಇದಕ್ಕೆ ಸಾಧಕವಾಗಿ ನಮಗೆ ಉತ್ತರ ಬರದಿದ್ದರೆ ಎಲ್ಲರೂ ಏಕಕಾಲದಲ್ಲಿ ಸಾಯಬೇಕಾಗುತ್ತದೆ......"

ವೈರ್‌ಲೆಸ್ ಮೂಲಕ ಸುದ್ದಿ ಹಾರಿತು.

ಒಬ್ಬ ಯುವಕ ತುಪಾಕಿಯೊಡನೆ ವಿಮಾನದ ಬಾಗಿಲಲ್ಲಿ ಹೋಗಿ ನಿಂತ.

ಇನ್ನೊಬ್ಬ ಕಾಕ್‌ಪಿಟ್ ಹತ್ತಿರ ತುಪಾಕಿ ಹಾಗೂ ಪಿಡಿಮದ್ದಿನೊಂದಿಗೆ ನಿಂತಿದ್ದ.

ಸಮಯ ಕಳೆಯುತ್ತಿದ್ದಂತೆ ಸರ್ಕಾರದಿಂದ ಸುದ್ದಿ ಬರುವುದು ತಡವಾಯಿತು. ಹೊತ್ತು ಮೀರುತ್ತಾ ಹೋದಂತೆ ಪ್ರಯಾಣಿಕರಿಗೆ ತಾವು ಜೀವಂತವಾಗಿ ಊರಿಗೆ ಹೋಗಿ ತಲಪುತ್ತೇವೆಂಬ ನಂಬಿಕೆ ಸ್ವಲ್ಪ ಸ್ವಲ್ಪವಾಗಿ ಕುಸಿಯತೊಡಗಿತು.

ತಾಳ್ಮೆಗೆಡುತ್ತಿದ್ದ ಹೈಜಾಕ್ ಯುವಕರು ಬೇಸರಗೊಂಡು, ಅಲಸ್ಯಗೊಂಡು, ಸಾಕಾಗಿಹೋಗಿ ವಿಮಾನದೊಳಗೆ ಪಿಡಿಮದ್ದನ್ನು ಎಸೆದು ಎಲ್ಲರನ್ನೂ ಸುಟ್ಟು ಬೂದಿಮಾಡಿಬಿಡುತ್ತಾರೋ ಎಂಬ ಹೆದರಿಕೆಯೇ ಎಲ್ಲರನ್ನು ಕೊಲ್ಲುತ್ತಿದ್ದ ಸಮಯದಲ್ಲಿ—

ಒಂದೆರಡು ಮಕ್ಕಳು ದಿಢೀರೆಂದು ಅಳಲು ಪ್ರಾರಂಭಿಸಿದವು. "ಹಸಿವೆ !"

"ಮಕ್ಕಳಿಗೆ ಆಹಾರ ಕೊಡಬಹುದು," ಎಂದ ಒಬ್ಬ ಹೈಜಾಕರ್, ಎಲ್ಲರ ಮೇಲೂ ಕಣ್ಣು ತುಪಾಕಿಗಳನ್ನು ಗುರಿಯಿಟ್ಟುಕೊಂಡೇ.

ಫ್ಲಾಸ್ಕಿನಲ್ಲಿದ್ದ ಬಿಸಿ ನೀರನ್ನು ಗಾಜಿನ ಲೋಟಕ್ಕೆ ಹಾಕಿ ಹಾಲಿನಪುಡಿ ಸಕ್ಕರೆ ಹಾಕಿ ಕಲಕಿ—

ಬಿಸ್ಕತ್ ಪ್ಯಾಕೆಟ್ಟಿನ ರ್‍ಯಾಪರನ್ನು ಭಯದಿಂದ ಹರಿದು—

ಜೊತೆಯಲ್ಲಿ ತಂದಿದ್ದ ಚಪಾತಿಯನ್ನು ಚೂರು ಚೂರಾಗಿ ಮಾಡಿ—

ಕಾಲ ಮೀರುತ್ತಿತ್ತು.

ಜೀವ ಹೋಗುತ್ತದೆ ಎಂಬ ಭಯವಿದ್ದರೂ ದೊಡ್ಡವರಿಗೂ ಹೊಟ್ಟೆ ಹಸಿಯತೊಡಗಿತು. ಹೈಜಾಕರ್ ತರುಣರನ್ನು ನಾವೂ ತಿನ್ನಬಹುದೇ ಎಂಬಂತೆ ಅವರು ದೀನರಾಗಿ ನೋಡಿದರು.

"ದೊಡ್ಡವರು ತಿನ್ನಬಹುದು. ಆದರೆ ಕೈ ಅದೊಂದೇ ಕೆಲಸವನ್ನು ಮಾಡಬೇಕು. ಬೇರೆ ಏನಾದರೂ ಮಾಡಿದಿರೋ..." ಎನ್ನುತ್ತ ಕೈ ತುಪಾಕಿಯನ್ನು ಮೇಲಕ್ಕೆ ನೀಡಿದ ಒಬ್ಬ ಹೈಜಾಕರ್.

ಎಲ್ಲರೂ ಗಡಗಡನೆ ನಡುಗಿದರು.

ಆ ಸಮಯದಲ್ಲೇ ಅಜ್ಜಿ ಕಣ್ಣುಬಿಟ್ಟು ಮದರಾಸು ಬಂದು ಬಿಟ್ಟಿತೇ? ಎಂದು ಪಕ್ಕದ ಸೀಟಿನವರನ್ನು ಕೇಳಿದಳು.

"ಇನ್ನೂ ಬಂದಿಲ್ಲ," ಎಂದರು ಅವರು.

"ಪ್ಲೇನ್ ನಿಂತಿರುವಂತಿದೆಯಲ್ಲಾ?"

ಹೈಜಾಕರ್ ಯುವಕ ತಾನು ಏನು ಮಾತಾಡುತ್ತೇನೆ ಎಂಬುದನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದುದನ್ನು ನೋಡಿಕೊಂಡೇ ಅವರು, "ಹೌದು" ಎಂದರು.

"ಹಾಗಾದರೆ ಪ್ಲೇನ್ ಕೆಳಗಿಳಿದಿದೆಯೆ?"

ಅವರು ಏನನ್ನೋ ಹೇಳಲು ಬಾಯಿ ತೆರೆದರು. ಆಗ ಹೈಜಾಕರ್ ತರುಣ ಅವರನ್ನು ನೋಡಿ ತುಪಾಕಿಯನ್ನು ಆಡಿಸಿದ.

"ಪೆಟ್ರೋಲ್ ಟ್ಯಾಂಕಿನಲ್ಲಿ ಏನೋ ಲೀಕಾಗುತ್ತಿದೆಯಂತೆ. ಅದನ್ನು ರಿಪೇರಿ ಮಾಡಿ ಪೆಟ್ರೋಲ್ ತುಂಬಿಸಿಕೊಳ್ಳಲು ವಿಮಾನವನ್ನು ಇಳಿಸಿದ್ದಾರಂತೆ," ಎಂದು ಮಾತು ಬದಲಾಯಿಸಿದರು ಅವರು.

"ಅಲ್ಲಿ ಬಾಗಿಲ ಹತ್ತಿರ ಕೈಯಲ್ಲಿ ತುಪಾಕಿ ಹಿಡಿದು ಒಬ್ಬ ಹುಡುಗ ಏಕೆ ನಿಂತಿದ್ದಾನೆ ?" ಎಂದು ಕೇಳಿದಳು ಅಜ್ಜಿ.

"ಈ ಪ್ರದೇಶ ಕಾಡು ಪ್ರದೇಶವಂತೆ ಅಜ್ಜಿ. ಕ್ರೂರ ಮೃಗಗಳು ಜಾಸ್ತಿಯಂತೆ......ಅಲ್ಲದೆ ಇಲ್ಲಿ ಕಾಡು ಮನುಷ್ಯರೂ ಅಧಿಕವಾಗಿದ್ದಾರಂತೆ. ನಮ್ಮಂಥ ಪಟ್ಟಣವಾಸಿಗಳನ್ನು ಕಂಡರೆ ಹಿಡಿದುಕೊಂಡು ಹೋಗಿ ಕಾಡುದೇವತೆಗೆ ಬಲಿ ಕೊಟ್ಟು ಬಿಡುತ್ತಾರಂತೆ."

ದೇಹಾದ್ಯಂತ ಕಂಪಿಸುತ್ತಾ, "ಅಯ್ಯೋ" ಎಂದಳು ಅಜ್ಜಿ.

"ಪ್ಲೇನ್ ರಿಪೇರಿ ಆಗುವವರೊಳಗೆ ಯಾವ ಕಾಡು ಮನುಷ್ಯನೂ ಬಾರದಿರಲಿ ಎಂದೇ ತುಪಾಕಿ ಹಿಡಿದು ಈ ಹುಡುಗ ಕಾವಲು ಕಾಯುತ್ತಿದ್ದಾನೆ," ಎಂದರು ಪಕ್ಕದವರು.

"ಹೋದರು ಹೆತ್ತ ಮಗನೇ. ಚಿರಂಜೀವಿಯಾಗಿ ಇರಪ್ಪಾ," ಎಂದು ಆಶೀರ್ವದಿಸಿ ಸುತ್ತ ಮುತ್ತಲೂ ಒಂದು ಸಲ ನೋಡಿದಳು ಅಜ್ಜಿ. "ಎಲ್ಲರೂ ಊಟ ಮಾಡುತ್ತಿರುವಂತಿದೆಯಲ್ಲಾ," ಎಂದು ಕೇಳಿದಳು.

"ನಿಮ್ಮ ಕೂಡ ಊಟ ಮಾಡಬಹುದು ಅಜ್ಜಿ," ಎಂದು ಕಾಕ್‌ಪಿಟ್ ಹತ್ತಿರ ಇದ್ದ ಹೈಜಾಕರ್ ಹುಡುಗ ಕೂಗಿ ಹೇಳಿದ.

"ಸೀಸೆಯಲ್ಲಿ ಮೊಸರು ತೆಗೆದಿಟ್ಟಿದ್ದೇನೆ. ಕೈಯಲ್ಲಿ ಕಟ್ಟಿದ ಅವಲಕ್ಕಿಯೂ ನನ್ನ ಹತ್ತಿರ ಇದೆಯಪ್ಪ. ಬಟ್ಟಲಿನಲ್ಲಿ ಮೊಸರನ್ನು ಹಾಕಿ ಅವಲಕ್ಕಿ, ಸ್ವಲ್ಪ ಎರಡು ಕಾಳು ಉಪ್ಪು ಹಾಕಿ ಕಲೆಸಿದರೆ ನನ್ನ ಟಿಫಿನ್ ರೆಡಿ," ಎಂದು ಹೇಳಿದ ಅಜ್ಜಿ ತನ್ನ ಪೆಟ್ಟಿಗೆ ತೆಗೆದು ಪ್ಲಾಸ್ಟಿಕ್ ಚೀಲವನ್ನು ಹೊರತೆಗೆದಳು. ಅದರಲ್ಲಿ ಅವಲಕ್ಕಿ ಇತ್ತು. ತೋಳಿನಲ್ಲಿ ನೇತು ಹಾಕಿಕೊಂಡಿದ್ದ ಬ್ಯಾಗಿನಲ್ಲಿದ್ದ ಪ್ಲಾಸ್ಟಿಕ್ ಸೀಸೆಯಲ್ಲಿ ಮೊಸರು ಇತ್ತು. ಅದರ ಮುಚ್ಚಳ ತೆಗೆದಳು. ಒಂದೆರಡು ಹಿಡಿ ಅವಲಕ್ಕಿ ತೆಗೆದು ಮೊಸರಿನಲ್ಲಿ ಹಾಕಿದಳು. ಪೆಟ್ಟಿಗೆಯಲ್ಲಿ ಉಪ್ಪಿನ ಪೊಟ್ಟಣವನ್ನು ಹುಡುಕಿದಳು. ಅದು ಸುಲಭದಲ್ಲಿ ಸಿಗಲಿಲ್ಲ. ಬಟ್ಟೆಗಳನ್ನೆಲ್ಲಾ ತೆಗೆದು ಬದಿಗಿಟ್ಟ ನಂತರ ಸಿಕ್ಕಿತು. ಸೀಸೆಯಲ್ಲಿ ಹಾಕಿ ಅದರ ಮುಚ್ಚಳ ಮುಚ್ಚಿ ಚೆನ್ನಾಗಿ ಕುಲುಕಿದಳು. "ಎರಡು ನಿಮಿಷ ನೆನೆಯಲಿ," ಎಂದುಕೊಂಡವಳು, "ಆ ಹುಡುಗ, ಪಾಪ ಎಷ್ಟು ಹೊತ್ತು ಕಾಲು ನೋಯಿಸಿಕೊಂಡು, ತುಪಾಕಿ ಹಿಡಿದು ನಿಂತಿರುತ್ತಾನೆ? ಅವನಿಗೂ ಹಸಿಯುವುದಿಲ್ಲವೇ? ಯಾರಾದರೂ ಅವನಿಗೆ ತಿನ್ನಲು ಏನಾದರೂ ಕೊಡಬಾರದೇ?......ನಮ್ಮನ್ನು ಕಾಯುವವರ್‍ಯಾರೂ ಹಿಡಿದುಕೊಂಡು ಹೋಗಬಾರದು ಅಂತ ತಾನೆ ಪಾಪ ಕಾವಲು ಕಾಯುತ್ತಿದ್ದಾನೆ!" ಎಂದಳು.

ಯಾರೂ ಮಾತನಾಡದೆ ಸುಮ್ಮನಿರಲು "ಇಷ್ಟು ಜನ ಇದ್ದೀರಾ, ನಿಮ್ಮನ್ನು ಬಿಟ್ಟು ತಿನ್ನಲು ನನಗೆ ಮನಸ್ಸು ಬರುತ್ತಿಲ್ಲ. ಮೊದಲು ಎರಡೆರಡು ತುತ್ತು ಮೊಸರವಲಕ್ಕಿ ತಿನ್ನಿರೋ." ಎಂದಳು.

ಅವರಿಬ್ಬರಿಗೂ ಸಂಕೋಚ ಹಿಡಿಯಿತು. ಒಬ್ಬ ಒಂದು ತಿಂದುದರ ನಂತರ ಇನ್ನೊಬ್ಬ ಒಂದು ಮೊಸರವಲಕ್ಕಿಯನ್ನು ತಿಂದ.

"ನೀವು ತಿನ್ನುವುದಿಲ್ಲವೇ ಅಜ್ಜಿ?"

"ತಿನ್ನದೇ ಮತ್ತೆ?" ಎಂದ ಅಜ್ಜಿ ತಾನೂ ಎರಡು ಹಿಡಿ ಅವಲಕ್ಕಿಯನ್ನು ಬಾಯಿಗೆ ಹಾಕಿಕೊಂಡಳು.

ಸಮಯ ಜಾರುತ್ತಿತ್ತು.

ಒಮ್ಮೆಲೇ ಆ ಇಬ್ಬರು ಯುವಕರೂ ನೆಲಕ್ಕೆ ಬಿದ್ದು ಕೈಕಾಲುಗಳನ್ನು ಬಡಿದರು ಅಷ್ಟೆ!

ಎಲ್ಲರೂ ಧೈರ್ಯವಾಗಿ ತಮ್ಮ ತಮ್ಮ ಜಾಗ ಬಿಟ್ಟು ಎದ್ದರು.

ಹೇಗಾದರೂ ತಪ್ಪಿಸಿಕೊಳ್ಳಬಹುದು ಎಂಬ ನಂಬಿಕೆ ಎಲ್ಲರಿಗೂ ಉಂಟಾಯಿತು. ಮಕ್ಕಳೂ ಮರಿಗಳನ್ನು ಎತ್ತಿಕೊಂಡು ವಿಮಾನದಿಂದ ಕೆಳಕ್ಕಿಳಿದು ಓಡಿದರು. ಅಜ್ಜಿಯನ್ನು ಯಾರೊಬ್ಬರೂ ಗಮನಿಸಲಿಲ್ಲ.

ಅಜ್ಜಿ ಸುತ್ತ ಮುತ್ತ ನೋಡಿದಳು. "ಎಲ್ಲರೂ ಹೋಗಿಬಿಟ್ಟರೇ? ಅಯ್ಯೋ ಹುಡುಗರೇ! ನಿಮ್ಮನ್ನೆಲ್ಲಾ ಅಪತ್ತಿನಿಂದ ಕಾಪಾಡುವುದಕ್ಕೋಸ್ಕರ ಹಾತೊರೆಯುತ್ತಿರುವ ನಾನು ಅವಲಕ್ಕಿಯಲ್ಲಿ ಉಪ್ಪಿಗೆ ಬದಲು ಸಯನೈಡ್ ಕಲೆಸಿ ಹೈಜಾಕರ್ ಹುಡುಗರಿಗೆ ಕೊಟ್ಟೆ. ಅವರಿಗೆ ನನ್ನ ಮೇಲೆ ನಂಬಿಕೆ ಬರಲಿ ಎಂದು ನಾನೂ ಅದನ್ನು ತಿಂದೆನಲ್ಲಾ, ನಿಮ್ಮಲ್ಲಿ ಯಾರಾದರೂ ನನ್ನ ಪೆಟ್ಟಿಗೆಯಲ್ಲಿರುವ ಪ್ರತಿವಿಷವನ್ನು ಕೊಟ್ಟು ನನ್ನನ್ನು ಕಾಪಾಡಿ ಎಂದು ನಿಮ್ಮ ಹತ್ತಿರ ಕೇಳಿಕೊಳ್ಳುವೆಂದಿದ್ದೆನಲ್ಲಾ. ಎಲ್ಲರೂ ನಿಮ್ಮ ಜೀವ ಕಾಪಾಡಿಕೊಂಡರೆ ಸಾಕು ಎಂದು-ಕೊಂಡು ನಿಮ್ಮೆಲ್ಲರ ಜೀವವನ್ನು ಕಾಪಾಡಿದ ಜೀವವನ್ನು ಸಾಯಿಸಿ ಹೋಗುತ್ತಿದ್ದೀರಲ್ಲಾ..." ಎನ್ನುತ್ತಾ ಅಜ್ಜಿ ತನ್ನ ಪೆಟ್ಟಿಗೆಯನ್ನು ಹತ್ತಿರ ಎಳೆದುಕೊಳ್ಳಲು ಕೈ ನೀಡಿದಳು.

ಕೈ ಚಾಚಲಾಗಲಿಲ್ಲ.



೫೩

ಬರಗಾಲಕ್ಕೆ ಸಂಸ್ಕೃತದಲ್ಲಿ **ದುರ್ಭಿಕ್ಷ** ಎಂಬ ಶಬ್ದ ಇದೆ. ಇದು ದೇಶದ ಬಹುತೇಕ ಭಾಷೆಗಳಲ್ಲಿ ಚಾಲ್ತಿಗೆ ಬಂದಿದೆ. **ದುರ್ಭಿಕ್ಷ** ಎಂದರೆ **ಭಿಕ್ಷೆಸಿಗುವುದು** ಕಷ್ಟವಾದ ಕಾಲ. ಬೆಳೆಯು ದೆನೇ ಇದ್ದರೆ ಬೇಡುವವರಿಗೆ ಕಾಳು ಎಲ್ಲಿಂದ ? ಸರಿಯೇ. ಆದರೆ **ದುಷ್ಕಾಲ**ವನ್ನು ಸೂಚಿಸಲು ಇದೊಂದು ವಿಪರೀತ ಅಂದರೆ ಉಲ್ಟಾ ಪದವೆಂದು ಅನಿಸುವುದಿಲ್ಲವೆ ? ಅದು ನಮ್ಮ ಸಂಸ್ಕೃತಿಯ ಒಂದು **ವೈಶಿಷ್ಟ್ಯ**ವನ್ನು ಸೂಚಿಸುತ್ತದೆಂದು ನನಗನಿಸುತ್ತದೆ. **ಭಿಕ್ಷ್** ಧಾತು ಋಗ್ವೇದದಷ್ಟು ಪ್ರಾಚೀನವಾದರೆ **ದುರ್ಭಿಕ್ಷ** ಅದಕ್ಕಿಂತ ಬಹಳ ಅರ್ವಾಚೀನ ಎನ್ನಲಾಗದ ತೈತ್ತಿರೀಯ ಅರಣ್ಯಕದಲ್ಲಿ ಕಾಣಿಸಿಕೊಂಡಿದೆ. **ಭಿಕ್ಷ್** ಧಾತು ಬಹುಶಃ ಇಂಗ್ಲಿಷ್ beg ಗೆ ದೂರದ ಸಂಬಂಧಿಯಾಗಿರಬಹುದಾದರೂ ಯುರೋಪಿನಲ್ಲಿ ದುರ್ಭಿಕ್ಷದಂಥ ಪದ ಹುಟ್ಟದಿರುವುದು ಅರ್ಥವತ್ತಾಗಿದೆ.

ಬೇಡಿ ತಿನ್ನುವುದು ನಮ್ಮ ದೇಶದಲ್ಲಿಯೂ ಇತರ ದೇಶಗಳಲ್ಲಿಯಂತೆ ಕೀಳುತನವೆಂಬ ತಿಳಿವಳಿಕೆ ಇದ್ದರೂ ಇಲ್ಲಿ ಅದು ಕೆಲವರ ಮಟ್ಟಿಗಾದರೂ ಗೌರವಾರ್ಹ ವೃತ್ತಿಯಾಗಿತ್ತು. ಸ್ವತಃ ಶಿವನೇ **ಭಿಕ್ಷಾಟನೆ** ಮಾಡಿದ್ದಾನೆ. ಗೃಹಸ್ಥ ಧರ್ಮದಿಂದ ನಿವೃತ್ತನಾಗಿ ಸಂನ್ಯಾಸಾಶ್ರಮ ವಹಿಸಿದ ಬ್ರಾಹ್ಮಣನಿಗೆ ಭಿಕ್ಷಾವೃತ್ತಿ ಅನಿವಾರ್ಯವಾಗಿತ್ತು. ಆಗಿನ **ಋಷ್ಯಾಶ್ರಮಗಳ**, ಮಹಾವಿದ್ಯಾಪೀಠಗಳ ವಿದ್ಯಾರ್ಥಿಗಳಿಗೆ ಬೆಳಗಿನ ಹೊತ್ತು ಭಿಕ್ಷೆಯನ್ನು ಸುತ್ತಲ ಹಳ್ಳಿಗಳಲ್ಲಿ ತಿರಿದು ತಂದು ಗುರುಗಳಿಗೆ ಒಂದಂಶವಿತ್ತು ತಾವು ಉಣ್ಣುವುದು ನಿಯಮವಾಗಿತ್ತೆಂದು ಉಪನಿಷತ್ತಿನ ಕಥೆಗಳಿಂದಲೇ ವೇದ್ಯವಾಗುತ್ತದೆ. ಉಪನಯನ (=ಗುರುಗಳಲ್ಲಿಗೆ ಒಯ್ದು ಬಿಡುವುದು) ಆದ ಕೂಡಲೇ ಬ್ರಾಹ್ಮಣ ವಟು ಮೊಟ್ಟಮೊದಲು ತಾಯಿಯಿಂದಲೇ "ಭವತಿ ಭಿಕ್ಷಾಂ ದೇಹಿ" ಎಂದು ಬೇಡುವುದು ಇಂದಿಗೂ ಸಂಪ್ರದಾಯವಾಗಿದೆ. ಉಪನಯನದಲ್ಲಿ **ಕೊಡುವ** ಉಡುಗೊರೆಯೆಲ್ಲ **ಭಿಕ್ಷವೆಂದೇ ಹೆಸರಿಸಿಕೊಳ್ಳುತ್ತದೆ.**

ಮುಂದೆ ಬೌದ್ಧ-ಜೈನ ಧರ್ಮಗಳ ಕಾಲದಲ್ಲಿ ತಾರುಣ್ಯದಲ್ಲೇ ಸಂನ್ಯಾಸ ಸ್ವೀಕರಿಸಿದ ವಿರಕ್ತರು ಭಿಕ್ಷುಗಳು ಎಂಬ ಗೌರವದ ಬಿರುದನ್ನೇ ಹೊಂದಿದರು. ಕ್ಷತ್ರಿಯನಾಗಿ ಹುಟ್ಟಿದರೂ ಸ್ವತಃ ಬುದ್ಧನೇ ಭಿಕ್ಷುವಾದ. ನಂತರ ವೈದಿಕ ಧರ್ಮದಲ್ಲಿಯೂ ತಾರುಣ್ಯದಲ್ಲಿ ಸಂನ್ಯಾಸ ಸ್ವೀಕರಿಸುವ ರೂಢಿ ಹುಟ್ಟಿತು. ಅವರೂ ಭಿಕ್ಷುಗಳಾದರು.

ತತ್ಸಮಾನವಾಗಿ ಯುರೋಪಿನಲ್ಲಿ ಕೂಡ Mendicant ಎಂಬ ಭಿಕ್ಷಾಜೀವಿ ಸಾಧುಗಳು (ಲ್ಯಾಟಿನ್-mendicare = ಭಿಕ್ಷುಕ) ಕಾಣಿಸಿಕೊಂಡರೂ ಈ ದೇಶದ ಭಿಕ್ಷು-ಸಂನ್ಯಾಸಿಗಳಿಗೆ ಅವರೆಂದೂ ಸಂಖ್ಯೆಯಲ್ಲಾಗಲಿ ಮನ್ನಣೆಯಲ್ಲಾಗಲಿ ಸಮಾನರಾಗಲಿಲ್ಲ. ನಮ್ಮಲ್ಲಿ ಹೊಟ್ಟೆಪಾಡಿಗಾಗಿ ಬಿಕ್ಕೆ ಬೇಡುವವರು ಭಿಕ್ಷುಕರೆಂದೂ ವಿರಕ್ತ ಭಿಕ್ಷುಕರು ಭಿಕ್ಷುಗಳೆಂದೂ ಪದಭೇದವಾಯಿತು.

ಭಿಕ್ಷೆ ಎಂದರೆ ಮುಂದೆ ಯಾವುದೇ ಧಾನ್ಯವನ್ನು ಕೊಡುವುದು ತೆಗೆದುಕೊಳ್ಳುವುದೆಂದೇ ಎಣಿಸಲ್ಪಟ್ಟರೂ ಭಿಕ್ಷುಗಳಾದವರು ಮೊದಲಲ್ಲಿ **ಬೇಯಿಸಿದ ಆಹಾರ**ವನ್ನು ಮನೆ ಮನೆಯಿಂದ ಸಂಗ್ರಹಿಸಿ ಉಣ್ಣುವುದಾಗಿತ್ತು. ಆದರೆ ಕಾಲಾಂತರದಲ್ಲಿ ವೈದಿಕ ಪರಂಪರೆಯ ಸಂನ್ಯಾಸಿಗಳಂತೂ ಪುರಾತನ "ಕರತಲ ಭಿಕ್ಷಾ ತರುತಲವಾಸ"ದ ವ್ರತವನ್ನು ಕೈಬಿಟ್ಟು ಮಠಮಾನ್ಯ ಕಟ್ಟಿಕೊಂಡು ಆಸ್ತಿಪಾಸ್ತಿ ಗಳಿಸಿ ನೆಲೆ ನಿಂತು ಸಮೀಚೀನವಾಗಿ ಅಡಿಗೆ ಮಾಡಿಸಿಕೊಂಡು ಪಟ್ಟಾಗಿ ಭೋಜನ ಮಾಡತೊಡಗಿದರು; ಆದರೂ ಅವರ ಊಟಕ್ಕೆ ಭಿಕ್ಷೆಯೆಂದೇ ಹೆಸರು ಉಳಿದಿದೆ. ಅದರಿಂದಾಗಿ ಅಟ್ಟ ಸಣ್ಣಕ್ಕಿಯ ವಿಶಿಷ್ಟ ಶುಭ್ರಾನ್ನವನ್ನು **ಪ್ರಾಷಣ** ಎಂದು ಹೇಳುವುದನ್ನು ನಾನು ಕೇಳಿದ್ದೇನೆ,

ಪ್ರಾಶಣ ಎಂದರೆ (ಭಿಕ್ಷೆಯಲ್ಲಿ) ದೊರಕಿದ್ದು, ವಿಶೇಷವಾಗಿ ಮಾಡಿಸಿದ ಅನ್ನವಲ್ಲ. ತಿರುಳು ಅಳಿದರೂ ಹೆಸರಲ್ಲಿ ಪುರಾತನ ಪರಂಪರೆ ಉಳಿದುಕೊಂಡಿದೆ.

ವಿದ್ಯಾರ್ಥಿಗಳು ಭಿಕ್ಷಾಜೀವಿಗಳಾಗಿ ಜೀವನ ನಿರ್ವಾಹ ಮಾಡುವ ಪರಂಪರೆಯನ್ನೇ ಅನುಸರಿಸಿ ಎಂಬಂತೆ ವಾರಾನ್ನದ ಒಂದು ಪದ್ಧತಿ ಈಚೆಗಿನವರೆಗೆ ಉನ್ನತ ವಿದ್ಯಾಲಯಗಳಿರುವ ಊರುಗಳಲ್ಲಿ ನಡೆದುಬರುತ್ತಿತ್ತು. ವಾರಕ್ಕೊಂದು ದಿನ ಒಂದು ಅನುಕೂಲವಂತ ಮನೆಯಲ್ಲಿ ಊಟ ಮಾಡುತ್ತ ಬಡ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುವುದು ವಾರಾನ್ನ. ಪುರಾತನ ಕಾಲದ ಪಾಡಿಯೇ ಮನೆ ಮನೆಯಲ್ಲಿ ಓಗರ ಮೇಲೋಗರಗಳನ್ನು ಹಾಕಿಸಿಕೊಂಡು ಕಲಿಸಿ ಉಣ್ಣುವುದಕ್ಕೆ ಒಂದು ಸರಸ ಶಬ್ದ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದಲ್ಲಿ ಇದೆ. ಅದೇ **ಮಧುಕರೀ. ಮಧುಕರ** ಎಂದರೆ **ಜೇನುದುಂಬಿ.** ಹೂ–ಹೂವಿನಿಂದ ತುಂಬಿ ಮಧು(ಜೇನು)ವನ್ನು ಸಂಗ್ರಹಿಸುವಂತೆ ಇವರು ಮನೆ ಮನೆಯಿಂದ ಕೂಳು ಶೇಖರಿಸಿ ಉಂಡು ಬಾಳುತ್ತಾರೆ. ಬಹುಶಃ ಇವರಿಗೆ ಸಿಗುವ ಕದನ್ನಕ್ಕೆ ಎಂಥ ಸವಿ ಹೆಸರು. ಇದನ್ನು ಸೃಷ್ಟಿಸಿದಾತ ಕವಿಯೇ ಇರಬೇಕು. ದಾಸರು ಕೂಡ "ಮಧುಕರವೃತ್ತಿ ನಮ್ಮದು" ಎಂದುಕೊಂಡಿದ್ದಾರೆ.

ಭಿಕ್ಷೆಯೆಂಬ ಅರ್ಥ ಕೊಡುವ ಕನ್ನಡದ ಇನ್ನೊಂದು ಪದ **ಗೋಪಾಳ.** "ಗೋಪಾಳ ಬುಟ್ಟೀ ಹಿಡಿಯುವುದಕ್ಕೆ ಭೂಪತಿಯಂತೆ ನಾಚುತಲಿದ್ದೆ" ಎಂದು ಪುರಂದರದಾಸರು ಹೇಳುತ್ತಾರೆ. ಗೋಪಾಳ ಬುಟ್ಟಿ ಎಂದರೆ ಭಿಕ್ಷಾಪಾತ್ರೆ, ಅಥವಾ ಭಿಕ್ಷೆಯ ಬುಟ್ಟಿ. ಕನಕದಾಸರೂ **ಗೋಪಾಳದ** ಮಾತು ಹೇಳುತ್ತಾರೆ. ಅದಕ್ಕಿಂತ ಹಿಂದೆ ಈ ಶಬ್ದ ಕನ್ನಡ ಸಾಹಿತ್ಯದಲ್ಲಿ ಪ್ರಯೋಗವಾಗಿಲ್ಲವೆಂದು ತೋರುತ್ತದೆ. ಆದರೆ **ಗೋಪಾಲನಿಗೂ** ಭಿಕ್ಷಕ್ಕೂ ಏನು ಸಂಬಂಧ ? **ಗೋಪಾಲಕೃಷ್ಣ** ಇನ್ನೂ ಅನೇಕ ಕೆಲಸಗಳನ್ನು ಮಾಡಿರಬಹುದಾದರೂ ಭಿಕ್ಷ ಎತ್ತಿದವನಲ್ಲ. ತಿರುಪತಿ ವೆಂಕಟೇಶನ ಹೆಸರಿನಲ್ಲಿ ಭಿಕ್ಷ ಎತ್ತುತ್ತಾರೇ ಹೊರತು ಗೋಪಾಲನ ಹೆಸರಿನಲ್ಲಿ ಅಲ್ಲ. ಈ ಶಬ್ದ ಪ್ರಾಯಃ ತೆಲುಗಿನಿಂದ ಬಂದಿರಬೇಕು. ಚಾರ್ಲ್ಸ್ ಫಿಲಿಪ್ಸನ ತೆಲುಗು – ಇಂಗ್ಲಿಷ್ ಕೋಶದ ಪ್ರಕಾರ **ಗೋಪಾಳಮು** (ಗೋಪಾಲ ಅಲ್ಲ) ಎಂದರೆ **ತುತ್ತು** (ಕವಳಮು). "ಗೋಪಾಳ ಮೆತ್ತುಟ" ಎಂದರೆ ಭಿಕ್ಷಾನ್ನ ಎತ್ತುವುದು. ದಾಸರಿ ಜನಾಂಗದ ಜನ "ಗೋಪಾಳ ಭಿಕ್ಷೆ" ಎನ್ನುತ್ತ ಮನೆಯ ಮುಂದೆ ಭಿಕ್ಷಕ್ಕೆ ನಿಲ್ಲುತ್ತಾರೆ— ಎಂದು ಫಿಲಿಪ್ ಹೇಳುತ್ತಾನೆ. ಉತ್ತರ ಕರ್ನಾಟಕದಲ್ಲಿಯೂ ಗೊಲ್ಲರೂ ಬಡ ಬ್ರಾಹ್ಮಣರೂ ಗೋಪಾಲನೆಯ ನೆಪದಿಂದ ಕುಯ್ಲಿನ ಸಮಯದಲ್ಲಿ ಧಾನ್ಯಕ್ಕಾಗಿ ರೈತರ ಹತ್ತಿರ ಗೋಪಾಳ ಬುಟ್ಟಿಯೆಂಬ ವಿಶಿಷ್ಟ ಬುಟ್ಟಿಯನ್ನಿಟ್ಟು ಹೋಗುತ್ತಾರೆಂದು ತಿಳಿಯುತ್ತದೆ.

ಗೋಪಾಳ ಶಬ್ದಕ್ಕೆ ನಿಜವಾಗಿ ಭಿಕ್ಷೆಯಲ್ಲ, ಭಿಕ್ಷಾಪಾತ್ರವೆಂದೇ ಅರ್ಥವಿರಬೇಕು. ಪಾಲಾ, ಪಾಲವೀ, ಪಾಲ, ಪಾಲಿ, ಪಾಲೇಂ ಶಬ್ದಗಳಿಗೆ ಹಿಂದಿ, ಸಂಸ್ಕೃತ, ಮರಾಠಿಗಳಲ್ಲಿ ಮಣ್ಣಿನ ಪಾತ್ರ, ಲೋಹಪಾತ್ರ, ಮರಿಗೆ ಇತ್ಯಾದಿ ಅರ್ಥಗಳಿವೆ.

ಗೋಪಾಳ ಶಬ್ದಕ್ಕೆ ಉತ್ತರ ಕರ್ನಾಟಕದಲ್ಲಿ ಕೌತುಕದ ಇನ್ನೊಂದು ಅರ್ಥ ಸಂಪನ್ನವಾಗಿದೆ. ಲಂಚವನ್ನು **ಗೋಪಾಳ** ಎಂದು ವ್ಯಂಗ್ಯವಾಗಿ ಕರೆಯುತ್ತಾರೆ. ಹಣ ಕಬಳಿಸುವುದರಿಂದ ಲಂಚಕ್ಕೆ **ಗೋಪಾಳ** (ತೆಲಗು ಅರ್ಥದಲ್ಲಿ) ಎಂದು ಹೆಸರು ಬಿದ್ದಿರಬಹುದು. ಲಂಚವನ್ನು **ತಿನ್ನು**ವುದಲ್ಲವೆ? ಸ್ವಾರಸ್ಯವೆಂದರೆ, ಇಂಗ್ಲಿಷಿನಲ್ಲಿ ಲಂಚಕ್ಕೆ ಇರುವ ಪದವಾದ bribeಗೆ ಅದರ ಮೂಲ ಫ್ರೆಂಚ್ ಭಾಷೆಯಲ್ಲಿ **ರೊಟ್ಟಿ ತುಂಡು** ಎಂದು ಅರ್ಥವಿರುವುದು. ಇದು **ಗೋಪಾಳದ** ತೆಲಗು ಅರ್ಥವಾದ **ಕವಳಕ್ಕೆ** ಸಮಾನವಾಗಿದೆ. ಶಬ್ದಗಳು ಬೇರೆಯಾಗಿರಬಹುದು; ಆದರೆ ಬಡಿಯಗಳು ದೇಶಾತೀತವಾಗಿವೆ.

—ಪಾನೆಂ

ನಿಮಗೆ ಗೆಲುವಿನ ಆಹ್ಲಾದ



ಪೂರ್ತಿಯಾಗಿ ಹೊಸತು ಲಿರಿಲ್. ಹಸಿರಿನ ತರಂಗವಿದೆ. ನಿಂಬೆಯ ಲವಲವಿಕೆಯ ಆಹ್ಲಾದವಿದೆ. ಪುಲಕಿತಗೊಳಿಸುವ ಲಿರಿಲ್ ನಿಮ್ಮನ್ನು ಆಹ್ಲಾದಕರ ನವಕನ್ಯೆಯನ್ನಾಗಿ ಇರಿಸುತ್ತದೆ.

ಲಿರಿಲ್
ಆಹ್ಲಾದಕರ ಸಾಬೂನು

ನಿಂಬೆಯ ಲವಲವಿಕೆಯ ಉಲ್ಲಾಸಯುಕ್ತ

ಲಿಂಟಾಸ್-LR-27-1710 KN

ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ

ಹಿಂದಿ-ಚೀನಿ ಭಾಯಿ ಭಾಯಿ ನೆನಪಿಗೆ ತಂದುಕೊಡುವ

ಕ್ಯಾಲೆಯ ವೈಭವದ ಸಮಾರಂಭ

ರೇಣುಕ

ಕೆಲವು ಸಲ ಗಣ್ಯ ವ್ಯಕ್ತಿಗಳು ಒಂದೆಡೆ ಸೇರಿದ ಸಂದರ್ಭದಲ್ಲಿ ಅವರು ಸಾಧಿಸುವ ಕಾರ್ಯ ಸಿದ್ಧಿಗಿಂತಲೂ ಅವರ ಸುತ್ತ ಬಹಿರಾಡಂಬರ ಪ್ರದರ್ಶನವೇ ಹೆಚ್ಚಾಗಿ ನಡೆಯುತ್ತದೆ. ಮುಂದೊಂದು ದಿನ ಅವರ ಪೊಳ್ಳುತನ ಹೊರ ಬಿದ್ದಾಗ ಜನರಿಗೆ ಭ್ರಮನಿರಸನವಾಗುತ್ತದೆ.

ಬ್ರಿಟೀಶ್ ಇತಿಹಾಸದ ಪುಟಗಳನ್ನು ತಿರುವಿ ಹಾಕುವಾಗ ನಾಲ್ಕುನೂರ ಅರವತ್ತೆರಡು ವರ್ಷ ಗಳಷ್ಟು ಹಿಂದೆ ಫ್ರಾನ್ಸಿನ ದೊರೆ ಮೊದಲನೆ ಫ್ರಾನ್ಸಿಸ್ ಮತ್ತು ಇಂಗ್ಲೆಂಡಿನ ದೊರೆ ಎಂಟನೆ ಹೆನ್ರಿಯ ನಡುವೆ ನಡೆದ ಐತಿಹಾಸಿಕ ಭೇಟಿಯ ಪ್ರಸಂಗ ಮೇಲಿನ ಮಾತಿಗೊಂದು ಉದಾಹರಣೆ. ಫ್ರಾನ್ಸ್ ಮತ್ತು ಇಂಗ್ಲೆಂಡಿನ ಅರಸರಿಬ್ಬರ ನಡುವೆ ನಡೆದ ಸಮಾಗಮದ ವೈಭವ ಆಡಂಬರದ ವೈಖರಿಗೆ ಸಮನಾದುದನ್ನು ಇತಿಹಾಸದಲ್ಲಿ ಬೇರೆಲ್ಲಿಯೂ ಕಾಣೆವು.

ಹದಿನಾರನೆಯ ಶತಮಾನದ ಇಪ್ಪತ್ತರ ದಶಕದಲ್ಲಿ ಯುರೋಪಿನ ರಾಜಕೀಯದಲ್ಲಿ ಫ್ರಾನ್ಸ್ ಮತ್ತು ಸ್ಪೇನ್ ದೇಶಗಳು ಬಲಿಷ್ಠ ಶಕ್ತಿಗಳಾಗಿದ್ದುವು. ಇಂಗ್ಲೆಂಡಿನ ದೊರೆ ಎಂಟನೆ ಹೆನ್ರಿ ಫ್ರಾನ್ಸ್ ಮತ್ತು ಸ್ಪೇನಗಳನ್ನು ಮೆಟ್ಟಿ ಇಂಗ್ಲೆಂಡನ್ನು ಯುರೋಪಿನಲ್ಲೇ ಏಕಮೇವ ಬಲಿಷ್ಠ ಶಕ್ತಿಯನ್ನಾಗಿ ಮಾಡುವ ಕನಸು ಕಾಣುತ್ತಿದ್ದ. ಬರ್ಗಂಡಿಗಾಗಿ ಫ್ರಾನ್ಸಿನ ಮೊದಲನೆ ಫ್ರಾನ್ಸಿಸನೂ ಮಿಲಾನ್ ಮತ್ತು ನೇಪಲ್ಸಗಳಿಗಾಗಿ ಸ್ಪೇನಿನ ದೊರೆ ಐದನೇ ಚಾರ್ಲ್ಸನೂ ಹಕ್ಕು ಸ್ಥಾಪಿಸಲು ಪರಸ್ಪರ ಹೋರಾಡುತ್ತಿದ್ದರು. ಕ್ರಿಸ್ತಶಕ ೧೫೧೯ ಜೂನ್ ಇಪ್ಪತ್ತೆಂಟರಂದು ಕ್ಯಾಥೋಲಿಕ್ ಬಣಗಳು ಸ್ಪೇನಿನ ದೊರೆ ಚಾರ್ಲ್ಸನನ್ನು ಪವಿತ್ರ ಆಯ್ಕೆ ಮಾಡಿದುವು. ರೋಮನ್ ಸಾಮ್ರಾಜ್ಯದ ರಾಜಮುಕುಟದ ಮೇಲೆ ಮೊದಲಿನಿಂದಲೂ ಕಣ್ಣಿಟ್ಟಿದ್ದ ಫ್ರಾನ್ಸಿಸನಿಗೆ ಇದರಿಂದ ನಿರಾಶೆಯಾಯಿತು. ಸ್ಪೇನಿನ ಬದ್ಧ ವೈರಿಯಾಗಿ ಹೋರಾಟಕ್ಕೆ ನಿಂತ ಫ್ರಾನ್ಸಿಸ್.

ಯುರೋಪಿನ ಈ ಎರಡೂ ಬಲಿಷ್ಠ ಶಕ್ತಿಗಳನ್ನು ಕಂಡು ಒಳಗೊಳಗೇ ಕುದಿಯುತ್ತಿದ್ದ ಇಂಗ್ಲೆಂಡಿನ ದೊರೆ ಎಂಟನೆಯ ಹೆನ್ರಿಯ ನೆರವು ಪಡೆಯಲು ಫ್ರಾನ್ಸ್ ಮತ್ತು ಸ್ಪೇನಿನ ಅರಸರಿಬ್ಬರೂ ಕಾತರರಾಗಿದ್ದರು. ಇಂಗ್ಲೆಂಡಿನ ದೊರೆ ಹೆನ್ರಿಯ ಬಳಿ ಥಾಮಸ್ ವುಲ್ಸೆ ಎಂಬ ನುರಿತ ರಾಜನೀತಿಜ್ಞನಿದ್ದ. ಈತ ಕ್ರೈಸ್ತರ ಪ್ರಧಾನ ಮಠಾಧಿಪತಿ ಮತ್ತು ಇಂಗ್ಲಿಷ್ ಪಾರ್ಲಿಮೆಂಟಿನ ಶ್ರೀಮಂತ ಸಭೆ ಮತ್ತು ಪ್ರಧಾನ ನ್ಯಾಯಸ್ಥಾನದ ಮುಖ್ಯಸ್ಥನೂ ಆಗಿದ್ದ. ಇಂಗ್ಲೆಂಡಿನ ರಾಜನೀತಿಯನ್ನು ರೂಪಿಸುವುದರಲ್ಲಿ ಈತ ಬಹು ಮುಖ್ಯ ಪಾತ್ರ ವಹಿಸುತ್ತಿದ್ದ. ವುಲ್ಸೆಯಿಂದಾಗಿ ಹೆನ್ರಿ ಕ್ರಿಸ್ತಶಕ ೧೫೧೮ ರಲ್ಲಿ ಯುರೋಪಿನಲ್ಲಿ ಶಾಂತಿ ಸ್ಥಾಪಕನ ಪಾತ್ರವನ್ನು ವಹಿಸಿದ್ದುಂಟು.

ಮೊದಲೇ ವಿವರಿಸಿದಂತೆ ಫ್ರಾನ್ಸಿಸನು ಹೆನ್ರಿಯನ್ನು ತನ್ನಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದ. ಥಾಮಸ್ ವುಲ್ಸೆಯ ಪ್ರಯತ್ನದಿಂದಾಗಿ ಕ್ರಿಸ್ತಶಕ ೧೫೨೦ ರ ಜೂನ್ ಏಳರಿಂದ ಇಪ್ಪತ್ತರ ವರೆಗೆ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ನಡುವೆ ಶಾಂತಿ ಸ್ಥಾಪನೆಗಾಗಿ ಫ್ರಾನ್ಸಿನ ಕ್ಯಾಲೆಯ ಬಳಿ ಫ್ರಾನ್ಸಿಸ್ ಮತ್ತು ಹೆನ್ರಿ ಸಂಧಿಸಿದರು.

ಎರಡೂ ದೇಶಗಳ ಅರಸರ ಸಮಾಗಮಕ್ಕಾಗಿ ಕ್ಯಾಲೆಯ ಸಮೀಪದ ದೊಡ್ಡ ಮೈದಾನದಲ್ಲಿ ಅಂದವಾದ ಉಪನಗರವೊಂದನ್ನು ನಿರ್ಮಿಸ

ಅರಮನೆಗಳನ್ನು ಕಟ್ಟಿದರು. ಅವುಗಳ ಕಿಟಕಿ ಬಾಗಿಲುಗಳಿಗೆ ಚಿನ್ನದ ತಗಡುಗಳನ್ನು ಹೊದಿಸಿ ರೇಶ್ಮೆ ಮತ್ತು ಚಿನ್ನದೆಳೆಗಳಿಂದ ತಯಾರಿಸಿದ ಉತ್ಕೃಷ್ಟವಾದ ತೆರೆಗಳನ್ನು ಇಳಿಯಬಿಟ್ಟಿದ್ದರು. ಗೋಡೆ ಮಾಡೆಲ್ಲಾ ಚಿನ್ನದ ಮತ್ತು ಬೆಳ್ಳಿಯ ತಗಡುಗಳ ಹೊದಿಕೆಯಿಂದ ಅಲಂಕರಿಸಲ್ಪಟ್ಟಿತ್ತು. ಅರಮನೆಗಳ ಮಹಾದ್ವಾರಗಳಲ್ಲಿ ಬಂಗಾರದಿಂದ ತಯಾರಿಸಿದ ಸಿಂಹಗಳ ಪುತ್ಥಳಿಗಳು ವಿರಾಜಿಸುತ್ತಿದ್ದುವು.

ಅರಸರ ಶ್ರೀಮಂತ ಸರದಾರರು ಮತ್ತು ರಾಜಪರಿವಾರದವರು ತಂಗಲು ರೇಶ್ಮೆಯ ಮತ್ತು ಚಿನ್ನದೆಳೆಗಳಿಂದ ನೇಯ್ದ ಬಟ್ಟೆಗಳಿಂದ ವಿಶೇಷವಾಗಿ ತಯಾರಿಸಿದ ಗುಡಾರಗಳನ್ನು ಸಾಲಾಗಿ ನೆಡಲಾಗಿತ್ತು. ಹೊನ್ನಿನ ಬಟ್ಟೆಯಿಂದ ತಯಾರಿಸಿದ ಹೊಂಬಣ್ಣದ ಪತಾಕೆಗಳು ಅರಮನೆಗಳ ಮತ್ತು ಗುಡಾರಗಳ ಮೇಲೆ ಹಾರಾಡುತ್ತಿದ್ದುವು. ಶ್ರೀಮಂತ ಸರದಾರರು ತೊಟ್ಟಿದ್ದ ಚಿನ್ನದೆಳೆಗಳಿಂದ ಕಸೂತಿ ಹಾಕಿದ ಉಡುಪುಗಳು ನೋಡುವವರ ಕಣ್ಣು ಕುಕ್ಕುತ್ತಿದ್ದುವು. ಅರಮನೆಯ ಸುತ್ತಲೂ ಸುಂದರವಾದ ಉದ್ಯಾನಗಳನ್ನು ನಿರ್ಮಿಸಲಾಗಿತ್ತು. ಅಲ್ಲಲ್ಲಿ ನಿರ್ಮಿಸಲಾಗಿದ್ದ ಕಾರಂಜಿಗಳಿಂದ ನೀರಿಗೆ ಬದಲಾಗಿ ಮದ್ಯ ಪುಟಿಯುತ್ತಿತ್ತು. ರಾಜಪರಿವಾರದವರಿಗೆ ರುಚಿಕಟ್ಟಾದ ಭೋಜನವನ್ನು ಬಂಗಾರದ ಹರಿವಾಣಗಳಲ್ಲಿ ಬಡಿಸಲಾಗುತ್ತಿತ್ತು. ಕುಡಿಯಲು ಬಂಗಾರದ ಹೂಜಿಗಳಲ್ಲಿ ಮದ್ಯವನ್ನು ನೀಡಲಾಗುತ್ತಿತ್ತು. ನೋಡಿದತ್ತ ಸ್ವರ್ಣ ಪ್ರಕಾಶ ಕಣ್ಣು ಕುಕ್ಕುತ್ತಿತ್ತು. ಬಂಗಾರಕ್ಕೆ ಬೆಲೆಯೇ ಇಲ್ಲವೇನೋ ಎಂಬಂತೆ ಅದನ್ನು ಮಿತಿ ಇಲ್ಲದೆ ದಂಡಾಗಿ ಬಳಸಲಾಗಿತ್ತು. ಬೆಳಗಿನಿಂದ ಸಂಜೆಯ ವರೆಗೆ ಔತಣಕೂಟಗಳು, ಕ್ರೀಡೆಗಳು, ಮನೋರಂಜನೆಗಾಗಿ ಹುಸಿ ಕಾಳಗಗಳು ನಡೆಯುತ್ತಿದ್ದುವು. ಅರಸರಿಬ್ಬರು ತಮ್ಮ ಸರದಾರರೊಂದಿಗೆ ಕ್ರೀಡೆಗಳಲ್ಲಿ ಹುಸಿ ಕಾಳಗಗಳಲ್ಲಿ ಭಾಗವಹಿಸುವುದನ್ನು ರಾಣಿಯರು ಅವರ ಪರಿವಾರದವರು ಸಂತೋಷದಿಂದ ನೋಡಿ ಆನಂದಿಸುತ್ತಿದ್ದರು. ಜನರು ಗುಂಪುಗುಂಪಾಗಿ ಬಂದು ತಮ್ಮ ಅರಸರ ಆಮೋದ ಪ್ರಮೋದಗಳನ್ನು ನೋಡುತ್ತಾ ಸಂತೋಷಪಡುತ್ತಿದ್ದರು. ಕಾರಂಜಿಗಳಿಂದ ಹರಿಯುತ್ತಿದ್ದ ಮದ್ಯವನ್ನು ಕುಡಿಯುತ್ತಿದ್ದರು. ಸುಮಾರು ಹದಿನಾಲ್ಕು ದಿನಗಳವರೆಗೆ ನಡೆದ ಈ ಅದ್ದೂರಿಯ ವೈಭವೋಪೇತ ಸಮಾರಂಭ ಜನರ ಕಣ್ಮನಗಳನ್ನು ತಣಿಸಿತು. ಸಮಾರಂಭದ ಕೊನೆಯಲ್ಲಿ ಅರಸರಿಬ್ಬರೂ ಮಿತ್ರತ್ವದ ಒಪ್ಪಂದಕ್ಕೆ ಸಹಿ ಮಾಡಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಮುಂದೆ ಪರಸ್ಪರ ಮೈತ್ರಿಯಿಂದಿರುವುದಾಗಿ ಘೋಷಣೆ ಮಾಡಿದಾಗ ನೆರೆದಿದ್ದ ಜನರು ಹರ್ಷದಿಂದ ಕರತಾಡನ ಮಾಡಿದರು.

ಈ ವೈಭವದ ಸಮಾರಂಭ ಮುಕ್ತಾಯಗೊಳ್ಳುವ ಮುನ್ನ ಹೆನ್ರಿಯು ಫ್ರಾನ್ಸಿಸನಿಗೆ ಬಂಗಾರದ ಕೊರಳ ಪಟ್ಟಿಯನ್ನು ನೆನಪಿನ ಕಾಣಿಕೆಯನ್ನಾಗಿ ನೀಡಿದ. ಫ್ರಾನ್ಸಿಸನು ಹೆನ್ರಿಗೆ ಅಂದವಾದ ಬಂಗಾರದ ತೋಳ್ಬಂದಿಯನ್ನು ಸ್ನೇಹದ ಕಾಣಿಕೆಯನ್ನಾಗಿ ಕೊಟ್ಟ. ಅರಸರಿಬ್ಬರೂ ಒಬ್ಬರನ್ನೊಬ್ಬರು ಬೀಳ್ಕೊಡುವ ಮುನ್ನ ಪ್ರೀತಿಯಿಂದ ಆಲಿಂಗಿಸಿಕೊಂಡಾಗ ನೆರೆದಿದ್ದ ಎರಡೂ ದೇಶಗಳ ಜನ ತಮ್ಮ ಅರಸರ ಸ್ನೇಹಪರತೆಯನ್ನು ಮೆಚ್ಚಿ ಕೊಂಡಾಡಿದರು.

ಆದರೆ ಈ ಅರಸರಿಬ್ಬರ ಮನದಲ್ಲಿ ಪರಸ್ಪರ ಅಸೂಯೆ ಸಮಯಸಾಧಕತನಗಳಿದ್ದುವಲ್ಲದೆ ನಿಜವಾಗಿ ಮೈತ್ರಿ ಬೆಳೆಸುವ ಸದುದ್ದೇಶವಿರಲಿಲ್ಲ. ಕ್ಯಾಲೆಯ ವೈಭವದ ಸಮಾರಂಭ ಮುಕ್ತಾಯಗೊಂಡು ಒಂದು ತಿಂಗಳಲ್ಲಿ ಗ್ರೇವ್ ಲೈನ್ಸ್ ಬಳಿ ಇಂಗ್ಲೆಂಡಿನ ಅರಸ ಹೆನ್ರಿ ಮತ್ತು ಸ್ಪೇನಿನ ಐದನೇ ಚಾರ್ಲ್ಸ್ ಸಂಧಿಸಿದರು. ಫ್ರಾನ್ಸಿನೊಡನೆ ಮುಂದಿನ ಎರಡು ವರ್ಷಗಳವರೆಗೆ ಯಾವ ಸಂಬಂಧವನ್ನೂ ಬೆಳೆಸಬಾರದೆಂದು ಕೈಗೊಂಡ ತೀರ್ಮಾನ, ಕೇವಲ ಕಪಟ ನಾಟಕವೆಂಬುದನ್ನು ತೋರಿಸಿ ಕೊಟ್ಟಿತು.

ಮುಂದಿನ ಕೆಲವೇ ತಿಂಗಳಲ್ಲಿ ಇಂಗ್ಲಿಷ್ ಸೇನೆ ಫ್ರಾನ್ಸ್ ದೇಶಕ್ಕೆ ನುಗ್ಗಿತು. ಫ್ರಾನ್ಸಿಸ್ ಮತ್ತು ಹೆನ್ರಿ ತಮ್ಮ ಪಡೆಗಳೊಂದಿಗೆ ರಣರಂಗದಲ್ಲಿ ಮುಖಾಮುಖಿಯಾದರು.

ಹತ್ತು ಮನಸ್ಸಿನ ಹುಚ್ಚು ಮುಖಗಳು!

ಮಾನವ ಸಂಘಜೀವಿ, ಸಂಸಾರ, ಸಮಾಜ, ಸರಕಾರ ಎಂಬ ಈ ಮೂರು ವೃತ್ತಗಳಿಂದ ಇಂದು ಅವನ ಜೀವನ ಸುತ್ತುವರಿಯಲ್ಪಟ್ಟಿದೆ. ಸಹಜೀವನ ಅವನಿಗೆ ಬೇವು-ಬೆಲ್ಲಗಳ ಉಡುಗೊರೆಯನ್ನು ನೀಡುತ್ತದೆ. ಸಿಹಿ-ಕಹಿಗಳ ಸಾಮರಸ್ಯಸ್ಯದ ಜೀವನವೇ ಜೇನ ಜೀವನ ಎಂಬುದು ನಿತ್ಯ ಸತ್ಯ. ಸಮಾಜದ ಸ್ಪಷ್ಟ ಚಿತ್ರಣವನ್ನು ಮಾಡುವುದೆಂದರೆ ನಾಲ್ವರು ಕುರುಡರು ಆನೆಯ ಪರಿಚಯ ಮಾಡಿದಂತೆಯೆ. 'ಸೋಲು ಗೆಲುವಿಗೆ ದಾರಿ' ಎಂಬ ನೀತಿ ಮಂತ್ರ, ಹಲವಾರು ಬಾರಿ ಬಾಳಿನಲ್ಲಿ ಎಡವಿದಾಗ ನಮಗೆ ನೆನಪಿಗೆ ಬರುತ್ತದೆ. ಜೀವನದುದ್ದಕ್ಕೂ ಹಲವಾರು ಅವಿಸ್ಮರಣೀಯ ಘಟನೆಗಳು ನಡೆಯುತ್ತಲೇ ಇರುತ್ತವೆ. ಅವುಗಳನ್ನು ಮೆಲುಕು ಹಾಕುವುದೂ ಕೆಲವೊಮ್ಮೆ ಮೋಜೆನಿಸುತ್ತದೆ.

ಡಾ. ಎ. ಚಂದ್ರಶೇಖರ ಉಡುಪ

ಪಾಪ, ಹಣ್ಣು ಹಣ್ಣು ಮುದುಕ. ಬೇಸಗೆಯ ಬೇಗೆಗೆ ಬೆಂದು ಬಸವಳಿದು ಕೊಡೆ ಖರೀದಿಸಲೆಂದು ಅಂಗಡಿಗೆ ಹೋದ. ಕೊಡೆಯ ಬೆಲೆ ೩೦ ರೂಪಾಯಿಗಳು ಎಂದು ತಿಳಿದಾಗ ಐದು ರೂಪಾಯಿ ಕಡಿಮೆಮಾಡಿ ಕೊಡಲು ಹೇಳಿದ. ಅಂಗಡಿಯ ಯಜಮಾನ ಕರುಣೆದೋರಿ "ನಿಮಗಾದರೆ ಕೊಡುವೆ" ಎಂದ. ಆಗ ಈ ಮುದುಕ ೨೫ ರೂಪಾಗಳಿಗಾದರೆ ಬೇಡ, ಇಪ್ಪತ್ತಕ್ಕಾದರೆ ಕೊಡಿ ಎಂದ. ಅದಕ್ಕೂ ಅಂಗಡಿಯ ಮಾಲಿಕ ಒಲ್ಲದ ಮನಸ್ಸಿನಿಂದ ಒಪ್ಪಿದ. ಆಗ ಮುದುಕ ೧೫ ರೂಪಾಯಿಗೇನೇ ಕೊಟ್ಟುಬಿಡಿರೆಂದು ಆಜ್ಞೆಗೈದ. ಅದಕ್ಕೂ "ಆದೀತು" ಎಂಬ ಉತ್ತರ ಬಂತು. ಹಾಗಾದರೆ ೧೦ರೂಪಾಯಿಗಳಿಗೆ ಕೊಡುವುದಾದರೆ ಕೊಡಿ ಎಂದು ಚರ್ಚೆಗೈದ ಮುದುಕ. ವಿಧಿಯಿಲ್ಲದೆ ಅಂಗಡಿಯ ಯಜಮಾನ ಹೂಂಗುಟ್ಟಿದ. "ಏಕೆ? ಐದು ರೂಪಾಯಿಗೇನೇ ಕೊಟ್ಟುಬಿಡಿರಿ" ಎಂದ. ಮತ್ತೂ ಮಾತೆತ್ತಿದ ಮುದುಕ. ಆತನ ವಯಸ್ಸಿಗೆ ಬೆಲೆ ಕೊಡಲೆಂದು, ಅವನ ರಗಳೆಗೆ ಮುಕ್ತಾಯ ಹಾಡಲೆಂದು ಬೇಸತ್ತು ಬೆಂದು, "ನೀವು ದುಡ್ಡೇ ಕೊಡುವುದು ಬೇಡ ಭಟ್ರೇ. ಹಾಗೇನೇ ತೆಗೆದು ಕೊಂಡು ಹೋಗಿ. ಒಂದು ಕೊಡೆ ದಾನ ಕೊಡುತ್ತೇನೆ, ತೆಗೆದುಕೊಳ್ಳಿ," ಎಂದ! ಅಲ್ಲಿಗೂ ಸಂತೃಪ್ತನಾಗದ ಈ ಮುದುಕ "ಹಾಗಾದರೆ ಎರಡು ಕೊಡೆ ಕೊಡಿರಿ" ಎಂದು ಕೇಳಬೇಕೆ ?!

ಜಿಪುಣಾಗ್ರೇಸರ

ಹುಚ್ಚಯ್ಯ ಆಗರ್ಭ ಶ್ರೀಮಂತ. ಲಕ್ಷಾಂತರ ರೂಪಾಯಿಗಳ ಆಸ್ತಿ ಹೊಂದಿದವ. ಆದರೆ ಜಿಪುಣಾಗ್ರೇಸರ. ತನ್ನ ಹೊಲಗಳಲ್ಲಿ ದುಡಿಯುವ ಜನರಿಗೆ ಸರಿಯಾಗಿ ಕೂಲಿಯನ್ನೂ ಕೊಡುತ್ತಿ

ರಲಿಲ್ಲ. ಮನೆಯಲ್ಲಿ ಮಕ್ಕಳಿಗೂ ಹೊಟ್ಟೆ ತುಂಬ ಆಹಾರ ದೊರೆಯುತ್ತಿರಲಿಲ್ಲ. ಆತನ ಪತ್ನಿಯಂತೂ ನಿರಾಭರಣ ಸುಂದರಿ. ಚಿನ್ನ ಮತ್ತು ವಜ್ರದ ಒಡವೆಗಳನ್ನು ಮನೆಯಲ್ಲಿ ಲಾಕರಿನಲ್ಲಿ ಭದ್ರವಾಗಿ ಇರಿಸಿದ್ದ ಆಕೆಗೆ ಅವುಗಳನ್ನು ಧರಿಸಿಕೊಂಡು ಹೊರಗೆ ಹೋಗಲು ಸದಾ ಕಳ್ಳಕಾಕರ ಭಯ "ನನಗೆ ಚಿನ್ನದ ಮೇಲೆ ಎಳ್ಳಷ್ಟೂ ಮೋಹವಿಲ್ಲ ಸಾಕಮ್ಮಾ. ನಮ್ಮೆಜ—ಮಾನರು ಬೇಡ, ಬೇಡ ಎಂದಾಗ್ಯೂ ಚಿನ್ನಕ್ಕೆ ಹಣ ಹಾಕುತ್ತಾರೆ. ಹಾಳಾದ್ದು, ಈ ಗಂಡಸರ ಬುದ್ಧಿಗೆ ಏನು ಹೇಳಬೇಕು ಹೇಳಿ" ಎನ್ನುತ್ತಾಳೆ ಆಕೆ ನೆರೆಮನೆಯವರೊಡನೆ ಮಾತನಾಡುವಾಗ! ಒಮ್ಮೆ ಹುಚ್ಚಯ್ಯ ತೋಟದಲ್ಲಿ ಅಡ್ಡಾಡುತ್ತಿರುವಾಗ ಕಾಲು ಜಾರಿ ಬಿದ್ದರು. ನನ್ನಲ್ಲಿಗೆ ಕಾರಿನಲ್ಲಿ ಕರೆದುಕೊಂಡು ಬರುವಾಗ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಬಹಳಷ್ಟು ಶ್ರಮವಹಿಸಿ ಮುತುವರ್ಜಿಯಿಂದ ಚಿಕಿತ್ಸೆ ನಡೆಸಿದೆ. ಒಂದು ಗಂಟೆಯ ನಂತರ ಪ್ರಜ್ಞೆ ಮರುಕಳಿಸಿತು.

ಮರುದಿನ ಹುಚ್ಚಯ್ಯ ನಗುನಗುತ್ತಾ ಚಿಕಿತ್ಸಾಲಯಕ್ಕೆ ಬಂದರು. "ನಿಶ್ಶಕ್ತಿ ತುಂಬಾ ಇದೆ ನಿಮಗೆ. ಸ್ವಲ್ಪ ಪೌಷ್ಟಿಕ ಆಹಾರ ಸೇವಿಸಿ ದೇಹವನ್ನು ಗಟ್ಟಿಮುಟ್ಟು ಮಾಡಿಕೊಳ್ಳಬೇಕು ನೀವು. ನಿನ್ನೆ ನೋಡಿ, ನಾಲ್ಕು ಇಂಜೆಕ್ಷನ್ ಕೊಟ್ಟು ಬಹಳ ಕಷ್ಟಪಟ್ಟ ನಂತರ ನಿಮಗೆ ಪ್ರಜ್ಞೆ ಬಂತು. ಆ ಬಗ್ಗೆ ಚಾರ್ಜ್ ನಿನ್ನೆ ಕೊಟ್ಟಿರಲಿಲ್ಲ ನಿಮ್ಮ ಕಡೆಯವರು," ಎಂದೆ ನಾನು. ಅದಕ್ಕೆ ಮುಖ ಗಂಟು ಹಾಕಿಕೊಂಡ ಅವರು, "ಡಾಕ್ಟರೇ, ನಾನು ಎಂಥ ವ್ಯಕ್ತಿ ಎಂದು ನಿಮಗೆ ಗೊತ್ತಿರಲಿಕ್ಕಿಲ್ಲ. ನೀವು ನಾಲ್ಕು ಇಂಜೆಕ್ಷನ್ ಕೊಟ್ಟೆ ಅಂತೀರಲ್ಲ. ನನ್ನ ಒಪ್ಪಿಗೆ ಪಡೆಯದೆ ನನ್ನ ಮೈ ಏಕೆ ಮುಟ್ಟಿದಿರಿ ? ಯಾರನ್ನು ಕೇಳಿ ಇಂಜೆಕ್ಷನ್ ಮಾಡಿದಿರಿ ನೀವು? ಇರಲಿ, ನನ್ನ ಸೇವಾರ್ಥ ಎಂದು ನಿಮ್ಮ ಶ್ರಮವೆಲ್ಲವನ್ನೂ ಗ್ರಹಿಸಿ ಬಿಡಿ. ದೇವರು ಕಣ್ಣು ಬಿಡಲಿ, ನಿಮ್ಮ ಬಾಳು ಬೆಳಗಲಿ." ಎಂದೆಲ್ಲಾ ಹೆಸರಿಗೆ ತಕ್ಕಂತೆ ಹುಚ್ಚು ಹುಚ್ಚಾಗಿ ಮಾತನಾಡಿದಾಗ ನನಗೆ ದಿಗ್ಭ್ರಮೆಯಾಯಿತು !!

ಇಂಥವರೂ ಉಂಟು!

ವೈದ್ಯನಾದ ಹೊಸದರಲ್ಲಿನ ಒಂದು ದಿನ. ಎಂಟು ಮಕ್ಕಳ ತಾಯಿ ಮಾಚಿ ಒಂಬತ್ತನೇ ಹೆರಿಗೆಗೆಂದು ಆಸ್ಪತ್ರೆಗೆ ಬಂದಿದ್ದಳು. ವಿಪರೀತ ರಕ್ತಸ್ರಾವದಿಂದ ಆಕೆ ಸುಸ್ತಾಗಿ ಪ್ರಾಣಾಪಾಯ ಸ್ಥಿತಿಯಲ್ಲಿದ್ದಳು. ಮಧ್ಯರಾತ್ರಿಯ ಸಮಯ ಬೇರೆ. ಆಕೆಯ ಗಂಡ ಹೊರಗಡೆ ಎಲ್ಲೂ ಕಾಣಸಿಗಲಿಲ್ಲ.

ಮಾಚಿಯನ್ನುಳಿಸಿಕೊಳ್ಳಲು ಕನಿಷ್ಠ ಪಕ್ಷ ಎರಡು ಬಾಟ್ಲಿ ರಕ್ತವನ್ನಾದರೂ ನೀಡಬೇಕಾದಂಥ ಗಂಭೀರ ಪರಿಸ್ಥಿತಿ. ದಿಕ್ಕು ತೋಚದಾಗ ನಾನೇ ಮುಂದಾದೆ. ನನ್ನ ರಕ್ತವೇ ಹೊಂದುತ್ತದೆ ಎಂದು ಗೊತ್ತಾದಾಗ ಒಂದು ಬಾಟ್ಲಿ ರಕ್ತವನ್ನು ನಾನೇ ನೀಡಿದೆ, ರಕ್ತದ ಬ್ಯಾಂಕಿನ ಮೂಲಕ ಇನ್ನೊಂದು ಬಾಟ್ಲಿ ರಕ್ತವನ್ನು ಪಡೆದೆ. ಮುಂಜಾನೆ ಏಳು ಗಂಟೆಗೆ ನವಜಾತ ಗಂಡು ಮಗುವನ್ನು ನೋಡಿ ಮಾಚಿ ಮುಗುಳ್ನಕ್ಕಳು. ಆಕೆಯ ಗಂಡ ಮಾರನಿಗೆ ಮಗುವೇನೆಂದು ತಿಳಿಯುವ ತವಕ. ಎಂಟು ಹೆಣ್ಣು ಮಕ್ಕಳ ನಂತರ ಗಂಡು ಮಗು ಹುಟ್ಟಿದ ಸುದ್ದಿ ಅವನಿಗೆ ತಂದ ಸಂತಸ ಅಪಾರ. ರಾತ್ರಿ ಎರಡು ಬಾಟ್ಲಿ ರಕ್ತವನ್ನು ಮಾಚಿಗೆ ಕೊಟ್ಟಿದ್ದ ಸುದ್ದಿಯನ್ನವನಿಗೆ ತಿಳಿಸಿ, ರಕ್ತದ ಬ್ಯಾಂಕ್‌ನಿಂದ ತಂದ ರಕ್ತದ ಬಗ್ಗೆಯಾದರೂ ೩೦ ರೂಪಾಯಿ ಆತ ಕೊಡಲೇಬೇಕೆಂದೂ, ಆಕೆಗೆ ಕೊಟ್ಟಿದ್ದ ನನ್ನ ರಕ್ತಕ್ಕೆ ಬಡವನಾದ ಆತ ಹಣಕೊಡಬೇಕಾಗಿಲ್ಲವೆಂದೂ ಹೇಳಿದೆ. ಕೂಡಲೇ ಆತ ಸಿಡಿಮಿಡಿಗೊಂಡು, "ಆ ರಕ್ತವನ್ನೆಲ್ಲ ಅವಳಿಗೆ ನೀವೇಕೆ ಕೊಟ್ರಿ ? ಅವ್ಳಿಗೇ ಅದು ಸೇರಿದೆ ಎಂದು ನಂಗೇನು ಗೊತ್ತು ? ಒಂದೊಮ್ಮೆ ಅವ್ಳು ಸತ್ತಿದ್ರೂ ನಂಗೆ ಚಿಂತೆ ಇರಲಿಲ್ಲ. ಇನ್ನೊಂದು ಮದುವೆಯನ್ನೇ ಮಾಡಿಕೊಂಡು ಸುಖವಾಗಿರುತ್ತಿದ್ದೆ. ಆ ಮುದಿ ಗೂಬೆಯನ್ನು ಉಳಿಸಿ ನೀವು ಕಟ್ಟಿಕೊಂಡ ಪುಣ್ಯ ಆ ದೇವರಿಗೇ ಗೊತ್ತು. ನಾನಂತೂ ಒಂದೇ ಒಂದು ಪೈಸೆಯನ್ನು ನಿಮಗೆ ಕೊಡುವನಲ್ಲ" ಎಂದು ಕಿರುಚಾಡಿದ

ಮಾಡಿದ ತಪ್ಪು

ಅವರು ಶಾಲಾ ಅಧ್ಯಾಪಕರು. ದೊಡ್ಡ ಕುಟುಂಬ ಅವರದು. ಮನೆ ಮಂದಿಗೆ ಕಾಹಿಲೆ ಬರದಾಗಲೆಲ್ಲ ನನ್ನ ಬಳಿ ಚಿಕಿತ್ಸೆಗೆ ಬರುತ್ತಿದ್ದರು. ಸಂಬಳ ಬಂದೊಡನೆ ಆ ತಿಂಗಳ ಔಷಧದ ಹಣವನ್ನೆಲ್ಲ ಚುಕ್ತಾ ಪಾವತಿ ಮಾಡುತ್ತಿದ್ದರು. ಒಮ್ಮೆ ಈ ಕ್ರಮ ತಪ್ಪಿ ಆರು ತಿಂಗಳು ಅವರ ಸುಳಿವೇ ಇರಲಿಲ್ಲ. ಚೀಟಿ ಕಳುಹಿಸಿ ಅವರನ್ನು ಕರೆಸಿ ವಿಚಾರಿಸಿದೆ. ಬಾಕಿಯಾದ ಹಣ ಒಂದು 'ಶತಕ. ದಾಟಿದೆ' ಎಂದೆ. ಅದಕ್ಕವರು ಗಾಬರಿಗೊಂಡು, "ಆರು ತಿಂಗಳಿಂದ ನಮ್ಮ ಮನೆಯಲ್ಲಿ ಕಾಹಿಲೆಯೇ ಇಲ್ಲವಲ್ಲ. ಸುಮ್ಮಸುಮ್ಮನೆ ಲೆಕ್ಕ ಬರೆದುಕೊಂಡು ಬಾಕಿ ಎಂದು ಹೇಳಿದರೆ ಯಾರು ಕೊಡುತ್ತಾರೆ ಹೇಳಿ ನೋಡೋಣ? ಬಸ್ಸಿನಲ್ಲಿ ಟಿಕೆಟ್ ಕೊಟ್ಟು ದುಡ್ಡು ಪಡೆದುಕೊಳ್ಳುವ ಕ್ರಮವನ್ನು ಕಂಡಕ್ಟರ್ ಇಟ್ಟುಕೊಳ್ಳುವುದಿಲ್ಲವೇ ಡಾಕ್ಟರೇ. ಅಂತೇನೇ ನೀವೂ ಔಷಧಿ ಕೊಟ್ಟು ದುಡ್ಡು ಪಡೆದುಕೊಳ್ಳಬೇಕು. ಅದು ನಿಮ್ಮ ಕರ್ತವ್ಯ. ನೀವು ಮಾಡಿದ ತಪ್ಪಿಗೆ ನಾನೇಕೆ ಹೊಣೆ ಹೇಳಿ" ಎಂದು ಬಿಡಬೇಕೆ !

ಊಟವೇ ಫೀ

ಊರಿನ ಪಂಚಾಯಿತಿಯ ಅಧ್ಯಕ್ಷರವರು. ಅವರ ಪತ್ನಿಗೆ ವಾಂತಿಬೇಧಿಯಾಗಿ ತೀವ್ರ ಸುಸ್ತಾದಾಗ ತುರ್ತುಕರೆಗೆ ಓಗೊಟ್ಟು ಅಲ್ಲಿಗೆ ತೆರಳಿ ಚಿಕಿತ್ಸೆ ನೀಡಿ ಹೊರಡಲನುವಾದೆ. ಆಗಲೇ ರಾತ್ರಿ ಗಂಟೆ ಎಂಟಾಗಿತ್ತು. "ನಮ್ಮಲ್ಲಿ ಊಟ ಮಾಡಿಕೊಂಡು ಹೋಗಬೇಕು" ಎಂಬ ಒತ್ತಾಯ ಅವರದ್ದು. "ನನ್ನ ಕರ್ತವ್ಯ ಚಿಕಿತ್ಸೆ ನೀಡುವುದು. ಹೋದಲ್ಲೆಲ್ಲ ಏನನ್ನೂ ಸ್ವೀಕರಿಸುವ ಕ್ರಮವನ್ನಿಟ್ಟುಕೊಂಡಿಲ್ಲ," ಎಂದೆ ಸ್ಪಷ್ಟವಾಗಿ. ಅದಕ್ಕೆ ಅವರ ಮಾತಿನ ಧಾಟಿಯೇ ಬೇರೆ. "ಎಂಥೆಂಥವರೆಲ್ಲ ನಮ್ಮ ಮನೆಯಲ್ಲಿ ಊಟ ಮಾಡಿದ್ದಾರೆ ಗೊತ್ತೇ ನಿಮಗೆ? ನೀವು ಊಟ ಮಾಡುವುದಿಲ್ಲ ಎಂದರೆ ಅದು ಅಹಂಕಾರದ ಮಾತೇ ಆಗುತ್ತದೆ." ಎಂದ ಅವರು ಕಾವಲುಗಾರರ ಭದ್ರ ಪಡೆಯನ್ನೇ ಬಾಗಿಲಿನಲ್ಲಿ ನಿಲ್ಲಿಸಿಬಿಟ್ಟರು !

ಕೊನೆಗೆ ತಿಳಿದು ಬಂದ ವಿಚಾರವಿಷ್ಟೆ. ಆ ವ್ಯಕ್ತಿ ಮನೆಗೆ ಬಂದು ಚಿಕಿತ್ಸೆ ನೀಡುವ ಪ್ರತಿಯೊಬ್ಬ ಡಾಕ್ಟರಿಗೂ ಒಂದು ಊಟ ಹಾಕುವ ಸಂಪ್ರದಾಯವನ್ನಷ್ಟೆ ಇಟ್ಟುಕೊಂಡಿದ್ದಲ್ಲದೆ. ಚಿಕಿತ್ಸೆಗಾಗಿ ಅವರಿಗೆ ಬೇರೆ ಹಣ ಕೊಟ್ಟುದೇ ಇಲ್ಲವಂತೆ, ಈ ವರೆಗೆ !

ಬೆಂಬಿಡದ ದುಶ್ಚಟ

ಹೊರೆ ಹೊರುವ ಬಡ ಬಚ್ಚನಿಗೆ ೪೦ ವರ್ಷ ವಯಸ್ಸು. ಧೂಮಪಾನದ ದುಶ್ಚಟಕ್ಕೊಳಗಾದ ಆತನ ಬಲಗಾಲಿನಲ್ಲಿ ಹುಣ್ಣಾಗಿ ಅದು ವಾಸಿಯಾಗದಾಗ ಕಾಲನ್ನೇ ಕತ್ತರಿಸಬೇಕೆಂದಾಯ್ತು. ಒಂದು ದಿನ ಶಸ್ತ್ರಚಿಕಿತ್ಸೆ ಮಾಡಿ ಅವನ ಬಲಗಾಲನ್ನು ಕತ್ತರಿಸಿ ಆಪರೇಷನ್ ಕೋಣೆಯಿಂದ ವಾರ್ಡಿಗೆ ಅವನನ್ನು ಸಾಗಿಸಲಾಯಿತು. ಸಂಜೆ ನಾನು ವಾರ್ಡಿಗೆ ಬಂದಾಗ ಹೊದಿಕೆಯಿಂದ ಮುಸುಕು ಹಾಕಿಕೊಂಡು ಮಲಗಿದ್ದ ಅವನನ್ನು ನೋಡಿ ದುಃಖವಾಯ್ತು. ಕಾಲು ಕಳೆದುಕೊಂಡು ಪಶ್ಚಾತ್ತಾಪಪಡುತ್ತಿರಬೇಕು, ಪಾಪ, ಎಂದೆಣಿಸಿ ಮೆಲುದನಿಯಲ್ಲಿ "ಬಚ್ಚ...ಏ, ಬಚ್ಚ " ಎನ್ನುತ್ತ ಅವನ ಮುಸುಕನ್ನು ಸರಿಸಿದೆ. ಏನಾಶ್ಚರ್ಯ! ಮುಸುಕಿನೊಳಗೇನೇ ಆತ ಬೀಡಿ ಸೇದುತ್ತಿದ್ದ! ಬೀಡಿ ಸೇದಿದರೆ ಇನ್ನೊಂದು ಕಾಲನ್ನೂ ಕತ್ತರಿಸಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದಾಗ ಆತ ಸ್ವಲ್ಪವೂ ವ್ಯಥೆಪಡದೆ ಖುಷಿಯಿಂದಲೇ ಹೇಳಿದ. "ಇನ್ನೊಂದು ಕಾಲೂ ಕತ್ತರಿಸಲ್ಪಟ್ಟರೆ ತಿಂಗಳಿಗೆ ೪೦ ರೂಪಾಯಿ ದೊರೆಯುತ್ತದಲ್ಲವೇ?" ಎಂದು ಬಿಟ್ಟ! ಸರಕಾರ ಅಂಗವಿಕಲರಿಗೆ ಕೊಡುವ ಮಾಸಾಶನಕ್ಕಾಗಿ ಆತ ಆ ದಿನವೇ ಅರ್ಜಿ ಹಾಕಿದ್ದು ನಂತರ ಗೊತ್ತಾಯಿತು.

ಇವರಿಗೆ ಸಂಸಾರವೇ ನರಕ

ಲಕ್ಷ್ಮಮ್ಮ ಐದು ಮಕ್ಕಳ ತಾಯಿ. ಕಿರಿಯ ಮಗನಿಗಿನ್ನೂ ಒಂದು ವರ್ಷ ತುಂಬಿಲ್ಲ. ಆಗಲೇ ಐದು ತಿಂಗಳ ಗರ್ಭಿಣಿಯಾಕೆ. ಮನೆ ಮಂದಿಗೆಲ್ಲ ಫ್ಲೂ ಬಂದು ಎರಡು ತಿಂಗಳಾದರೂ ಕೈಯಲ್ಲಿ [illegible] ಚಿಕಿತ್ಸೆಗೆ

ಬ್ಬಂದಿಸಲಿಲ್ಲ. ಅವಳ ಗಂಡ ಸಿದ್ಧ ವಿಪರೀತ ಕುಡುಕನಾಗಿದ್ದು ಸದಾ ಮತ್ತಿನಲ್ಲೆ ಇರುತ್ತಾನೆ. ಈಕೆ ದಿನಗೂಲಿಯಿಂದ ತರುವ ಮೂರು ರೂಪಾಯಿಗಳನ್ನು ಆತ ಸೇಂದಿ ಅಂಗಡಿಗೆ ಹಾಕುವನಂತೆ. ಮಕ್ಕಳು ಹಸಿದಿರುವ ಬಗ್ಗೆ ಆತನಿಗೆ ಎಳ್ಳಷ್ಟೂ ಚಿಂತೆಯಿಲ್ಲ. ದಿನವಿಡೀ ಬರಿ ಹೊಟ್ಟೆ ದುಡಿದು ತರುವ ಹಣವನ್ನು ಗಂಡನಿಗೆ ಕೊಡದಿದ್ದಲ್ಲಿ ಕೋಪದಿಂದ ತನ್ನ ಚರ್ಮವನ್ನೇ ಆತ ಸುಲಿದುಬಿಟ್ಟಾನು ಎನ್ನುತ್ತಾಳೆ ಲಕ್ಷ್ಮಿ. ಒಮ್ಮೆ ತನ್ನೆಲ್ಲ ಮಕ್ಕಳೊಂದಿಗೆ ಚಿಕಿತ್ಸೆಗಾಗಿ ಬಂದಿದ್ದಳು. ಜ್ವರ ವಿಪರೀತವಾಗಿದ್ದು ೩-೪ ದಿನಗಳ ಚಿಕಿತ್ಸೆಯಿಂದಷ್ಟೇ ಅದು ನಿಯಂತ್ರಣಕ್ಕೆ ಬಂದೀತೆಂದೂ, ಹಾಗೇ ಬಿಟ್ಟರೆ ಪ್ರಾಣಾಪಾಯ ಖಂಡಿತವೆಂದೂ ತಿಳಿಸಿದೆ. ತನ್ನ ದುಃಸ್ಥಿತಿಯನ್ನು ಹೇಳಿ ಕಣ್ಣೀರಿಟ್ಟವಳು. ಕನಿಕರದಿಂದ ಧರ್ಮಾರ್ಥ ಚಿಕಿತ್ಸೆ ನೀಡಿ, ಮಕ್ಕಳಿಗೆ ಗಂಜಿ ಮಾಡಿಯಾದರೂ ಹಾಕೆಂದು ಸ್ವಲ್ಪ ಹಣವನ್ನು ಅವಳ ಕೈಯಲ್ಲಿತ್ತೆ. ಮರುದಿನ ಆಕೆ ಬಂದಾಗ ನಾನಿತ್ತ ಹಣವೆಲ್ಲ ಸಿದ್ಧನ ಪಾಲಿಗಾದ ವಿಚಾರ ತಿಳಿದು ಬಂತು. ನನಗೆ ಮುಖ ತೋರಿಸಲು ನಾಚಿದ ಸಿದ್ಧ ಚಿಕಿತ್ಸಾಲಯದ ಹೊರಗಡೆಯೇ ಕಾದು ನಿಂತಿದ್ದು ನಾನು ಕೊಟ್ಟುದನ್ನು ಕೇಳಿಕೊಂಡು ಅಲ್ಲಿಯೇ ದರ್ಪದಿಂದ ಅದನ್ನು ಪಡೆದು 'ಗುಂಡು' ಹಾಕಿಕೊಂಡೇ ಮನೆಗೆ ಬಂದಿದ್ದನಂತೆ! "ಮುದ್ದು ಮಕ್ಕಳ ಮುಖ ನೋಡಿ ಸಾಯಲೂ ಮನಸ್ಸು ಬಾರದು" ಎನ್ನುತ್ತಾಳೆ ಅಸ್ಥಿಪಂಜರದಂತಿರುವ ಲಕ್ಷ್ಮಮ್ಮ. "ದೇವರು ಕೊಡುವ ಮಕ್ಕಳಿಗೆ ತಡೆ ಹಾಕುವ ಮುಟ್ಠಾಳ ಯಾರು?" ಎಂಬ ಗಂಡನ ಗದರಿಕೆಗೂ ಮಣಿಯದೆ, ಪ್ರತಿ ಬಾರಿ ಹೆತ್ತಾಗಲೂ ಆಪರೇಶನ್‌ಗೊಳಗಾಗಲು ಆಕೆ ಧರ್ಮದ ಆಸ್ಪತ್ರೆಗೆ ಹೋದಾಗ, "ದೇಹದಲ್ಲಿ ರಕ್ತದ ಪಸೆಯಿಲ್ಲ, ಟಾನಿಕ್ ಮತ್ತು ಮಾತ್ರೆಗಳನ್ನು ಸೇವಿಸಿ ಮೂರು ವಾರಗಳ ನಂತರ ಬನ್ನಿ" ಎಂದು ಔಷಧಿ ಬರೆದುಕೊಡುತ್ತಾರೆ. ತನಗೆಲ್ಲಿಂದ ಅಷ್ಟು ಹಣ ಬರಬೇಕು? ಎಂದಾಕೆ ಗೋಳೋ ಎಂದು



ಅತ್ತಾಗ ನನಗೆ ಬಡವರ ಉದ್ಧಾರದ ಕನಸು ನನಸಾದೀತೆ ಎಂಬ ಸಂಶಯ ಮೂಡಿ ಬಂದಿತ್ತು.

ಶ್ರದ್ಧೆಯಿದ್ದಲ್ಲಿ ಗೆದ್ದೆ...

ಒಮ್ಮೆ ನಾಲ್ಕು ದಿನಗಳ ಕಾಲ ಚಿಕಿತ್ಸಾಲಯವನ್ನು ಮುಚ್ಚಿದ್ದೆ. ಸೋತು ಸೊರಗಿ ಹೋದ, ಮೂರು ವರ್ಷದ ಮಗನನ್ನೆತ್ತಿಕೊಂಡು ಏದುಸಿರು ಬಿಡುತ್ತ ಅಕ್ಕಣಿ ನನ್ನಲ್ಲಿಗೆ ಓಡಿ ಬಂದಿದ್ದಳು. ಐದು ದಿನಗಳಿಂದಲೂ ಅವನಿಗೆ ವಾಂತಿಭೇಧಿಯಾಗಿದ್ದು, ನಿಶ್ಶಕ್ತಿ ಬಹಳಷ್ಟಿದ್ದು, ಉಸಿರು ಮಾತ್ರವೇ ಆಡುತ್ತಿತ್ತು! ಇಷ್ಟೊಂದು ತಡವಾಗಿ ಬಂದುದೇಕೆಂದು ವಿಚಾರಿಸಿದಾಗ ಆಕೆ ನೀಡಿದ ಉತ್ತರವಿದು, "ನೀವು ನಾಲ್ಕು ದಿನಗಳಿಂದ ಊರಲ್ಲಿಲ್ಲ ಎಂದು ತಿಳಿದೆ. ದಿನ ಬೆಳಗಾದರೆ ನೀವು ಬಂದೀರಾ ಎಂದು ಕತ್ತು ಉದ್ದ ಮಾಡಿ ಕಾದು ಕಾದು ಸಾಕಾದೆ. ಊರಿನಲ್ಲಿ ಬೇರೆ ಎಂಟು, ಮಂದಿ ಡಾಕ್ಟರಿದ್ದರೂ ನಿಮ್ಮೊಬ್ಬರಿಗೇ ಅಲ್ಲವೇ ಅವನ ಹೊಟ್ಟೆಯೊಳಗೆ ಏನೇನಿದೆ ಎಂದು ಗ್ಯಾರಂಟಿ ಗೊತ್ತಿರುವುದು? ಬೇರೆಯವರಲ್ಲಿಗೆ ಹೋದರೆ ಅವರು ಕೊಡುವ ಮದ್ದು ಹೊಟ್ಟೆಗೆ ಹೋಗದೆ ಬೇರೆಲ್ಲಾದರೂ ಹೋಗಿ 'ಇಸ'ವಾದರೆ ನಾನೇನು ಮಾಡಲಿ ಹೇಳಿ? ನೀವು ಬಂದ ಮೇಲೇನೇ ತೋರಿಸಿದರೆ ಸಾಕೆಂದು ನಮ್ಮ ಕೇರಿಯವರೆಲ್ಲರೂ ಸೂಚಿಸಿದಂತೆ ನಿಮಗಾಗಿ ಕಾದುಕೊಂಡಿದ್ದೆ. ನನ್ನ ಮಗನನ್ನು ಉಳಿಸಿ" ಎಂದು ಕಾಲಿಗೆ ಬಿದ್ದಳು. ಚಿಕಿತ್ಸೆ ಮಾಡಿದೆ, ಮಾರನೆದಿನವೇ ಅವಳ ಮಗ ಗುಣವಾದನೆನ್ನಿ.

ಆತ ದೊಡ್ಡ ಜಮೀನ್ದಾರ. ಹೆಂಡತಿಯ ಕೈಯಲ್ಲಿ ಸಂಪೂರ್ಣ ಯಜಮಾನಿಕೆಯಿತ್ತು. ಅವಳ ಮಾತಿಗೆ ತಪ್ಪದ ಸತಿವ್ರತನೂ ಹೌದು! ಅಷ್ಟೈಶ್ವರ್ಯದ ದೊಡ್ಡ ಮನೆ ಅವನಿಗಿದ್ದರೂ ದೊಡ್ಡ ಮನಸಿಲ್ಲ. ಮಂಚದ ಮೇಲೆ ದಪ್ಪ ಹಾಸಿಗೆಯಲ್ಲಿ ಆತ ಮಲಗುತ್ತಿದ್ದರೂ ಮುದಿ ತಂದೆ ತಾಯಿಗಳು ಮನೆಯ ಮೂಲೆಯೊಂದರಲ್ಲಿ ಹರಿದ ವಸ್ತ್ರಗಳ ಮೇಲೆ ಮುದುಡಿಕೊಳ್ಳಬೇಕಾಗಿತ್ತು. ಈತ ಹೊತ್ತು ಹೊತ್ತಿಗೆ ಕಾಫಿ, ತಿಂಡಿ, ಊಟ ತಪ್ಪಿಸದಿದ್ದರೂ ಅವರಿಬ್ಬರನ್ನು ಕೇಳುವವರೇ ಇಲ್ಲವಾಗಿತ್ತು. ಇವನಿಗೊಬ್ಬನೇ ಮಗ. ಹೆಸರು ವಿವೇಕ. ಇನ್ನೂ ನಾಲ್ಕು ವರ್ಷ. ತನ್ನ ಅಜ್ಜ ಅಜ್ಜಿಯರನ್ನು ತಂದೆ ತಾಯಂದಿರು ಕಾಪಾಡುವ ರೀತಿಯನ್ನು ಮೂಕನಾಗಿಯೇ ದಿನಂಪ್ರತಿ ನೋಡುತ್ತಿರುವವನು ಇವನೊಬ್ಬನೇ. ಒಮ್ಮೆ ಅಪ್ಪ, ಅಮ್ಮ ಸಿನೆಮಾಕ್ಕೆ ಹೋಗಿ ಬರುವಾಗ ವಿವೇಕ ಮರದ ಚಿಕ್ಕ ಚಿಕ್ಕ ಹಲಗೆಯ ಚೂರುಗಳನ್ನೆಲ್ಲ ಜೋಡಿಸುತ್ತಿದ್ದ. ಏನೋ ದೊಡ್ಡ ಕೆಲಸ ಮಾಡುತ್ತಿರುವೆ ಎಂಬ ಹೆಮ್ಮೆ ಅವನಲ್ಲಿತ್ತು. ತಂದೆ ಬಂದು ವಿಚಾರ ಏನೆಂದು ಕೇಳಿದ, "ಅಪ್ಪ, ನಾನು ನಿನಗಾಗಿ ಮಂಚ ತಯಾರಿಸುತ್ತಿದ್ದೇನೆ." ಎಂದ ವಿವೇಕ ಖುಷಿಯಿಂದ. "ಏನೋ ಅದು? ಮಂಚ ಈಗ ಇಲ್ಲವೇನೋ?" ಎಂದು ಗದರಿಸಿದ ತಂದೆ. "ಅಷ್ಟೂ ಗೊತ್ತಾಗೊಲ್ವೆನಪ್ಪಾ—ಈಗ ನೀನು ನಮ್ಮಮ್ಮನೊಟ್ಟಿಗೆ ಮಲಗುವ ಮಂಚ ದೊಡ್ಡೋನಾದ ಮೇಲೆ ನನಗೆ ಮತ್ತು ನನ್ನ ಹೆಂಡತಿಗೆ. ನೀವಿಬ್ಬರೂ ಮುದುಕರಾದ ಮೇಲೆ ಅಜ್ಜ ಅಜ್ಜಿಯ ಮಂಚದ ಮೇಲೇ ಬಿದ್ದಿರಬೇಕು ಅಲ್ಲವೇನಪ್ಪಾ?" ಎನ್ನುತ್ತ ವಿವೇಕ ತನ್ನ ವಿವೇಕವನ್ನು ಪ್ರಕಟಿಸಿದಾಗ ಅಪ್ಪ ಬೆಪ್ಪಾಗಿ ಹೋದ. ★

ಆಕೆ ಲೈಬ್ರರಿಯನ್ನನಿಗೆ ಪುಸ್ತಕ ಹಿಂದಿರುಗಿಸುತ್ತ ಕೇಳಿದಳು:
"ಈ ಲೇಖಕಿಯ ಇನ್ನಷ್ಟು ಪುಸ್ತಕಗಳಿವೆಯಾ?"
"ಇವೆ. ಏಕೆ?"
"ಅಷ್ಟನ್ನೂ ಕೊಡ್ತೀರಾ, ಒಮ್ಮೆಲೆ?"
"ಏಕೆ?"
"ಏಕೆಂದ್ರೆ ಈ ಪುಸ್ತಕದಲ್ಲಿ ನೂರರ ನೋಟಿತ್ತು, ಅದಕ್ಕೆ."

ತೆಗೆಸಿದರು ಟೋಪಿ

ಡಾ. ಕೆ. ಶ್ರೀಕಂಠಯ್ಯ

ಒಮ್ಮೆ ಟೈಗರ್ ವರದಾಚಾರ್ಯರ ಶಿಷ್ಯರೊಬ್ಬರು "ಗುರುಗಳೆ ತಾವು ಹಾಕಿಕೊಂಡಿರುವ ಟೋಪಿ ತಮಗೇ ಅಷ್ಟಾಗಿ ಒಪ್ಪುವುದಿಲ್ಲ ದಯಮಾಡಿ ಅದನ್ನು ತೆಗೆದುಬಿಡಿ," ಎಂದು ವಿನಂತಿಸಿಕೊಂಡರು. ಆಗ ಟೈಗರ್ ಅವರು, "ಇದನ್ನು ಹೇಳುವುದಕ್ಕೆ ಇಷ್ಟು ಮೀನ ಮೇಷ ಎಣಿಸುತ್ತಿದ್ದೀಯಾ! ಒಳ್ಳೆಯ ಭೂಪತಿ ನೀನು. ಅಲ್ಲಯ್ಯ ಈ ತಲೆಯ ಮೇಲೆ ಆ ಸಾಕ್ಷಾತ್ ದೇವೇಂದ್ರನ ಸುವರ್ಣ ಖಚಿತ ಕಿರೀಟವನ್ನೇ ತಂದಿಟ್ಟರೂ ಇಷ್ಟೇನೆ! ಬ್ರಹ್ಮ ಸೃಷ್ಟಿಯೇ ಹಾಗಿರುವಾಗ ಆ ಟೋಪಿಯ ತಪ್ಪೇನಿದೆ? ಅವರಿವರು ಟೋಪಿ ಹಾಕುವುದಕ್ಕೆ ಮುಂಚೆಯೇ ನಾನೇ ಟೋಪಿ ಹಾಕಿಕೊಳ್ಳುವುದು ಮೇಲಲ್ಲವೆ? ಇದ್ದುಕೊಂಡು ಹೋಗಲಿ ಬಿಡು," ಎಂದು ಟೋಪಿ ಧಾರಣೆಯನ್ನು ಸಬಲವಾಗಿ ಸಮರ್ಥಿಸಿಕೊಂಡರು.

ವರದಾಚಾರ್ಯರ ಸ್ಥೂಲಕಾಯದ ಮೇಲೆ ಆ ಪುಟ್ಟ ಟೋಪಿ ವಿಚಿತ್ರವಾಗಿ ಕಾಣಿಸುತ್ತಿತ್ತು. ಎಲ್ಲರ ತುಟಿಗಳ ಮೇಲೂ ನಗೆ ಮೂಡಿಸುತ್ತಿತ್ತು. ವರದಾಚಾರ್ಯರಿಗೆ ಈ ಸಂಗತಿ ತಿಳಿಯದೇ ಇರಲಿಲ್ಲ. ಸ್ವಯಂರಸಿಕರು, ಹಾಸ್ಯಪ್ರಿಯರು, ತಮ್ಮನ್ನು ತಾವೇ ಹಾಸ್ಯ ಮಾಡಿಕೊಳ್ಳುವುದಕ್ಕೂ ಹಿಂದು ಮುಂದೆ ನೋಡುತ್ತಿರಲಿಲ್ಲ. ಶಿಷ್ಯನನ್ನು ಕೆಣಕಿ ವಿನೋದ ಹೊಂದಬೇಕೆಂಬ ಉದ್ದೇಶದಿಂದ ಹಿಡಿದ ಪಟ್ಟನ್ನು ಬಿಡದೆ ಟೋಪಿಗೆ ತಲೆಯ ಮೇಲೆ ಸ್ಥಿರವಾದ ಸ್ಥಾನವನ್ನು ಕಲ್ಪಿಸಿದ್ದರು. ವರದಾಚಾರ್ಯರ ಶಿಷ್ಯರಿಗೂ ಮಿತ್ರರಿಗೂ ಏನೂ ತೋಚದಂತಾಗಿ ವಾಗ್ಗೇಯಕಾರ ವಾಸುದೇವಾಚಾರ್ಯರಲ್ಲಿ ಬಂದು ತಮ್ಮ ಸಂಕಟವನ್ನು ತೋಡಿಕೊಳ್ಳುತ್ತಾ, "ಟೈಗರ್ ಅವರ ಪರಮ ಮಿತ್ರರಾದ ನಿಮ್ಮ ಮಾತಿಗೆ ಅವರು ಎಂದೂ ಪ್ರತಿ ಹೇಳುವುದಿಲ್ಲ. ಹೇಗಾದರೂ ಮಾಡಿ ಆ ಟೋಪಿಯನ್ನು ಅವರಿಂದ ಬೇರ್ಪಡಿಸಿ ಪುಣ್ಯ ಕಟ್ಟಿಕೊಳ್ಳಿ" ಎಂದರು.

ಒಂದು ಸಂಜೆ ವಾಸುದೇವಾಚಾರ್ಯರ ಮನೆಯಲ್ಲಿ ಸ್ನೇಹಿತರ ಸಭೆ ಸೇರಿತು. ಸ್ನೇಹಿತರ ಅಪೇಕ್ಷೆಯ ಮೇರೆಗೆ ಆಚಾರ್ಯರು ಸ್ವಲ್ಪ ಕಾಂಬೋಧಿ ರಾಗ ಆಲಾಪನೆ ಮಾಡಿ ಮಧ್ಯಮ ಕಾಲವನ್ನು ಹಾಡುತ್ತಿದ್ದರು. ಆ ವೇಳೆಗೆ ಸರಿಯಾಗಿ ಟೋಪಿಯ ಸಮೇತ ವರದಾಚಾರ್ಯರು ಆಗಮಿಸಿದರು. "ಅಣ್ಣಾ ನನ್ನ ಕಿವಿಗೂ ಸ್ವಲ್ಪ ಹಾಕಿ ನಿಮ್ಮ ಸಂಗೀತವನ್ನು" ಎಂದು ಬಲವಂತ ಮಾಡಿದರು. ಆಚಾರ್ಯರ ಹಾಡುಗಾರಿಕೆಯನ್ನು ಸುಮಾರು ಎರಡು ಘಂಟೆಗಳವರೆಗೂ ಕೇಳಿದ ಟೈಗರ್ "ಬ್ರಹ್ಮಾನಂದವಾಯಿತು ಅಣ್ಣ. ಏನು ಕೊಡಲಿ ನಿಮ್ಮ ಈ ಭವ್ಯವಾದ ಸಂಗೀತಕ್ಕೆ?" ಎಂದರು. ಆಚಾರ್ಯರು ಇದೇ ಸಮಯವೆಂದು, "ನಾ ಕೇಳಿದ್ದನ್ನು ನೀವು ಇಲ್ಲ ಎನ್ನಬಾರದು," ಎಂದರು. "ಏನು ಬೇಕು ಕೇಳಿ" ಎಂದರು ಟೈಗರ್. "ನಿಮ್ಮ ಆ ಟೋಪಿಯನ್ನು ದಯಮಾಡಿ ಅನುಗ್ರಹಿಸಿ." ಎಂದಾಗ ಎಲ್ಲರೂ ಬಿದ್ದು ಬಿದ್ದು ನಗಲಾರಂಭಿಸಿದರು. ಬಿಡುಗಡೆ ಹೊಂದಿದ ಆ ಟೋಪಿಗೂ ಪರಮಾನಂದವಾಗಿರಬೇಕು. ★

(ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯರ ನೆನಪುಗಳಿಂದ ಸಂಗ್ರಹಿತ)

ಕೀಳರಿಮೆ

ಡಾ. ಕೆ. ಎಂ. ಧ್ರುವಕುಮಾರ

ಸುಮಾರು ಮೂವತ್ತು ವರ್ಷದ ಜಗದೀಶ ಮನೋರೋಗ ತಜ್ಞರನ್ನು ಕಾಣ ಬಯಸಿದಾಗ ಎಲ್ಲರಿಗೂ ಆಶ್ಚರ್ಯ. ಚಿಕಿತ್ಸೆಗೆ ಯಾರಲ್ಲಿ ಹೋಗಬೇಕೆಂದು ತಿಳಿಯಲು ಇತರರನ್ನು ವಿಚಾರಿಸಿ, ಅವರ ಸಲಹೆಯಂತೆ ನನ್ನಲ್ಲಿ ಬಂದಿದ್ದ. ಕೈ ತುಂಬಾ ಸಂಬಳ ತರುವ ಕೆಲಸ. [illegible] ಬೇರೆ. ಮುದ್ದಾದ ಒಂದೂವರೆ ವರ್ಷದ ಏಕಮಾತ್ರ ಪುತ್ರ. ಇರುವ ಮೂರು ಜನಕ್ಕೆ ಕೈ ತುಂಬಾ ದುಡಿಯುತ್ತಿರುವವರು ಇಬ್ಬರು. ಮನೆಯಲ್ಲಿ ಯಾರಿಗೂ ಕಾಯಿಲೆಯಿಲ್ಲ. ಜಗದೀಶನಂಥ ಸುಖಿ ಬೇರೆಯಿಲ್ಲ. ಇಂಥವ ಮನೋರೋಗ ಚಿಕಿತ್ಸಕರ ಬಗ್ಗೆ ವಿಚಾರಿಸಿದಾಗ ಆಶ್ಚರ್ಯವಾಗದೇ ಏನು? ಇವನಿಗೆಂಥ ಕೊರಗಿರಬಹುದು ಎಂಬುದು ಅವರಿಗೆಲ್ಲ ಅರ್ಥವಾಗದ ವಿಷಯ. ಅವರ ಮಾತಿನ ಸರಣಿಯನ್ನು ಎದುರಿಸಲಾಗದೇ ತನಗೆ ತಿಳಿದವರೊಬ್ಬರಿಗೋ ಬೇಕಾಗಿದೆಯೆಂದು ಸುಳ್ಳು ಹೇಳಿ ಅವರ ಬಾಯಿ ಮುಚ್ಚಿಸಿದ್ದ.

ಜಗದೀಶ ಒಳಗೆ ಬಂದವನೇ ನಿಟ್ಟುಸಿರು ಬಿಡುತ್ತಾ, "ಡಾಕ್ಟ್ರೆ, ನನಗೆ ನನ್ನ ಮನಸ್ಸಿನಲ್ಲಿ ಇರುವುದನ್ನು ಇತರರಿಗೆ ಹೇಳಲು ನಾಚಿಕೆ," ಎಂದ. ಇಷ್ಟು ಹೇಳುವಾಗ ಆತುರ ಬಹಳವಾಗಿತ್ತು. ಅವನ ನಿಟ್ಟುಸಿರನ್ನು ನೋಡಿದರೆ ಆತನಿಗೆ ಹೃದಯರೋಗ ಇರುವುದೇನೋ ಎಂಬ ಅನುಮಾನ ಬಂತು. "ಆತುರಪಡುವ ಅವಶ್ಯಕತೆಯಿಲ್ಲ. ಸಮಾಧಾನದಿಂದ ಎಲ್ಲವನ್ನೂ ಹೇಳಿ," ಎಂದೆ.

ಜಗದೀಶ ಶಾರೀರಿಕ ರೋಗ ತಜ್ಞರ ಬಳಿ ಹೋಗಿ ತನಗೆ ಯಾವ ಶಾರೀರಿಕ ಕಾಯಿಲೆಯೂ ಇಲ್ಲವೆಂಬುದನ್ನು ಗ್ರಹಿಸಿಕೊಂಡೇ ನನ್ನಲ್ಲಿಗೆ ಬಂದಿದ್ದ. ಸದಾ ತನಗೆ ಮನಸ್ಸಿನಲ್ಲಿ ಒಂದು ರೀತಿಯ ಅಶಾಂತಿಯೆಂದು ಹೇಳಿದ. ಜನಗಳ ಹತ್ತಿರ ಬೆರೆಯಲು ಕಷ್ಟವಾಗುವುದು. ಕಚೇರಿಯಲ್ಲಿ ಯಾರಾದರೂ ಏನಾದರೂ ಕೇಳಿದರೆ ಅದಕ್ಕೆ ಉತ್ತರ ಹೇಳುವುದೂ ಕಷ್ಟವಾಗುವುದು. ಕೆಲವು ಬಾರಿ ತಾನು ಯಾವುದೇ ಕೆಲಸವನ್ನು ಸರಿಯಾಗಿ ಮಾಡಿದ್ದರೂ ಅದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮೇಲಧಿಕಾರಿಗಳು ಏನಾದರೂ ಕೇಳಿದರಂತೂ ಅತಿಯಾಗಿ ಗಲಿಬಿಲಿಗೊಳ್ಳುತ್ತಾನೆ. ವಿಷಯ ತಿಳಿದಿದ್ದರೂ ಹೇಳಲು ಅಸಾಧ್ಯವಾಗುವುದು. ನಂತರ, 'ಛೆ! ನಾನೆಂಥ ದಡ್ಡ. ಗೊತ್ತಿದ್ದೂ ಹೇಳಲಿಲ್ಲವಲ್ಲಾ,' ಎಂದು ಬೇಸರಪಡುತ್ತಾನೆ. ಕಳೆದ ೧೪ ವರ್ಷಗಳಿಂದ ಈ ರೀತಿಯಾಗುತ್ತಿದ್ದರೂ ಈಚೀಚೆಗೆ ಅತಿಯಾಗಿ ತಾನು ದಡ್ಡನೇನೋ ಎನ್ನಿಸುವಷ್ಟು ಬೇಸರವಾಗುತ್ತಿದೆ. ಈ ವಿಷಯವನ್ನು ಯಾರಿಗೂ ಹೇಳಿಲ್ಲ– ತನ್ನ ಮಡದಿಗೂ. ಹೀಗಾಗಿ ಮನಸಿನಲ್ಲಿ

ಕೊರಗುತ್ತಿದ್ದಾನೆ. ಈ ಮಾನಸಿಕ ಯಾತನೆ ತಡೆಯಲಾರದೆ ತಾನು ಯಾಕಾದರೂ ಹುಟ್ಟಿದೆನೋ ಎನ್ನಿಸುವುದು. ಆದರೆ ಮಮತೆಯ ಮಡದಿ ಮತ್ತು ಮುದ್ದಿನ ಮಗನನ್ನು ಜ್ಞಾಪಿಸಿಕೊಂಡರೆ ಬದುಕಬೇಕೆಂಬ ಆಸೆಯಾಗುವುದು. ಮಾನಸಿಕ ದುಗುಡದಿಂದ ದೂರವಾಣಿಯನ್ನು ಕೇಳಲಾಗುವುದಿಲ್ಲ. ಮನೆಯಲ್ಲಿ ಸುಮ್ಮನಿರಲಾಗುವುದಿಲ್ಲ. ಹೊರಗೆ ಹೋಗಲಾಗುವುದಿಲ್ಲ. ಕೆಲಸ ಮಾಡಲೂ ಆಗುವುದಿಲ್ಲ. ಎಲ್ಲದಕ್ಕೂ ಏನೋ ಒಂದು ರೀತಿಯ ಚಡಪಡಿಕೆ. ನಿದ್ದೆಯೂ ಸರಿಯಾಗಿ ಬಾರದು. ತಲೆಯ ಹಿಂಭಾಗ ನೋಯುವುದು. ಸಾಯಂಕಾಲದ ಹೊತ್ತಿಗೆ ಬಹಳ ಹೆಚ್ಚಾಗುವುದು. ತಲೆಗೆ ಬಿಗಿಯಾಗಿ ಬಟ್ಟೆ ಕಟ್ಟಿದರೂ ಹೋಗದು; ಮಾತ್ರೆ ತೆಗೆದುಕೊಂಡರೂ ಹೋಗದು. ಕೆಲವೊಮ್ಮೆ ತಲೆನೋವು ತಡೆಯಲಾರದೆ ಮುಷ್ಟಿಯಿಂದ ಗುದ್ದಿಕೊಳ್ಳುತ್ತಾನಂತೆ. ಜಗದೀಶನಿಗೆ ಕೆಲವೊಮ್ಮೆ ಹೊಟ್ಟೆನೋವು ಬರುವುದಂತೆ. ಖಾರ ತಿಂದರಂತೂ ವಿಪರೀತ ಹೊಟ್ಟೆಯುರಿ. ವೈದ್ಯರು ಗ್ಯಾಸ್ಟ್ರೈಟಿಸ್ ಎಂದು ಹೇಳಿ ಖಾರ ಮತ್ತು ಹುಳಿಯನ್ನು ತಿನ್ನಕೂಡದೆಂದು ಹೇಳಿದ್ದರಂತೆ.

ಜಗದೀಶನದು ಸಂಕೋಚ ಪ್ರವೃತ್ತಿ. ಅವನು ಸ್ನೇಹಜೀವಿಯಲ್ಲವೆಂದು ಸುಲಭವಾಗಿ ಹೇಳಬಹುದಿತ್ತು. ಕೆಲವರು ಭಯವಿದ್ದರೂ ವಿಶ್ವಾಸದಿಂದ ಮತ್ತು ಬಿಚ್ಚು ಮನಸ್ಸಿನಿಂದ ಮಾತನಾಡುವರು. "ಸಾರ್, ನೀವೆಲ್ಲಿ ನನಗೆ ಕಾಯಿಲೆ ಹೆಚ್ಚಿದೆಯೆಂದು ಹೇಳುವಿರೋ ಎಂಬ ಭಯದಿಂದ ನನಗೆ ನಿಮ್ಮ ಹತ್ತಿರ ಮಾತನಾಡಲು ಹೆದರಿಕೆಯಾಗುವುದು," ಎಂದು ಬಿಚ್ಚು ಮನಸ್ಸಿನಿಂದ ಹೇಳುವರು. ಈ ರೀತಿ ಬಾಯಿಬಿಟ್ಟು ಹೇಳುವವರಿಗೆ ಚಿಕಿತ್ಸೆ ಮಾಡುವುದು ಸುಲಭ. ಅವರ ಆತಂಕ ನ್ಯಾಯವಾದದ್ದೇ. ಯಾರಿಗೇ ಆಗಲಿ, ವೈದ್ಯರ ಹತ್ತಿರ ಹೋದಾಗ ಅವರು ಕಾಯಿಲೆಯೇನೆಂದು ಹೇಳುವವರೆಗೂ ಆತಂಕವಿದ್ದೇ ಇರುತ್ತದೆ. ಆದರೆ ಜಗದೀಶ ಬಿಚ್ಚು ಮನಸ್ಸಿನಿಂದ ಮಾತನಾಡುವವನಲ್ಲ. ಮಾತಿಗೆ ಬದಲು ಭಯದಿಂದ ಕೈ ಹಿಸುಕಿಕೊಳ್ಳುವನು. ಲಟ್ಟಣಿಸುವನು. ಅವನನ್ನು ನಾನು ಗುರುತಿಸಿ ಅವನು ಭಯಪಟ್ಟಿರುವನೇ ಎಂದು ಕೇಳಿದಾಗ ಹೌದೆನ್ನುವನು. ಟಿ.ಎ.ಟಿ. ಪರೀಕ್ಷೆಯಲ್ಲಿ ಅವನು ಕೀಳರಿಮೆಯಿಂದ ತೊಳಲುತ್ತಿದ್ದಾನೆ ಎಂದು ತಿಳಿಯಿತು. ಶಾರೀರಕ ಪರೀಕ್ಷೆಯಲ್ಲಿ ಅವನಿಗೆ ಯಾವ ಕಾಯಿಲೆಗಳೂ ಇಲ್ಲವೆಂದು ಗೊತ್ತಾಯಿತು. ವಾರಕ್ಕೊಮ್ಮೆ ಬರಲು ಹೇಳಿ, ಕಳುಹಿಸಿದೆ. ಹಾಗೆಯೇ ಮನಸ್ಸನ್ನು ಶಾಂತಗೊಳಿಸುವ ಮಾತ್ರೆಗಳನ್ನು ತೆಗೆದುಕೊಳ್ಳಲು ಸೂಚನೆ ಕೊಟ್ಟೆ.

ಒಂದು ವಾರದ ನಂತರ ಜಗದೀಶ ನಿಗದಿಯಾದ ವೇಳೆಗೆ ಬಂದ. "ಹೇಗಿದ್ದೀರಿ?" ಎಂದು ವಿಚಾರಿಸಿದೆ. "ಮೇಲು" ಎಂದನಾದರೂ ಮುಜುಗರ, ಹಾಗೂ ದುಗುಡದಿಂದ ಮಾತಾಡಿದ.

"ನೀವು ಹೇಳುತ್ತೀರಾದರೂ ನನಗೆ ನಂಬಲು ಅಸಾಧ್ಯ. ನನ್ನ ಪ್ರಕಾರ ನಿಮ್ಮನ್ನೂ ಮೇಲಾಗಿಲ್ಲ ಎನಿಸುವುದು," ಎಂದು ನಾನು ಹೇಳಿದಾಗ, "ಹೌದು ಸಾರ್, ನನಗಿನ್ನೂ ಮೇಲಾಗಿಲ್ಲ. ಹಾಗೆಯೇ ಇದ್ದೇನೆ," ಎಂದ. ಹದಿನಾಲ್ಕು ವರ್ಷದ ತೊಂದರೆ ಒಂದು ವಾರದಲ್ಲಿ ವಾಸಿಯಾಗುವುದೇ? ಹಾಗಾದರೆ ಅವನು ಸುಳ್ಳು ಹೇಳಿದುದೇಕೆ? ಇಲ್ಲ. ಇನ್ನೂ ವಾಸಿಯಾಗಿಲ್ಲ ಎಂದು ಹೇಳಿದರೆ ನಾನಲ್ಲಿ ಕೋಪಿಸಿಕೊಳ್ಳುವೆನೋ ಎಂಬ ಭಯ ಅವನಿಗೆ. ರೋಗಿ ಯಾವಾಗಲೂ ವೈದ್ಯರ ಹತ್ತಿರ ಇದ್ದದ್ದನ್ನು ಇದ್ದ ಹಾಗೆ ಹೇಳಬೇಕೆ ಹೊರತು ಸುಳ್ಳು ಹೇಳಕೂಡದು. ಇದರಿಂದ ವೈದ್ಯರಿಗೆ ಮುಂದೇನು ಮಾಡಬೇಕೆಂದು ನಿರ್ಧರಿಸಲು ಸಹಾಯವಾಗಬಹುದು. ವಾಸಿಯಾಗದಿರುವುದಕ್ಕೆ ಅನೇಕ ಕಾರಣಗಳಿರಬಹುದು. ಅಷ್ಟು ಕಾಲದಿಂದಿರುವ ಕಾಯಿಲೆ ಒಂದೇ ಭೇಟಿಯಲ್ಲಿ ವಾಸಿಯಾಗುವುದು ಅತಿ ವಿರಳ. ಗುಣವಾಗುವುದಕ್ಕೂ ಕಾಲ ಬೇಕು. ನಿರ್ದಿಷ್ಟ ಸಮಯದ ನಂತರವೂ ರೋಗಿ ಮೇಲಾಗದಿದ್ದಲ್ಲಿ ಕೆಲವೊಮ್ಮೆ ಮಾತ್ರೆಗಳನ್ನು ಹೆಚ್ಚಿಸಬೇಕಾಗಬಹುದು ಅಥವಾ ಬೇರೆ ಮಾತ್ರೆಗಳನ್ನು ಕೊಡಬೇಕಾಗಬಹುದು. ಒಬ್ಬರ ಶರೀರ ಪ್ರಕೃ

ಹೀಗೆ ಒಂದು ಮಾತ್ರೆ ಸರಿ ಹೋದರೆ ಇನ್ನೊಬ್ಬರ ಶರೀರ ಪ್ರಕೃತಿಗೆ ಇನ್ನೊಂದು ಮಾತ್ರೆ ಸರಿ ಹೊಂದಬಹುದು. ಇಷ್ಟರ ಮೇಲೆ ಜಗದೀಶನಿಗಿರುವಂಥ ತೊಂದರೆಗಳಿಗೆ ಔಷಧಿ ಮುಖ್ಯ ಅಲ್ಲವೇ ಅಲ್ಲ; ಇಲ್ಲಿ ಮನೋವಿಶ್ಲೇಷಣೆಯೇ ಮುಖ್ಯ. ಈ ಚಿಕಿತ್ಸೆ ಇನ್ನೂ ಪ್ರಾರಂಭಿಸಿಯೇ ಇರಲಿಲ್ಲ. ಕಳೆದ ವಾರ ಎಲ್ಲ ವಿಷಯಗಳನ್ನು ಸಂಗ್ರಹಿಸಿ, ಅವನನ್ನು ಪರೀಕ್ಷಿಸಿ ಮಾತ್ರೆಗಳನ್ನು ಬರೆದುಕೊಟ್ಟಿದ್ದನೇ ಹೊರತು ಮನೋವಿಶ್ಲೇಷಣೆಯನ್ನು ಪ್ರಾರಂಭಿಸಿರಲಿಲ್ಲ. ಮನೋವಿಶ್ಲೇಷಣೆಗೆ ಇದೇ ಮೊದಲನೆಯ ಭೇಟಿ. ಇದರಲ್ಲಿ ರೋಗಿಯ ನಡೆ ನುಡಿಗಳನ್ನು ವೀಕ್ಷಿಸಿ, ಅವನಿಗೇಕೆ ಈ ರೀತಿ ತೊಂದರೆಯಾಗುತ್ತಿದೆಯೆಂದು ವಿಶ್ಲೇಷಿಸಬೇಕು. ರೋಗಿ ಸಾಧಾರಣವಾಗಿ ಯಾವ ರೀತಿ ವ್ಯವಹರಿಸುತ್ತಾನೋ ಅದೇ ರೀತಿ ಚಿಕಿತ್ಸೆಯಲ್ಲೂ ವ್ಯವಹರಿಸುತ್ತಾನೆ. ಅದನ್ನು ಅರ್ಥ ಮಾಡಿಕೊಂಡರೆ ಅವನ ತೊಂದರೆಯ ಮೂಲವನ್ನು ಕಂಡುಹಿಡಿಯಬಹುದು.

ಹಾಗಾದರೆ ಈ ದಿನ ಜಗದೀಶ ವ್ಯವಹರಿಸುವ ರೀತಿಯನ್ನು ವೀಕ್ಷಿಸಿದರೆ ನಮಗೇನಾದರೂ ಅವನ ತೊಂದರೆಯ ಬಗ್ಗೆ ತಿಳಿಯುವುದೆ? ಎಂದು ಪರಿಶೀಲಿಸೋಣ. ಜಗದೀಶ ಇನ್ನೊಬ್ಬರನ್ನು ಮೆಚ್ಚಿಸಲು ನಿಜವನ್ನು ಮರೆಮಾಚಿ ಸುಳ್ಳು ಹೇಳಲು ಹೇಸದಂಥ ಮನುಷ್ಯ ಎಂದು ಅವನು ನಡೆದುಕೊಂಡ ರೀತಿಯಲ್ಲಿ ವ್ಯಕ್ತವಾಗುತ್ತದೆ. ಇದೇ ರೀತಿಯೇ ಅವನು, ಸಾಧಾರಣವಾಗಿ ಎಲ್ಲರೊಂದಿಗೆ ವ್ಯವಹರಿಸುವುದು. ಇನ್ನೊಬ್ಬರನ್ನು ಮೆಚ್ಚಿಸಿ ಅವರಿಂದ 'ಭೇಷ್' ಎನಿಸಿಕೊಳ್ಳುವುದೇ ಅವನಿಗೆ ಅತಿ ಮುಖ್ಯ. ಇದು ತಪ್ಪೇ? ನಮಗೆಲ್ಲರಿಗೂ ಇನ್ನೊಬ್ಬರ ಮೆಚ್ಚುಗೆ ಮುಖ್ಯವಲ್ಲವೇ? ಅದು ಮುಖ್ಯವೆಂದು ನಾವೆಲ್ಲರೂ ನಿಜವನ್ನು ಮರೆಮಾಚಿ ಮೆಚ್ಚುಗೆ ಪಡೆಯಲು ಪ್ರಯತ್ನಿಸುತ್ತೇವೆಯೇ? ಇದನ್ನೆಲ್ಲಾ ಪರಿಶೀಲಿಸಿದರೆ ಜಗದೀಶನಿಗೆ ಮೆಚ್ಚುಗೆ ಪಡೆಯಬೇಕೆಂದಿರುವುದು ಎಲ್ಲರಂತೆ ಮಾಮೂಲಿ ಮಟ್ಟಕ್ಕಿಂತ ಹೆಚ್ಚಿರುವುದರಲ್ಲಿ ಸಂಶಯವಿಲ್ಲ. ಇದನ್ನು ಜಗದೀಶನೂ ಒಪ್ಪಿಕೊಂಡ. ಕೆಲಸದಲ್ಲಿಯೂ ಸುಳ್ಳು ಹೇಳಿ ಮೇಲಧಿಕಾರಿಗಳ ಮೆಚ್ಚುಗೆಯನ್ನು ಪಡೆಯಲು ಪ್ರಯತ್ನಿಸುವೆನೆಂದೂ ಹೇಳಿದ. ಕೆಲವೊಮ್ಮೆ ಮೇಲಧಿಕಾರಿಗಳಿಗೆ ಅವನು ಸುಳ್ಳು ಹೇಳಿರುವುದು ತಿಳಿದುಬಿಡುವುದು. ಸತ್ಯವನ್ನು ಎಷ್ಟು ದಿನ ಮುಚ್ಚಿಡಲು ಸಾಧ್ಯ? ಅವನು ಸುಳ್ಳು ಹೇಳಿರುವುದು ತಿಳಿದ ನಂತರ ಅವನನ್ನು ಅಧಿಕಾರಿಗಳು ಮತ್ತು ಇತರರು ಕೀಳಾಗಿ ನೋಡುವರು. ನಂತರ ಅವನು ನಿಜವನ್ನು ಹೇಳಿದರೂ ನಂಬಲಾರರು. ಇದು ಅವನಿಗೆ ನುಂಗಲಾರದ ತುತ್ತಾಗಿತ್ತು. ನಿಜವನ್ನು ಮರೆಮಾಚುವುದು ಬಿಟ್ಟರೆ ಅವನು ಒಳ್ಳೆಯ ಕೆಲಸಗಾರನೆಂದು ಹೆಸರು ಪಡೆದಿದ್ದ. ಒಟ್ಟಿನಲ್ಲಿ ಇತರರಿಂದ ಮೆಚ್ಚುಗೆಯನ್ನು ಪಡೆಯಬೇಕೆಂದು ಪ್ರಯತ್ನಿಸಿ ಕೊನೆಗೆ ತುಚ್ಛವಾಗಿ ಕಾಣುವಂತೆ ಮಾಡಿಕೊಳ್ಳುತ್ತಿದ್ದ. ಅಂದರೆ, ತನಗೇನು ಬೇಕೋ ಅದಕ್ಕೆ ವ್ಯತಿರಿಕ್ತವಾದುದನ್ನೇ ಪಡೆಯುತ್ತಿದ್ದ. ಅವನ ಪ್ರಜ್ಞೆಗೆ ಮೆಚ್ಚುಗೆ ಪಡೆಯಬೇಕೆಂಬ ಇಚ್ಛೆ ಪ್ರಬಲವಾಗಿದ್ದರೆ, ಅವಪ್ರಜ್ಞೆ ಇತರರು ಅವನನ್ನು ತುಚ್ಛವಾಗಿ ಕಾಣುವಂತೆ ಮಾಡಿಕೊಳ್ಳುತ್ತಿತ್ತು. ಇದು ಅವಪ್ರಜ್ಞೆಯಲ್ಲಿ ಇದ್ದುದರಿಂದ ಅವನಿಗೇ ತಿಳಿದಿಲ್ಲ. ಅಂದುಕೊಂಡಿದೇ ಒಂದು, ಆದದ್ದೇ ಇನ್ನೊಂದು ಎಂದು ಎಷ್ಟೋ ಬಾರಿ ನಾವು ವಿಧಿಯನ್ನು ದೂರುವುದಿಲ್ಲವೇ? ಇದು, ಅನೇಕ ಬಾರಿ ನಾವು ನಮಗೇ ತಿಳಿಯದೆ ಮಾಡಿಕೊಂಡದ್ದು ಎಂಬುದಕ್ಕೆ ಜಗದೀಶನದು ಒಂದು ಉದಾಹರಣೆ.

ಮರುವಾರ ಜಗದೀಶ ಸ್ವಲ್ಪ [illegible] ನಾಗಿದ್ದ. ಅದು ತುಸು [illegible] ಹೇಳುವಹಾಗಿತ್ತು. "ಸಾರ್, ನಾನೆಷ್ಟೋ ಇದ್ದದ್ದು ಇದ್ದಹಾಗೆಯೇ ಹೇಳಬೇಕೆಂದು ಪ್ರಯತ್ನಿಸಿದರೂ ನನಗೆ ಆಗದೇ ಹಳೇ ಹಾದಿಯನ್ನೇ ಹಿಡಿಯುತ್ತಿದ್ದೇನೆ," ಎಂದು ಪೇಚಾಡಿದ. ಅನೇಕ ವರ್ಷಗಳ ಚಾಳಿಯನ್ನು ಅಷ್ಟು ಬೇಗ ಕೊನೆಗೊಳಿಸುವುದು ಸಾಧ್ಯವೇ? ಇಲ್ಲಿ ಅವನು ಪ್ರಯತ್ನಿಸಿ ವಿಫಲನಾದರೂ ಪ್ರಯತ್ನ ಮಾಡಿದ್ದಾನಲ್ಲ ಎಂಬುದು ಗಮನಿಸಬೇಕಾದ ಅಂಶ. ಪ್ರಯತ್ನ [illegible]

ನಾಳೆ ಅವನು ಗೆಲ್ಲಲೇಬೇಕು. ಪ್ರಯತ್ನ ಮಾಡಿದುದೇ ಚಿಕಿತ್ಸೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಂತೆಯೇ ಎಂದು ಹೇಳಬಹುದು. ಪ್ರಯತ್ನ ಪ್ರಾರಂಭಿಸದೇ ತೊಂದರೆ ಕೊನೆಗಾಣುವುದೆಂತು? ಜಗದೀಶ ಪ್ರಯತ್ನದಲ್ಲಿ ವಿಫಲನಾದುದರಿಂದ ತಾನು ಯಾವುದಕ್ಕೂ ಪ್ರಯೋಜನವಿಲ್ಲದವನೆಂದುಕೊಂಡು ಬಂದಿದ್ದ. ಆದರೆ ಅವನ ಪ್ರಯತ್ನವನ್ನು ನಾನು ಮೆಚ್ಚಿದುದು ಅವನಿಗೆ ಆಶ್ಚರ್ಯವಾಯಿತು. ಅವನಾದರೋ ಯಾವ ಕಾರ್ಯವೇ ಆಗಲಿ ಅದು ಸರಿಯಾಗಿ ಆಗದಿದ್ದಾಗ ತಾನು ನಿಷ್ಪ್ರಯೋಜಕನೆಂದು ತೆಗಳಿಕೊಳ್ಳುವನು ಮತ್ತು ಇತರರನ್ನು ನೋಡಿ ಅವರಂತೆ ತಾನೇಕಿರಲು ಸಾಧ್ಯವಿಲ್ಲವೆಂದು ಪರಿತಪಿಸುವನು.

ಒಂದು ವಾರದ ನಂತರ ಜಗದೀಶ ಇನ್ನೂ ಸ್ವಲ್ಪ ಲವಲವಿಕೆಯಿಂದ ಇದ್ದನು. "ಸಾರ್, ಒಂದೆರಡು ಬಾರಿ ಇರುವುದನ್ನು ಇರುವ ಹಾಗೆಯೇ ಹೇಳಿಬಿಟ್ಟೆ. ಆಗ ನನ್ನ ಬಗ್ಗೆ ನನಗೇ ಹೆಮ್ಮೆಯಾಯಿತು," ಎಂದು ಹೇಳಿದನು. ಅವನಿಗೆ ಸುಲಭವಾಗಿ ಸ್ನೇಹಿತರನ್ನು ಗಳಿಸಿಕೊಳ್ಳುವುದು ಸಾಧ್ಯವಾಗದು. ತನ್ನಲ್ಲಿ ಏನೋ ಕುಂದು ಇದೆ ಮತ್ತು ಇತರರಿಗಿಂತ ಕೀಳು ಎಂಬ ಭಾವನೆ ಮೂಡುವುದು. ಸುಗ್ಗಿ ಕೆಲಸ ಮಾಡಿಕೊಂಡು ಬರುವಂಥವರನ್ನಾಗಲಿ ಸುಲಭವಾಗಿ ಸ್ನೇಹವನ್ನು ಗಳಿಸುವಂಥವರನ್ನಾಗಲಿ ಕಂಡಾಗ ತಾನೇಕೆ ಆ ರೀತಿಯಿಲ್ಲ ಎಂದು ಅಸೂಯೆಯುಂಟಾಗುವುದು. ತಾನೊಬ್ಬ ದೊಡ್ಡ ಆಫೀಸರ್ ಆಗಬೇಕೆಂಬ ಹಗಲುಗನಸನ್ನು ಯಾವಾಗಲೂ ಕಾಣುತ್ತಿದ್ದ. ಅಂಥ ಹುದ್ದೆ ತನಗೆ ದೊರಕಿದರೆ ನಿಭಾಯಿಸಲು ಸಾಧ್ಯವೇ ಎಂಬ ಅನುಮಾನವೂ ಉಂಟಾಗುವುದು. ತನ್ನ ಮೇಲಧಿಕಾರಿಗಳನ್ನು ಕಂಡಾಗ ಅವರಂತೆ ತಾನೂ ಆಗಬೇಕು ಎಂದುಕೊಳ್ಳುವನು. ಈ ಹಗಲುಗನಸುಗಳು ಕೆಲಸಕ್ಕೆ ಅಡ್ಡಿ ಮಾಡಿದರೂ, ಕೆಲಸ ಸರಿಯಾಗಿ ಮಾಡುತ್ತಿಲ್ಲವೆಂದು ಯಾರೂ ಎಚ್ಚರಿಕೆ ಕೊಟ್ಟಿರಲಿಲ್ಲ. ಬಹುಶಃ ಹಗಲುಗನಸುಗಳಿಲ್ಲದಿದ್ದರೆ ಇನ್ನೂ ಚೆನ್ನಾಗಿ ಕೆಲಸ ಮಾಡಬಹುದಾಗಿತ್ತೇನೋ. ಉನ್ನತ ಹುದ್ದೆಗೆ ಬಡ್ತಿಯೂ ಸಿಗುತ್ತಿತ್ತೇನೋ.

ಮುಂದಿನ ಎರಡು ಭೇಟಿಗಳಲ್ಲಿ ಪದೇ ಪದೇ ಮೇಲೆ ಹೇಳಿದುದನ್ನೇ ಹೇಳಿದ. ಹೊಸ ವಿಷಯ ಬರಲಿಲ್ಲ. ನಂತರದ ಭೇಟಿಯಲ್ಲಿ ಜಗದೀಶ ಇನ್ನೂ ಸ್ವಲ್ಪ ಉಲ್ಲಸಿತನಾಗಿದ್ದ. ಏನೋ ಮಾತನಾಡುತ್ತಿರುವಾಗ ತನ್ನ ಹೆಂಡತಿ ತನಗಿಂತ ಬುದ್ಧಿವಂತಳೆಂದೂ, ತನಗಿಂತ ಅವಳಿಗೇ ಹೆಚ್ಚು ಸಂಬಳವೆಂದೂ ಹೇಳಿದ್ದ. ನಾನು ಅವನ ಅಥವಾ ಅವನ ಹೆಂಡತಿಯ ಸಂಬಳದ ಬಗ್ಗೆ ಕೇಳಿಯೇ ಇರಲಿಲ್ಲ. ಅದಕ್ಕೆ ಕಾರಣವೂ ಉಂಟು. ಬಂದವರಿಗೆಲ್ಲಾ "ನಿನ್ನ ವರಮಾನವೆಷ್ಟು? ನಿನ್ನ ವರಮಾನ ಹೆಚ್ಚೋ ನಿನ್ನ ಹೆಂಡತಿಯದೋ?" ಎಂದು ಕೇಳಿದರೆ ಅಭಾಸವಾಗುವುದು. ವರಮಾನ, ಲೈಂಗಿಕ ವಿಷಯಗಳು ಮುಂತಾದ ವೈಯಕ್ತಿಕ ವಿಷಯಗಳನ್ನು ಅವರಾಗಿಯೇ ಹೇಳಿದರೆ ಮಾತ್ರ ಕೇಳುತ್ತೇವೆ. ಆ ವಿಷಯಗಳಲ್ಲಿ ಏನಾದರೂ ತೊಂದರೆಯಿದ್ದರೆ ರೋಗಿ ತಾನಾಗಿಯೇ ವಿಷಯವೆತ್ತುವನು. ಇಂತಹ ವೈಯಕ್ತಿಕ ವಿಷಯಗಳನ್ನು ಚರ್ಚಿಸಲು ರೋಗಿಗೆ ಮನೋರೋಗತಜ್ಞರ ಮೇಲೆ ನಂಬಿಕೆ ಬರಬೇಕು. ಅಲ್ಲಿಯವರೆಗೂ ಅದು ಸಾಧ್ಯವಿಲ್ಲ. ಇದಕ್ಕೆ ಕಾಲಾವಕಾಶ ಬೇಕು. ಹೆಂಡತಿಯ ಸಂಬಳ ಹೆಚ್ಚೆಂದು ಹೇಳಿ ನಾನೇನಾದರೂ ಹೇಳುತ್ತೇನೆಯೋ ಎಂಬ ಭಯದಿಂದ ನನ್ನ ಮುಖ ನೋಡಿ ಸುಮ್ಮನಾದ. ಅವನೇ ಆ ವಿಷಯದಲ್ಲಿ ಏನಾದರೂ ಹೇಳಬಹುದು ಎಂದು ಸುಮ್ಮನಿದ್ದೆ. ರೋಗಿ ಏನು ಹೇಳಿದರೂ, ಅದಕ್ಕೂ ಅವನ ತೊಂದರೆಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಮನೋರೋಗತಜ್ಞರು ವೀಕ್ಷಿಸುತ್ತಿರಲೇಬೇಕು. ರೋಗಿ ಹೇಳಿದ ಪ್ರತಿಯೊಂದು ವಿಷಯಕ್ಕೂ ಅವನ ತೊಂದರೆಗೂ ಸಂಬಂಧವಿರುತ್ತದೆಂದು ಹೇಳಲು ಸಾಧ್ಯವಿಲ್ಲ. ಆದರೆ ಏನಾದರೂ ಸಂಬಂಧವಿರಬಹುದೇ ಎಂಬ ದೃಷ್ಟಿಯಿಂದ ವೀಕ್ಷಿಸುತ್ತಿರಲೇಬೇಕು. ಇಲ್ಲಿ ರೋಗಿ ಎರಡು ಮೂರು ಬಾರಿ ತನ್ನ ಹೆಂಡತಿಗೇ ಹೆಚ್ಚು ಸಂಬಳವೆಂದು ಹೇಳಿ ನನ್ನ ಮುಖ ನೋಡುತ್ತಾ ಸುಮ್ಮನಾಗುವುದರಿಂದ ಈ ವಿಷಯದಿಂದ ಅವನಿಗೇನೋ ಮುಜುಗರವಾಗಿದೆಯೆಂದು ಹೇಳ

ವಿಯಂತಿತ್ತು. ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ಏನಾದರೂ ಹೇಳಲು ಬಯಸುತ್ತಿದ್ದಾನೆಯೇ ಎಂದು ಪ್ರಶ್ನಿಸಿದೆ. "ಆ ರೀತಿ ಏನೂ ಇಲ್ಲ ಸಾರ್. ನನ್ನ ಮನಸ್ಸಿಗೆ ಬಂತು, ಹೇಳಿದೆ," ಎಂದ. ಹೆಂಡತಿಗೆ ಹೆಚ್ಚಿನ ಸಂಬಳವೆಂದು ಬೇಸರವೇನಾದರೂ ಇದೆಯೆ?" ಎಂದು ಪ್ರಶ್ನಿಸಿದೆ. "ಸ್ವಲ್ಪ ಇರಬಹುದು, ಗಂಡನಿಗೇ ಹೆಂಡತಿಗಿಂತ ಹೆಚ್ಚು ಸಂಬಳ ಬರಬೇಕು ಎಂಬ ಸಂಕುಚಿತ ಭಾವನೆ ನನಗಿಲ್ಲ," ಎಂದ. ಇಲ್ಲಿ ಮೊದಲನೆಯದಾಗಿ ಹೆಂಡತಿಯ ಸಂಬಳದ ಬಗ್ಗೆ ನಾನು ಪ್ರಶ್ನಿಸದಿದ್ದರೂ ತಾನೇ ವಿಷಯ ಎತ್ತಿರುವನು. ಎರಡನೆಯದಾಗಿ, ಅದರ ಬಗ್ಗೆ ಹೆಚ್ಚು ಬೇಸರವಿಲ್ಲವೆಂದೂ ಅಂಥ ಸಂಕುಚಿತ ಭಾವನೆ ತನಗಿಲ್ಲವೆಂದೂ ಹೇಳಿರುವನು. ಮೂರನೆಯದಾಗಿ, ಮೇಲಧಿಕಾರಿಯಾಗಬೇಕೆಂಬ ಹಗಲು ಗನಸನ್ನು ಅತಿಯಾಗಿ ಕಾಣುವನು. ನಾಲ್ಕನೆಯದಾಗಿ ತಾನು ಕೀಳು ಎಂಬ ಭಾವನೆ ಮೂಡುವುದು ಎಂದೂ ಹೇಳಿದ್ದಾನೆ. ಈ ನಾಲ್ಕು ವಿಷಯಗಳನ್ನು ವೀಕ್ಷಿಸಿದರೆ ಇಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿರಬಹುದು ಎಂಬ ಸಂದೇಹ ಬಾರದಿರದು. ಅಂದರೆ, ಜಗದೀಶನಿಗೆ ತನ್ನ ಹೆಂಡತಿಗಿಂತ ತನಗೆ ಕಡಿಮೆ ಸಂಬಳ ಬರುತ್ತಿರುವುದು ತಾನು ಒಪ್ಪಿಕೊಳ್ಳುವುದಕ್ಕಿಂತ ಹೆಚ್ಚು ಬೇಸರವಿರಬಹುದು. ಗಂಡಸಾಗಿಯೂ ತನಗೆ ಕಡಿಮೆ ಸಂಬಳ ಬರುವುದು ಆತ್ಮಪ್ರತಿಷ್ಠೆಗೆ ಪೆಟ್ಟು ಎಂದೆನಿಸಿರಬಹುದು. ನಮ್ಮ ಸಮಾಜದಲ್ಲಿ ಗಂಡಸು ಹೆಂಗಸಿಗಿಂತ ಹೆಚ್ಚು ಸಂಪಾದಿಸಬೇಕೆಂಬ ಭಾವನೆ ಬಹಳವಾಗಿದೆ. ನಮ್ಮ ಸಮಾಜ ಬಿತ್ತಿದ್ದನ್ನು ನಮಗೆ ತಿಳಿಯದಂತೆಯೇ ಕೆಲವು ಬಾರಿ ನಮ್ಮ ಜೀವನಕ್ಕೆ ಅಳವಡಿಸಿಕೊಂಡು ಹೋಗಿರುತ್ತೇವೆ. ತಾನು ಮೇಲಧಿಕಾರಿಯಾಗಬೇಕೆಂಬ ತೀವ್ರವಾದ ಆಸೆ ಕೈಗೂಡಿದರೆ ತನ್ನ ಸಂಬಳ ಹೆಂಡತಿಯ ಸಂಬಳಕ್ಕಿಂತ ಹೆಚ್ಚಾಗಿ ತನ್ಮೂಲಕ ಸಮಾಧಾನವಾಗಬಹುದೇ? ಅದು ನೆರವೇರದೇ ಇದ್ದುದರಿಂದ ತಾನು ಕೀಳು ಎಂಬ ಭಾವನೆ ಇನ್ನೂ ಹೆಚ್ಚಾಗಿರಬಹುದೇ? ನಾವಂದು–



"ನಿಮ್ಮ ಶಾಲೆಯಲ್ಲಿ ಒಂದು ಸೀಟ್ ರಿಸರ್ವ್ ಮಾಡೋಣಾಂತ ಹೆ...ಹೆ...ನನ್ನ ಯಜಮಾನಿ ಗರ್ಭಿಣಿ."

ಕೊಂಡಿರುವುದು ನಿಜವೇ ಅಥವಾ ಸುಳ್ಳೇ ಎಂದು ತಿಳಿಯಬೇಕಾದರೆ ಸ್ವಲ್ಪ ಸಮಯ ಕಾದರೆ ಸಾಕು, ತಂತಾನೆ ತಿಳಿಯುತ್ತದೆ.

ಮುಂದಿನೆರಡು ಭೇಟಿಗಳಲ್ಲಿ ಜಗದೀಶ ಈ ವಿಷಯವನ್ನೇ ಮುಂದುವರಿಸಿದ. ಹೆಂಡತಿಗೇ ಹೆಚ್ಚು ಸಂಬಳ ಎಂದು ಕೆಲವರೆಲ್ಲಾ ಹೀಯಾಳಿಸುವರೆಂದು ತಿಳಿಸಿದ. ತನ್ನ ಹೆಂಡತಿಯ ಕಚೇರಿಯ ಮೇಲಧಿಕಾರಿಗಳಲ್ಲಿ ಹೆಚ್ಚಿನವರಿಗೆ ವಯಸ್ಸಾಗಿದ್ದು ನಿವೃತ್ತರಾದುದರಿಂದ ಅವಳಿಗೆ ಬೇಗ ಬೇಗನೆ ಬಡ್ತಿ ದೊರೆತು ಬಹಳ ಜವಾಬ್ದಾರಿಯುತ ಹುದ್ದೆಗೆ ಬಂದಳು. ಆದರೆ ಆ ಅದೃಷ್ಟ ಜಗದೀಶನ ಪಾಲಿಗಿರಲಿಲ್ಲ. ಅವನ ಮೇಲಧಿಕಾರಿಗಳೆಲ್ಲಾ ಚಿಕ್ಕ ವಯಸ್ಸಿನವರು. ಹೀಗಾಗಿ ಅವನಿಗೆ ಬಡ್ತಿ ದೊರೆಯುವುದು ಕಷ್ಟವಾಯಿತು. ಪದೇ ಪದೇ ಈ ವಿಷಯವನ್ನೇ ಅವನು ಮಾತನಾಡುತ್ತಿರಬೇಕಾದರೆ ನನ್ನ ಸಂದೇಹಕ್ಕೆ ಇನ್ನಷ್ಟು ಮಾಹಿತಿ ದೊರೆತಂತಾಯಿತು. ಇಬ್ಬರೂ ಕೆಲಸ ಮಾಡುತ್ತಿದ್ದುದರಿಂದ ಮನೆಯ ಕೆಲಸದಲ್ಲಿ ಹೆಂಡತಿಗೆ ಸಹಾಯ ಮಾಡುವನು. ಕೆಲವೊಮ್ಮೆ ಹೆಂಡತಿಗಿಂತ ತಾನೇ ಹೆಚ್ಚು ಮನೆ ಕೆಲಸ ಮಾಡುತ್ತಿದ್ದುದೂ ಉಂಟು. ಹೆಂಡತಿ ಕೆಲವೊಮ್ಮೆ ಸೋಮಾರಿತನದಿಂದಿದ್ದರೆ ಬೈಯಬೇಕೆನಿಸಿದರೂ ಬೈಯುವುದಿಲ್ಲ. ಎಲ್ಲಿಯಾದರೂ, "ನಿಮಗಿಂತ ನಾನೇ ಹೆಚ್ಚಾಗಿ ಸಂಪಾದಿಸುತ್ತಿದ್ದೇನೆ." ಎಂದು ಮೂದಲಿಸುವಳೋ ಎಂಬ ಭಯ. ಅವಳು ಅಪ್ಪಿತಪ್ಪಿಯೂ ಆ ರೀತಿ ಮಾತನಾಡಿರಲಿಲ್ಲ. ಆದರೂ ಅವನಿಗೆ ಒಂದು ರೀತಿಯ ಅಂಜಿಕೆ. ಕ್ರಮೇಣವಾಗಿ ಹೆಂಡತಿ ತನಗಿಂತ ಹೆಚ್ಚಿಗೆ ಸಂಪಾದಿಸುತ್ತಿದ್ದುದು ಮನಸ್ಸಿನಲ್ಲಿ ಬಹಳವಾಗಿಯೇ ಕೊರೆಯುವುದೆಂದು ಅವನಾಗಿಯೇ ಒಪ್ಪಿಕೊಂಡ. ತನಗೆ ಆರ್ಥಿಕವಾಗಿ ಯಾವ ತೊಂದರೆಯೂ ಇಲ್ಲವೆಂದೂ ಮೇಲಧಿಕಾರಿಯಾಗಬೇಕೆಂದು ಹಾತೊರೆಯಲು ಕಾರಣವೂ ಆರ್ಥಿಕ ತೊಂದರೆಯಿಂದಲ್ಲವೆಂದೂ ತನಗೆ ಬಡ್ತಿ ದೊರೆತು ಸಂಬಳ ಹೆಚ್ಚಾದರೆ ಹೆಂಡತಿಗಿಂತ ಕೀಳು ಎನ್ನುವವರ ಬಾಯಿ ಮುಚ್ಚಬಹುದೆಂದೂ ಹೇಳಿದ. ನಾನು ಮೊದಲೇ ಪಟ್ಟ ಸಂದೇಹ ನಿಜವಾಯಿತು. ಹಾಗಾದರೆ ಈ ಸಮಸ್ಯೆಗೆ ಪರಿಹಾರವಿದೆಯೇ? ಜಗದೀಶನಿಗೆ ಹೆಂಡತಿಗಿಂತ ಕಡಿಮೆ ಸಂಬಳ ಬರುವುದು ನಿಜ ಮತ್ತು ಇದರಿಂದ ಅವನಿಗೆ ತಾನು ಹೆಂಡತಿಗಿಂತ ಕೀಳು ಎಂಬ ಕೀಳರಿಮೆ ಉಂಟಾಗಿದೆ. ಅವನಿಗೆ ಬಡ್ತಿ ಕೊಡಿಸುವುದು ನನ್ನ ಕೈಯಲ್ಲಿಲ್ಲ. ಇದಕ್ಕೆ ಪರಿಹಾರವೇನೆಂಬುದು ದೊಡ್ಡ ಸಮಸ್ಯೆಯಲ್ಲವೇ? ಇಂಥ ಪ್ರಶ್ನೆಗಳೇಳುವುದು ಸ್ವಾಭಾವಿಕ. ಅವನ ಹೆಂಡತಿ ಅವನಿಗಿಂತ ಹೆಚ್ಚಾಗಿ ಓದಿದವಳು. ಅವಳು ಎಂ. ಎಸ್‌ಸಿ. ಓದಿದ್ದರೆ, ಅವನು ಬಿ. ಕಾಂ. ಓದಿದವನು. ಇದು ಮೊದಲೇ ತಿಳಿದಿದ್ದೂ ಮದುವೆಯಾಗಲು ಒಪ್ಪಿದ. ಅವನ ತಂದೆ, ತಾಯಿ ಮತ್ತು ಇತರರು "ಅವಳು ಹೆಚ್ಚಾಗಿ ಓದಿದ್ದಾಳೆ ಬೇಡ" ಎಂದು ಹೇಳಿದರೂ ಅವರ ಮಾತು ಮೀರಿ ಅವಳನ್ನೇ ಮದುವೆಯಾಗಲು ಹಠ ಹಿಡಿದ. ಅವರ ಹಿತವಚನಗಳೆಲ್ಲಾ ಸಂಕುಚಿತ ಭಾವನೆಗಳಿಂದ ಕೂಡಿರುವವು ಎಂದು ತಳ್ಳಿಹಾಕಿದ. ಹಿಂದೆ ಯಾವುದನ್ನು ಸಂಕುಚಿತ ಭಾವನೆ ಎಂದು ತಳ್ಳಿಹಾಕಿದ್ದನೋ ಅದೇ ಅವನಿಗೆ ಮಾನಸಿಕ ಕೊರಗಾಗಿತ್ತು. ಬಹುಶಃ ಅವನು ಮದುವೆಯಾದ ಸಮಯದಲ್ಲಿ ತನಗಿಂತ ಹೆಚ್ಚಾಗಿ ಓದಿರುವವಳನ್ನು ಮದುವೆಯಾಗುವುದು ತಪ್ಪು ಎಂಬುದು ಸಂಕುಚಿತ ಭಾವನೆಯೆಂದು ಒಂದು ಭಾಗದ ಮನಸ್ಸಿಗನ್ನಿಸಿದರೆ, ಇನ್ನೊಂದು ಭಾಗದ ಮನಸ್ಸಿಗೆ ತಾನು ಗಂಡಸು, ಹೆಂಡತಿಗಿಂತ ಒಂದು ಕೈ ಹೆಚ್ಚಾಗಿರಬೇಕು ಎಂಬ ಭಾವನೆ ಇದ್ದಿರಬಹುದು. ಕೆಲವೊಮ್ಮೆ ಬಿಸಿ ರಕ್ತದ ಯುವ ಜನಾಂಗ ಯಾವುದೋ ಒಂದು ಆದರ್ಶವನ್ನಿಟ್ಟುಕೊಂಡು ಮದುವೆಯಾಗುವರು. ಆದರ್ಶದಿಂದ ಮದುವೆಯನ್ನೇನೋ ಆಗಬಹುದು, ಆದರೆ ಜೀವನವನ್ನು ಆದರ್ಶದಿಂದ ಸಾಗಿಸಲಾಗುವುದಿಲ್ಲ.

ಅಂತಹ ಸಂದರ್ಭದಲ್ಲಿ ಜೀವನ ಪ್ರಾರಂಭದ ಮೇಲೆ ತೊಂದರೆಗಳು ಪ್ರಾರಂಭವಾಗುತ್ತವೆ. ಹಾಗಾದರೆ ತನಗಿಂತ ಹೆಚ್ಚಿಗೆ ಓದಿರುವವಳನ್ನು ಮದುವೆಯಾಗುವುದು ತಪ್ಪೇ? ಖಂಡಿತ ಇಲ್ಲ. ಜಗದೀಶ ಇದನ್ನು ನಿಜವಾಗಿಯೂ ನಂಬಿದ್ದು ಮದುವೆಯಾಗಿದ್ದರೆ ತೊಂದರೆಯಾಗುತ್ತಿರಲಿಲ್ಲ.

ಅವನು ತನ್ನ ಸಂಕುಚಿತ ಭಾವನೆಗಳನ್ನು ಅದು-ಮಿಟ್ಟುಕೊಂಡು, ತಾನು ವಿಶಾಲ ಮನೋಭಾವದವನೆಂದು ತನಗೆ ಮತ್ತು ಇತರರಿಗೆ ಸಾಧಿಸಲು ಹೋಗಿದ್ದು ತಪ್ಪು. ಮಾನವನೆಂದ ಮೇಲೆ ನಮ್ಮೆಲ್ಲರಿಗೂ ಕೆಲವು ವಿಷಯಗಳ ಬಗ್ಗೆಯಾದರೂ ಸಂಕುಚಿತ ಭಾವನೆಗಳಿದ್ದೇ ಇರುತ್ತದೆ. ನಮ್ಮ ಭಾವನೆಗಳನ್ನು (ಸಂಕುಚಿತವೆನಿಸಿದರೂ) ಅಲ್ಲಗಳೆಯದೇ ಅವನ್ನು ಒಪ್ಪಿಕೊಂಡು ಸೂಕ್ತ ನಿರ್ಧಾರಕ್ಕೆ ಬರುವುದು ಒಳ್ಳೆಯದು. ಇದೆಲ್ಲಾ ಮದುವೆಗೆ ಮುಂಚೆಯೇ ಆಗಬೇಕಾದದ್ದು. ಆದರೆ ಇಲ್ಲಿ ಮದುವೆ ಆಗಿ ಎರಡೂವರೆ ವರ್ಷಗಳಾಗಿದ್ದು ಒಂದು ಮಗುವೂ ಆಗಿದೆ. ಕಾಲವನ್ನು ಹಿಂದಕ್ಕೆ ಹಾಕಿ ಮತ್ತೊಮ್ಮೆ ಎಲ್ಲವನ್ನೂ ಸರಿಯಾಗಿ ಮಾಡುತ್ತೇನೆ ಎನ್ನುವುದು ಸಾಧ್ಯವಾಗದ ಮಾತು.

ಎಷ್ಟು ಜನ ತಮಗಿಂತ ಹೆಚ್ಚಿಗೆ ಓದಿದವರನ್ನು ಮದುವೆಯಾಗಿಲ್ಲ? ಅವರೆಲ್ಲರೂ ಇಂತಹ ತೊಂದರೆಗಳನ್ನು ಅನುಭವಿಸುತ್ತಾರೆಯೇ? ನಿಜವಾಗಿಯೂ ಅದನ್ನು ಒಪ್ಪಿಕೊಂಡು ಮದುವೆಯಾದಲ್ಲಿ ತೊಂದರೆಯಾಗುವುದಿಲ್ಲ. ಆಂತರಿಕವಾಗಿ ಒಪ್ಪಿಗೆಯಿಲ್ಲದಿದ್ದು ಬಾಹ್ಯವಾಗಿ ಆದರ್ಶಕ್ಕೋಸ್ಕರ ಮದುವೆಯಾದರೆ ತೊಂದರೆಗಳುಂಟಾಗುವುವು. ಜಗದೀಶ ಸಂಪೂರ್ಣ ಒಪ್ಪಿಗೆಯಿಲ್ಲದೆ ಆದರ್ಶಕ್ಕೋಸ್ಕರ ಮದುವೆಯಾಗಿ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾನೆ. ಇಂತಹ ಸಂದರ್ಭಗಳಲ್ಲಿ ಅವನ ಮದುವೆ ಮುರಿದು ಬೀಳುವುದೇ ಉತ್ತರವೇನೋ ಎಂಬ ಆತಂಕ ಬರುವುದು ಸಹಜ. ಮಾನಸಿಕ ತುಮುಲವನ್ನು ಕುಸ್ತಿ ಪಂದ್ಯಕ್ಕೆ ಹೋಲಿಸಬಹುದು. ಕುಸ್ತಿ ಪಂದ್ಯದಲ್ಲಿ ಯಾರು ಹೆಚ್ಚು ಬಲಶಾಲಿಗಳೋ ಅವರು ಗೆದ್ದೇ ಗೆಲ್ಲುತ್ತಾರೆ. ಅದೇ ರೀತಿ ಮಾನಸಿಕ ತುಮುಲದಲ್ಲಿಯೂ ಯಾವ ಭಾಗದ ಮನಸ್ಸು ಬಲಶಾಲಿಯೋ ಅದು ಗೆದ್ದೇ ಗೆಲ್ಲುತ್ತದೆ. ಜಗದೀಶನ ಒಂದು ಭಾಗದ ಮನಸ್ಸಿನಲ್ಲಿ (ಪ್ರಜ್ಞೆ) ಸಂಗಾತಿ ಹೆಚ್ಚಾಗಿ ಓದಿರಕೂಡದು ಮತ್ತು ಹೆಚ್ಚಾಗಿ ಸಂಪಾದಿಸಕೂಡದು ಎಂಬುದು ಸಂಕುಚಿತ ಭಾವನೆಗಳು ಎಂದಿದ್ದರೆ, ಇನ್ನೊಂದು ಮನಸ್ಸಿನಲ್ಲಿ (ಅಪಪ್ರಜ್ಞೆ) ಆ ಸಂಕುಚಿತ ಭಾವನೆಗಳೇ ಪ್ರಬಲವಾಗಿದ್ದುವು. ಈ ಪ್ರಜ್ಞೆ ಮತ್ತು ಅಪಪ್ರಜ್ಞೆಯ ತುಮುಲದಲ್ಲಿ ಕಡೆಗೆ ಪ್ರಜ್ಞೆಯೇ ಜಯಿಸಿ ಅವನು ಹೆಚ್ಚಿಗೆ ಓದಿದವಳನ್ನು ಮದುವೆಯಾದ. ಅಂದರೆ ಈ ವಿಷಯದಲ್ಲಿ ಪ್ರಜ್ಞೆಯೇ ಹೆಚ್ಚು ಪ್ರಬಲ, ಮತ್ತು ಅಪ-ಪ್ರಜ್ಞೆ ಪ್ರಜ್ಞೆಗಿಂತ ಚಿಕ್ಕದು. ಇಲ್ಲಿ ಅಪ-ಪ್ರಜ್ಞೆಯೇ ಪ್ರಬಲವಾಗಿದ್ದಲ್ಲಿ ಅವನು ಅವಳನ್ನು ಮದುವೆಯೇ ಆಗುತ್ತಿರಲಿಲ್ಲ. ಬಹಳ ಜನ ತಮಗಿಂತ ಕಡಿಮೆ ಓದಿದ ಸಂಗಾತಿಯೇ ಆಗಬೇಕೆಂದು ಪಟ್ಟುಹಿಡಿದು (ಅದು ಸಂಕುಚಿತ ಭಾವನೆಯೆಂದು ತಿಳಿದಾಗಲೂ) ಅದೇ ರೀತಿ ಮದುವೆ ಆಗುತ್ತಾರೆ. ಅವರಿಗೆ ತಮ್ಮ ಸಂಗಾತಿ ತಮಗಿಂತ ಹೆಚ್ಚು ಓದಿದ್ದರೆ ಸಹಿಸಲಾಗುವುದಿಲ್ಲ. ಇದು ಅವರಿಗೆ ತಿಳಿದಿರುತ್ತದೆ. ಅವರು ಅದನ್ನು ಒಪ್ಪಿಕೊಂಡು ಅದರಂತೆ ನಡೆದುಕೊಂಡು ನಿಶ್ಚಿಂತೆಯಿಂದ ಜೀವನ ಮಾಡುತ್ತಾರೆ. ಇದರಲ್ಲಿ ತಪ್ಪಿಲ್ಲ. ಜಗದೀಶ ಎರಡರಲ್ಲಿ ಯಾವುದೇ ಒಂದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೇ



"ಈ ಸಾರಿಯೂ ಸರಿಯಾಗಿ ಬರಲಿಲ್ಲ, [illegible]"

ಕಳೆದುಕೊಂಡಿದ್ದಾನೆ. ಅವನ ಪ್ರಜ್ಞೆ ಅವಪ್ರಜ್ಞೆಗಿಂತ ಈ ವಿಷಯದಲ್ಲಿ ಚಿಕ್ಕದು ಎಂಬುದು ಸಮಾಧಾನಕರ ಸಂಗತಿ. ಆದರೆ ಅವಪ್ರಜ್ಞೆ ಹೆಚ್ಚು ಪ್ರಬಲವಾಗಿಲ್ಲದಿದ್ದರೂ ತೊಂದರೆ ಉಂಟುಮಾಡುವಷ್ಟು ಶಕ್ತಿಯುಳ್ಳದ್ದಾಗಿದೆ. ಇಲ್ಲಿ ಜಗದೀಶ ಮೊದಲು ತನಗೂ ಅಂತಹ ಸಂಕುಚಿತ ಭಾವನೆಗಳಿವೆ ಎಂಬುದನ್ನು ಒಪ್ಪಿಕೊಳ್ಳಬೇಕು. ಗಂಡಸಾಗಿರುವುದಕ್ಕೂ ಓದಿಗೂ ಮತ್ತು ಸಂಬಳಕ್ಕೂ ಸಂಬಂಧವಿಲ್ಲವೆಂಬುದನ್ನು ಮನಗಾಣಬೇಕು. ಹೆಚ್ಚಿಗೆ ಓದಿದವನು ಮತ್ತು ಹೆಚ್ಚಿಗೆ ಸಂಪಾದಿಸುವವನು ಗಂಡಸು ಎಂಬುದು ನಾವು ಮಾಡಿಕೊಂಡಿರುವ ಭಾವನೆಯೇ ಹೊರತು ಅದರಲ್ಲಿ ಹುರುಳಿಲ್ಲ. ಮದುವೆಯೆಂಬುದು ಒಂದು ಗಂಡಸು ಮತ್ತು ಒಂದು ಹೆಂಗಸಿಗೆ ಹೊರತು ಅವರೀರ್ವರ ಪದವಿಗಳು ಅಥವಾ ಸಂಬಳಗಳಿಗಲ್ಲ ಎಂಬುದನ್ನು ಮನಗಾಣಬೇಕು. ಹೆಚ್ಚಿಗೆ ಓದಿದ್ದರೇನು ಅಥವಾ ಹೆಚ್ಚಿಗೆ ಸಂಪಾದಿಸುತ್ತಿದ್ದರೇನು? ಹೆಂಗಸು ಹೆಂಗಸೇ. ಕಳ್ಳನ ಮನಸ್ಸು ಹುಳ್ಳಗೆ ಎಂಬಂತೆ ಜಗದೀಶನನ್ನು ಅವನ ಹೆಂಡತಿ ಗಂಡನನ್ನು ಯಾವ ರೀತಿ ನೋಡಿಕೊಳ್ಳಬೇಕೋ ಅದೇ ರೀತಿ ನೋಡಿಕೊಳ್ಳುತ್ತಿದ್ದರೂ ಅವನಿಗೆ ಮಾತ್ರ ಈ ಕಾರಣಗಳಿಂದ ತೃಪ್ತಿಯಿರಲಿಲ್ಲ. ಇದನ್ನೆಲ್ಲ ಜಗದೀಶ ಕ್ರಮೇಣ ಒಪ್ಪಿಕೊಂಡ.

ಅವನ ಮತ್ತು ಅವನ ಹೆಂಡತಿಯ ಸಂಬಂಧದಲ್ಲಿ ಬಹಳಷ್ಟು ಮಾರ್ಪಾಟಾಗಿ ಅನ್ಯೋನ್ಯತೆ ಮೂಡಿತು. ಇದಾದ ನಂತರವೂ ಜಗದೀಶ ನನ್ನನ್ನು ನೋಡಲು ಬರುವುದನ್ನು ನಿಲ್ಲಿಸಲಿಲ್ಲ. "ಸಾರ್, ನಿಮ್ಹತ್ರ ವಿಮರ್ಶೆ ಮಾಡಿಕೊಂಡು ಹೋದ ನಂತರ ನನ್ನ ಮನಸ್ಸು ತಿಳಿಯಾಗುತ್ತೆ," ಎಂದು ಹೇಳಿ ತನ್ನ ಇತರ ಸಮಸ್ಯೆಗಳಿಗೂ ಇದು ಒಳ್ಳೆಯದು ಎಂದು ಮನೋವಿಶ್ಲೇಷಣೆಯನ್ನು ಮುಂದುವರಿಸಿದ. ತಾನು ಇತರರಿಗಿಂತ ಕೀಳು ಎಂಬ ಭಾವನೆಯು ಅಷ್ಟಾಗಿಲ್ಲದಿದ್ದರೂ ಇನ್ನೂ ಮುಂದುವರಿಯುತ್ತಲೇ ಇತ್ತು. ಕೀಳರಿಮೆ ಕೇವಲ ಅವನ ಮತ್ತು ಅವನ ಹೆಂಡತಿಯ ಸಂಬಂಧಕ್ಕೆ ಮಾತ್ರ ಮೀಸಲಾಗಿರದೆ ಇತರ ಸಂಬಂಧಗಳಲ್ಲೂ ಇತ್ತು.

ಕೀಳರಿಮೆ ಎಂಬುದು ತಾತ್ಕಾಲಿಕವಾಗಿಯೂ ಇರಬಹುದು. ಜೀವನದಲ್ಲಿ ಯಾವುದಾದರೂ ದೊಡ್ಡ ಪೆಟ್ಟು ಬಿದ್ದಾಗ ವಿಷಣ್ಣತೆ ಉಂಟಾಗಿ ಕೀಳರಿಮೆ ಆಗಬಹುದು. ವಿಷಣ್ಣತೆ ಕಳೆದ ನಂತರ ಕೀಳರಿಮೆಯೂ ಹೊರಟು ಹೋಗುವುದು. ಇಲ್ಲಿ ಕೀಳರಿಮೆ ವಿಷಣ್ಣತೆಯ ಒಂದು ಚಿಹ್ನೆ. ಜಗದೀಶನ ಕೀಳರಿಮೆ ಇಂಥದಲ್ಲ. ಅವನ ಕೀಳರಿಮೆ ಒಂದು ರೀತಿಯ ಸ್ವಭಾವ. ಸ್ವಭಾವಗಳು ಇದ್ದಕ್ಕಿದ್ದಂತೆ ಈಗ ಕಾಣಿಸಿಕೊಳ್ಳಲು ಸಾಧ್ಯವಿಲ್ಲ. ಅವುಗಳು ಸಾಧಾರಣವಾಗಿ ಬಾಲ್ಯದಿಂದಲೂ ಇರುತ್ತವೆ. ಜಗದೀಶನ ತಂದೆ ತಾಯಿ ಬಹಳ ಕಟ್ಟು ನಿಟ್ಟಿನಿಂದ ಮಕ್ಕಳನ್ನು ಬೆಳೆಸಿದ್ದರು. ಮಕ್ಕಳ ಮೇಲೆ ಅವರಿಗೆ ಬಹಳ ವ್ಯಾಮೋಹ, ತಮ್ಮ ಮಕ್ಕಳು ಬಹಳ ಮುಂದುವರಿದು ನಾಲ್ಕು ಜನರ ಹತ್ತಿರ ಒಳ್ಳೆಯ ಹೆಸರು ಪಡೆದುಕೊಳ್ಳಬೇಕೆಂಬುದು ಅವರ ಆಸೆ. ಚೆನ್ನಾಗಿ ಓದುತ್ತಿರುವ ಹುಡುಗರನ್ನು ತೋರಿಸಿ, 'ನೋಡು ಅವರು ಹೇಗೆ ಓದುತ್ತಿದ್ದಾರೆ. ನೀನು ಪ್ರಯೋಜನವಿಲ್ಲ. ಅವರಂತೆ ನೀನೂ ಚೆನ್ನಾಗಿ ಓದಿ ಮುಂದೆ ಬರಬೇಕು' ಎಂದು ಹೇಳುವರು. ಮಗ ಓದಿನಲ್ಲಿ ಆಸಕ್ತಿ ಹೊಂದಲಿ ಎಂಬ ಒಳ್ಳೆಯ ದೃಷ್ಟಿಯಿಂದಲೆ ಅವರು ಆ ರೀತಿ ಹೇಳುತ್ತಿದ್ದರು. ಜಗದೀಶ ತನ್ನ ತರಬೇತಿಯಲ್ಲಿ ತಾನೇ ಮೊದಲಾಗಬೇಕೆಂದು ಬಹಳ ಪ್ರಯತ್ನಿಸುವನು. ಅದು ಸಾಧ್ಯವಾಗದಿದ್ದಾಗ ಕೀಳರಿಮೆಯಿಂದ ತೊಳಲುವನು, ಆಗಿನಿಂದಲೂ ತಾನು ಕೀಳು ಎಂಬ ಭಾವನೆ ಮೂಡಿಬಿಟ್ಟಿತು. ತಾನು ಇತರರಿಗಿಂತ ಮೇಲಾಗಿ ತಂದೆತಾಯಿಗಳಿಂದ ಶಹಭಾಸ್‌ಗಿರಿ ಪಡೆಯಬೇಕೆಂದು ಪ್ರಜ್ಞೆಯಲ್ಲಿದ್ದರೆ, ಪ್ರಯತ್ನಿಸಿ ವಿಫಲನಾದಾಗ ತಾನು ಕೀಳು ಎಂಬ ಭಾವನೆ ಅವಪ್ರಜ್ಞೆಯಲ್ಲಿದ್ದಿತು. ಒಟ್ಟಿನಲ್ಲಿ ಮೇಲು ಮತ್ತು ಕೀಳು ಎಂಬ ದ್ವಂದ್ವ ಆಗಿನಿಂದಲೂ ಇತ್ತು. ಜಗದೀಶ ವಾಸ್ತವವಾಗಿ ಓದಿನಲ್ಲಿ ಹಿಂದೇನೂ ಇರಲಿಲ್ಲ. ತರಗತಿಯಲ್ಲಿ ಮೊದಲಿಗನಾಗದಿದ್ದರೂ ಹೆಚ್ಚು ಅಂಕ ಪಡೆಯುವವರ ಪೈಕಿ ಒಬ್ಬನಾಗಿದ್ದ. ಇಲ್ಲಿ ಕೀಳ

ರಿವೆ. ಉಂಟಾದದ್ದು ತಾನು ಅಂದುಕೊಂಡ ಮಟ್ಟವನ್ನು ತಲಪದೇ ಇದ್ದುದರಿಂದ. ಮೊದಲನೇ ರ್‍ಯಾಂಕ್ ಪಡೆದವನು ಮಾತ್ರ ಮೇಲು ಮತ್ತು ಅದನ್ನು ಪಡೆಯದಿದ್ದುದರಿಂದ ತಾನು ಕೀಳು ಎಂಬ ಭಾವನೆಯಿದ್ದು ಮಧ್ಯಂತರವೂ ಇದೆ ಎಂಬ ಭಾವನೆಯೇ ಅವನಲ್ಲಿ ಇರಲಿಲ್ಲ. ಕ್ರಮೇಣ ಮೇಲಲ್ಲದಿದ್ದರೆ ಕೀಳು ಎಂಬುದು ತಪ್ಪು ಮತ್ತು ಇವೆರಡರ ಮಧ್ಯೆ ಮಾಧ್ಯಂತರವೂ ಇದೆಯೆಂಬುದನ್ನು ಜಗದೀಶ ಒಪ್ಪಿಕೊಂಡ. ತಾನು ಮೇಲಲ್ಲದಿದ್ದರೂ ಖಂಡಿತವಾಗಿಯೂ ಕೀಳಲ್ಲ ಮತ್ತು ತಾನು ಮಧ್ಯಮ ತರಗತಿಯವ ಎಂಬ ಭಾವನೆ ಮೂಡಿತು. ಇಲ್ಲದಿರುವುದಕ್ಕೆ (ತಾನು ಮೇಲು ಎಂಬ ಭಾವನೆ) ಆಸೆ ಪಡುವುದಕ್ಕಿಂತ ಇರುವುದರಲ್ಲೇ (ತಾನು ಮಧ್ಯಮತರಗತಿಯವ ಎಂಬ ಭಾವನೆ) ತೃಪ್ತಿ ಪಡೆಯುವುದನ್ನು ಕಲಿಯಬೇಕು ಎಂದು ಹೇಳಿದ. ಜೀವನದಲ್ಲಿ ಹೆಚ್ಚು ಮುಂದುವರಿಯಬೇಕು ಎಂಬ ಆಸೆ ಎಲ್ಲರಿಗೂ ಇರಬೇಕಾದದ್ದೆ. ಆದರೆ ಅದು ಅತಿಯಾದಾಗ ಗತಿಗೇಡಾಗುವುದು. ನಾವಂದುಕೊಂಡಂತೆ ಎಲ್ಲವೂ ನಡೆದುಕೊಂಡು ಹೋದರೆ ಅದು ಜೀವನವೇಕಾಗುವುದು? ಕ್ರಮೇಣವಾಗಿ ಜಗದೀಶ ಹೆಂಡತಿ ತನ್ನಂತ ಹೆಚ್ಚಿನ ಸಂಬಳ ತರುವ ಗಂಡಸೆಂದು ನೋಡುವುದನ್ನು ಬಿಟ್ಟು, ಅವಳು ತನ್ನ ಸಂಗಾತಿಯೆಂದು ನೋಡಲು ಮೊದಲು ಮಾಡಿದ. ಮೊದಲು ಎಲ್ಲರನ್ನೂ ಮೆಚ್ಚಿಸಬೇಕೆಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದವನು ಈಗ ಯಾರು ಮೆಚ್ಚಲಿ ಅಥವಾ ಬಿಡಲಿ, ತನ್ನ ಕೆಲಸವನ್ನು ತನಗೆ ತಿಳಿದ ರೀತಿಯಲ್ಲಿ ಮಾಡಲು ಪ್ರಾರಂಭಿಸಿದ. ಒಟ್ಟಿನಲ್ಲಿ ತೋರಿಕೆಯ ಜಗದೀಶ ಹೋಗಿ ನಿಜವಾದ ಜಗದೀಶನಾದ. ಇದಾದ ನಂತರ ಮನೆಯಲ್ಲಿ ನೆಮ್ಮದಿ ಮತ್ತು ಕೆಲಸದಲ್ಲಿ ಗೌರವ ಹೆಚ್ಚಿದುವೆಂದು ಹೇಳಿದ. ಮನೋವಿಶ್ಲೇಷಣೆಯ ಚಿಕಿತ್ಸೆ ಇಲ್ಲಿಗೆ ಮುಕ್ತಾಯವಾಯಿತು.

ಜಗದೀಶನ ಕಾಯಿಲೆಗೆ ಸೈಕೋ ನ್ಯೂರೋಸಿಸ್ ಎಂದು ಕರೆಯುತ್ತೇವೆ. ಈ ಕಾಯಿಲೆಯಲ್ಲಿ ಎರಡು ಮನಸ್ಸುಗಳ ನಡುವೆ ಘರ್ಷಣೆ ಉಂಟಾಗಿ ಮಾನಸಿಕ ಶಾಂತಿ ಕದಡುತ್ತದೆ. ತನ್ನ ಯೋಗ್ಯತೆಗೂ ಆಶಯಗಳಿಗೂ ಅಜಗಜಾಂತರ ವ್ಯತ್ಯಾಸವಿದ್ದರೆ ಜಗದೀಶನಂತೆ ಅಶಾಂತಿ ಉಂಟಾಗಬಹುದು. ಸೈಕೋ ನ್ಯೂರೋಸಿಸ್ ಕಾಯಿಲೆಗೆ ಮನೋವಿಶ್ಲೇಷಣೆಯೇ ಮುಖ್ಯವಾದ ಚಿಕಿತ್ಸೆ. ನಮ್ಮ ಸಮಾಜದಲ್ಲಿ ಎಲ್ಲಕ್ಕೂ ಔಷಧಿ ಬೇಕು. ಔಷಧಿಗೆ ಪ್ರಾಧಾನ್ಯ ಕೊಡದೆ ಮನೋವಿಶ್ಲೇಷಣೆಗೆ ಪ್ರಾಧಾನ್ಯ ಕೊಟ್ಟದ್ದರಿಂದ ನಾನು ಕೆಲವು ರೋಗಿಗಳನ್ನು ಕಳೆದುಕೊಂಡಿದ್ದೂ ಉಂಟು. ನಿಜದಿಂದ ಎಷ್ಟು ದಿನ ಓಡಿ ಹೋಗಲು ಸಾಧ್ಯ? ಯಾವತ್ತಿದ್ದರೂ ಮನೋವಿಶ್ಲೇಷಣೆಯೇ ಮುಖ್ಯ ಎಂಬುದನ್ನು ಅವರು ಮನಗಾಣಬೇಕು. ಸೈಕೋ ನ್ಯೂರೋಸಿಸ್ ಎಂಬುದು ವಾಸಿಯಾಗುವಂಥ ಕಾಯಿಲೆ. ಇದರಿಂದ ನರಳುತ್ತಿರುವವರು ಬಹಳ ಜನ. ಅವರೆಲ್ಲರೂ ನಮ್ಮಲ್ಲಿಯೇ ಬೆರೆತಿರುತ್ತಾರೆ. ಅವರು ಮಾನಸಿಕ ಅಸ್ವಾಸ್ಥ್ಯದಿಂದ ನರಳುತ್ತಿದ್ದಾರೆ ಎಂಬುದು ತಿಳಿಯುವುದೇ ಇಲ್ಲ. ಹೊರಗಿನ ನೋಟಕ್ಕೆ ನಮ್ಮೆಲ್ಲರಿಗೂ ಅವರಿಗೂ ವ್ಯತ್ಯಾಸವೇ ಕಾಣದು. ಇದು ಅಂತಹ ತೀವ್ರವಾದ ಕಾಯಿಲೆಯುಳ್ಳವರಾದರಿಂದ ನರಳಿ ಕೊಂಡೇ ಜೀವನವನ್ನು ತಳ್ಳುವವರು ಅನೇಕ. ತೀವ್ರವಾದ ಕಾಯಿಲೆಗಳಿಗೆ ಮಾತ್ರ ಮನೋರೋಗ ತಜ್ಞರನ್ನು ಕಾಣಬೇಕು. ಮತ್ತು ಸೈಕೋ ನ್ಯೂರೋಸಿಸ್ ಅಂಥ ಕಾಯಿಲೆಗಳಿಗೆ ತಜ್ಞರನ್ನು ಕಾಣಕೂಡದು ಎಂಬುದು ತಪ್ಪು. ನನ್ನ ಪ್ರಕಾರ ಮಾನಸಿಕ ಶಾಂತಿಯಿಲ್ಲದವನು ಬಡವ. ಆರ್ಥಿಕವಾಗಿ ಬಡವನಾಗಿದ್ದು ಜೀವನ ಮಾಡಬಹುದು. ಆದರೆ ಮಾನಸಿಕ ಶಾಂತಿಯಿಲ್ಲದ ಜೀವನ ಮಾಡುವುದು ಅಸಾಧ್ಯ. ಜಗದೀಶನಂತೆ ಮಾನಸಿಕ ಶಾಂತಿಯಿಲ್ಲದವರು ಮನೋವಿಶ್ಲೇಷಣೆಯಿಂದ ನೆಮ್ಮದಿಯನ್ನು ಪಡೆಯುವುದು ಸಾಧ್ಯವಿದೆ. ಇದನ್ನು ಉಪಯೋಗಿಸಿ ಕೊಳ್ಳದೇ ಇದ್ದರೆ ಇನ್ನೂ ಅಧಿಕವಾದ ಬೆಲೆಯನ್ನು ತೆರುವ ಸಂದರ್ಭಗಳೂ ಬರಬಹುದು. ✡




ಪುರಾಣದ ಪುನರ್ ಪ್ರಸ್ತಾಪ...

ರಾಜನ ಭಕ್ತಿಗೆ ಮಣಿದು ಬಂದ ಸಾಗರತಳದ ಮೂರ್ತಿ...



ಭಗವಾನ್ ಶ್ರೀಕೃಷ್ಣನ ಪ್ರಸಿದ್ಧ ದೇವಸ್ಥಾನ ಗುರುವಾಯೂರಿನಲ್ಲಿದೆ. ಐತಿಹ್ಯದಲ್ಲಿರುವ ಪ್ರಕಾರ, ತನ್ನ ತಂದೆ ಪರೀಕ್ಷಿತ್ ರಾಜನು ಸರ್ಪಕಡಿತದಿಂದ ನಿಧನನಾದ್ದರಿಂದ, ಜನಮೇಜಯ ರಾಜನು ಸರ್ಪಗಳ ಮೇಲೆ ಹಗೆ ತೀರಿಸಿಕೊಳ್ಳಲು ಬಯಸಿ, ಸರ್ಪಯಜ್ಞ ಕೈಗೊಂಡು ಅಸಂಖ್ಯ ಸರ್ಪಗಳನ್ನು ಕೊಲ್ಲುತ್ತಾನೆ. ಇದರ ಪರಿಣಾಮವಾಗಿ ಭಯಂಕರ ಕುಷ್ಠರೋಗ ಅವನಿಗೆ ಅಂಟುತ್ತದೆ. ನಿವಾರಣೆಗಾಗಿ ಎಲ್ಲ ರೀತಿಯ ಔಷಧೋಪಚಾರಗಳೂ ವಿಫಲವಾದಾಗ, ಭಗವಾನ್ ಶ್ರೀಕೃಷ್ಣನನ್ನು ಪೂಜಿಸುವಂತೆ ಅವನಿಗೆ ಉಪದೇಶ ದೊರೆಯುತ್ತದೆ. ಸಾಗರದಲ್ಲಿ ಮುಳುಗಿಹೋಗಿದ್ದ ದ್ವಾರಕೆಯಲ್ಲಿದ್ದ ಶ್ರೀಕೃಷ್ಣನ ಮೂರ್ತಿಯನ್ನು, ಗುರು ಮತ್ತು ವಾಯು ಎಂಬಿಬ್ಬರ ಸಹಕಾರದಿಂದ ಪತ್ತೆ ಹಚ್ಚಲಾಗುತ್ತದೆ ಹೀಗಾಗಿ ಆ ಕ್ಷೇತ್ರಕ್ಕೆ ಗುರುವಾಯೂರು ಎಂಬ ಹೆಸರು ಬಂತು. ಆನಂತರ ಜನಮೇಜಯ ರಾಜನು ಮೂರ್ತಿಯೆದುರು ತೋರಿದ ಅನನ್ಯ ಭಕ್ತಿಯಿಂದಾಗಿ ಅವನ ಭಯಂಕರ ಕಾಯಿಲೆ ಪವಾಡದ ರೀತಿಯಲ್ಲಿ ಮಾಯವಾಗಿಬಿಟ್ಟಿತೆಂದು ಐತಿಹ್ಯ ಹೇಳುತ್ತದೆ.

ಪ್ರತಿಯೊಂದು ದೇವಸ್ಥಾನಕ್ಕೂ ತನ್ನದೇ ಆದ ಕುತೂಹಲಪೂರ್ಣ ಕಥೆಯಿದೆ. ಅದು ಅಚಲ ಶ್ರದ್ಧಾಭಕ್ತಿಗಳ, ವಿಪುಲ ನಂಬಿಕೆಯ ಕಥೆ. ನಿಮ್ಮ ಶ್ರದ್ಧಾಭಕ್ತಿಗಳನ್ನು ಒಂದು ಪರಿಮಳಪೂರ್ಣ, ಶ್ರೇಷ್ಠವಾದ ವಾಸು ಅಗರಬತ್ತಿಯೊಂದಿಗೆ ವ್ಯಕ್ತಪಡಿಸಿ. ವಾಸು ಅದಕ್ಕೆ ಸೂಕ್ತ. ವಾಸು ಸ್ಪೆಷಲ್ ಅಥವಾ ತ್ರೀ-ಇನ್-ಒನ್ ಬತ್ತಿಯನ್ನು ಇಂದೇ ಹಚ್ಚಿ.





ಎನ್. ರಂಗರಾವ್ ಅಂಡ್ ಸನ್ಸ್
ಅವರ ತಯಾರಿಕೆ.

ವಾಸು... ನಿಮ್ಮ ಭಕ್ತಿಗೆ ಭಾವ ಕೊಡುವ ಶ್ರೇಷ್ಠ ಸುಗಂಧ-ದ್ರವ್ಯವುಳ್ಳ ಅಗರಬತ್ತಿ

maa (S) NRR 1d Kan.83

ಅಮೇರಿಕದ ರಾಷ್ಟ್ರೀಯ ಕಲಾ ಸಂಗ್ರಹಾಲಯ

ಟಿ. ಎಂ. ಸುಬ್ಬರಾಯ

ವಾಷಿಂಗ್‌ಟನ್ನಿನ ಹೃದಯ ಭಾಗದಲ್ಲಿರುವ 'ಅಮೇರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರೀಯ ಕಲಾಸಂಗ್ರಹಾಲಯ' ಪ್ರಪಂಚದ ಅಪರೂಪ ಕಲಾ ಕೃತಿ ಸಂಗ್ರಹಾಲಯಗಳಲ್ಲಿ ಒಂದೆಂಬುದಾಗಿ ಖ್ಯಾತಿಪಡೆದಿದೆ. ತೇಂಗುಲಾಬಿವರ್ಣದ ಅಮೃತ ಶಿಲಾರಚನೆಯ ವಿಶಾಲ, ಆಕರ್ಷಕ ಕಟ್ಟಡದಲ್ಲಿ ಸಂಗ್ರಹಿಸಲಾದ ಅಪೂರ್ವ ಕಲಾಕೃತಿಗಳನ್ನು ಕಾಣುವ ಸಲುವಾಗಿ ಇಲ್ಲಿಗೆ ಬಂದು ಹೋದವರ ಸಂಖ್ಯೆ, ಸಂಗ್ರಹಾಲಯ ಉದ್ಘಾಟನೆಯಾದ ೧೯೪೧ರಿಂದೀಚೆಗೆ, ಐದು ಕೋಟಿಗೆ ಸಮೀಪ. ಈ ಸಂಗ್ರಹಾಲಯ ಓರ್ವ ವ್ಯಕ್ತಿಯ ಕೊಡುಗೆ. ಅಮೇರಿಕ ಸಂಯುಕ್ತ ಸಂಸ್ಥಾನದ ಖಜಾನೆಯ ಕಾರ್ಯದರ್ಶಿಯಾಗಿ ೧೯೨೧ರಲ್ಲಿ ಆಂಡ್ರೂ ವಿಲಿಯಮ್ ಮೆಲನ್‌ನ ನೇಮಕವಾಯಿತು. ವಾಷಿಂಗ್‌ಟನ್ನಿನಲ್ಲಿ ತನ್ನ ಅಧಿಕಾರವನ್ನು ವಹಿಸಿಕೊಂಡು ಕೆಲವೇ ತಿಂಗಳಲ್ಲಿ ಮೆಲನ್‌ನ ತಲೆಯಲ್ಲಿ ಒಂದು ವಿಚಾರ ಮೂಡಿತು. ವಾಷಿಂಗ್‌ಟನ್ನನ್ನು ಜಗತ್ತಿನ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದನ್ನಾಗಿ ಪರಿವರ್ತಿಸಬೇಕು ಎಂಬುದೇ ಆ ವಿಚಾರ. ಅದನ್ನು ಆಗಮಾಡುವಲ್ಲಿ ಅಗತ್ಯವಾದ ಧನವನ್ನು ಸ್ವತಃ ಶ್ರೀಮಂತನಾದ ಮೆಲನ್‌ನೇ ವಿನಿಯೋಗಿಸುತ್ತಾನೆಂದು ಮಾತ್ರ ಯಾರೂ ಊಹಿಸಿರಲಿಲ್ಲ! ೧೯೩೭ರ ಒಂದು ದಿನ, ತನ್ನ ವಿಶೇಷ ಸಹಾಯಕಾಧಿಕಾರಿ ಡೇವಿಡ್ ಫಿನ್ಲೇಯನ್ನು ಕರೆದು ಮೆಲನ್ ಹೇಳಿದ: "ವಾಷಿಂಗ್‌ಟನ್ನಿನಲ್ಲಿ ಒಂದು ಕಲಾಸಂಗ್ರಹಾಲಯ ತಲೆ ಎತ್ತಬೇಕು. ಅದು ಲಂಡನ್, ಪ್ಯಾರಿಸ್, ರೋಮ್ ಮತ್ತು ಮ್ಯಾಡ್ರಿಡ್‌ನಲ್ಲಿರುವ ಕಲಾಕೃತಿ ಸಂಗ್ರಹಾಲಯಗಳನ್ನು ಮೀರಿಸುವಂತಿರಬೇಕು. ಇದಕ್ಕೆ ಸರಕಾರ ಪ್ರಾಯಶಃ ಸಹಾಯ ನೀಡಲಿಕ್ಕಿಲ್ಲ. ಅದನ್ನು ನಿರೀಕ್ಷಿಸುವುದೂ ಸಾಧ್ಯವಿಲ್ಲ. ಕೃತಿಗಳನ್ನು ಸಂಗ್ರಹಿಸಿ ಇಡಲು ಬೇಕಾದ ಕಟ್ಟಡ ನಿರ್ಮಾಣಕ್ಕೆ ನಾನು ಹಣ ಕೊಡುತ್ತೇನೆ. ಕೃತಿಗಳನ್ನು ನಾಗರಿಕರಿಂದ ಪಡೆಯೋಣ. ಅಪೂರ್ವವಾದುವನ್ನು ಹಣ ಕೊಟ್ಟು ಖರೀದಿಸೋಣ. ಈ ಎಲ್ಲವುಗಳಿಗೆಲ್ಲಾ ನೀನು ಮೇಲ್ವಿಚಾರಕನಾಗಿರಬೇಕು." ಫಿನ್ಲೇ ಒಪ್ಪಿದ. ಕೆಲವೇ ದಿನಗಳಲ್ಲಿ ಯೋಜನೆಯ ನಕ್ಷೆಯನ್ನು ಸಿದ್ಧಗೊಳಿಸಿದ.

ಯುವಕನಾಗಿದ್ದಾಗಲೇ, ಕಲಾಕೃತಿಗಳನ್ನು ಸಂಗ್ರಹಿಸುವ ಹವ್ಯಾಸ ಬೆಳೆಸಿಕೊಂಡಿದ್ದ ಮೆಲನ್ ೧೮೮೦ರಲ್ಲಿ ಪ್ರಥಮ ಬಾರಿಗೆ ವಿದೇಶಕ್ಕೆ ಹೋದಾಗ ಒಂದು ಸಾವಿರ ಡಾಲರ್ ತೆತ್ತು ಒಂದು ಹಳೆಯ ಕಲಾಕೃತಿ ಖರೀದಿಸಿ ತಂದಿದ್ದ. ಅವನ ಸಹೋದ್ಯೋಗಿಗಳು ನಿಬ್ಬೆರಗಾಗಿದ್ದರು! ಅಲ್ಲಿಂದಾಚೆ ಮೆಲನ್ ಹಲವು ಚಿತ್ರಗಳನ್ನು ಖರೀದಿಸಿದ. ವಿಶೇಷವೆಂದರೆ ಆತ ಸಾರಾಸಗಟು ಚಿತ್ರ ಖರೀದಿಸುತ್ತಿರಲಿಲ್ಲ. ಯಾವುದು ತನ್ನ ಮನಸ್ಸಿಗೆ ಹಿಡಿಸುತ್ತದೆಯೋ ಅಂಥದನ್ನು ಮಾತ್ರ ಖರೀದಿಸುತ್ತಿದ್ದ. ಸುಲಭ ಬೆಲೆಯಲ್ಲಿ ದೊರಕುವಂತಿದ್ದರೂ ರಾಫೇಲ್‌ನ ಕಲೆಯೊಂದನ್ನು ಆತ ಕೊಳ್ಳಲಿಲ್ಲ. [illegible] ಕೃತಿಯಲ್ಲಿ [illegible] ಕಾಣುತ್ತಿತ್ತು. ೧೮ನೆಯ ಶತಮಾನದ ಫ್ರೆಂಚ್ ಕಲಾವಿದರು ಹೆಚ್ಚಾಗಿ 'ನ್ಯೂಡ್' ಕೃತಿಗಳನ್ನೇ ರಚಿಸುತ್ತಿದ್ದುದರಿಂದ ಮೆಲನ್ ಅವುಗಳತ್ತ ಗಮನ ಹರಿಸದೆ ಡಚ್ ಮತ್ತು ಇಂಗ್ಲಿಷ್ ಕೃತಿಗಳನ್ನು ಹೆಚ್ಚಾಗಿ ಸಂಗ್ರಹಿಸ ತೊಡಗಿದ.



ಮೆಲನ್ ಸಂಗ್ರಹಿಸಿದ ಒಂದು ಅಪೂರ್ವ ಚಿತ್ರ.

ಆದರೆ, ತನ್ನ ಸಂಗ್ರಹಾಲಯದ ಯೋಜನೆ ಫಿನ್ಲೆಯ ನೇತೃತ್ವದಲ್ಲಿ ಕಾರ್ಯಗತವಾದಾಗ ತನ್ನ ದೃಷ್ಟಿಕೋನವನ್ನು ಮೆಲನ್ ಬದಲಾಯಿಸಿದ.

ಹರ್ಮಿಟೇಜ್ ಅರಮನೆಯಲ್ಲಿರುವ ಝಾರ್ ಚಕ್ರವರ್ತಿಗಳಿಗೆ ಸಂಬಂಧಿಸಿದ ಕೆಲವು ಅಪರೂಪ ಕೃತಿಗಳನ್ನು ಮಾರಾಟ ಮಾಡುವ ವಿಚಾರ ತಿಳಿದ ಮೆಲನ್ ೧೯೩೦ರಲ್ಲಿ ರಶಿಯಾಕ್ಕೆ ಪಯಣ ಬೆಳೆಸಿದ. ಏಳು ಲಕ್ಷ ಡಾಲರ್ ತೆತ್ತು ಇಪ್ಪತ್ತೊಂದು ಚಿತ್ರಗಳನ್ನು ಕೊಂಡುತಂದ. ಅವುಗಳಲ್ಲಿ ಒಂದು ಟಿಟಿಯನ್ನನ ರಚನೆ 'ದರ್ಪಣ ಸುಂದರಿ.' ನಗ್ನ ಸುಂದರಿಯ ಈ ಕೃತಿಗೆ ಆತ ೫,೪೪,೦೦೦ ಡಾಲರ್ ತೆತ್ತಿದ್ದ! ರ್ಯಾಫೇಲ್‌ನ 'ಸೆಂಟ್ ಜಾರ್ಜ್ ಮತ್ತು ಡ್ರಾಗನ್' ಎನ್ನುವ ಕೃತಿಗೆ ೭,೪೫,೦೦೦ ಡಾಲರ್ ಕೊಟ್ಟು ಕೊಂಡಿದ್ದ. ಇದು ಹನ್ನೊಂದು ಇಂಚು ಎತ್ತರ ಎಂಟು ಇಂಚು ಅಗಲದ ಕೃತಿಯಾಗಿತ್ತು! ಅವನು ಕೊಟ್ಟ ಹೆಚ್ಚು ಮೌಲ್ಯವೆಂದರೆ ೧,೬೬,೦೦೦ ಡಾಲರ್‌ಗಳು. ಅದು ಸಂದಾಯವಾದದ್ದು ರ್ಯಾಫೇಲನ 'ಆಲ್ಬಾ ಮೆಡೋನ್ನಾ'ಕ್ಕೆ. ಖಜಾನೆಯ ಕಾರ್ಯದರ್ಶಿಯಾಗಿ ಹನ್ನೊಂದು ವರುಷ ಹಾಗೂ ಸೇಂಟ್ ಜೇಮ್ಸ್ ದರ್ಬಾರಿನಲ್ಲಿ ಅಮೇರಿಕದ ರಾಯಭಾರಿಯಾಗಿ ಒಂದು ವರುಷ ಸೇವೆ ಸಲ್ಲಿಸಿದ ಮೆಲನ್ ೧೯೩೩ರಲ್ಲಿ ನಿವೃತ್ತನಾದ. ಕೂಡಲೇ ತನ್ನ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಪ್ರವೃತ್ತನಾದ. ಮೆಲನ್ ಕಟ್ಟಡದ ಶಿಲ್ಪ ವಿನ್ಯಾಸ ರೂಪಿಸಲು ಜಾನ್ ರಸೆಲ್ ಪೋಪ್ ಎಂಬವನನ್ನು ಆಯ್ಕೆ ಮಾಡಿದ. "ತಗಲುವ ವೆಚ್ಚ ಕುರಿತು ಯೋಚಿಸಬೇಡ. ಇದು ಶತಶತಮಾನಗಳ ಕಾಲ ಬಾಳಬೇಕಾದಂತಹುದು," ಎಂದು ಶಿಲ್ಪಿಗೆ ತಿಳಿಸಿದ ಮೆಲನ್.

ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಸಲಕರಣೆಗಳನ್ನು, ಕಟ್ಟಡ ಸೌಂದರ್ಯ ವರ್ಧನೆಗೆ ಅಗತ್ಯವಾದ ಅಂಶಗಳನ್ನು ಈರ್ವರೂ ಕೂಡಿಯೇ ಕಲೆ ಹಾಕಿದರು. ಬಿಳಿಯ ಅಮೃತ ಶಿಲೆ ಸೂರ್ಯ ಕಿರಣಗಳನ್ನು ಪ್ರತಿಫಲಿಸುವುದರಿಂದ ಅದನ್ನು ತನ್ನಲಿ ಹೀರಿಕೊಳ್ಳುವ ಸಾಮರ್ಥ್ಯದ



ರ್ಯಾಫೇಲ್ಲನದೆ 'ತಾಯಿ-ಮಗು'



ರ್ಯಾಫೇಲ್‌ನ ಕೃತಿ 'ಮಡೋನ್ನ'

ಗುಲಾಬಿ ವರ್ಣದ ಅಮೃತ ಶಿಲೆಗಳನ್ನು ಗೋಡೆಗೆ ಬಳಸಲು ನಿಶ್ಚಯವಾಯಿತು. ಕೇಂದ್ರದ ಬುರುಜಿಗೆ ಇಟಲಿಯ ಕಪ್ಪು ಅಮೃತಶಿಲೆ ಆಯ್ಕೆಯಾಯಿತು. ನೆಲಕ್ಕೆ ಹಾಸಲು ಥೂಪಟಿಕ್ ಮಾರವನ್ನು ಬಳಸಬೇಕೆಂಬ ನಿರ್ಣಯಕ್ಕೆ ಬರಲಾಯಿತು.

ದುಬಾರಿಯ ಸಲಕರಣೆಗಳನ್ನು ಬಳಸಿದ ಮತ್ತು ಹವಾ ನಿಯಂತ್ರಿತ ಕಟ್ಟಡ ರಚನೆಯಾದ್ದರಿಂದ ಒಂಬತ್ತು ಲಕ್ಷ ಡಾಲರಿಗಿಂತ ಹೆಚ್ಚು ಹಣ ವೆಚ್ಚಮಾಡುವುದು ಅಗತ್ಯವಾಯಿತು. ಕಟ್ಟಡ ನಿರ್ಮಾಣ ಕಾರ್ಯ ಪೂರೈಸುತ್ತಾ ಬಂದಂತೆ ಮೆಲನ್‌ನಿಗೆ ತನ್ನಲ್ಲಿರುವ ಕಲಾಕೃತಿಗಳ ಸಂಗ್ರಹ ಇಲ್ಲಿ ಇಡಲು ಸಾಲದು ಎನ್ನಿಸಿತು. ತತ್‌ಕ್ಷಣ ಫಿನ್ಲೇಗೆ ಫೋನ್ ಮಾಡಿದ ಮೆಲನ್, "ಮೊದಲ ಟ್ರೈನ್ ಹಿಡಿದು ನ್ಯೂಯಾರ್ಕಿಗೆ ಹೋಗು. ಡುವೀನನ ಬಳಿ ಅಪೂರ್ವ ಚಿತ್ರಗಳಿವೆ. ಅವುಗಳಲ್ಲಿ ಅತ್ಯುತ್ತಮವಾದವುಗಳನ್ನು ಆಯ್ದು ತಾ," ಎಂದನಂತೆ

ಆ ಪ್ರಕಾರ ಫಿನ್ಲೇ ನ್ಯೂಯಾರ್ಕಿಗೆ ಹೋದ. ಡುವೀನನನ್ನು ಭೇಟಿಯಾಗಿ ಅವನ ಮನವೊಲಿಸಿದ. ಮೂವತ್ತು ಚಿತ್ರ, ಇಪ್ಪತ್ತೊಂದು ಶಿಲ್ಪಗಳೊಂದಿಗೆ ಡುವೀನನನ್ನೂ ಕರೆದುಕೊಂಡು ವಾಷಿಂಗ್‌ಟನ್ನಿಗೆ ಮರಳಿದ. ಪ್ರತ್ಯೇಕ ಕಾವಲುಗಾರನೊಬ್ಬನನ್ನು ರಕ್ಷಣೆಗೆ ನೇಮಿಸಿ ಮೆಲನ್ ಸಂಗ್ರಹಿಸಿದ. ಕಲಾಕೃತಿಗಳ ಸನಿಹದಲ್ಲಿಯೇ ಡುವೀನನ ಸಂಗ್ರಹಗಳನ್ನೂ ಇಡಲಾಯಿತು. ಕೆಲವು ದಿನಗಳ ನಂತರ, ೮೧ ವರುಷವಾಗಿದ್ದ ಆಂಡ್ರ್ಯೂ ಮೆಲನ್ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರಿಗೆ ಪತ್ರವೊಂದನ್ನು ಬರೆದು ತನ್ನ ಈ ಅಪೂರ್ವ ಸಂಗ್ರಹಾಲಯವನ್ನು ತಾನು ರಾಷ್ಟ್ರಕ್ಕೆ ಕೊಡಮಾಡಲು ಸಿದ್ಧನಾಗಿರುವುದಾಗಿ ತಿಳಿಸಿದ. ಆದರೆ ಈ ಕುರಿತು ಆತ ಎರಡು ನಿಬಂಧನೆಗಳನ್ನು ವಿಧಿಸಿದ್ದ. ರಾಷ್ಟ್ರವೊಂದರ ಕಲಾ ಸಂಗ್ರಹಾಲಯ ಸಾಮಾನ್ಯನೊಬ್ಬನ ಸ್ಮಾರಕವಾಗುವ ವಿಚಾರ ತನಗೆ ಸರಿ ಎನ್ನಿಸುವುದಿಲ್ಲ. ಯಾವುದೇ ರೀತಿಯಲ್ಲಿಯೂ, ಸಂದರ್ಭದಲ್ಲಿಯೂ ಸಂಗ್ರಹಾಲಯದೊಂದಿಗೆ ತನ್ನ ಹೆಸರು ಸೇರಕೂಡದು. ಇದು ಮೊದಲ ನಿಬಂಧನೆ. ಇನ್ನೊಂದು ನಿಬಂಧನೆ-ಇದಕ್ಕೆ ದಾನವಾಗಿ ಕೊಡಲ್ಪಡುವ ಕೃತಿಗಳು ಯಾವುದೇ ರೀತಿಯಲ್ಲೂ ತಾನು ಆಯ್ಕೆ ಮಾಡಿದ ಕೃತಿಗಳಿಗಿಂತ ಕಡಿಮೆ ಮಟ್ಟದವಾಗಿರದಂತೆ ನೇಮಕವಾಗುವ ವಿಶ್ವಸ್ಥ ಮಂಡಳಿ ನೋಡಿಕೊಳ್ಳಬೇಕು. ಅತಿ ಹೆಚ್ಚು ಮೌಲ್ಯದ ನೂರಾ ಮೂವತ್ತೆರಡು ಚಿತ್ರಗಳನ್ನೂ, ಇಪ್ಪತ್ತಾರು ಶಿಲ್ಪಗಳನ್ನೂ, ಹದಿನೈದು ಲಕ್ಷ ಮೌಲ್ಯದ ಅಪೂರ್ವ ಕಟ್ಟಡವನ್ನೂ ಮೆಲನ್ ರಾಷ್ಟ್ರಕ್ಕೆ ಸಮರ್ಪಣೆ ಮಾಡಿದ. ಈ ಸಂಗ್ರಹಾಲಯದ ಉದ್ಘಾಟನೆ ೧೯೪೧ ರ ಮಾರ್ಚ್ ಹದಿನೇಳರಂದು ನಡೆಯಿತು. ಆದರೆ, ದುರ್ದೈವವಶಾತ್ ಈ ಅಭೂತಪೂರ್ವ ಸಮಾರಂಭವನ್ನು ಕಾಣಲು ಆ್ಯಂಡ್ರೂ ಮೆಲನ್ ಬದುಕಿರಲಿಲ್ಲ. ಆತ ೧೯೩೭ರಲ್ಲಿ ತೀರಿಕೊಂಡ!

ಮೆಲನ್ ಯಾವ ಉದ್ದೇಶ, ಆಕಾಂಕ್ಷೆಗಳನ್ನು ತನ್ನ ಸಂಗ್ರಹಾಲಯ ಕುರಿತು ಇರಿಸಿಕೊಂಡಿದ್ದನೋ ಅದೀಗ ಪೂರ್ಣಗೊಂಡಿದೆ. ೧೯೩೯ರಲ್ಲಿ ಈ ಸಂಗ್ರಹಾಲಯ ಒಂದು ದೊಡ್ಡ ಪ್ರಮಾಣದ ಕೊಡುಗೆಯನ್ನು ಸ್ವೀಕರಿಸಿತು. ಇಟಲಿಯ ಲಕ್ಷಾಧೀಶ ಸ್ಯಾಮ್ಯುಯಲ್ ಕ್ರೆಸ್ ೩೭೫ ಶ್ರೇಷ್ಠ ಕಲಾಕೃತಿಗಳನ್ನೂ, ೧೮ ಉತ್ಕೃಷ್ಟ ಶಿಲ್ಪಗಳನ್ನೂ ಈ ಸಂಗ್ರಹಾಲಯಕ್ಕೆ ಕೊಟ್ಟ. ನ್ಯೂಯಾರ್ಕ್ ನಗರದಲ್ಲಿ ಇಟಲಿಯ ಕಲಾಕೃತಿಗಳನ್ನು ಪ್ರತ್ಯೇಕ ಭವನವೊಂದರಲ್ಲಿ ಪ್ರದರ್ಶಿಸುವ ಅಪೇಕ್ಷೆ ಕ್ರೆಸನಿಗಿತ್ತು. ಆದರೆ ಫಿನ್ಲೇ ಅವನ ಮನಸ್ಸನ್ನು ತಿರುಗಿಸಿ, ಆ ಎಲ್ಲ ಕಲಾಕೃತಿಗಳನ್ನೂ ವಾಷಿಂಗ್‌ಟನ್ನಿಗೆ ತರುವಂತೆ ಮಾಡುವಲ್ಲಿ ಯಶಸ್ವಿಯಾದ. ಇಟಲಿಯ ಕಲಾ ವಿದ್ವಾಂಸ ಮತ್ತು ಈ ಸಂಗ್ರಹಾಲಯದ ಮೇಲ್ವಿಚಾರಕನಾಗಿ ನೇಮಕ ಹೊಂದಿದ್ದ ಜಾನ್ ವಾಕರ್, ಫಿನ್ಲೇ ಮತ್ತು ಸ್ವತಃ ಕ್ರೆಸ್, ಕ್ರೆಸನ ಕಲಾಕೃತಿಗಳನ್ನು ಆಯ್ಕೆ ಮಾಡಿದರು. ಇಂದು ಸಂದರ್ಶಕರು ಕ್ರೆಸನ ಹಲವು ಸಂಗ್ರಹ ಕೃತಿಗಳನ್ನಿಲ್ಲಿ ಕಾಣಬಹುದು. ಅವುಗಳ ಸಂಖ್ಯೆ ಕೂಡಾ ಹೆಚ್ಚು.

ವಾಷಿಂಗ್‌ಟನ್ನಿನ ಈ ರಾಷ್ಟ್ರೀಯ ಕಲಾ



ಸಂಗ್ರಹಾಲಯಕ್ಕೆ ಒಂದ ಇನ್ನೊಂದು ಏಕೈಕ ಕೊಡುಗೆ ಎಂದರೆ-ಜೋಸೆಫ್ ವಿಡ್‌ನರನದು. ಅವುಗಳಲ್ಲಿ ಹದಿನಾಲ್ಕು ರೆಂಬ್ರ್ಯಾಂಟನ ಕೃತಿಗಳು, ಎರಡು ವರ್‌ಮೀರ್ಸನವು, ಎಂಟು ವ್ಯಾನ್ ಡೈಕ್ಸ್‌ನವು, ಎರಡು ಎಲ್ ಗ್ರೆಕೋನವು, ಯುರೋಪಿನ ಪುನರುಜ್ಜೀವನ ಕಾಲಕ್ಕೆ ಸೇರಿದ ಅಪೂರ್ವ ಒಂದು ರ್ಯಾಫೇಲ್‌ನದು ಇನ್ನುಳಿದವು ಅಪೂರ್ವ ಕಲಾಕೃತಿಗಳು. ಇವುಗಳೊಂದಿಗೆ, ಹಲವು ಪಿಠೋಪಕರಣಗಳೂ, ಕಂಚಿನ ವಸ್ತು [illegible], ಪಿಂಗಾಣಿ ವಸ್ತುಗಳನ್ನು ವಿಡ್‌ನರ್ ಕಾಣಿಕೆಯಾಗಿ ಕೊಟ್ಟ. ೧೯೫೬ರ ಅವಧಿಯಲ್ಲಿ ಸಂಗ್ರಹಾಲಯದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದ ಚೆಸ್ಟರ್ ಹೇಲ್ ಕೂಡಾ ಹಲವು ಕೃತಿಗಳನ್ನು ಈ ಸಂಗ್ರಹಾಲಯಕ್ಕೆ ಕೊಟ್ಟ.

ಅಮೇರಿಕದ ಸುಪ್ರಸಿದ್ಧ ಕಲಾವಿದರ ಹಲವಾರು ಕೃತಿಗಳು ಇಲ್ಲಿವೆ. ಸುಮಾರು ೭೬೩ ಇಂಥ ಸ್ಥಳೀಯ ಕೃತಿಗಳಿಗೆ ಇಲ್ಲಿ ಅನುಕೂಲ ಪ್ರಾಮುಖ್ಯ ದೊರೆತಿದೆ. ಸುಪ್ರಸಿದ್ಧ ಕಲಾವಿದರಾದ ಗಿಲ್ಬರ್ಟ್ ಸ್ಟುವರ್ಟ್, ಜಾನ್ ಕಾಪ್ಲೆ, ವಿನ್‌ಸ್ಲೋ ಹೋಮರ್, ಜೇಮ್ಸ್ ವಿಸ್ಲರ್, ಮೇರಿ ಕ್ಯಾಸಟ್, ಚೈಲ್ಡ್ ಹಸ್ಸಮ್ ಮುಂತಾದವರ ಕೃತಿಗಳು ಇಲ್ಲಿವೆ.

ಅವರ ಉದ್ಘಾಟನೆಯ ದಿನ ಈ ಸಂಗ್ರಹಾಲಯದಲ್ಲಿದ್ದುದು ಒಟ್ಟು ೫೯೫ ವರ್ಣ ಚಿತ್ರಗಳು; ೬೧ ಶಿಲ್ಪಕೃತಿಗಳು ಇಂದು ಅವುಗಳ ಸಂಖ್ಯೆ ದ್ವಿಗುಣಗೊಂಡಿವೆ: ೯೬೦ ಚಿತ್ರಗಳು, ೨೦೯ ಶಿಲ್ಪಗಳು, ೧,೩೦೬ ಕಂಚಿನ ಪ್ರತಿಮೆಗಳು, ಸುಮಾರು ೮೦೦ ಕ್ಕೂ ಮಿಕ್ಕಿ ಭಿತ್ತಿಚಿತ್ರಗಳು!

ಇಂದು ತಮ್ಮ ದೇಶದ ಪ್ರಾಚೀನ ಕಲಾವಿದರ ಕೃತಿಗಳನ್ನು ಅಭ್ಯಾಸ ಮಾಡಬಯಸುವ ಕಲಾಭ್ಯಾಸಿಗಳು ವಾಷಿಂಗ್‌ಟನ್ನಿನ ಈ ಸಂಗ್ರಹಾಲಯಕ್ಕೆ ಭೇಟಿ ನೀಡದೆ ಅವರ ಅಭ್ಯಾಸ ಪೂರ್ಣವಾಗುವಂತಿಲ್ಲ. ✡

ನಿಮ್ಮ ಶಬ್ದ ಭಾಂಡಾರ ಬೆಳೆಸಿರಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಅರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಶಿರಸ್ತ್ರಾಣ**
(ಅ) ತಲೆಗೆ ತೊಡುವ ಕವಚ (ಆ) ಬುದ್ಧಿಶಕ್ತಿ (ಇ) ತಲೆ ಕಡಿಯುವ ಆಯುಧ (ಈ) ತಲೆಯ ರಕ್ತನಾಳ

೨. **ಹೊತ್ತಾರೆ**
(ಅ) ಸಂಜೆ (ಆ) ಅರ್ಧ ಸಮಯ (ಇ) ನಸುಕು (ಈ) ತಡವಾಗಿ

೩. **ಹ್ರಾಸ**
(ಅ) ಆಶೀರ್ವಾದ (ಆ) ನಾಚಿಕೆ (ಇ) ಕುಂದುವಿಕೆ (ಈ) ಸಂತೋಷ

೪. **ಮೆಲ್ಲು**
(ಅ) ಮೃದು (ಆ) ಎತ್ತರ (ಇ) ಹಿಂಡು (ಈ) ತಿನ್ನು

೫. **ಹ್ರಸ್ವ**
(ಅ) ಚೆನ್ನಾಗಿ ಬೆಳೆದದ್ದು (ಆ) ನೀರಿನ ಹಾಡು (ಇ) ಕೆಟ್ಟುಹೋದ (ಈ) ಕಿರಿದಾದ

೬. **ಗ್ರಹಿಕೆ**
(ಅ) ಎಣಿಕೆ (ಆ) ಚಿಂತನೆ (ಇ) ಮಕ್ಕಳ ಒಂದು ರೋಗ (ಈ) ಗಿರಾಕಿಗಳ ಸಂಘ

೭. **ಸನದು**
(ಅ) ಶನಿಯ ಕಾಟ (ಆ) ಬಂದೂಕಿನ ತುದಿಗೆ ತಗಲಿಸುವ ಅಲಗು (ಇ) ವಾದ್ಯ (ಈ) ಅಧಿಕಾರ ಪತ್ರ

೮. **ಶುಷ್ಕ**
(ಅ) ಮಳೆ ನೀರನ್ನು ಆಶ್ರಯಿಸಿದ ಕೃಷಿ ಭೂಮಿ (ಆ) ಸಂತೋಷ (ಇ) ಚುಚ್ಚುವಿಕೆ (ಈ) ವ್ಯಾಪಾರ

೯. **ವಾದನ**
(ಅ) ಬಾಯಿ (ಆ) ಅನ್ನ (ಇ) ಬಾರಿಸುವಿಕೆ (ಈ) ಜಗಳ

೧೦. **ತತ್ಪರ**
(ಅ) ನಡುಗುವುದು (ಆ) ಒಂದು ವಿಷಯದಲ್ಲಿ ಆಸಕ್ತನಾದ (ಇ) ತಪ್ಪಿಹೋಗುವಿಕೆ (ಈ) ದೇವರು

೧೧. **ತಾತ್ಪರ್ಯ**
(ಅ) ಹೊಟ್ಟೆಕಿಚ್ಚು (ಆ) ವಂಶ (ಇ) ಭಾರ (ಈ) ಅಭಿಪ್ರಾಯ

೧೨. **ನೀಡ**
(ಅ) ಗೂಡು (ಆ) ಉದ್ದವಾದ (ಇ) ನಿಜವಾದ (ಈ) ನೆಟ್ಟಗಿನ

'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ಶಿರಸ್ತ್ರಾಣ** (ಅ) ತಲೆಗೆ ತೊಡುವ ರಕ್ಷಕ ಕವಚ, ಹೆಲ್ಮೆಟ್; ಮುಂಡಾಸು, ರುಮಾಲು. [ಸಂ. ಶಿರಸ್ = ತಲೆ + ತ್ರಾಣ = ರಕ್ಷಿಸುವಿಕೆ]

೨. **ಹೊತ್ತಾರೆ** (ಇ) ನಸುಕು, ಬೆಳಗ್ಗೆ, ಬಹಳ ಬೇಗ. ಹೊತ್ತಾರೆ ಎದ್ದು ಹೊರಟ. [ಹಳೆಗನ್ನಡ, ಪೊಳ್ತರೆ]

೩. **ಹ್ರಾಸ** (ಇ) ಕುಂದುವಿಕೆ, ಕುಗ್ಗುವಿಕೆ, ನಶಿಸುತ್ತ ಹೋಗುವುದು. **ಉದಾ:—** ಸಂಪತ್ತು ಹ್ರಾಸವಾಯಿತು. [ಸಂ.]

೪. **ಮೆಲ್ಲು** (ಈ) ತಿನ್ನು ಸಾವಕಾಶವಾಗಿ ಜಗಿ, ಜಗಿದು ನುಂಗು. **ಉದಾ:—** ವೀಳೆಯ ಮೆಲ್ಲುತ್ತಾಳೆ. [ಕನ್ನಡ]

೫. **ಹ್ರಸ್ವ** (ಈ) ಕಿರಿದಾದ, ಉದ್ದವಲ್ಲದ, ಕುಗ್ಗಿದ; **ಉದಾ:— ಉದಾ:—** ಹ್ರಸ್ವ ಸ್ವರ ಅಂದರೆ ದೀರ್ಘವಲ್ಲದ ಸ್ವರ [ಸಂ. ಹ್ರಸ್ — ಧಾತುವಿನಿಂದ]

೬. **ಗ್ರಹಿಕೆ** (ಅ) ಎಣಿಕೆ, ಅಭಿಪ್ರಾಯ, ತಿಳಿವಳಿಕೆ, ಭಾವನೆ, ತಪ್ಪು ಗ್ರಹಿಕೆಯಿಂದ ಸಿಟ್ಟು ಬಂತು. [ಸಂ. ಗ್ರಹಿಕಾ]

೭. **ಸನೀನು** (ಅ) ಬಂದೂಕಿನ ತುದಿಗೆ ತಗಲಿಸುವ ಅಲಗು, ಬಂದೂಕಿನ ಮೊನೆ. ಉದಾ:— ಸನೀನಿನಿಂದ ತಿವಿದ. [ಫಾರಸಿ — ಸಂಗೀನ್]

೮. **ಕುಷ್ಕಿ** (ಅ) ಮಳೆ ನೀರನ್ನೇ ಕೃಷಿಗೆ ಆಶ್ರಯಿಸಿದ ಭೂಮಿ, ಒಣ ಭೂಮಿ, ಕಾಡಾರಂಬ, ಬೆಟ್ಟು. (ಖುಷ್ಕಿ ಎಂದೂ ಇದೆ) [ಫಾರಸಿ — ಖುಶ್ಕ್ = ಒಣ]

೯. **ವಾದನ** (ಇ) ಬಾಜಿಸುವಿಕೆ, ವಾದ್ಯ ನುಡಿಸುವಿಕೆ, ಬಾಜನೆ. **ಉದಾ:-** ತಬಲಾ ವಾದನ. [ಸಂ.]

೧೦. **ತತ್ಪರ** (ಅ) ಒಂದು ವಿಷಯದಲ್ಲಿ ಆಸಕ್ತನಾದವ; ಅದರಲ್ಲೇ ನಿರತನಾದ, ತೊಡಗಿದ. **ಉದಾ:—** ಕಾರ್ಯತತ್ಪರ, ಅಭ್ಯಾಸ ತತ್ಪರ [ಸಂ. ತತ್ = ಅದು + ಪರ = ಆಸಕ್ತ]

೧೧. **ತಾತ್ಪರ್ಯ** (ಈ) ಅಭಿಪ್ರಾಯ, ಅರ್ಥ, ಉದ್ದೇಶ; ವಿವರಣೆ. **ಉದಾ:—** ಪದ್ಯದ ತಾತ್ಪರ್ಯ. [ಸಂ.]

೧೨. **ನೀಡ** (ಅ) ಗೂಡು, ಹಕ್ಕಿಗಳ ವಸತಿ, ಆಶ್ರಯ ಸ್ಥಾನ. [ಸಂ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

ಕಾಮನಬಿಲ್ಲನ್ನು ಹಿಡಿದ ಸಂಗೀತಗಾರರು

ಪಿಟೀಲು, ಪಿಯಾನೊ ಬಾರಿಸುತ್ತಲೇ ಆ ಸೋದರರಿಬ್ಬರೂ ವಿಜ್ಞಾನ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದರು

ಪಾಂಡುರಂಗ ವಿಟ್ಠಲ

ಹದಿನೈದು ವರ್ಷದ ಇಬ್ಬರು ಹುಡುಗರು [illegible] ಶಾಲೆಯಲ್ಲಿ ಛಾಯಾಗ್ರಾಹಕ ಅವಶ್ಯಕ್ಕೆ [illegible]ಯಾಗಿ ಪ್ರತಿದಿನ [illegible] ನಡೆಯುತ್ತಿದ್ದರು. ಅಮೇರಿಕದ ಖ್ಯಾತ ಪಿಟೀಲುವಾದಕ ಡೇವಿಡ್ ಮ್ಯಾನ್ಸ್ ಹಾಗೂ ಪಿಯಾನೋವಾದಕ ಲಿಯೊಪೋಲ್ಡ್ ಗೊಡೋವ್‌ಸ್ಕಿಯ ಮಕ್ಕಳ ಇಬ್ಬರ ಹೆಸರೂ ಲಿಯೊಪೋಲ್ಡ್ ಎಂದೇ. ವ್ಯತ್ಯಾಸವೆಂದರೆ ಮ್ಯಾನ್ಸ್ ಪಿಯಾನೋವನ್ನು ಬಾರಿಸಿದರೆ ಗೊಡೋವ್‌ಸ್ಕಿ ಪಿಟೀಲನ್ನು ನುಡಿಸುತ್ತಿದ್ದರು. ಸಂಗೀತ ಅವರ ರಕ್ತದಲ್ಲಿತ್ತು. ಫೋಟೊ ತೆಗೆಯುವುದು ಮೆಚ್ಚಿನ ಹವ್ಯಾಸ. ಪ್ರತಿ ಮುಂಜಾನೆ ನಡೆಯುವಾಗ ಚಿತ್ರಗಳ ಬಗ್ಗೆ ಮಾತಾಡುವರು. ಬಣ್ಣಗಳಿಲ್ಲದ [illegible] ಬಿಳುಪು ಚಿತ್ರ ಅವರಿಗೆ ನಿರಾಶೆ ತಂದಿತ್ತು.

ಒಂದು ದಿನ "ನನಗೊಂದು ಯೋಚನೆ ಹೊಳೆದಿದೆ," ಎಂದ ಒಬ್ಬ; "ನನಗೂ ಸ್ಫೂರ್ತಿ ಬಂದಿದೆ," ಎಂದ ಇನ್ನೊಬ್ಬ ಲಿಯೊಪೋಲ್ಡ್. ಬೇರೆಯಾಗಿ ತಮ್ಮ ಯೋಚನೆಗಳನ್ನು ಬರೆದು ತಾಳೆ ನೋಡಲು ಇಬ್ಬರೂ ನಿರ್ಧರಿಸಿದರು. ಮರುದಿನ ಅಚ್ಚರಿಯಾಗುವಂತೆ ಇಬ್ಬರ ಯೋಜನೆಗಳೂ ಒಂದೇ ರೀತಿಯವಾಗಿದ್ದುವು. ಇಬ್ಬರೂ ಬಣ್ಣದ ಚಲನಚಿತ್ರ ತಯಾರಿಕೆಯಲ್ಲಿ ತೊಡಗಲು ನಿರ್ಧರಿಸಿದರು. ಭೌತಶಾಸ್ತ್ರ ಪ್ರಯೋಗಾಲಯದ [illegible] ಹಣವನ್ನು ಹೇಗೋ ಸಂಪಾದಿಸಿ ರಾತ್ರಿಯ ವರೆಗೂ ಅಲ್ಲಿದ್ದ ಉಪಕರಣಗಳನ್ನು ಬಳಸಲು ಆರಂಭಿಸಿದರು. ನಿಜವಾಗಿಯೂ ಅಲ್ಲಿ ಅವರು ಬಣ್ಣದ ಛಾಯಾಚಿತ್ರವೊಂದನ್ನು ಯಾರ ಗಮನಕ್ಕೂ ಬಾರದಂತೆ ತಯಾರಿಸಿದರು! ಮುಂದೆ ಹಲವತ್ತಕ್ಕೂ ಹೆಚ್ಚು ಪೇಟೆಂಟುಗಳನ್ನು ಪಡೆದ[illegible]. ಕೊಡಾಕ್ ಕಂಪನಿಯವರಿಂದ ಖ್ಯಾತಿ, ಧನವನ್ನು ಪಡೆದ ಜೋಡಿಗೆ ಇದು ಸಾಧ್ಯವಾಯಿತು. ಮೊದಲ ಚಿತ್ರ [illegible] ಮೂಲಭೂತವಾದ ಮೂರು ಬಣ್ಣಗಳಿಗೂ ಬೇರೆಬೇರೆಯಾದ ಪದರಗಳು. ಅವನ್ನು ಬೇರೆಯಾಗಿ ಸಂಸ್ಕರಿಸಿ ಮೂರು [illegible]ಗಳಿಂದ ಒಂದೇ [illegible] ಅಷ್ಟು ಒಂದಾಗಿ, ಸಪ್ತವರ್ಣಗಳೂ ಮೂಡುತ್ತಿದ್ದವು.

ಈ ಕೆಲಸವನ್ನು ಆಗಲೆ ಬೇರೆಯವರು ಮಾಡಿದ್ದಾರೆಂದು ತಿಳಿದಾಗ ಹುಡುಗರಿಗೆ ವ್ಯಥೆಯಾಯಿತು. ಆದರೆ ಅವರು ತಮ್ಮ ಪ್ರಯತ್ನವನ್ನು ಮುಂದುವರಿಸಿದರು. ಉಚ್ಚ ಶಿಕ್ಷಣಕ್ಕಾಗಿ ಮೇನ್ಸ್ ಹಾರ್ವರ್ಡಿಗೂ, ಗೊಡೋವ್‌ಸ್ಕಿ ಕ್ಯಾಲಿಫೋರ್ನಿಯಕ್ಕೂ ಹೋದರೂ, ರಜೆಯಲ್ಲಿ ಒಟ್ಟುಗೂಡಿ ಕೆಲಸಮಾಡಿ ಮೂರು ಮೂತಿಯ ಪ್ರೊಜೆಕ್ಟರೊಂದನ್ನು ತಯಾರಿಸಿ, ಪೇಟೆಂಟ್ ಪಡೆದರು. ಆದರೆ ಅದರ ನಿಯಂತ್ರಕಗಳ ಹೆಚ್ಚಳ, ಗಾತ್ರ ಅವರಿಗೇ ಬೇಸರ ತರಿಸಿತು. ಈಗ ಒಂದೇ ಪಟಲದಲ್ಲಿ ಮೂರೂ ವರ್ಣಗಳನ್ನು ತರುವುದು ಅವರ ಗುರಿಯಾಯಿತು.

ಇದು ಪಟಲ ರಸಾಯನ ಶಾಸ್ತ್ರದ ಅಂಗ. ಸಂಗೀತದ ಜತೆ ರಸಾಯನ ಶಾಸ್ತ್ರವನ್ನೂ ಕಲಿಯಲು ಕೆಲ ವರ್ಷ ಹಿಡಿಯಿತು. ೧೯೨೨ರಲ್ಲಿ ಸಂಗೀತ ಶಿಕ್ಷಣ ಪೂರ್ತಿಗೊಳಿಸಿ ಕಚೇರಿಗಳ ಹಾಗೂ 'ಸಂಗೀತ ಮೇಸ್ಟ್ರ' ಕೆಲಸದ ಆದಾಯ ಬಂದ ಮೇಲೆ ಮಾತ್ರ ಮೇನ್ಸ್‌ನ ಅಡುಗೆ ಕೋಣೆಯಲ್ಲಿ ಪಟಲಗಳ ಲೇಪನ, ದ್ರಾವಣಗಳ ಜತೆ ಪ್ರಯೋಗ ನಡೆಸುವ ಅವಕಾಶ ದೊರೆತದ್ದು.

ಒಂದೇ ವರ್ಷದಲ್ಲಿ ವಿಚಿತ್ರವಾಗಿದ್ದ ಬಣ್ಣದ ಚಿತ್ರವೊಂದನ್ನು ತಯಾರಿಸಿಯೇಬಿಟ್ಟರು—ಈ ಸಲ ಎಲ್ಲ ಬಣ್ಣಗಳೂ ಒಂದೇ ಪಟಲದ ಮೇಲೆ ಇದ್ದುವು! ೧೯೦೦ರಿಂದ ವಿಜ್ಞಾನಿಗಳು ಕಾಣುತ್ತಿದ್ದ ಕನಸು ಇವರಿಂದ ನನಸಾಯಿತು. ಅವರನ್ನು ಇನ್ನು ಹಿಡಿಯುವವರಾರು? ಆದರೆ ಹಣದ ಕೊರತೆ. ದ್ರಾವಣಗಳಿಗೆ, ಲೇಪನಗಳಿಗೆ ಅವರು ಸಂಪಾದಿಸುತ್ತಿದ್ದುದಕ್ಕಿಂತ ಹೆಚ್ಚು ಹಣ ಬೇಕಿತ್ತು. ಪಿತ್ರಾರ್ಜಿತ ಆಸ್ತಿಯು, ಉಳಿತಾಯದ ಎಲ್ಲ ಹಣವನ್ನು ಆಗಲೆ ಸುರಿದಾಗಿತ್ತು.

ಅದೃಷ್ಟವಶಾತ್ ಲೆವಿ ಸ್ಟ್ರಾಸ್ ಎಂಬ ಬ್ಯಾಂಕರನ ಪರಿಚಯ ಇವರಿಗಾಯಿತು. ಕಷ್ಟಕ್ಕೆ ಪರಿಹಾರವನ್ನು ಆತ ಸೂಚಿಸಿದ: ತಾವು ಅಡಿಗೆ ಮನೆಯಲ್ಲಿ ಚಿತ್ರ ಸಂಸ್ಕರಿಸುವುದನ್ನು ನೋಡಲೆಂದು ಅವನಿಗೆ ಆಹ್ವಾನವಿತ್ತರು. ಇಬ್ಬರೂ ಆತಂಕ–ಸಡಗರಗಳಿಂದ ಒಳ ಹೊರಗೆ ಓಡಾ



ಹುತ್ತ, ಹೊರಗೆ ಕಾಯುತ್ತ ಕುಳಿತ ಅವನನ್ನು ಪಿಟೀಲು ಪಿಯಾನೋಗಳಿಂದ ರಂಜಿಸುತ್ತ ತಡವಾಗಿ, ಸಂಜೆ ಮೀರಿ ಹೋದರೂ ಬಣ್ಣದ ಚಿತ್ರವೊಂದನ್ನು ಸಂಸ್ಕರಿಸಿ ತೋರಿಸಿದರು. ಸ್ಟ್ರಾಸ್ ಪ್ರಭಾವಿತನಾದ. ಬ್ರಿಟಿಶ್ ಹಣಗಾರ ವೈಸ್‌ಮನ್ ಎಂಬ ಮಿತ್ರನೊಡಗೂಡಿ, ಸಂಗೀತಗಾರರ ಈ ಯೋಜನೆಯಲ್ಲಿ ಹಣ ತೊಡಗಿಸಿದ. ಹೀಗೆ ಲಾಂಡ್ರಿಯಲ್ಲೋ, ಹಾಲಿ ಕಚೇರಿಯಲ್ಲೊ ಅಥವಾ ಇನ್ನೆಲ್ಲೋ ತಮ್ಮ ಕಸದ ರಾಶಿ ಹರಡುವಷ್ಟು ಜಾಗ ಸಿಕ್ಕಲ್ಲಿ—ಭಾನುವಾರಗಳು, ರಾತ್ರಿಗಳಲ್ಲೆಲ್ಲ ಇಬ್ಬರೂ ಪಟಲಗಳನ್ನು, ಬಣ್ಣದ ರಸಾಯನಗಳನ್ನು ಮಿಶ್ರ ಮಾಡುತ್ತ ತೊಳೆಯುತ್ತ ಇರಲು ಸಾಧ್ಯವಾಯಿತು.

ಛಾಯಾಚಿತ್ರ ನಿಷ್ಣಾತರೆನಿಸಿಕೊಂಡವರೆಲ್ಲ, "ಹುಡುಗರಾ, ನೀವು ಸಂಗೀತಗಾರರಾಗುವುದೇ ವಾಸಿ," ಎಂದು ಇವರನ್ನು ದೂರ ಸರಿಸುತ್ತಿದ್ದರು. ಅಷ್ಟರಿಂದಲೇ ಸಂಗೀತವನ್ನು ಇಬ್ಬರೂ ಬಿಡಲಿಲ್ಲ. ಗೋಡೊವ್‌ಸ್ಕಿ ಸಂಗೀತ ಮೇಷ್ಟ್ರಾಗಿದ್ದುದಲ್ಲದೆ ಅಮೇರಿಕ ಯೂರೋಪುಗಳಲ್ಲೆಲ್ಲ ಕಚೇರಿ ನಡೆಸುತ್ತಿದ್ದ. ಮೇನ್ಸ್‌ಗೆ ರಾಗ ಸಂಯೋಜನೆಗಾಗಿ ಪುಲಿಟ್ಜರ್ ಬಹುಮಾನ ಬಂದಿತ್ತಲ್ಲದೆ ರೋಮಿನಲ್ಲಿ ವಿಶೇಷ ಅಭ್ಯಾಸಕ್ಕಾಗಿ ಗುಗೆನ್‌ಹೈಂ ಫೆಲೋಶಿಪ್ ಸಿಕ್ಕಿತ್ತು.

ಅವರ ಸಂಶೋಧನೆಗಳಿಗೆ ಇನ್ನೊಬ್ಬ ಪ್ರೋತ್ಸಾಹಕನೂ ಇದ್ದ— ಈಸ್ಟ್‌ಮನ್ ಕೊಡಕ್ ಕಂಪನಿಯಲ್ಲಿ ಸಂಶೋಧನೆಗಳ ನಿರ್ದೇಶಕನಾಗಿದ್ದ, ಫೋಟೋ ವಿಜ್ಞಾನದ ಇನ್ನೊಂದು ಹೆಸರೆಂದೂ ಅದರ ಜನಕನೆಂದೂ ಪ್ರಖ್ಯಾತನಾಗಿದ್ದ ಡಾ. ಸಿ. ಇ. ಕೆ. ಮೀಸ್. ಈತ 'ಕನಸುಗಾರ ಸಂಗೀತಜ್ಞ'ರ ಈ ಪ್ರಯತ್ನದಲ್ಲಿ ಆಸಕ್ತನಾಗಿ ಆಗೀಗ ಅವರು ಹೇಳಿದ ರಸಾಯನಗಳನ್ನು ಲೇಪಿಸಿದ ಪಟಲಗಳನ್ನು ತಯಾರಿಸಿ ಕಳಿಸುತ್ತಿದ್ದ.

ಕೊನೆಗೆ ಕೋಡಕ್ ಕಂಪನಿಯ ಸಂಶೋಧನ ವಿಭಾಗ ಸೇರಲು ಅವರಿಗೆ ಕರೆ ಬಂತು. ಸೇರಿದರೆ, ಅವರು ಸಂಗೀತ ವೃತ್ತಿ ತೊರೆದಂತೆ, ಪೇಟೆಂಟುಗಳಿಂದ ಬರಬಹುದಾದ ಆದಾಯ ನಿಂತಂತೆ. ಸಂಶೋಧಕರಾಗಿ ಅವರು ಸುಸಜ್ಜಿತ ಪ್ರಯೋಗಾಲಯ, ಸಹಾಯಕರುಗಳಿಲ್ಲದೆ ಎಷ್ಟು ಮುಂದುವರೆಯಬಹುದೋ ಅಷ್ಟು ಪ್ರಗತಿ ಸಾಧಿಸಿದ್ದರು. ಹೆಚ್ಚು ಸಂಬಳ, ಜತೆಗೆ ಪಡೆಯುವ ಪೇಟೆಂಟುಗಳ ಗೌರವದಲ್ಲಿ ನ್ಯಾಯಯುತ ಭಾಗವನ್ನು ಕಂಪನಿ ಕೊಡಲು ಮುಂದೆ ಬಂದಾಗ ಒಪ್ಪಿದರು.

ಈ ಎಳೆಯ ಸಂಗೀತಗಾರರು ಭಾರೀ ವಿಜ್ಞಾನಿಗಳ ನಡುವೆ ಸೇರಿದಾಗ ಬೇಕಷ್ಟು ತಮಾಷೆ ನಡೆಯಿತು. ಅದರಲ್ಲೂ ಕತ್ತಲು ಕೋಣೆಯಲ್ಲಿ ಪಟಲ ಸಂಸ್ಕರಿಸುವ ಉಚಿತ ಕಾಲವನ್ನು ಗುರುತಿಸಿಕೊಳ್ಳಲು ಅವರಿಬ್ಬರೂ ಷೂಬರ್ಟನ ಮಾರ್ಚ್ ಮಿಲಿಟೈರ್ ಅಥವಾ ಚಾಯ್‌ಕೊವ್‌ಸ್ಕಿಯ ಸಿಂಫೊನಿ ಪ್ಯಾಥೆಟಿಕ್‌ನ ಭಾಗಗಳನ್ನು ಹಾಡಿಕೊಳ್ಳುವುದು ತುಂಬ ನಗೆ ತರಿಸುತ್ತಿತ್ತು. ಪೂರ್ಣ ಕತ್ತಲಲ್ಲಿ ಅಲ್ಪ ಕಾಲವನ್ನು, ಸರಿಯಾಗಿ ಗುರುತಿಸಲು ಅತಿ ಸುಲಭವಾದ ವಿಧಾನ ಇದೇ ಎಂದು ಅವರಿಬ್ಬರೂ ದೃಢವಾಗಿ ಹೇಳುತ್ತಿದ್ದರು.

ಯುದ್ಧಕಾಲದ ಆರ್ಥಿಕ ಹಿಂಜರಿತದಿಂದಾಗಿ ಕಂಪನಿ ತನ್ನ ಹೆಚ್ಚುವರಿ ಯೋಜನೆಗಳನ್ನು ಕಡಿತಗೊಳಿಸುವಾಗ ಅಪನಂಬಿಕೆಯ ಮಧ್ಯೆ ಡಾ. ಮೀಸ್ ಇವರಿಬ್ಬರ ಸಂಶೋಧನೆಯು ತುಂಬ ಬೆಲೆಯುಳ್ಳದ್ದೆಂದು ಹೇಳಿ ರಕ್ಷಿಸಬೇಕಾಯಿತು. ೧೯೩೦ರ ಹೊತ್ತಿಗಂತೂ ಕಂಪನಿಯವರಿಗೆ ಇವರ ಕೆಲಸದ ಉಪಯುಕ್ತತೆಯನ್ನು ಮನಗಾಣಿಸಿಕೊಡಲು ಸಾಕು ಬೇಕಾಯ್ತು.

ಆಗ ನಿಜಕ್ಕೂ ಕೆಲಸ ಮಾಡಬಹುದೆಂದು ತಾವು ತಿಳಿದಿದ್ದ ಯೋಜನೆಗಳನ್ನೆಲ್ಲ ಸಂಗ್ರಹಿಸಿ ಒಂದು ಕರಡು ಯೋಜನೆ ಸಿದ್ಧಗೊಳಿಸಿದರು. ಅದೇ ಛಾಯಾಚಿತ್ರದ ಇತಿಹಾಸದಲ್ಲೇ ಮೈಲುಗಲ್ಲೆಂದು ಎಲ್ಲರೂ ತಿಳಿಯುವ ಕೊಡಾಕ್ರೋಂ ಪಟಲದ ಯೋಜನೆ.

ಈ ಸಂಶೋಧನೆಯ ಪ್ರಾಯೋಗಿಕ ಮೌಲ್ಯ ನೀವು ತೀರಾ ಸಾಮಾನ್ಯ ಉಪಕರಣಗಳಲ್ಲೇ ಒಂದೇ ಪಟಲವನ್ನುಪಯೋಗಿಸಿ ಬಣ್ಣದ ಚಿತ್ರ ತೆಗೆಯಬಹುದು ಎಂಬುದರಲ್ಲಿದೆ. ಪಟಲವೂ ಸಾಮಾನವಾದ ಕಪ್ಪು ಬಿಳುಪು ಫಿಲ್ಮಿನಂತೆಯೆ ತೋರ್ಕ್ಯ





ತ್ತದೆ. ಆದರೆ ನಿಜವಾಗಿ, ಅದು ಅತಿ ಸಂಕೀರ್ಣ ವಸ್ತುಗಳಲ್ಲೊಂದು. 'ಆಧಾರ' ಮತ್ತು 'ಗೋಡೆ'ಗಳ ಪದರಗಳ ನಡುವೆ ಅದರಲ್ಲಿ ಮೂರು ಬೇರೆ ಬೇರೆಯಾದ ರಾಸಾಯನಿಕ ಲೇಪನಗಳ ಪದರಗಳಿವೆ. ಅವು ಭಿನ್ನ ವರ್ಣಗಳಿಗೆ ಪ್ರತ್ಯೇಕವಾಗಿ ಸಂವೇದಿಸುತ್ತವೆ. ಅವನ್ನು ಜೆಲಟಿನ್ನಿನ ಪದರಗಳು ಬೇರ್ಪಡಿಸಿವೆ. ಮಾನ್ಸ್ ಅವನ್ನು ಪದರಗಳುಳ್ಳ ಕೇಕ್‌ಗೆ ಹೋಲಿಸುತ್ತಾನೆ. ಅಚ್ಚರಿಯೆಂದರೆ ಈ ಪದರಗಳ ದಪ್ಪ ಅಂಗುಲದ ಹತ್ತು ಸಾವಿರದೊಂದು ಅಂಶ ಮಾತ್ರ!

ಕೆಳ ತಳದ ಪದರ ಕೆಂಪು ಬೆಳಕಿಗೆ, ಮಧ್ಯದ್ದು ಹಸುರಿಗೆ, ಮೇಲಿನದು ನೀಲಿಗೆ ವರ್ತನೆ ತೋರುವವು. ಈ ಬಣ್ಣಗಳೆಲ್ಲ ಭಿನ್ನವಾಗಿದ್ದು ಒಂದಾಗಿ ಪ್ರಕೃತಿ ಹಾಗೂ ಕಲೆಯ ಎಲ್ಲ ಮಿಶ್ರವರ್ಣಗಳೂ ಕಾಣುವಂತೆ ಸಂಸ್ಕರಿಸಲು ಬೇರೆ ಬೇರೆಯಾದ ಇಪ್ಪತ್ತೆಂಟು ಸಂಸ್ಕಾರಗಳಿಗೆ ಪಟಲವನ್ನು ಒಡ್ಡಬೇಕಿತ್ತು. (ಈಗ ೧೫ ಸಂಸ್ಕಾರಗಳು ಸಾಕು. ಹವಾ ನಿಯಂತ್ರಿತ ಪ್ರಯೋಗಾಲಯದಲ್ಲಿ ಸಂಸ್ಕಾರ ನಡೆಸಬೇಕಾದುದಿಲ್ಲ. ಮನೆಯಲ್ಲೇ ನೀವೇ ಸಂಸ್ಕರಿಸಿಕೊಳ್ಳಬಹುದಾದ ಪಟಲಗಳು, ರಾಸಾಯನಿಕಗಳೂ ಇವೆ.) ಪ್ರತಿ ಪದರನ್ನು ಪ್ರತ್ಯೇಕವಾಗಿ ಋಣಸ್ಥಿತಿಯಿಂದ ಧನಸ್ಥಿತಿಗೆ ತರಬೇಕಿತ್ತು. ಉಳಿದೆರಡು ಪದರಗಳೊಡನೆ ವರ್ತಿಸದ, ಒಂದೇ ಪದರದಲ್ಲಿ ಪ್ರತ್ಯೇಕ ವರ್ಣ ದ್ರವ್ಯವನ್ನುಂಟು ಮಾಡುವ ರಾಸಾಯನಿಕಗಳನ್ನು ಸಂಸ್ಕರಣಗಳಲ್ಲಿ ಬಳಸಬೇಕಿತ್ತು. ಕೊನೆಯಲ್ಲಿ ಈ ವರ್ಣದ್ರವ್ಯಗಳೆಲ್ಲ ಮೂಲತಃ ಹಿಡಿದಿದ್ದ ಕೆಂಪು–ಹಸಿರು–ನೀಲಿ ವರ್ಣ ಸಂಯೋಜನೆಯನ್ನೇ ಪ್ರತಿಬಿಂಬಿಸಬೇಕಿತ್ತು. ಇದು ಕ್ಲಿಷ್ಟ ವರ್ಣ ನಿಯೋಜಿಸಿದರೆ ಊಹಿಸಿ – ಅಂಗುಲದ ೫/೧೦೦೦೦ ಅಂಶದ ಅವಕಾಶದಲ್ಲಿ ಈ ಕ್ರಿಯೆ ನಡೆಯಬೇಕಿತ್ತು!

ಕೊಡಾಕ್ರೋಂ ಉತ್ಪಾದನೆಯ ಸಂಭ್ರಮದ ದಿನವನ್ನು ಆಚರಿಸಲು ನಡೆದ ಸಮಾರಂಭದಲ್ಲಿ ಇಬ್ಬರು ಲಿಯೋಪಾಲ್ಡರೂ ಅತ್ಯದ್ಭುತವಾದ ಪಿಯಾನೋ–ಪಿಟೀಲು ಜುಗಲ್‌ಬಂದಿ ಕಛೇರಿ ನೀಡಿದರು. ಮತ್ತೆ ಮತ್ತೆ ವರ್ಣಚಿತ್ರಗಳನ್ನು ಪ್ರದರ್ಶಿಸಿದರು! ಕಲೆ ಮತ್ತು ವಿಜ್ಞಾನದ ಐಕ್ಯವನ್ನು ಇದಕ್ಕಿಂತ ಗಾಢವಾಗಿ ಯಾರೂ ತೋರಿಸಿ ಕೊಟ್ಟಿರಲಿಲ್ಲ.

ಮುಂದಿನೆರಡು ಕೆಲ ವರ್ಷ ಇಬ್ಬರೂ ಕೊಡಾಕ್ ಕಂಪನಿಯಲ್ಲಿ ಸಂಶೋಧನೆ ನಡೆಸಿ, ೧೬ ಮಿಲಿ ಮೀಟರ್ ಕೊಡಾ–ಸ್ಲೈಡುಗಳು, ಪ್ರಿಂಟುಗಳು, ಕೊಡಾಕಲರ್ ಹಾಗೂ ಎಕ್ಟಕ್ರೋಂ ಉತ್ಪನ್ನದಲ್ಲಿ ಸಹಕರಿಸಿದರು. ಅನಂತರ ಗೊಡೊವ್ಸ್ಕಿ ನ್ಯೂಯಾರ್ಕಿನಲ್ಲಿ ವರ್ಣ ಸಂಸ್ಕರಣಾಲಯ ಸ್ಥಾಪಿಸಿದ. ಮಾನ್ಸ್ ಕಂಪನಿಯ ಸಂಶೋಧನಾಲಯದ ಜತೆಗೆ ಮ್ಯೂಸಿಕ್ ... ಕೊನೆ ... ಸ್ಥಾಪಿಸಿ ... ಸಂಗೀತ ನಿರ್ದೇಶಕ ನಾದ.

(ತುಂಬ ಒಂದೆ 'ಕ್ರಿಶ್ಚಿಯನ್ ಸೈನ್ಸ್ ಮಾನಿಟರ್'ನಲ್ಲಿ ಪ್ರಕಟವಾದ ಮ್ಯಾಕ್ಸ್ ಈಸ್ಟ್‌ಮನ್‌ನ ಲೇಖನವೊಂದರ ಸಂಗ್ರಹಾನುವಾದ)

ವ್ಯಾಸವಲ್ಲಿ-ತಪನಸ್ತ್ರ



ವಾಸವಪಾಲಿ – ತಪಗುಪ್ತ



ಮೇ ಸಂಚಿಕೆಯಿಂದ ಮುಂದುವರಿಯುತ್ತಿರುವ ಶ್ರೀ ಅಶ್ವತ್ಥರ ನೀಳ್ಗತೆಯ ಎರಡನೆಯ ಹಾಗೂ ಕೊನೆಯ ಭಾಗ

ಭಾಗ-೨

ನಾಷ್ಟ ಪಹಾರಕ್ಕೆ ಹಿಂದಿರುಗಿ ವೀಳ್ಯದೆಲೆ, ಸುಣ್ಣ, ಕತ್ಥ, ಮಸಾಲೆ ಅಡಕೆಗಳ ಪಾನ ಸವಿಯುತ್ತಿದ್ದಾಗ ನಾನು ದಾದಾಜಿಗೆ ಮುಂದಿನ ಕಥಾಭಾಗದ ನೆನಪು ಕೊಟ್ಟೆ. ಈವರೆಗೆ ನನ್ನನ್ನು ಬಹಳ ಹೊಂದಿಕೊಂಡಿದ್ದ ವಾಸವಪಾಲಿತಾ ನನ್ನ ತೊಡೆಗೆ ತಲೆಯಿಟ್ಟು ಮಲಗಿದ್ದರೆ ತಪನ್ ನನ್ನನ್ನು ಒರಗಿಕೊಂಡು ಕುಳಿತಿದ್ದ. ಹಾಸಿಗೆ ಹಾಸಿ ಬಂದಿದ್ದ ಪಿತಾಜಿ ಅವರಿಬ್ಬರನ್ನೂ ಮಲಗಲು ಕರೆದುಕೊಂಡು ಹೋದ. ದಾದಾಜಿ ಕಥೆಯನ್ನು ಮುಂದುವರಿಸಿದರು.

"ಹ್ಞ, ತಪಗುಪ್ತ ಪುರಭ್ರಷ್ಟನಾದನಲ್ಲ. ಅನಂತರ ಅವನು ಅದೆಷ್ಟೋ ಕಾಲ ಉನ್ಮಾದಕ್ಕೊಳಗಾದ. ವಸಂತಿ ಸ್ಥಳ, ವಸ್ತ್ರ, ಆಹಾರ, ನಿದ್ರಾದಿಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ. ಗೊತ್ತು ಗುರಿಯಿಲ್ಲದೆ, ಎಲ್ಲೆಲ್ಲಿಯೋ ಸಂಚರಿಸುತ್ತಿದ್ದ. ಯಾವ ಗ್ರಾಮವೋ ಯಾವ ನಗರವೋ, ಬೀದಿಯೋ ಸಂದಿಗೊಂದಿಗಳೋ, ಬಯಲೋ ಬೆಟ್ಟ ಗುಡ್ಡಗಳೋ, ವನಾಂತರವೋ ಎಲ್ಲಾದರೇನು ವಿಹಾರ. ಸಿಕ್ಕ ಹಣ್ಣು-ಹಂಪಲೋ, ಗಡ್ಡೆ ಗೆಣಸುಗಳೋ, ಯಾರು ಏನು ಕೊಟ್ಟರೆ ಅದೇ ಆಹಾರ. ವಸ್ತ್ರಗಳು ಮಲಿನವಾಗಿ, ಜೀರ್ಣವಾಗಿ ಚಿಂದಿ ಚಿಂದಿಯಾಗಿದ್ದಾಗ ಯಾರಾದರೂ ಕನಿಕರದಿಂದ ದಯಪಾಲಿಸಿದ ಹಳೆಯ ವಸ್ತ್ರ ಮಾತ್ರ ದೇಹ ಮುಚ್ಚುತ್ತಿತ್ತು. ದೇಹ ವಸ್ತ್ರ ವಾಸನೆ ಸಹಿಸಲಾರದಾದಾಗ ಕಂಡ ಜಲದಲ್ಲಿ ಅಷ್ಟು ಮುಳುಗು ಸ್ವಚ್ಛ. ರಾತ್ರಿಯಾದಾಗ, ಆಯಾಸ ವಿಪರೀತವಾದಾಗ, ಎಲ್ಲೆಂದರಲ್ಲಿ ಹುಲ್ಲಿನ ಮೇಲೊ, ಕಲ್ಲಿನ ಮೇಲೋ, ಮರದ ಕೆಳಗೋ, ಆಕಾಶದ ಕೆಳಗೋ, ಯಾವ ಹಾಳು ಮಂಟಪದ್ದೋ, ಯಾರ ಜಗಲಿಯ ಮೇಲೊ, ನಿದ್ರೆ–ಹೊರಳು ನಿದ್ರೆ, ಸ್ವಪ್ನ ನಿದ್ರೆ, ಎಚ್ಚೆಚ್ಚರ ನಿದ್ರೆ. ಈ ಜೀವನವೇ ಸಾಲದೆನ್ನುವಂತೆ, ಅದರ ಮಧ್ಯದಲ್ಲಿ, ಘಳಿಗೆ ಘಳಿಗೆಗೂ ಏಕೆ, ನಿರಂತರವೂ ಎನ್ನುವಂತೆಯೋ, ವಾಸವಪಾಲಿಯ ವಿರಹಸ್ಮರಣೆ ಶೂಲಾಘಾತ ಯಾತನೆ.

"ಅವಳು–ಆ [illegible] ರಾತ್ರಿ–ಪ್ರಥಮ [illegible] ದಾದಾಗ ಅವನ ಹೃದಯ ಹಾರಿ ಬಂದಾಗಿನ ಆನಂದ, ಪುಳಕಿತ [illegible]. ಅವನನ್ನು [illegible] ಇರಬೇಕೆಂದು ಆಗುತ್ತಿದ್ದ [illegible] ಆಕಾಂಕ್ಷೆಯಲ್ಲಿ [illegible]

ಸೋಲು. ಅನಂತರ ನಿತ್ಯ ನೃತ್ಯ ಪಾಠದಲ್ಲಿ ತನ್ನ, ಅವಳ ತೀವ್ರ ಆಸಕ್ತಿ. ವಾಗ್ ವಿನಿಮಯ ಚಾಪಲ್ಯ, ಸ್ಪರ್ಶಸುಖ, ಥಳಕಿಸಲೆ ರೋಮಾಂಚ. ಕಾಮಾಂಕುರ, ಕಾಮ ವೃದ್ಧಿಸಿ ಪರ್ವತಾಕಾರ, ಲೋಕ ವಿಸ್ತಾರ, ಕಾಮ ಭಾಗಶಃ ಪೂರ್ಣವಾಗಿ ಸ್ನೇಹ, ಸ್ನೇಹ ಮಾಗಿ ಪ್ರೇಮ ಫಲ. ಬೀಜ ರೂಪದ ಕಾಮದಿಂದ ಬಂದ ಪ್ರೇಮ ಫಲದಲ್ಲಿಯೂ ಮತ್ತೆ ಕಾಮ ಬೀಜ!... ಕಡೆಗೇನು? ಕಾಮಮುಖಿ ಭಾಗ್ಯವನ್ನೇ ಸರಿಯೇನೋ, ಯಾರಿಗೆ ಗೊತ್ತು!

“ಅನಂತರ ಅವರ ಸೂಚ್ಯ ಮಾತುಕತೆ ಪರಸ್ಪರ ಕಾಪ್ರೇಮ ಅಂದರೆ, ಕಾಮಪ್ರೇಮ ಅಂತರಂಗ ರಹಸ್ಯ ಬಹಿರಂಗ, ಸಮ್ಮತಿ, ವಾಗ್ದಾನ, ವಿವಾಹ ಯತ್ನ, ಆತಂಕ, ಅಗ್ನಿ, ಪಂಚಾಯಿತ–ಕ್ರೂರ ದುರಂತ ಫಲಿತಾಂಶ. ಈ ಸಂದರ್ಭಗಳು ಒಂದೊಂದಾಗಿ, ಮಿಶ್ರಿತವಾಗಿ, ಒಟ್ಟಾಗಿಯೂ ಬರುತ್ತಲೇ ಇದ್ದವು. ಚುಚ್ಚಿ ಇರಿದು, ಸೀಳಿ, ಹೃದಯ ರಕ್ತವನ್ನು ಸುರಿಸುತ್ತಿದ್ದುವು, ಚಿತ್ರಹಿಂಸೆಯನ್ನು ಕೊಡುತ್ತಿದ್ದವು. ಸಿಹಿಯಾದ ನೆನಪುಗಳು ಕಹಿಯಾಗುತ್ತಿದ್ದವು. ಸಿಹಿಯೋ ಕಹಿಯೋ ನಲಿವೋ ನೋವೋ ಅಂತೂ ನಿರಂತರವೂ ಅವಳದೇ ಧ್ಯಾನ, ಅವಳದೇ ಸ್ವಪ್ನ, ಅನಂತಾನಂತ ಆಸೆ, ನಿರಾಸೆ.

“ದಿನದಲ್ಲಿ ಅದೆಷ್ಟು ಬಾರಿ ಕೇಳಿಕೊಳ್ಳುತ್ತಿದ್ದೆನೋ: ‘ನಾನೇನು ತಪ್ಪು ಮಾಡಿದೆನೆ? ಅವಳನ್ನು ಕಂಡು? ಪರಿಚಯ ಬೆಳೆಸಿಕೊಂಡು? ಕಾಮಿಸಿ? ಪ್ರೇಮಿಸಿ..? ವಿವಾಹ ಸೂಚಿಸಿ ವಿವಾಹವಿಲ್ಲದೆಯೇ–ಥೂ ಯೋಚಿಸಲೂ ನಾಚಿಕೆ! ಅಪರಾಧ! ರಹಸ್ಯ ವಿವಾಹ? ಗಾಂಧರ್ವ ವಿಧಿ? ಊಹುಂ, ಉಚಿತವಲ್ಲ. ನಾವು ಮಾಡಿದ್ದುದೇ ಸರಿಯಾಯಿತು. ಆದರೆ ಅದು ಹಿಡಿದ ದಾರಿ? ಫಲಿತಾಂಶ? ಛೆ! ಛೆ! ಛೇ! ಹೇಗಾಯಿತು...ಅಲ್ಲಿ, ಆ ವಿಚಿತ್ರ ಅನೀತಿ ತೀರ್ಮಾನವನ್ನು ವಿರೋಧಿಸಿ ತಪ್ಪು ಮಾಡಿದೆನೆ? ಹೇಗೆ! ಹೇಗೆ! ಇಲ್ಲ ವಿರೋಧಿಸಿದ್ದುದೇ ಸರಿ. ಆದರೆ ಅದರಿಂದ ಆದದ್ದು ಪುರಭ್ರಷ್ಟ! ಅವಳನ್ನು ನೋಡುವಂತಿಲ್ಲ. ಅವಳ ಹತ್ತಿರ ಹೋಗುವಂತಿಲ್ಲ. ದೂರ ದೂರ ಇಬ್ಬರೂ. ಸಹಿಸಲಾರದ ದೂರ!...ಕ್ಷಮೆ ಬೇಡಿದ್ದರೆ ಅವಳು [illegible]

ಅಲ್ಲಿಯೇ ಇರಗೊಡಿಸುತ್ತಿದ್ದ. ಈಗ ಈ ಘೋರ [illegible] ಇಲ್ಲಿ ಅನ್ನ ನೀರಿಲ್ಲದೆ ನೆತ್ತಿ ಬಿಸಿಲಿನ ಧಗೆಯಲ್ಲಿ ಬೇಯುತ್ತಿರುವ ಬದಲು, ಅವಳಿಗಾಗಿ ವೃಥಾ ಹಂಬಲಿಸುವ ಬದಲು ಅವಳ ಮನೆಯಲ್ಲಿ, ನೆರಳಿನಲ್ಲಿ, ತುಂಬಿದ ಹೊಟ್ಟೆಯಿಂದ, ಶ್ರೇಷ್ಠ ವಸ್ತ್ರ ಭೂಷಿತನಾಗಿ ಪರಿಮಳ [illegible]. ಪಲ್ಲಂಗದ ಮೇಲೆ, ಅವಳೊಡನೆ ಸರಸ ಸಲ್ಲಾಪ ಇನ್ನೂ ವಿಧವಿಧ ಸರ್ವವಿಧ ಸ್ವೇಚ್ಛಾ ವೃತ್ತಿ – ಓ ತಪ್ಪು ಮಾಡಿದೆನೆ ಸತ್ಯವಾ..? ಆ? ಅವಳು ಹೇಳಿದ್ದಳಲ್ಲ, ಹಾಗೆ [illegible] ಹಂಚಿಕೊಳ್ಳಲು ಒಪ್ಪಿಕೊಂಡಿದ್ದರೆ ನನಗೇನು [illegible]ಯಾಗುತ್ತಿತ್ತು? ಏನೂ ಇಲ್ಲ ಇಲ್ಲ...ಅ–ಹಂಚಿಕೊಳ್ಳುವುದೆ? ಅವಳನ್ನು! ಅದೂ ಅವಳನ್ನು! ಎಂದಿಗೂ ಇಲ್ಲ! ಹಂಚಿಕೊಳ್ಳುವ ಪ್ರಶ್ನೆಯೇ ಇಲ್ಲ. ಅವಳು ನನ್ನವಳು! ಪೂರ್ಣವಾಗಿ ನನ್ನವಳು [illegible] ಬೇಕು! ಅಹುದು! ನಾನು ಮಾಡಿದ್ದುದು ತಪ್ಪಲ್ಲ! ಅಲ್ಲ! ಅದು ಸರಿ, ಆದರಿಂದ- ನನ್ನ ಹಟದಿಂದ ಆದದ್ದೇನು?...ಅವಳು ಅಲ್ಲಿ ದೂರದಲ್ಲಿ! ಪುರವಧು! ಒಪ್ಪಿಕೊಂಡು ಬಿಟ್ಟಿದ್ದಾಳೆ – ಆ..ಬಿಟ್ಟಿದ್ದಾಳೆ – ಅಯ್ಯೋ! ಅಯ್ಯೊ!...ನಾನಿಲ್ಲಿ ಹೀಗೆ! ಏನು ಲಾಭ ನನಗೆ! ಯಾರಿಗೆ ಪ್ರೀತಿ! ಯಾವ ದೇವರಿಗೆ ಪ್ರೀತಿ ಯಾರಿಗೆ ಹಿತ? ಇತರರಿಗೆ? ಅವಳಿಗೂ? ಏನೋ ಕಾಣೆ. ನನಗಂತೂ ಇಲ್ಲ, ಏನೂ ಇಲ್ಲ...ಸರಿಯಾಯಿತೆ? ತಪ್ಪೆ? ಅವಿಚಾರವೆ? ಮೂರ್ಖತನವೆ? ...ಇಲ್ಲ, ಇಲ್ಲ! ಸರಿ ಸರಿ! ಅವಳು ನನಗೇ ಬೇಕು. ಪೂರ್ಣವಾಗಿ ಬೇಕು. ಪಡೆಯುತ್ತೇನೆ ಹಾಗೆಯೇ, ಇಂದಲ್ಲ ನಾಳೆ!...ನಾಳೆ? ಎಂದು ಆ ನಾಳೆ? ಅಲ್ಲಿಯವರೆಗೆ?...’ ”ದಾದಾಜಿ ಆವೇಶಭರಿತರಾಗಿ ಕಥೆ ಹೇಳುತ್ತಿದ್ದರು.

“ದಾದಾಜಿ, ತಾವು ಆತನೆ, ಆ ಹಿಂದಿನ ತಪಗುಪ್ತನೆ ಆಗಿ ಬಿಟ್ಟಿರಲ್ಲ?” ನಾನು ನಸುನಗುತ್ತ ಹೇಳಿದೆ.

“ಓ ಅಹುದಲ್ಲವೆ?...ಆಶ್ಚರ್ಯವೇನಿಲ್ಲ ಆತ, ನಾನು ಇಬ್ಬರೂ ಒಂದೇ ವಂಶದವರು, ಅಲ್ಲವೆ, ನಿಮಗೆ ತಿಳಿದಂತೆ. ಆತನ ಸ್ಪಿರಿಟ್–ಚೈತನ್ಯ [illegible]– ನನ್ನಲ್ಲಿಯೂ ಹರಿಯುತ್ತಿರಬಹುದಲ್ಲ?”

“[illegible]

ಆತ್ಮವನ್ನಂತೂ ಪ್ರವೇಶಿಸಿದ್ದರು. ಅಲ್ಲಿಂದ ತಮ್ಮನ್ನು ಬಿಡಲು ತಯಾರಾಗಿತ್ತು. ಆದರೆ ಕಥೆ ಸಾಗಬೇಕಲ್ಲ."

"ಅದು ಸರಿ. ತಪ್ಪು [illegible] ಒಳ್ಳೆಯ [illegible]. ಭಾವನೆ ಒಂದು [illegible]. [illegible] ಒಂದಾಗಿ ಬರುವುದು ಕಷ್ಟ...ಮುಂದೆ ಹೋಗೋಣ.

"ಹೀಗೆ ಅವನು ಅಲೆಯುತ್ತ [illegible] ದಾರಿಯಲ್ಲಿ ಸಾಗುತ್ತ ಸಾಗುತ್ತ ನವೆಯುತ್ತಿದ್ದ. ಅವನ ಸಮಸ್ಯೆಗೆ ಮಾತ್ರ ಪರಿಹಾರ ದೊರಕಿರಲಿಲ್ಲ. ವರ್ಷದ ಮೇಲೆ ವರ್ಷ ಕಳೆಯುತ್ತಿತ್ತು. ಎಷ್ಟೋ ಕಾಲದ ಮೇಲೆ ಒಂದು ದಿನ ರಾಜಗೃಹ ನಗರದ [illegible]–ಹೊರ ವಲಯದಲ್ಲಿ ನಡೆಯುತ್ತಿದ್ದಾಗ ಒಂದು ವಿಶಾಲ ವಟ ವೃಕ್ಷದ ಕೆಳಗೆ ಜನರ ಗುಂಪೊಂದು ಕುಳಿತಿದ್ದುದನ್ನು ಕಂಡ. ಅಲ್ಲಿ ಬಿಳಿ [illegible] ಕಾಷಾಯಧಾರಿ ಭಿಕ್ಕು ಪ್ರವಚನ ನಡೆಸುತ್ತಿದ್ದ. ಅಲ್ಲಿ ಹಾಯುತ್ತಿದ್ದ ತಪಗುಪ್ತನ ಕಿವಿಗೆ ಅಸ್ಪಷ್ಟ ಮಾತು [illegible] ಕೇಳಿದಾಗ [illegible] ಅಲ್ಲಿಯೇ ನಿಂತುಕೊಂಡ. ನಿಜ. ಆ ಭಿಕ್ಕು ಅಂದು 'ಆಸೆಯೇ ದುಃಖದ ಮೂಲ' ಎಂಬ ಬುದ್ಧ ತತ್ವ ವೊಂದರ ಮೇಲೆಯೆ ಮಾತಾಡುತ್ತಿದ್ದ. ಹಲವು ನಿದರ್ಶನಗಳ ಮೂಲಕ ವಿವರಿಸುತ್ತಿದ್ದ, ಸಮರ್ಥಿಸುತ್ತಿದ್ದ. ಕೇಳುತ್ತ ಕೇಳುತ್ತ ತಪಗುಪ್ತನಿಗೆ ಅಂತ್ಯ ಕಾಣದ ರಾತ್ರಿ ಗಾಢಾಂಧಕಾರ ಗವಿಮಾರ್ಗದ [illegible] ಮಿಂಚಿದಂತಾಯಿತು. ಆ ಸಭೆಯಲ್ಲಿ ಕುಳಿತುಕೊಂಡ. ಪ್ರವಚನ ಅಂತ್ಯಗೊಂಡಾಗ ತಪಗುಪ್ತನಿಗೆ ತಲೆಯ ಮೇಲಿನ ಭಾರ ಸ್ವಲ್ಪ ಹಗುರವಾದ ಅನುಭವವಾಯಿತು.

"ಸಭೆ ವಿಸರ್ಜಿತವಾಗಿ ಜನರು ಹೊರಟು ಹೋಗಿ ಆ ಭಿಕ್ಕು ಹಾಗೂ ಅವನ ಸಂಗಡಿಗ ಭಿಕ್ಕುಗಳು ಮಾತ್ರ ಉಳಿದಾಗ ತಪಗುಪ್ತ ಆತನ ಸಮೀಪಕ್ಕೆ ಹೋಗಿ ಬಾಗಿ ನಮಸ್ಕರಿಸಿ, 'ಭಗವನ್ ನಾನೊಬ್ಬ ಅದೃಷ್ಟಹೀನ. ಜೀವನದಲ್ಲಿ [illegible] ಕಳೆದು ಕೊಂಡಿದ್ದೇನೆ, ನೊಂದಿದ್ದೇನೆ, ದಿಕ್ಕೆಟ್ಟು ಅಲೆಯುತ್ತಿದ್ದೇನೆ. ದುಃಖಾರ್ತನಾಗಿದ್ದೇನೆ. ತಮ್ಮ ಪ್ರವಚನ ಕೇಳಿ ನನಗೆ, ಮರಳುಗಾಡಿನಲ್ಲಿ ನಡೆದು ನಡೆದು, ಸೋತು ಅತಿ ದಾಹದಿಂದ ತಹತಹಪಡುತ್ತಿರುವ ಒಂಟಿ ಪ್ರಯಾಣಿಕನಿಗೆ ಒಮ್ಮೆಲೇ ಚಿಲುಮೆ ಯೊಂದನ್ನು ಕಂಡಂತಾಯಿತು. ಸ್ವಾಮಿನ್, ಆಸೆಯೇ ದುಃಖದ ಮೂಲವಾಗಿದ್ದರೆ ಹಾಗಾದರೆ ಬೇಕೆಂದನ್ನುವವನಿಗೆ ಆಸೆಯನ್ನು ತೊರೆಯುವ ಮಾರ್ಗ ಯಾವುದು? ನನ್ನ ಮೇಲೆ ಕರುಣೆಯಿಟ್ಟು ತಿಳಿಯಹೇಳಬೇಕು, ಎಂದು ಪ್ರಾರ್ಥಿಸಿಕೊಂಡ.

"ಅದಕ್ಕೆ ಆ ಭಿಕ್ಕು, 'ವತ್ಸ, ನಿನಗಾಗಿ ಮರುಗುತ್ತೇನೆ. ನಿನ್ನ ದುಃಖ ಮುಕ್ತಿ ಆಶಾ ಮುಕ್ತಿಯ ಮೂಲಕ ಸಾಧ್ಯವಾಗಲೆಂದು ಹಾರೈಸುತ್ತೇನೆ. ನೀನು ನಮ್ಮೊಡನೆ ನಮ್ಮ ವಿಹಾರಕ್ಕೆ ಬಾ. ಅಲ್ಲಿ ಕೆಲವು ಕಾಲ ಇರು. ಅಲ್ಲಿನ ಜೀವನದ ನಿಯಮಗಳನ್ನು ಪಾಲಿಸು. ಅಲ್ಲಿರುವ ಗ್ರಂಥಗಳ ಅಧ್ಯಯನ ಮಾಡು. ನಮ್ಮೊಡನೆ [illegible]. [illegible]

'ಲೋ... ರಾಮು ರಾಜೆ... ಶಾಮ್... ಬೇಗ ಬನ್ರೋ...!! ಈಗ ನಿರೋಧ್... ಆಡ [illegible]

ಲಾಗಿ ಆ ಸಮಸ್ಯೆಗಳ, ತತ್ವಗಳ ಬಗ್ಗೆ ಶ್ರದ್ಧೆ, ಆಸಕ್ತಿಗಳಿಂದ ಚಿಂತನ ತಪಸ್ಸು ಮಾಡುತ್ತಿರು. ಸಕಾಲದಲ್ಲಿ ನಿನ್ನ ಮುಕ್ತಿಮಾರ್ಗ ನಿನಗೇ ತಿಳಿಯುವುದು ಬಾ,' ಎಂದು ಆಹ್ವಾನಿಸಿ ಗುಪ್ತನನ್ನು ಕರೆದುಕೊಂಡು ಹೋದ. ಕಾಲಕ್ರಮದಲ್ಲಿ ತಪಗುಪ್ತ ಭಿಕ್ಕು ಆದ. ಅವನ ತಪಶ್ಚರ್ಯೆ ಮುಂದುವರಿದಂತೆ ಅವಳ ನೆನಪಿನ ಹರಿತ ಸ್ವಲ್ಪ ಸ್ವಲ್ಪವಾಗಿ ಮೊಂಡಾಗುತ್ತಿತ್ತು. ಅದರ ಪ್ರಭಾವ ಕಡಿಮೆಯಾಗುತ್ತ ಹೋಯಿತು. ಪೂರ್ತಿಯಾಗಿ ಹತ್ತಿಕ್ಕುವುದು ನಾಶಪಡಿಸುವುದು ಸಾಧ್ಯವಾಗಿರದಿದ್ದರೂ. ಆ ತಪಸ್ಸಿನಲ್ಲೂ ಒಮ್ಮೊಮ್ಮೆ ಅದರ ಅಧಿದೇವಿಯಾಗಿ ಆಕೆ ಅವತರಿಸಿ ಬಿಡುತ್ತಿದ್ದಳು, ಸಾಕ್ಷಾತ್ಕರಿಸಿ ಬಿಡುತ್ತಿದ್ದಳು. ವಿಶ್ವಾಮಿತ್ರ ಋಷಿಯ ತಪಸ್ಸಿನ ಮೇನಕಾಗಮನ ಪ್ರಕರಣದಂತೆ. ಆಗ ಅವನ ಕಸಿವಿಸಿ ಹೇಳತೀರದಾಗುತ್ತಿತ್ತು. ಆದರೆ ಅದು ಅಷ್ಟು ಪಚ್ಚಾಗಿರದಿದ್ದುದು, ದೂರದೂರವಾಗುತ್ತಿರುವಂತಿದ್ದ ಸೂಚನೆ ಅವನ ಪುಣ್ಯ. ಅವನ ಚಿತ್ತ. ಅತ್ತಿತ್ತ ನೋಡುತ್ತಿದ್ದರೂ ಶಾಂತಿಯ ಹಾದಿಯನ್ನು ಹಿಡಿದಿದ್ದು ಮುಕ್ತಿಯ ದಿಕ್ಕಿಗೆ ತಿರುಗಿದ್ದ ಅರಿವು ಅವನಿಗೆ ಅಷ್ಟಿಷ್ಟು ಸಮಾಧಾನ ತರುತ್ತಿತ್ತು.

"ಇತ್ತ ಸರ್ವವಸ್ತುವಿನಲ್ಲಿ ವಾಸವಪಾಲಿಯ ಪಾಡು ಭೌತಿಕವಾಗಿ, ಸ್ವಲ್ಪ ಮಟ್ಟಿಗೆ ಮಾನಸಿಕವಾಗಿಯೂ ತಪಗುಪ್ತನ ಭೀಕರ ಮರುಭೂಮಿಯ ಹಾಗಿರಲಿಲ್ಲ; ಹಾಗೂ ಅವನಂತೆ ಅವಳು ಯಾವ ತಪೋವನವನ್ನೂ ಪ್ರವೇಶಿಸಿರಲಿಲ್ಲ. ಸಾಮಾನ್ಯ ಪ್ರಪಂಚದಲ್ಲಿದ್ದಳು. ಏಕೆ, ವಿಶೇಷ ವೈಭವ ಪ್ರಪಂಚದಲ್ಲಿಯೇ ಇದ್ದಳು. ಅನಿವಾರ್ಯವಾಗಿ ಬಂದ ಪುರವಧು ಜೀವನವನ್ನು ಪ್ರಥಮವಾಗಿ ವಿರೂಪ ಶಿಕ್ಷಾಭಯದಿಂದ ಸ್ವೀಕರಿಸಿದ್ದರೂ, ಮೊದ ಮೊದಲಿನಲ್ಲಿ ಅಸಹ್ಯಪಡುತ್ತಿದ್ದರೂ ಕಾಲ ಕ್ರಮದಲ್ಲಿ ಕೇವಲ ಅಭ್ಯಾಸಬಲದಿಂದ ಅದಕ್ಕೆ ಒಗ್ಗಿಕೊಂಡಿದ್ದಳು. ಹಾಗೂ ಅದೇನೂ ಸಾಮಾನ್ಯ ವೇಶ್ಯಾ ಜೀವನದಂತಿರಲಿಲ್ಲ. ಬಹಳವಾಗಿ ಅವಳ ಆಯ್ಕೆ, ಅವಳು ನಿಗದಿ ಮಾಡಿದ ದೊಡ್ಡ ಶುಲ್ಕ, ತಿಂಗಳಿಗೋ ವಾರಕ್ಕೋ ದಿನಕ್ಕೋ ಒಬ್ಬನಂತೆ ಸಾಮಾನ್ಯವಾಗಿ ಅವಳು ಹಾಕಿಕೊಂಡ ಸಂಖ್ಯಾಮಿತಿ, ಶುಲ್ಕಗಾತ್ರ ಹಾಕಿದ ಮಿತಿ, ಇವುಗಳಿಂದ ಅವಳ ಬಾಳು ದುಸ್ಸಹವಾಗಿರಲಿಲ್ಲ. ಹಾಗೂ ಹೀಗೂ ಬಹು ಸಮಯ ಸಹ್ಯವಾಗಿಯೇ ಇತ್ತು, ಸುಖವಾಗಿಯೂ ಇತ್ತು ಎಂದೂ ಹೇಳುವಂತಿತ್ತು.

"ಚಂದ್ರದತ್ತ, ಅದೇನು ತನ್ನ ಪಶ್ಚಾತ್ತಾಪದಿಂದಲೊ ಎನ್ನುವಂತೆ ಶೀಘ್ರವಾಗಿಯೇ ಮರಣವನ್ನಪ್ಪಿದ್ದು, ಅವಳ ಸಂಪತ್ತಿಗೆಲ್ಲ ಪುತ್ರಿಯೇ ಸ್ವಾಮಿನಿಯಾದಳು. ಅವಳ ಸಂಗ ಬಯಸಿ ಬಂದವರ ಶುಲ್ಕಾಧಿಕ ಸಂಪತ್ತು ಮಹಾನದಿಯಾಗಿ ಹರಿದು ಬರುತ್ತಿತ್ತು. ಅತುಲೈಶ್ವರ್ಯ ತರಬಹುದಾದ ಸರ್ವಸುಖ ಸಾಮಗ್ರಿ ಸಾಧನಗಳು ಅವಳಿಗೆ ಸುಲಭವಾಗಿ ನಿಲುಕುವ ತೃಪ್ತ ಸ್ಥಿತಿಯಲ್ಲಿದ್ದಳು. ಮೊದ ಮೊದಲ ದಿನಗಳ ಜಿಗುಪ್ಸೆ, ವ್ಯಸನ, ಅನಿಶ್ಚಯ, ಅಲಕ್ಷ್ಯ ದೂರದೂರವಾದಂತೆ ಅವಳು ವೈಭವೋಪೇತ ಜೀವನಕ್ಕೆ ತನಗಿದ್ದ ಅವಕಾಶವನ್ನೆಲ್ಲ ಉಪಯೋಗಿಸಿಕೊಂಡಳು. ಸಾಮಾನ್ಯವಾಗಿದ್ದ ಗೃಹದ



"ಸೀಟಿಲ್ಲ ಅಂದ್ರೆ ಹೆಂಗೆ ಬುದ್ಧಿ... ಬೇಕಿದ್ರೆ ನನ್ನ ಮನೆಯಿಂದ್ಲೇ ಒಂದು ಬೆಂಚು ಹಾಕಿಸ್ತೀನಿ..."

ಕೇವಲ ಡೆಟ್ ಬಿಲ್ಲೆಯಲ್ಲಿದೆ ಸಾಲ್ವೆಂಟ್ ಪವರ್

ಬಟ್ಟೆಗಳನ್ನು ಎಲ್ಲಕ್ಕಿಂತ ಹೆಚ್ಚು ಬೆಳ್ಳಗೆ ಒಗೆಯುವುದಕ್ಕೆ

ಹೊಸ ಸಾಲ್ವೆಂಟ್ ಪವರ್

NEW SOLVENT POWER

det

ಜಿಡ್ಡು ತೆಗೆಯುವ, ಕೊಳೆ ತೊಲಗಿಸುವ,
ಮತ್ತು ಹೊಳೈಸುವ ಬಿಳುಪು
ನೀಡುವ ಶಕ್ತಿ

ಬೇರೆ ಯಾವುದೇ ಡಿಟರ್ಜೆಂಟ್ ಬಾರ್ ಅಥವಾ ಬಿಲ್ಲೆ ಇದನ್ನು ಸರಿಗಟ್ಟಲಾರದು

ಸ್ಥಳದಲ್ಲಿ ವಿಶಾಲವಾದ ರಾಜಗೃಹ–ರಾಣೀಗೃಹ ನಿರ್ಮಾಣವಾಗಿ ಶಿರವೆತ್ತಿ ನಿಂತಿತು. ಒಳಗೆ ಸುಖಾಸೀನ ಭೋಜನ, ಶಯನ, ಸೌಂದರ್ಯಾಲಂಕಾರ ಚಿತ್ರಕಲಾಪೂರ್ಣ ಸರ್ವಸಾಮಗ್ರಿಯಿಂದ ಸುಸಜ್ಜಿತವಾಯಿತು. ಚೇಟಿ, ಭೃತ್ಯ ಮುಂತಾಗಿ ಸೇವಾವರ್ಗ. ಕೊರತೆಯೇನೆಂಬುದನ್ನೇ ಕಾಣದ ವಿಶಾಲ ಸೌಖ್ಯ ತೂಲಿಕಾತಲ್ಪ, ಸವಿ ಮೃದು ಜೀವನ. ಇಷ್ಟರ ಮೇಲೆ ಅವಳನ್ನು ಕಾಮಿಸಿ ಬರುತ್ತಿದ್ದವರಲ್ಲಿ ಮಧ್ಯವಯಸ್ಸಿನ ಕೋಟ್ಯಧೀಶ ಪ್ರತಿಷ್ಠಿತರು ಎಷ್ಟೋ ಇದ್ದರೂ ಅವಳಿಗೆ ಸುಮಾರಾಗಿ ಬೇಕಾದಂಥವರೆನ್ನಬಹುದಾದ ಪುಣ್ಯವಂತ ಯುವಕರ ಕೊರತೆಯೇನೂ ಇರಲಿಲ್ಲ.

“ಆದರೇನು? ಇಂಥ ಸುರಲೋಕ ಊರ್ವಶಿಯೂ ಯಾವಾಗಲೂ ಸುಖಿಯಲ್ಲ; ಅಷ್ಟೊಂದು ಸುಖಪಡುತ್ತಿದ್ದಾಗಲೂ ಪೂರ್ಣ ಸುಖಿಯಲ್ಲ. ಅದಕ್ಕೆ ಅವನು ಕಾರಣ. ಅವಳ ಪ್ರಥಮ ಪರಮ ಪ್ರಾಣಪ್ರಿಯ. ಅವಳು ಆ ತೀರ್ಥಸ್ನಾನದ ಸಮಯದಲ್ಲಿ, ಆ ಬಿಕ್ಕಟ್ಟಿನ ಸ್ಥಿತಿಯಲ್ಲಿ, ಪರಸ್ಪರ ಸಂಗಸುಖಕ್ಕಾಗಿ ಕೊಟ್ಟ ಸುಲಭ ಸೂಚನೆಯನ್ನು ನಿರಾಕರಿಸಿ ಅವಳನ್ನು ತೊರೆದು ಹೊರಟು ಹೋಗಿದ್ದ ಆ ನಿಷ್ಠುರ ಕಠಿಣ ಹಟವಾದಿ ಮೂರ್ಖ ನಿರ್ಭಾಗ್ಯ ಬಡಪಾಯಿ ಅವಳ ಮುದ್ದು ಉಪಗುಪ್ತನ ನೆನಪು. ಒಂದು ಅಲಂಕಾರದ ಸಮಯವೆ, ನೃತ್ಯ ಸಮಯದಲ್ಲಂತೂ ಸರಿಯೇ ಸರಿ, ಪ್ರಣಯ ಸಂಭಾಷಣೆಯ ಸಂದರ್ಭವೆ, ಸವಿಭೋಜನದ ಕಾಲವೆ, ಶಯನೋತ್ಸವ ಕಾಮಕಲಾ ಕೇಳಿ ಪ್ರಸಂಗವೆ, ಅವನು ಹೇಗೋ ನುಸುಳಿ ಬಂದು ಬಿಡುತ್ತಿದ್ದ, ಅವಳ ಸಂಗದಲ್ಲಿದ್ದ ಪುರುಷನನ್ನು ಪಲ್ಲಟಗೊಳಿಸುತ್ತಿದ್ದ. ಆ ಸ್ಥಾನವನ್ನು ಆಕ್ರಮಿಸುತ್ತಿದ್ದ. ಅವನ ಅನನ್ಯ ಅಂದ ಪುರುಷ ಪೌರುಷ ಮುಖಬಿಂಬ, ಆಜಾನುಬಾಹು, ವಿಶಾಲ ವಕ್ಷಸ್ಥಳ, ಶೋಭಾಯಮಾನ ಶಕ್ತಿವಂತ ಶರೀರ–ಒಟ್ಟಿನ ಅವನು ಅವಳ ಕಣ್ಮುಂದೆ ಕಾಣಿಸಿಕೊಳ್ಳುತ್ತಿದ್ದ. ಆಗಿನ ಕಲ್ಪನಾ ಸುಖವನ್ನು ಅವಳು ಆತ್ಮಾಂತರದಿಂದ ಬಾಚಿಕೊಂಡು ಅನುಭವಿಸುತ್ತಿದ್ದಳು. ಓ! ಎಂಥ ಸುಖ ಎಷ್ಟು ಸುಖ? ಆದರೆ ಮರುಕ್ಷಣದಲ್ಲಿ ಅವನು ಮಾಯ! ಹಿಡಿದಿಟ್ಟುಕೊಳ್ಳಲಾಗುತ್ತಿರಲಿಲ್ಲ, ಬಹಳ ಹೊತ್ತು. ವಾಸ್ತವ ಸ್ಥಿತಿಯ ಅರಿವಾಗಿ ಬಿಡುತ್ತಿತ್ತು. ಆ ಇನ್ನೊಬ್ಬ ಇದ್ದಾನೆ ಆ ಸ್ಥಾನದಲ್ಲಿ! ಎಷ್ಟು ನಿರಾಸೆ! ಎಂಥ ನೋವು! ಅವನು ಕಾಣಿಸಿಕೊಳ್ಳದಿದ್ದರೇ ಒಳ್ಳೆಯದಾಗಿರುತ್ತಿತ್ತೇನೋ ಎನ್ನುವಷ್ಟು ಇರಿತದ ನೋವು!...ಓ! ಬರೀ ಕಲ್ಪನೆಯಲ್ಲಲ್ಲದೆ ವಾಸ್ತವವಾಗಿ ಅವನು ಪ್ರತ್ಯಕ್ಷನಾಗಿದ್ದರೆ! ಕೊಂಚ ರುಚಿ ತೋರಿಸಿ, ವಂಚಿಸಿ ಹೊರಟುಹೋಗದೆ ಅನವರತವೂ ಅವಳೊಡನೆಯೆ ಇದ್ದುಬಿಟ್ಟರೆ!...ಓ ಛಿಛಿ–ಈ ರಾಜ್ಯ, ಬರಿದು. ತಕ್ಷಣವೇ ಇದ್ದಲ್ಲಿಂದ ಎದ್ದು, ಅಲ್ಲಿದ್ದವನನ್ನು, ಅಲ್ಲಿದ್ದುದನ್ನು, ಹುಂ, ಎಲ್ಲ ತೊರೆದು ಬಿಟ್ಟು, ಅವನನ್ನು ಅರಸಿಕೊಂಡು ಹೋಗಿ ಬಿಡಬಾರದೇಕೆ? ಅವನನ್ನು ಹುಡುಕಿ, ಗುಡಿಸಲೋ ಗಂಜಿಯೋ, ಅವನೊಡನೆ ಇದ್ದು ಬಿಡಬಾರದೇಕೆ, ಅವನೊಡನೆ ಪ್ರಾಣಬಿಡಬಾರದೇಕೆ? ಇದೆಲ್ಲ ಏನು ಇಲ್ಲಿ? ನೀರಸ! ವ್ಯರ್ಥಾಲಾಪ! ಅವನ ಒಂದು, ಒಂದೇ ಒಂದು ಆಲಿಂಗನಕ್ಕೆ, ಒಂದೇ ಒಂದು ಮುತ್ತಿಗೆ, ಅದೂ ಬೇಡ–ಒಂದೇ ಒಂದು ನೋಟಕ್ಕೆ ಇದು ಯಾವುದು, ಯಾರು ಸಮ?...ಓ, ಆದರೆ ಹೋಗಬಲ್ಲೆ ಹೇಗೆ? ಹೇಗೆ? ಓ ಓ ಓ...’

“ಓ, ಕ್ಷಮಿಸಿ ಬಾಬೂಜೀ, ನಾನು ಮತ್ತೆ ಭಾವನಾ ಪರವಶನಾದೆ – ಈಗ ಅವಳೇ ಆಗಿಬಿಟ್ಟೆನು.”

“ಪರವಾಗಿಲ್ಲ ದಾದಾಜೀ. ಮುಂದುವರಿಸಿ.” ನಾನು ಅವರನ್ನು ಅರ್ಥ ಮಾಡಿಕೊಂಡಿದ್ದೆ.

“‘ನನಗಂತೂ ಅವನಲ್ಲಿಗೆ ಹೋಗಲಾಗುವುದಿಲ್ಲ. ಅವನಾದರೂ ಈಗ ಏಕೆ ಬರಬಾರದು? ಶಿಕ್ಷೆಯ ಅವಧಿ ಅಂತ್ಯವಾಗಿ ಎಷ್ಟೋ ಕಾಲ–ಇನ್ನೆರಡು ವರ್ಷ, ಏಳು ಮಾಸ, ಇಪ್ಪತ್ತೊಂದು ದಿನ ಕಾಲ ಆಯಿತಲ್ಲ? ಬಂದವನು ಇಲ್ಲೇ ಯಾಕಿರಬಾರದು? ನನ್ನ ಬಳಿಗೆ ಬಂದು ಹೋಗಿ ಮಾಡಬಹುದಲ್ಲ – ನನ್ನೊಡನೆಯೇ ಈ ಮನೆಯಲ್ಲಿ ಇರಲಾಗದಿದ್ದರೂ?...ಹುಂ! ಏಕೆ ಬಂದಿಲ್ಲ,

ಅವನು? ಬೇಸರದಿಂದಲೆ? ಅವನ ಹಟದಂತೆ ನಾನು [illegible] ಅವನಿಗಾಗಿ ಇರುವುದಿಲ್ಲವೆಂದೆ? ಎಂಥ ಹಟಮಾರಿ! ನನ್ನನ್ನು ಕೂಡ ಬಿಟ್ಟಿರಬಯಸಿದ ಹಟ!...ಅಥವಾ ಇಷ್ಟು ಕಾಲದಲ್ಲಿ ನನ್ನನ್ನು, ನನ್ನನ್ನೂ ಮರೆತೇ ಬಿಟ್ಟಿದ್ದಾನೆಯೊ? ಅದು ಸಾಧ್ಯವೆ? ಹೇಗೆ ಸಾಧ್ಯ? ಎರಡು ದೇಹ ಒಂದು ಜೀವ ಆಗಿದ್ದೆವಲ್ಲ? ನಾನು ಅವನನ್ನು ಮರೆತಿದ್ದೇನೆಯೆ? ಇಂಥ ಸುಖ ಸಾಮ್ರಾಜ್ಯದಲ್ಲೂ? ಇಷ್ಟೊಂದು ವಿವಿಧ ಪುರುಷ ಸಂಗದಲ್ಲಿಯೂ? ಆ? ದಿನದಲ್ಲಿ ಎಷ್ಟು ಬಾರಿ ಎಂಥೆಂಥ ಸಮಯಗಳಲ್ಲಿಯೂ ಅವನನ್ನು ನೆನೆಯುತ್ತಲೇ ಇರುವೆನಲ್ಲ? ಅವನು ಹೇಗೆ ತಾನೆ ಮರೆತಾನು?...

ಛಿ, ಈ ಪುರುಷರನ್ನು ನಂಬುವಂತಿಲ್ಲ. ಹೌದು, ನಂಬುವಂತಿಲ್ಲ. ಸ್ತ್ರೀ ಅವರಿಗೆ ಒಂದು ಆಟದ ಸಾಮಾನು – ಆದಿ ಮರೆತು ಬಿಡುವುದಕ್ಕೆ. ನನಗೆ ಇದು ಪಾಠವಾಗಿಲ್ಲವೆ ಈ ದಿನಗಳಲ್ಲಿ ಈ ಜೀವನದಲ್ಲಿ? ಹಾಗಿಲ್ಲದೆ ಆ ಹೃದಯವಿಲ್ಲದ ಪುರುಷ ಪಂಚಾಯತಿ ನನ್ನನ್ನು ಇಂಥ ಜೀವನಕ್ಕೆ ನೂಕಿತೆ? ಪುರುಷ – ಕ್ರೀಡಾವಸ್ತುವಾಗಿರುವುದಕ್ಕೆ?...ಹುಂ, ಅವನು ಮರೆತಿದ್ದರೂ ಮರೆತಿದ್ದಾನು. ಇನ್ನು ಯಾವ ಸ್ತ್ರೀಯನ್ನಾದರೂ, ಯುವತಿ ಕನ್ಯೆಯನ್ನಾದರೂ ಮೋಹಿಸಿ ವಿವಾಹವಾಗಿದ್ದಾನು. ಮಕ್ಕಳನ್ನು, ಮುದ್ದು ಮಕ್ಕಳನ್ನು, ಪಡೆದಿದ್ದಾನು. ಸ್ತ್ರೀಲೋಲ, ಶಿಶುಲೋಲ, ಸಂಸಾರಲೋಲ ಆಗಿದ್ದಾನು. ಆಗಿದ್ದಾನು! ಆಗಿದ್ದಾನು! ಪುಟ್ಟ ಸಂಸಾರದಲ್ಲಿ ನನಗೆ ಇಲ್ಲದ, ನಾನು ಅವನೊಂದಿಗೆ ಇಲ್ಲದ, ಪುಟ್ಟ ಸಂಸಾರದಲ್ಲಿ ಮೈಮರೆತಿದ್ದಾನು, ಮನಮರೆತಿದ್ದಾನು. ನನ್ನನ್ನೂ ಮರೆತೇ ಇದ್ದಾನು. ಅಯ್ಯೋ! ಅವನನ್ನು ಹೇಗೆ ಸಹಿಸಲಿ? ಹೇಗೆ? ಇಲ್ಲಿ ನಾನು ಹೀಗೆ ತೊಳಲುತ್ತಿದ್ದೇನೆ, ಬಳಲುತ್ತಿದ್ದೇನೆ!...

ಅಥವಾ–ಅಥವಾ, ಮರಣವೇ ಏನಾದರೂ ಸಂಭವಿಸಿ ಬಿಟ್ಟಿದೆಯೋ? ನನ್ನನ್ನು ನೆನೆನೆನೆದು ಕೊಳ್ಳುತ್ತ, ಮನನೊಂದು ಆಹಾರ ನಿದ್ರೆಗಳನ್ನು ತೊರೆದು ವಿರಹ ಸೈರಿಸಲಾರದೆ ದುರ್ಮರಣವನ್ನಪ್ಪಿದನೊ?...ಛೆ ಛೆ! ದೇವರೆ, ಹಾಗಾಗದಿರಲಿ! ಅವನು ಜೀವದಿಂದಿರಲಿ. ಒಂದು ದಿನ ಸಿರಲಿ–ಒಂದೇ ಒಂದು ದಿನ, ಒಂದೇ ಒಂದು ಘಳಿಗೆ ನನ್ನೊಡನೆ ಕಳೆಯಲಿ! ಆನಂದೋನ್ಮಾದದಲ್ಲಿ! ಕಾಮಾನಂದೋನ್ಮಾದದಲ್ಲಿ. ಈ [illegible]ರಂತೆ. ಅಷ್ಟು ಸಾಕು ನನಗೆ. ಅಷ್ಟರಲ್ಲೇ ತೃಪ್ತಿ ಪಡುತ್ತೇನೆ.' ಹೀಗೆ ಇತ್ತು–ಇತ್ತಂತೆ ಎಂದು ಕೊಳ್ಳಿ ಅವಳ ಸುಖ ದುಃಖ! ಅವಳ ಮನಸ್ಸಿನಲ್ಲಿ, ಅವಳ ಸಂಸ್ಕಾರರಹಿತ ಕಾಮಾತುರ ಜೀವನದಲ್ಲಿ, ಅವನಿಗಾಗಿ ಅವಳ ಅತ್ಯುತ್ಕಟ ಕಾಮನಬಿಲ್ಲು ಆಸೆಯಲ್ಲಿ, ಅವಳು ಇನ್ನು ಹೇಗಿದ್ದಾಳು? ಹುಂ! ಅವಳ ಮೇಲು ಜೀವನ ತುಂಬಿ ತುಳುಕಿ ಅಲೆಯೋಳುತ್ತಿತ್ತು, ಮಹಾಸಾಗರವಾಗಿ, ಸುಖಸಾಗರವಾಗದೆ ಆದರೆ ಕೆಳಗೆ. ಅವಳ ಕೆಳಗೆ ಮಹದಾಳದಲ್ಲಿ ಉರಿಯುತ್ತಿತ್ತು ವಿರಹಾನಲ ಜ್ವಾಲೆ, ಅವನ ಸಂಗಕ್ಕಾಗಿ. ಸಂಗ ಭೋಗಕ್ಕಾಗಿ.

"ಕಾಲ ಉರುಳುತ್ತಿತ್ತು, ಯಾವುದನ್ನೂ ಯಾರನ್ನೂ ಗಮನಿಸದೆ.

"ಈಗ ತಪಗುಪ್ತ ವರ್ಷದಲ್ಲಿ ಚತುರ್ಮಾಸಗಳನ್ನು ಬಿಟ್ಟರೆ ಬೇರೆಯ ಕಾಲದಲ್ಲಿ ಸಂಚರಿಸುವನು. ಭಿಕ್ಷುವಾಗಿದ್ದ. ವಿಹರಿಸುತ್ತ ವಿಹರಿಸುತ್ತ ವಸಂತ ಋತುವಿನ ವೈಶಾಖದಲ್ಲಿ ಒಮ್ಮೆ ನಗರ ವಸ್ತುವನ್ನು ದಾಟುದ್ದ ಹೋಗುತ್ತಿದ್ದ. ಪರಿಚಿತ ಅಪರಿಚಿತ ಸ್ಥಳ, ಬೀದಿ, ಎಷ್ಟೋ ಬದಲಾವಣೆಗಳಾಗಿದೆ, ಬೀದಿಯಲ್ಲಿ. ಇನ್ನೂ ಹೆಚ್ಚಾಗಿ ಗೃಹಗಳಲ್ಲಿ. ಹೊಸ ಗೃಹಗಳೇ ಮೇಲೆದ್ದಿವೆ–ಹಿಂದಿನ ನಾಲ್ಕಾರು ಗೃಹಗಳ ಜಾಗದಲ್ಲಿ. ಕೆಲವು ಪರಿಚಿತ ಮುಖಗಳು. ಅವರು ಅವನನ್ನು, ಭಿಕ್ಷು ವೇಷದಲ್ಲಿದ್ದವನನ್ನು, ತಪಃಪ್ರಭಾವ ಪ್ರಕಾಶ ಪಡೆದ ಪಕ್ವ ಮುಖವನ್ನು, ಯಾರಾದರೂ ಗುರುತಿಸಿದರೋ ಇಲ್ಲವೋ, ಗುರುತಿಸಿದ್ದರೆ ಗಮನಕ್ಕೆ ತಂದುಕೊಂಡರೋ ಇಲ್ಲವೋ ಅವನಾಗಿ ಮಾತಾಡಿಸಲಿಲ್ಲ. ಅವನಿಗೆ ಮಾತಾಡಿಸಲು ಇಷ್ಟವಿರಲಿಲ್ಲ. ಮುಂದೆ ಮುಂದೆ ಸಾಗುತ್ತಿದ್ದ. [illegible] ಪಾಲಿಯ ನೆನಪು ಯಾವಾಗಲೋ ಬಂದಿತ್ತು. [illegible] ಆ ಹಾದಿಯನ್ನು ಹೊಕ್ಕಿದ್ದನು. 'ಅವಳ ಗೃಹ ಎಲ್ಲಿ? ಇದೆ? ಅಲ್ಲಿ? [illegible]? ಎಲ್ಲಿ ಮುಂದೆ [illegible]!' [illegible]


ಬೇಸಗೆಯ ಸೆಕೆಯನ್ನು ತಡೆಗಟ್ಟಲು 4 ನಿಶ್ಚಿತ ವಿಧಾನಗಳು.

ಬಜಾಜ್‌ರವರಿಂದ. ಬೇರೆ ಯಾರಿಂದ?



ಇಂದೇ ಕೊಳ್ಳಿರಿ

ಬಜಾಜ್‌ನ್ನೇ ಕೊಳ್ಳಿರಿ



[illegible] ಬಜಾಜ್‌ನವರಲ್ಲಿ ಅನೇಕ ವಿಧಾನಗಳಿವೆ –
[illegible] ಫ್ಯಾನ್ ಮತ್ತು ಐಸ್‌ಕ್ರೀಮರ್‌ಗಳಿಂದ ವಾಟರ್ ಫಿಲ್ಟರ್ಸ್ ಮತ್ತು
[illegible]
[illegible] ಗಳಿಗೆ
ಅನುಗುಣವಾಗಿ ಇವೆ. ಮತ್ತು ಎಲ್ಲ [illegible] 3500 ಮಂದಿ ವ್ಯಾಪಾರಿಗಳ ಅತಿ ದೊಡ್ಡ
ಸಮೂಹದ ಬೆಂಬಲವಿದೆ. ಅವರು ನಿಮಗೆ ವಿಳಂಬವಿಲ್ಲದೆ ಮಾರಾಟಾನಂತರದ ಸೇವೆ
ನೀಡುತ್ತಾರೆ—ಆದರೂ ಅದು ನಿಮಗೆ ಬೇಕಾಗುವ ಸಂಭವ ಇಲ್ಲವೆಂದೇ ಹೇಳಬಹುದು.



[illegible] ಇಸ್ತ್ರಿಪೆಟ್ಟಿಗೆಗಳು, ಫ್ಯಾನ್, ವಾಟರ್ [illegible], ಗ್ಯಾಸ್ [illegible] ವಾಟರ್ ಹೀಟರ್ಸ್

ಗಚ್ಛಾಮಿ. ಸಂಘಂ ಶರಣಂ ಗಚ್ಛಾಮಿ!...ಭವತಿ ಭಿಕ್ಷಾಂದೇಹಿ ವೃದ್ಧೆಯೊಬ್ಬಳು ಓಡಿ ಭಿಕ್ಷೆ ಹಾಕಿ ಹೋದಳು. ಮುಂದಿನ ಗೃಹದ ಮುಂದೆ ನಿಂತು ಅಂತೆಯೇ ಕೂಗಿದ. ಒಂದು ಕ್ಷಣ, ಇನ್ನೊಂದು, ಮತ್ತೊಂದು. ಯಾರೂ ಹೊರಗೆ ಬರಲಿಲ್ಲ. ಅಲ್ಲಿಂದ ಸರಿದ. ಮುಂದಿನದೆ ಆ ಮಹಾಸೌಧ.

"'ಬುದ್ಧಂ...! ಸಂಘಂ...ಭವತಿ ಭಿಕ್ಷಾಂ...!'" ಗಟ್ಟಿಯಾಗಿ ಪಠಿಸಿದ.

"ಒಂದು ಕ್ಷಣ...ಮೇಲಿನ ಮೊಗಸಾಲೆಯಿಂದ ಕೆಳಗೆ ಬಿದ್ದಿದ್ದ ಛಾಯೆ ಚಲಿಸಿದಂತಾಯಿತು. ಕತ್ತೆತ್ತಿ ನೋಡಿದ. ಯಾರೂ ಕಾಣಲಿಲ್ಲ. ಮರುಕ್ಷಣದಲ್ಲಿ ದಡದಡನೆ ಮೆಟ್ಟಿಲನ್ನಿಳಿಯುತ್ತಿದ್ದ ಶಬ್ದ ಒಳಗಿನಿಂದ ಕೇಳಿ ಬಂದಂತಾಯಿತು. ಇನ್ನೊಂದು ಕ್ಷಣದಲ್ಲಿ ನೆಲದ ಮೇಲೆ ಓಡೋಡಿ ಬರುತ್ತಿದ್ದ ಹೆಜ್ಜೆ ಶಬ್ದ. ಮುಂಬಾಗಿಲು ತೆರೆದುಕೊಂಡಿತು. ಅವಳು!... ಹೌದು, ವಾಸವದತ್ತೆಯೇ! ಅನುಮಾನವಿಲ್ಲ! ಅದೇ ಹೊಳೆಯುವ ದೊಡ್ಡ ಕಪ್ಪು ನೇತ್ರ. ಈಗ ಆಶ್ಚರ್ಯ, ಉತ್ಸಾಹಗಳಿಂದ ವಿಶಾಲವಾಗಿ ತೆರೆದುಕೊಂಡಿತ್ತು. ನೆಟ್ಟ ನೋಟವನ್ನು ಬೀರುತ್ತಿತ್ತು, ಅವನನ್ನು ಅಪ್ಪುತ್ತಿತ್ತು. ಅದೇ ನೀಳ ಹುಬ್ಬು ನಾಸಿಕ, ಆ ಅಂದ ಮುಖಕ್ಕೆ ಆ ಅನನ್ಯ ಚೆಹರೆ, ಲಕ್ಷಣವನ್ನು ಕೊಟ್ಟಿದ್ದದ್ದು, ಭೂಷಣಪ್ರಾಯವಾಗಿದ್ದದ್ದು. ಈಗ ಏದು-ಸಿರಿನಿಂದ ಸ್ವಲ್ಪ ಹೆಚ್ಚು ಬಿಚ್ಚಿಕೊಂಡಿತ್ತು. ತುಂಬಿದ ಕುಸುಮ ಮೃದು ಮುತ್ತು ಚೆಂದು-ಟಿಯ ಪುಟ್ಟ ಬಾಯಿ. ಈಗ ಆ ಮೊಗ್ಗು ಅರೆ ತೆರೆದುಕೊಂಡು ಶುಭ್ರ ಶುಭ್ರ ದಾಳಿಂಬ ಪಂಕ್ತಿಯನ್ನು ಕಾಣಿಸುತ್ತ ಮಂದಹಾಸದಿಂದ ಅರಳಿತ್ತು, ಆ ಪಕ್ವ ಫಲ ಕಪೋಲ ಕೆಂಪೇರಿ ಮಿಂಚುತ್ತಿತ್ತು. ಓಡಿ ಬಂದ ಆತುರದಲ್ಲಿ ಸೆರಗು ಸ್ವಲ್ಪ ಜಾರಿ, ಎದ್ದೆದ್ದು ಬೀಳುವ ತುಂಬು ಯೌವನದೆಯ ಆಕರ್ಷಣೆಯನ್ನು ಹೆಚ್ಚಿಸಿತ್ತು. ಇವುಗಳೊಂದಿಗೆ ಆ ನಳಿದೋಳು ಸುರುಳಿ ನಾಭಿ, ದುಂಡು ಬಿಗಿ ನಿತಂಬ, ಕದಂಬದೂರುಗಳನ್ನು ನೃತ್ಯ ಭಂಗಿಗಳಲ್ಲಿ ಅವನು ಬಲ್ಲ. ಕಂಡಕ್ಷಣವೆ ಗುರುತಿಸಿದ್ದ. ಅರೆ ಬಾಚಿ ಅರೆ ಬಿಟ್ಟ ಕವಿ ಕೊರಳು, ಭುಜ ಬೆನ್ನುಗಳ ಮೇಲೆ ಬಿದ್ದು, ಮುಚ್ಚಿ, ಹರಡಿಕೊಂಡು ಸೊಂಟ ಸೋಕುತ್ತಿದ್ದ ಅಲೆಯಲೆ ಮಿಂಚು ಕಪ್ಪು ಕೇಶರಾಶಿಯಾಗಲಿ, ಜರಿ ರೇಷ್ಮೆ ಅಗಲ ಅಚ್ಚ ಕೆಂಪಂಚು ಶರೀರ ವರ್ಣ ಪೀತಾಂಬರ ಕಂಚುಕಗಳಾಗಲಿ ಆ ಅಪ್ಸರೆಯನ್ನು ಅವನಿಗೆ ಮುಚ್ಚಿರಲಿಲ್ಲ. ಅಹುದು, ಅವಳೇ. ಈ ವರ್ಷಗಳಲ್ಲಿ ಇನ್ನಷ್ಟು ಪೂರ್ಣಳಾಗಿದ್ದಾಳೆ, ರಸಭರಿತಳಾಗಿದ್ದಾಳೆ, ಆಕರ್ಷಕವಾಗಿದ್ದಾಳೆ, ಮುದ್ದಾಗಿದ್ದಾಳೆ, ಪರಿಚಿತ ಪರಿಮಳ ಸೂಸು-ತ್ತಿದ್ದಾಳೆ, 'ಕಾಮರೂಪಿಣಿ' ಕಾಮಮೂರ್ತಿ ಕಾಮಿನಿ ಆಗಿದ್ದಾಳೆ.

"ಅವಳ ಮೇಲಿದ್ದ ಅವನ ನೋಟ ಚಲಿಸಲಿಲ್ಲ. ಎದೆ ಢವಕ್ಕೆಂದು ಬಡಿದುಕೊಳ್ಳುತ್ತಿತ್ತು, ಅವನ ಕಿವಿಗೆ ಕೇಳಿಸುವಂತೆ. ಮುಖವೇನಾಗಿ ಹೋಗಿತ್ತೋ ಅವನಿಗೆ ಗೊತ್ತಾಗಲಿಲ್ಲ. ಅಂಗುಷ್ಠದಿಂದ ನೆತ್ತಿಯ ವರೆಗೆ ಕಾವೇರಿದ್ದುದು, ಮೈಯಲ್ಲ ರೋಮಾಂಚನವಾಗಿದ್ದುದು ಅವನಿಗೆ ಅಷ್ಟಿಷ್ಟು ಅನುಭವಕ್ಕೆ ಬಂದಿತ್ತು. ಅಷ್ಟೆ. ಅಷ್ಟೊಂದು ದೀರ್ಘಕಾಲದ ತಪಸ್ಸೆಲ್ಲ ಆ ಒಂದು ಕ್ಷಣದಲ್ಲಿ ಕರಗಿಹೋದಂತೆ ಆಗಿತ್ತು. ಆ ಹಿಂದಿನ, ಪೂರ್ಣವಾಗಿ ಪಡೆಯುವ ಹಟದಿಂದ, ಎಂಥೊಂದನ್ನು ಎಷ್ಟೊಂದು ಕಾಲ ಕಳೆದುಕೊಂಡ. ಎಂಥ ಮೂರ್ಖ ಎಂದು ಕೊಳ್ಳಬೇಕೆಂದೆನ್ನಿಸಿತ್ತು...'ಅಯ್ಯೊ ಕೆಟ್ಟೆ! ಕೆಟ್ಟೆ!'" ಎಂದಿತು ಮನಸ್ಸು. ಅಲ್ಲಿಂದ ಕೂಡಲೆ ಕಾಲ್ದೆಗೆದು ಓಡಿ ಹೋಗಬೇಕೆಂದು ಮನಸ್ಸು ಆತುರ ಪಡಿಸಿತು. ಆದರೆ ಹಾಗೆ ಮಾಡಲಿಲ್ಲ. ಕಾಲು ಚಲಿಸಿದರೆ ತಾನೆ? ಇನ್ನೊಂದು ಕ್ಷಣ, ಮತ್ತೊಂದು ಕ್ಷಣ ಅವಳನ್ನೇಕೆ ನೋಡಬಾರದು ಎಂದು ಕೇಳಿಕೊಳ್ಳುತ್ತ ನಿಂತಿದ್ದ. ಅವಳೊಡನೆ, ಅಷ್ಟು ಪರಿಚಿತಳೊಡನೆ, ಅಂಥ ಉತ್ಸಾಹದಿಂದ ಓಡೋಡಿ ಬಂದಿದ್ದ ಹಳೆಯ ಸ್ನೇಹಿತೆಯೊಡನೆ, ಶಿಷ್ಯೆಯೊಡನೆ ಪರಮ ಪ್ರಿಯೆಯೊಡನೆ, ಒಂದೆರಡು ನುಡಿಗಳನ್ನಾದರೂ ಆಡದೆ ಹೋಗುವುದೆಂತು? ಅದರಲ್ಲಿ ತಪ್ಪೇನಿದೆ ಎಂದು ಕೇಳಿಕೊಳ್ಳುತ್ತಿದ್ದ. ಒಂದು ವೇಳೆ ಅವಳು ಒಳಗಡೆಗೆ ಕರೆದರೂ ಏಕೆ ಹೋಗಬಾರದು? ಎಂದೂ ಕೇಳಿಕೊಂಡ. ಚಿಂತಿಸಿದ. 'ಭಗವಾನ್ ಬುದ್ಧ ಎಂಥೆಂಥವರಿಂದೆಲ್ಲ ಭಿಕ್ಷೆ, ಸತ್ಕಾರಗಳನ್ನು ಒಪ್ಪಿಕೊಳ್ಳಲಿಲ್ಲವೆ? ಅವನೂ ಅವಳಿಂದ ಸತ್ಕಾರ

ಭಿಕ್ಷೆ-ಏ ತನೆ ತನೆ. ಅವಳು ಅವನಿಗೇ ಭಿಕ್ಷೆಯಾಗಿ ನೀಡಿದರೆ ? ಪ್ರಣಯಭಿಕ್ಷೆ ! ಕಾಮಭಿಕ್ಷೆ! ತೆಗೆದುಕೊಳ್ಳಬಲ್ಲೆನೆ ? ಕೊಡಬಲ್ಲೆನೆ?......ನಾಶ ! ಸರ್ವನಾಶ! ಕೂಡದು! ಆಸೆ ಕೂಡದು. ಪ್ರಕೃತ ಪರಿಸ್ಥಿತಿಯಲ್ಲಿ ಪಲಾಯನ ಸೂತ್ರವೇ ಅತ್ಯಂತ ಸೂಕ್ತ, ಸರ್ವ ಕ್ಷೇಮ. ಹುಂ...ಛೆ, ಇಷ್ಟೇಯೆ ನನ್ನ ತಪಸ್ಸು? ತಪಶ್ಶಕ್ತಿ? ನನ್ನ ಆ ನಿಷ್ಠುರ ನಿರ್ಧಾರ! ಛೆ!...ಹುಂ ಏನಾದೀತು- ಮಹಾ! ನಾನು ಶಕ್ತ, ಶಕ್ತ. ಹೋಗುವುದಿಲ್ಲ, ಹೋಗಲಾರೆ' ಕೂಡ. ನಿಲ್ಲುತ್ತೇನೆ. ನೋಡಿಯೇ ಬಿಡುತ್ತೇನೆ ಇಷ್ಟೆಲ್ಲ ಒಂದೇ ಒಂದು- ಮಿಂಚಿನಲ್ಲಿ ಬಂದು ಹೋಗಿತ್ತು. ಮನೋವ್ಯಾಪಾರ. ಮನೊವೇಗ ವೆಂದರೆ ಹೀಗೆ......ಅವನು ನಿಂತಿದ್ದ, ಕದಲದೆ. ಚಾಪಲ್ಯ ಭಯಗಳನ್ನು ಒಳಗಿನಿಂದ ಕಿತ್ತು ಎಳೆದು ಹಾಕಲು, ತುಳಿದು ಅಡಗಿಸಲು ಮಹಾಪ್ರಯತ್ನ ಮಾಡುತ್ತಿದ್ದ.

"ಅವಳೊ? ಸ್ವರ್ಗವೆ, ಇಷ್ಟು ವರ್ಷ ಕಾಲ ಹಗಲು ರಾತ್ರಿ ಸ್ವಪ್ನದಲ್ಲಿ ಕಂಡಿದ್ದ, ಅವಳು ತನಗೆ ಕಾಣಿಸಿಕೊಂಡಿದ್ದ ಛಾಯಾಸ್ವರ್ಗ ಮಾಯಾಸ್ವರ್ಗ ನಿಜ ರೂಪ ತಳೆದು ಅವನ ರೂಪದಲ್ಲಿ ಅವಳ ದ್ವಾರಕ್ಕೇ ಬಂದಿದೆ! ಅವಳ ಗೃಹದ್ವಾರವೇ ಸ್ವರ್ಗದ್ವಾರ. ತನ್ನ ಗೃಹವೇ ಸ್ವರ್ಗ, ಸಾಕ್ಷಾತ್ ಸ್ವರ್ಗ. ಯಾವ ಸ್ವರ್ಗದಲ್ಲಿ ಇನ್ನೇನು ತಾನೆ ಇರುತ್ತದೆ? ಅವಳ ಗೃಹದಲ್ಲಿ ಎಲ್ಲವೂ ಇದೆ- ಅವನೂ ಹೀಗೆ ಬಂದ ಮೇಲೆ. ಅವನ ಬೋಳು ವಿರಕ್ತ ವೇಷದಲ್ಲಿಯೂ ಅವನನ್ನು ಅವಳು ಗುರುತಿಸಿದ್ದ ಅವಳ, ಅವಳವನೇ ಆದ ಗಂಧರ್ವ, ಇಂದ್ರ, ತಪಗುಪ್ತ ಮಹೇಂದ್ರ. ಅಹಲ್ಯೆಯ ಬಳಿಗೆ ಮುನಿ ವೇಷದಲ್ಲಿ ಹೋಗಿದ್ದ ಮಹೇಂದ್ರ ಈಗ ಅವಳ ಬಳಿಗೆ ಭಿಕ್ಷು ವೇಷದಲ್ಲಿ ಬಂದಿದ್ದಾನೆ. ಬಹುಶಃ ಹಾಗೆಯೇ ಆ ಇಂದ್ರನಂತೆ, ಒಯಸಿ ಬಂದಿದ್ದಾನೆ. ಅಹುದು. ಅಹುದು. ಇಲ್ಲದಿದ್ದರೆ ಈಗ ಇಲ್ಲಿಗೆ ಅವಳ ಗೃಹಕ್ಕೆ ಏಕೆ ಬರುತ್ತಿದ್ದ ? ಅಂತೂ ಈಗಲಾದರೂ ಇಷ್ಟು ಕಾಲದ ಮೇಲಾದರೂ, ಅವನ ಹಟವನ್ನು ತೊರೆದು, ಅವಳ ಸೂಚನೆಯನ್ನು, ವ್ಯವಸ್ಥೆಯನ್ನು ಅಂಗೀಕರಿಸಿ ಅವಳನ್ನು ಅರಸಿಕೊಂಡು ಬಂದಿದ್ದಾನಲ್ಲ! ಅವಳ ಪುಣ್ಯವೆ! ಪುಣ್ಯವೆ!...ಊಹುಂ ಉಹುಂ! ಸ್ವಲ್ಪ ತಾಳು! ತಾಳು! ಅವಳ ಮಹೇಂದ್ರ ಬಂದಿದ್ದರೆ ಮಹೇಂದ್ರನಾಗಿಯೇ ಏಕೆ ಬರಲಿಲ್ಲ? ಅವಳ ಕೂಟಕ್ಕೆ ಬರುವ ಇತರ ನರ ಇಂದ್ರರಂತೆ ಸೂಕ್ತ ವೇಷ ಭೂಷಣ ಅಲಂಕಾರಾದಿಗಳಿಂದ ? ಹೀಗೇಕೆ ಭಿಕ್ಷು ವೇಷದಲ್ಲಿ ಬಂದಿದ್ದಾನೆ ? ಅವಳಿಗೆ ಯಾವ ಋಷಿಪತಿ ಭಿಕ್ಷು ಪತಿ ಇದ್ದಾನೆ ? ಅವಳೆಂತಹ ಪತಿವ್ರತೆ ? ಅಹಲ್ಯೆ ? ಅವನು ಅರಿಯನೆ?......ಇದೇನು ರಹಸ್ಯ, ಇವನದು ? ಪಶ್ಚಾತ್ತಾಪವೆ? ಹಸಿವೆ?... ಏನೊ? ಯಾರಿಗೆ ಬೇಕು, ಅದು, ಕಾರಣ ಅಂತೂ ಬಂದನಲ್ಲ ! ಬಂದನಲ್ಲ? ಅಷ್ಟೇ ಸಾಕು...ಹೀಗೆ ಅವಳ ಚಿಂತನಾ ಮಿಂಚು ಮಿಂಚು. ಒಬ್ಬರನ್ನೊಬ್ಬರು ಸುಮ್ಮನೆ ನೋಡುತ್ತ ನೋಡುತ್ತ ಬಾಯಿ ತೆರೆದೂ ಮಾತಾಡದೆಯೆ, ನೇತ್ರ ಸಂಭಾಷಣೆಯನ್ನಷ್ಟೇ ಮಾಡುತ್ತ ತಟಸ್ಥರಾಗಿದ್ದ ಅವರ ಪೈಕಿ ಮೊದಲು ಎಚ್ಚರಗೊಂಡವಳು ಅವಳೆ.

"'ಪ್ರಿಯ ತಪ-!'

"'ಮುದ್ದು-ವಾಸವಿ!'

"'ಇದೆಲ್ಲ- ಏನು ? ಈ ಕೇಶಮುಂಡನ ಕಾಷಾಯ, ಭಿಕ್ಷಾಪಾತ್ರ ?...'

"'ಇನ್ನೇನು ಮತ್ತೆ ನಿನ್ನನ್ನು ತೊರೆದು ಹೋದ ಮೇಲೆ? ಮರೆಯಬೇಡವೆ- ಹಿಂದಿನ ಜನ್ಮವನ್ನ?'

" 'ಅಂದರೆ ? ನನ್ನನ್ನೂ ಮರೆತಿದ್ದೆಯಾ?'

"'ಅದು ಹೇಗೆ ಸಾಧ್ಯ ವಾಸವಿ? ಮರೆಯಲು ಯತ್ನ ಮಾತ್ರ. ವ್ಯರ್ಥ ಯತ್ನ- ಈ ವೇಷ ನನ್ನ ಕಠಿಣ ತಪಸ್ಸು ಏನೆಲ್ಲ. ಒಂದು ಕ್ಷಣದಲ್ಲಿ, ನಿನ್ನನ್ನು ಕಂಡ ಕ್ಷಣದಲ್ಲಿ ಕರಗಿ ಆವಿಯಾಗಿ ಹೋಗಿಬಿಟ್ಟವೇನೋ ಅನ್ನಿಸುತ್ತಿದೆ. ಈಗ ತಾನೆ ಕಂಡೆಯೊ ಇಲ್ಲವೊ ? ನಿನ್ನನ್ನು ನೋಡಿದೊಡನೆ ನಾನು ನಿಂತ ರೀತಿ ನೋಡಿದ ರೀತಿ ? ನನ್ನ ಬಾಯಿಂದ ಹೊರಟ ಮೊದಲ ಶಬ್ದ- ಮುದ್ದು ಎಂದು? ಹೇಗೆ ಮರೆಯಲಿ ?'

"'ಧನ್ಯಳು! ಓ, ನಾನು ಧನ್ಯಳು! ನನ್ನ ಮುದ್ದು ತಪಾ! ನಾನು ನಿನ್ನನ್ನು ಪ್ರತಿಕ್ಷಣದಲ್ಲಿಯೂ ನೆನೆಸಿ ಕೊಳ್ಳುತ್ತ, ನಿನಗಾಗಿ ನಿರೀಕ್ಷಿಸುತ್ತ, ಕಾತರಿಸುತ್ತ, ಕಾತರಿಸುತ್ತಲೇ ಇದ್ದೇನೆ. ನನ್ನ ಈ ಸಕಲ ಸಂಪತ್ತಿನ ವೈಭವ ಜೀವನ, ಲೆಕ್ಕವಿಲ್ಲದ ಪುರುಷ

ಸಾವಿರ ಯಾವುದೂ ನಿನ್ನನ್ನು ಮರೆಯಿಸಲು ಸಮರ್ಥವಾಗಲಿಲ್ಲ. ಹೇಗೆ ತಾನೆ ಆದಾವು? ಅಂತಸ್ತಿನ ಮೇಲಿನಿಂದ ನಿನ್ನನ್ನು ವೀಧಿಯಲ್ಲಿ ನೋಡಿದೊಡನೆ, ನಿನ್ನ ವೇಷವನ್ನೂ ಒಳಹೊಕ್ಕು ನೀನೇ ಇರಬೇಕೆಂದು ಊಹಿಸಿದೆ. ನಿನ್ನ ಧ್ವನಿಯಂತೂ ನನ್ನಲ್ಲಿದ್ದಿರಬಹುದಾದ ಅಲ್ಪ ಸ್ವಲ್ಪ ಅನುಮಾನವನ್ನೂ ಇಲ್ಲದಂತೆ ಮಾಡಿಸಿತು. ನೋಡು, ನನ್ನ ಅಲಂಕಾರವನ್ನೂ ಅರ್ಧಕ್ಕೆ ನಿಲ್ಲಿಸಿ ಹೇಗೆ ಧಾವಿಸಿ ಹಾರಿ ಬಂದಿದ್ದೇನೆ!... ಅಯ್ಯೋ ನಿನ್ನನ್ನು ಇಲ್ಲಿಯೇ ಹೊರಗೆ ನಿಲ್ಲಿಸಿ ಮಾತಾಡುತ್ತ ನಿಂತುಬಿಟ್ಟೆನಲ್ಲ! ಬಾ ಬಾ, ಬಾ ಒಳಗೆ!' ಎನ್ನುತ್ತ ಅವನ ಕೈಯನ್ನು ಹಿಡಿದುಕೊಂಡಳು.

"'ನಾನು ವ್ರತಸ್ಥ. ಮೇಲಾಗಿ ಒಳಗೆ ಬರಲು ಭಯಪಡುತ್ತೇನೆ—ಸತ್ಯವಾಗಿ ನನ್ನ ನಿನ್ನ ಹಿಂದಿನ, ಸಂಬಂಧದಿಂದ. ನನ್ನ ಈ ಘಳಿಗೆಯ ಭಾವನೆಯಿಂದಲೂ. ದಯವಿಟ್ಟು ಕೈಯನ್ನು ಬಿಡು. ನಾನು ಬಿಡಿಸಿಕೊಳ್ಳಲಾರದಂತಾಗಿದ್ದೇನೆ' ಅವನು ಮೆಲ್ಲಗೆ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದ.

"'ಇಲ್ಲ ನಾನು ಬಿಡುವುದಿಲ್ಲ.' ಉಹುಂ. ಏಕೆ ಬಿಡಲಿ? ನೀನು ನನ್ನವನಲ್ಲವೆ? ಅಹುದು. ನನ್ನವನೇ. ನಾನು ನಿನ್ನವಳೇ—ನಾನು ಏನೇನಾಗಿದ್ದರೂ. ತಿಳಿ... ಹುಂ! ಹಾಗೆಯೇ ನೀನೂ—ರಾಜನಾಗಿದ್ದರೂ ಸಾಮಾನ್ಯ ಭಿಕ್ಷುಕನಾಗಿದ್ದರೂ. ಬೌದ್ಧ ಭಿಕ್ಕುವಾಗಿದ್ದರೂ ಇನ್ನೇನೇ ಆಗಿದ್ದರೂ ನನ್ನವನು, ನನ್ನವನೇ. ವ್ರತವಂತೆ! ಅದು ಎಂಥ ವ್ರತ—ನನ್ನ ನಿನ್ನ ಪ್ರೀತಿ ವ್ರತದ ಮುಂದೆ? ಭಯವೇನು ಬಂತು—ಮುದ್ದುತನಾ? ನಾನೇನು ಪರಸ್ತ್ರೀಯೆ ನಿನಗೆ? ಪ್ರಥಮ ನೋಟದಿಂದಲೂ ನಾನು ನಿನಗಾದವಳು, ನೀನು ನನಗಾದವನು. ಈಗಲೂ ಹಾಗೆಯೆ. ಮಧ್ಯೆ ಏನಾಗಿದ್ದರೇನು? ಮುಂದೆಯೂ ಏನಾದರೇನು? ನಾವು ಈ ಜನ್ಮ ಸಂಬಂಧಿಗಳು, ಪ್ರಣಯ ಸಂಬಂಧಿಗಳು—ದೈಹಿಕ ಸಂಬಂಧವಾಗಿರುವ ಭಾಗ್ಯರಾದರೂ. ಹಾಗೂ ನಾನೇನು ನೀನು ಸ್ಪರ್ಶಿಸಲಾರದ ಮಹಾಪತಿವ್ರತೆಯೊ? ನಾನೀಗ ಸರ್ವರ ವಸ್ತು, ಗೊತ್ತೇ ಗೊತ್ತಲ್ಲ. ನಮ್ಮ ಹಿಂದಿನ ಸಂಬಂಧದಲ್ಲಿ ಏನು ತಪ್ಪು? ಅದು ನಿನ್ನನ್ನು ಪ್ರಚೋದಿಸುವುದೆ? ಪ್ರಚೋದಿಸಿದರೆ ಏನಾಯಿತು? ಒಳ್ಳೆಯದೇ ಆಯಿತಲ್ಲ! ನಾನು ನಿನಗೆ ಅಂಥವಳೆ. ನೀನು ನನಗೆ ಅಂಥವನೆ ಆಗುವುದು ನ್ಯಾಯವೆ! ಕೇವಲ ನ್ಯಾಯ, ಸಹಜ. ಈ ಘಳಿಗೆಯ ಭಾವನೆ ಎಂಥಾದ್ದಾದರೇನು? ಅದಕ್ಕೆ ನನ್ನ ಸ್ವಾಗತವಿದ್ದೇ ಇದೆಯಲ್ಲ! ಮುಚ್ಚಪ್ಪ! ಅದಕ್ಕಾಗಿ ಹಿಂಜರಿಯಬೇಕೆ? ನನ್ನ ಪುಣ್ಯದಿಂದ ನೀನು ಇಲ್ಲಿಗೆ ಬರಲಿ, ಈ ನಿನ್ನ ಭಾವನೆ ನಿನಗೆ ಬರಲಿ ಎಂದು ಪ್ರಾರ್ಥಿಸುತ್ತ; ನಾನಿಲ್ಲಿ ಚಾತಕ ಪಕ್ಷಿಯಾಗಿ ನಿರೀಕ್ಷಿಸುತ್ತಿದ್ದೇನೆ. ನೀನು ಮೇಘರಾಜ ಬಂದವನು ಒಂದು ಗುಟುಕು, ಒಂದು ಹನಿ ಜಲದಾನಕ್ಕೆ ಹಿಂದು ಮುಂದೆ ನೋಡುತ್ತ ಏನೇನೋ ಹೇಳುತ್ತ ಒದ್ದಾಡುತ್ತೀದ್ದೀಯೆ! ಚೆನ್ನಾಯಿತು! ಚೆನ್ನಾಯಿತು!...ಬಾ ಸುಮ್ಮನೆ ಒಳಗಡೆಗೆ! ಇಲ್ಲಿಯೇ ಇರು. ನನ್ನ ಚಿಕ್ಕ ಅರಮನೆಯನ್ನು ನೋಡುವೆಯಂತೆ. ಅಲ್ಲಿ ಸಕಲ ಸುಖ ಸಾಧನ ಸಾಮಗ್ರಿ ಸಂಪತ್ತು ಇದೆ. ನನ್ನ ಸರ್ವಸಿದ್ಧ ರಾಣಿ ಅಂತಃಪುರದಲ್ಲಿ ನಿತ್ಯವೂ ಉಚಿತ ಸತ್ಕಾರವನ್ನು ಸ್ವೀಕರಿಸುತ್ತಿರು. ಈ ನನ್ನ ಸರ್ವ ಐಶ್ವರ್ಯವೂ, ನಾನು ಸೇರಿಯೇ ನಿನ್ನದೆಂದು ತಿಳಿ... ಇಷ್ಟೊಂದು ಕಾಲ ನೀನು ಎಲ್ಲೆಲ್ಲಿಯೋ ಪರ್ಯಟನ ಮಾಡಿ ಎಷ್ಟೆಷ್ಟೋ ವಿವಿಧ ಜೀವನವನ್ನೆಲ್ಲ ನೋಡಿ ಅನುಭವಸ್ಥ ಪುರುಷನಾಗಿ ಬಂದಿದ್ದೀಯೆ. ನಾನೂ ಹಿಂದಿನ ಮುಗ್ಧ ಬಾಲೆಯಲ್ಲ. ಈಗ. ನೋಡಿದೆಯಲ್ಲ ಹೇಗೆ ಬೆಳೆದಿದ್ದೇನೆ! ಹೇಗಿದ್ದೇನೆ. ವಿವಿಧ ವಿಶಾಲ ಜೀವನಾನುಭವವನ್ನು ಪಡೆದು ಪಕ್ವವಾಗಿದ್ದೇನೆ. ನನ್ನಂಥ ಸ್ಥಿತಿಯ ಸ್ತ್ರೀಯೊಬ್ಬಳು ಕಲಿಯಬಹುದಾದ ಕಲಿಯಬೇಕಾದ ಸಕಲ ಕಲೆಗಳಲ್ಲಿಯೂ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಕಾಮುಕಲೆಯಲ್ಲೂ ಕೂಡ, ನಿಷ್ಣಾತಳಾಗಿದ್ದೇನೆ...' ಅವಳು ತಡೆ ಬಡೆಯಿಲ್ಲದೆ ಹೇಳುತ್ತಲೇ ಇದ್ದಳು.

"'ವಾಸವಿ, ನಾನು ಭಿಕ್ಕು. ಭಿಕ್ಷೆಗಾಗಿ ಬಂದವನು.'

"'ನನಗೆ ತಿಳಿಯದೆ? ನೋಡುತ್ತಿಲ್ಲವೆ? ನಿನ್ನ ಕೂಗನ್ನು ಕೇಳಲಿಲ್ಲವೆ? ನಾನು ಕೊಡುವುದು ತುತ್ತೊಂದು ಮಾತ್ರವಲ್ಲ. ನನ್ನ ಸರ್ವಸ್ವವನ್ನೂ ನನ್ನನ್ನೂ ಸೇರಿಸಿಕೊಂಡು, ನಿನಗೆ ಭಿಕ್ಷೆ ಹಾಕುತ್ತಿದ್ದೇನೆ. ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ಅಷ್ಟೆ... ಪ್ರಿಯಾ, ನನಗೆ ಇನ್ನೇನು ಏನೇನು ಇದ್ದರೇನು, ನಿನಗಿಲ್ಲದಿರುವುದಾ? ನನಗೆ ತೃಪ್ತಿಯಿದೆ.



“ವಿಜಯಶಾಲಿ
ಶರ್ಟ್ ಅಮ್ಮಾ,
-ಮತ್ತೆ ಅದೇ
ಬಿಳುಪು!”

ಹೈ ಪವರ್ ಸರ್ಫ್
ಅಪರಿಮಿತ ಬೆಳ್ಳಗೆ ಒಗೆಯುತ್ತದೆ...
ಅದು ಪ್ರತ್ಯಕ್ಷ ಕಾಣುತ್ತದೆ.

ಬಿಳಿಯ ಬಟ್ಟೆಗಳಿಗೆ ಉತ್ತಮ, ಬಣ್ಣದ ಬಟ್ಟೆಗಳಿಗೂ ಅನುಪಮ



ಸಂದೇಹವಿಲ್ಲ. ಇಷ್ಟೊಂದು ಇದ್ದೂ ನಾನು ರಿಕ್ತಳು. ಭಿಕ್ಷುಕಿ. ನಿನ್ನಿಂದ ಪರಮ ಐಶ್ವರ್ಯವಂತನಾದ ನಿನ್ನಿಂದ, ಪ್ರೇಮ ಭಿಕ್ಷೆ, ನಿನ್ನ ಪ್ರಣಯ ಭಿಕ್ಷೆಯನ್ನಷ್ಟೆ ಪಡೆಯಲು ಇಗೋ ಪ್ರಾರ್ಥಿಸುತ್ತಿದ್ದೇನೆ. ಕರುಣಿಸಿ ನೀಡು. ಕೃತಾರ್ಥಳನ್ನಾಗಿ ಮಾಡು–ಬಾ!'

"'ಪ್ರಿಯ ವಾಸವಿ, ನಿನ್ನ ರಮ್ಯ ಮಾದಕತೆಯಲ್ಲಿ ಮುಳುಗಿ ನಾನು ಭಾವಾವೇಶದಿಂದ ಮೈಮರೆತು ಎಚ್ಚರವಿಲ್ಲದೆ ಮಾತಾಡಿ ತಪ್ಪು ಮಾಡಿದೆ. ಆಸೆ ಕೆರಳಿಸಿ ನಿನಗೆ ಅನ್ಯಾಯ ಮಾಡಿದೆ. ಕ್ಷಮಿಸು, ದಯವಿಟ್ಟು ನನ್ನನ್ನು ಕ್ಷಮಿಸು. ನೀನು ಹೀಗೆ ಮಾತಾಡಿದುದರಲ್ಲಿ ಆಶ್ಚರ್ಯವೇನಿಲ್ಲ; ಅದು ನಿನಗೆ ಸಹಜವೆ. ನಿನ್ನ ಆಹ್ವಾನವೂ ಸರಿಯೆ. ಅದನ್ನು ಅರ್ಥಮಾಡಿಕೊಳ್ಳಬಲ್ಲೆ, ನನ್ನ ಭಾವನೆಯೂ ಅದಕ್ಕೆ ಓಗೊಡುತ್ತಿದ್ದು. ಆದರೆ ನನ್ನ ಆಹ್ವಾನವನ್ನು ಒಪ್ಪಿಕೊಳ್ಳಲಾರೆ. ವಿಷಾದಿಸುತ್ತೇನೆ, ನನಗಾಗಿಯೂ ನಿನಗಾಗಿಯೂ ಎಷ್ಟೆ ಆಸೆ ಕುದಿಯುತ್ತಿದ್ದರೂ. ಅಹುದು, ಅದು ಸಾಧ್ಯವಿಲ್ಲ. ಆಸೆಯನ್ನೇ ಅತಿ ಕಷ್ಟದಿಂದ ನಿವಾರಿಸಿಕೊಳ್ಳಬೇಕು...' ಅವನು ಹೇಳುತ್ತ ಕೈ ಬಿಡಿಸಿಕೊಂಡ.

"'ಏಕೆ? ಏಕೆ? ನಾನು ಸ್ತ್ರೀ, ನೀನು ಪುರುಷ. ಪರಸ್ಪರ ಪ್ರೀತಿಸುವವರು, ಪ್ರೀತ್ಯೋನ್ಮತ್ತರಾದವರು. ನಾನಂತೂ ಖಂಡಿತವಾಗಿ. ನಾವು ಕಾಮಿಸುವುದು ಕೇವಲ ಸಹಜ. ಸರಿ ಕೂಡ. ಅದರಲ್ಲಿ ಅಂಥ ದೋಷವ ತಪ್ಪೇನಿದೆ? ಅದು ಅಪ್ಪಟ ಉತ್ಕಟ ಶ್ರೇಷ್ಠ ಮಹದಾನಂದಾನುಭವ–ಅದರಲ್ಲಾಗಿ ಇಷ್ಟಪಟ್ಟವರೊಡನೆ, ಅವರ ಮುಂದೆ. ಅದರಲ್ಲಿ ನಿಷಿದ್ಧವಾದದ್ದು ಏನಿದೆ? ಲಜ್ಜೆ ಹೀನಾಯ, ಭಯ ಏಕೆ? ನಾಳಿನ ಅಸಹ್ಯ ಏನು, ಹೇಗೆ...ಮೇಲಾಗಿ ನಮ್ಮ ಸುಖ ಸಹವಾಸ ಪ್ರಸ್ತಾಪವೂ ಇದೆ.'

"'ನೀನು ಹೇಳುತ್ತಿರುವುದು ತಪ್ಪೆಂದು ನಾನು ಹೇಳುತ್ತಿಲ್ಲ. ಆ ಆಸೆ ಪ್ರಾಣಿ ಸಹಜ, ಮಾನವ ಪ್ರಾಣಿ ಸಹಜವೂ. ಅದನ್ನು ಹೀಗಳೆಯುತ್ತಿಲ್ಲ. ನಿರಾಕರಿಸುತ್ತಿಲ್ಲವೂ ಇಲ್ಲ. ಸಂಸಾರಿಗಳಿವ್ವಾರಲ್ಲ. ಲೈಂಗಿಕತೆ ಸ್ತ್ರೀ ಪುರುಷ ಜೀವನದ ಒಂದು ಪ್ರಮುಖ ಆರೋಗ್ಯಕರ ಅಂಗ. ಅದರ ಮಹಿಮೆ ಒತ್ತಡ ಆಹಾರ ಮಹಿಮೆಯಂತಲೂ ಹೆಚ್ಚು ತೀವ್ರತರ ಎಂದೂ ಹೇಳಬಹುದೇನೊ. ಹೀಗಿದ್ದೂ ನಿನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲೆ...ನೀನು ಸಹವಾಸದ ಪ್ರಸ್ತಾಪ ಮಾಡಿದೆಯಲ್ಲ. ಅದು ಇಲ್ಲಿ ನನಗೆ ಇಷ್ಟವಿಲ್ಲ, ಸಾಧ್ಯವಲ್ಲ. ನನ್ನೊಡನೆ ಬಾ. ಬಂದದ್ದನ್ನೆಲ್ಲ ಎದುರಿಸಿ ನಿಲ್ಲೋಣ.'

"'ಅದು ನನಗೆ ಹೇಗೆ ಸಾಧ್ಯ? ನೀನು ಅರಿತಿಲ್ಲವೆ? ಆ ಹಿಂದಿನ ತೀರ್ಮಾನ, ಈ ಇಂದಿನ ನನ್ನ ಸ್ಥಿತಿ? ಹೇಗೆ ಬರಲಿ? ಆಗದು ಆಗದು. ಅದಕ್ಕೇ ನಾನು ಆ ಹಿಂದೆ ಕೊಟ್ಟ ಸೂಚನೆ. ನೆನಪಿದೆಯಲ್ಲವೆ? ಪುರವಧುವಾಗಿದ್ದುಕೊಂಡೂ ನಿನ್ನ ತೃಪ್ತಿಗೆ ಕುಂದನ್ನುಂಟುಮಾಡದಿರುವ ವ್ಯವಸ್ಥೆಯೊಂದು ನನಗೆ ಸಮ್ಮತವಾಗುವಂತಹದು.'

"'ಅದು ನನಗೆ ಸಮ್ಮತವಲ್ಲ. ನೀನಾಗಲೆ ತಿಳಿದಿದ್ದೀಯೆ. ನೀನು ಪೂರ್ಣವಾಗಿ ನನ್ನ ಸಹವಾಸದಲ್ಲಿ ಇರುವುದು ಅಗತ್ಯ. ಅದರಲ್ಲಿಯೆ ನಮ್ಮಿಬ್ಬರ ಹಿತಸಾಧನೆ, ಸುಖಸಾಧನೆ ಇರುವುದು.'

"'ಅಯ್ಯೋ, ನಾನೇನು ಮಾಡಲಿ? ಹೇಗೆ ಮಾಡಲಿ? ಹೇಗೆ ತಿಳಿಸಲಿ?...ನಮ್ಮ ಸುಖಕ್ಕೆ ಹಿತಕ್ಕೆ ಇಲ್ಲಿ ಎಲ್ಲವೂ ಇದೆಯಲ್ಲ ಇಲ್ಲಿರುವ ಅಡ್ಡಿಯೇನು ಹೀಗೇಕೆ ಹಟಮಾಡುತ್ತೀಯೆ, ಆನಂದಲೂ? ಪೂರ್ಣವಾಗಿ ನಿನ್ನವಳಾಗಬೇಕೆಂದು, ಪೂರ್ಣವಾಗಿ ನಿನ್ನೊಡನೆಯೇ ಇರಬೇಕೆಂದು? ಪೂರ್ಣತೆಯ ಹಟ! ಪೂರ್ಣ ಹಟ ನಿನ್ನದು!... ಬರಲಾರೆ ಎದುರಿಸಲಾರೆ ಬರುವುದನ್ನೆಲ್ಲ!... ಉಹುಂ ಉಹುಂ...ಸಿದ್ಧಳಿಲ್ಲ'

"'ಅದೇ ನಿನ್ನ ಕಡೆಯ ತೀರ್ಮಾನವಾದರೆ, ನಾನಿನ್ನು ಹೋಗುತ್ತೇನೆ. ಮತ್ತೆ ಬರುತ್ತೇನೆ, ನೀನು ನನ್ನೊಡನೆ ಬರುವಂತೆ ಆದಾಗ,' ಎಂದು ಅವನು ಹೋಗಲು ತಿರುಗಿದ.

"'ನಿಲ್ಲು! ನಿಲ್ಲು ಹೋಗಬೇಡ! ಹಿಂದಿರುಗಿ ಬಾ! ಇಲ್ಲೇ ಇರು!...' ಎಂದು ಆರ್ತಳಾಗಿ ಅಂಗಲಾಚುತ್ತಿದ್ದಳು.

"'ಸಾಧ್ಯವಿಲ್ಲ. ಮತ್ತೆ ಬರುತ್ತೇನೆ. ನಿನ್ನನ್ನು ಕರೆದೊಯ್ಯುತ್ತೇನೆ–ನೀನು ಬಂದರೆ.' ಎಂದು ಅವನು ಮೆಟ್ಟಿಲನ್ನು ಇಳಿಯುತ್ತಿದ್ದ.

"'ಇಲ್ಲಿ ನೋಡು! ತಿರುಗಿ ನೋಡು ಒಮ್ಮೆ. ಕೇಳು! ಒಂದೇ ಮಾತು! ನನ್ನ ಸೂಚನೆಯಂತೆ

ಇಲ್ಲಿಯೆ, ಈ ಪುರದಲ್ಲಿಯೇ, ಇರದಿದ್ದರೂ ಸರಿಯೆ. ಹೇಗೊ ನುಂಗಿಕೊಳ್ಳುತ್ತೇನೆ, ನನ್ನ ಆಶಾಭಂಗವನ್ನು. ನಿರಾಶೆಯನ್ನು. ಈಗ ಇಷ್ಟಾದರೂ ಮಾಡು; ಬಾ. ಸ್ವಲ್ಪ ಕಾಲವಾದರೂ ನನ್ನೊಡನೆ ಇರು. ನನ್ನ ಸತ್ಕಾರವನ್ನು ಸ್ವೀಕರಿಸು! ನಿನ್ನ ಪ್ರೇಯಸಿಗೆ, ಪೂರ್ವ ಪ್ರೇಯಸಿಗೆ, ಪ್ರಾಣ ಪ್ರೇಯಸಿಗೆ, ಪೂರ್ವ ವಧುವಿಗೆ, ಈ ಈಗಿನ ಪೂರ್ವವಧುವಿಗೆ, ಹಿಡಿ ಭಿಕ್ಷೆಯನ್ನು ನೀಡಿ ಹೋಗು!...ಒಂದೇ ಹಿಡಿ ಭಿಕ್ಷೆ! ಒಂದೇ ಹಿಡಿ, ಒಂದೇ ತುತ್ತು! ಒಂದೇ ಘಳಿಗೆ ಇದ್ದು ಹೋಗು ಬಾ! ಬಾ! ಬಾ!' ಎಂದು ಕೂಗುತ್ತ ಅವನ ಹಿಂದೆ ಒಂದು ಮೆಟ್ಟಿಲನ್ನು ಇಳಿದಳು.

" 'ಮತ್ತೆ ಬರುತ್ತೇನೆ!' ಎಂದು ತಿರುಗಿ ನೋಡದೆಯೆ ನಡೆಯನ್ನು ತ್ವರಿತಗೊಳಿಸಿದ.

" 'ಹೋಗಲಿ, ನಿನ್ನ ಭಿಕ್ಷೆಯನ್ನಾದರೂ ಹಾಕುತ್ತೇನೆ–ಬಾ' ಎಂದು ಕರೆದಳು.

"ಅವನು ಗಮನಕ್ಕೆ ತಂದುಕೊಳ್ಳದವನಂತೆ ಹೊರಟು ಹೋಗುತ್ತಿದ್ದ.

" 'ಅಯ್ಯೋ, ಇಂಥ ಸುಂದರ ಪುರುಷಾಕೃತಿಯಲ್ಲಿ ಇಷ್ಟೊಂದು ಕಾಠಿಣ್ಯವಿರಬಲ್ಲದೆ? ಅಂಥ ಪ್ರೀತಿಯಲ್ಲಿ, ಮೋಹದಲ್ಲಿ, ಇಂಥ ಅಲಕ್ಷ್ಯ ಸಾಧ್ಯವೆ ಓ, ನಾನೆಂಥ ನಿರ್ಭಾಗ್ಯೆ! ಅವನೆಷ್ಟು ನಿರ್ಭಾಗ್ಯ!' ಎಂದುಕೊಳ್ಳುತ್ತ ನಿಂತಲ್ಲಿ ನಿಂತಿದ್ದಳು. ನೋಡುತ್ತಿದ್ದಳು, ದೂರ ದೂರವಾಗುತ್ತಿದ್ದ ತನ್ನ ಪರಮಪ್ರಿಯ ಮೋಹಕ ವಸ್ತುವನ್ನು.

"ಸ್ವಲ್ಪ ಹೊತ್ತಿನ ಕೆಳಗೆ ಅವನನ್ನು ಕಂಡಾಗ ಒಮ್ಮೆಲೇ ಗಗನಕ್ಕೇರಿ ಕಾಮನಬಿಲ್ಲಿನ ಮೇಲೆ ಆಡುತ್ತಿದ್ದ ಅವಳ ಉತ್ಸಾಹದ ವರ್ಣ ವರ್ಣ ಪತಂಗ ಈಗ ಆಶಾಸೂತ್ರ ಕಡಿದು ಉಲ್ಕಾಪಾತದಂತೆ ಧರೆಗೆ ಬಿದ್ದಿತ್ತು. ಸುಖದ ಊರ್ಧ್ವ ಸ್ವರ್ಗಕ್ಕೆ ಏರಿದ್ದವಳು ಸಹಸ್ರಾಕ್ಷ ಇಂದ್ರ ಶಾಪದಿಂದ ಅಧಃ ಪಾತಾಳ ನರಕ ಯಾತನೆಗೆ ಬಿದ್ದಿದ್ದಳು. ಮರುಗುತ್ತ ಕೊರಗುತ್ತ ದುಃಖಾವತಾರವಾಗಿ ಗೃಹದೊಳಕ್ಕೆ ಹಿಂದಿರುಗಿ ಮುಂಬಾಗಿಲನ್ನು ಧಡಾರನೆ ಬಡಿದು ಹಾಕಿದಳು. ಭಿಕ್ಷೆಯನ್ನು ಹಿಡಿದು ನಿಂತಿದ್ದ ಚೇಟಿಯನ್ನು 'ಮುಂಚೆಯೇ ಏಕೆ ತರಲಿಲ್ಲ? ಹೋಗು–ಇಲ್ಲಿಂದ!' ಎಂದು ಗದರಿಸಿದಳು. ಶಯನ ಗೃಹವನ್ನು ಪ್ರವೇಶಿಸಿ ನಿಲುವುಗನ್ನಡಿಯ ಮುಂದೆ ನಿಂತು ತನ್ನ ಅಪೂರ್ಣ ಅಲಂಕಾರವನ್ನು ಕಂಡು ತನ್ನನ್ನು ಅಣಕಿಸಿಕೊಂಡು, ಅಲಂಕಾರವನ್ನು ಕೆಡಿಸಿಕೊಂಡು, ಮುಂದಿದ್ದ ಸೌಂದರ್ಯ ಸಾಮಗ್ರಿಯನ್ನೆಲ್ಲ ಗುಡ್ಡೆಮಾಡಿ ಗೂರಾಡಿ, ಸ್ವರ್ಣ ವಜ್ರ ಕಂಠಾಭರಣವನ್ನು ಕಳಚಿ ಎಸೆದು ಕನ್ನಡಿಯನ್ನು ಒಡೆದು ಚೂರು ಚೂರಾಗಿಸಿ, ಬಿಕ್ಕಿ ಬಿಕ್ಕಿ, ಮಯೂರ ತೂಲಿಕಾತಲ್ಪದ ಮೇಲೆ ಮುಗುಚಿ ಬಿದ್ದುಕೊಂಡು ದಿಂಬಿನಲ್ಲಿ ಮುಖ ಹುದುಗಿಸಿ, ದೇಹಲತೆ ಅದುರುವಂತೆ ರೋದಿಸುತ್ತಿದ್ದಳು, ರೋದಿಸುತ್ತಲೇ ಇದ್ದಳು. ಘಳಿಗೆಯ ಮೇಲೆ ಘಳಿಗೆ ಕಳೆಯುತ್ತಿತ್ತು. ಚೇಟಿ ತಂದಿಟ್ಟ ಮೃಷ್ಟಾನ್ನ ಭೋಜನ ತಂಗಳಾಗುತ್ತಿತ್ತು. ಪೂರ್ವಾಹ್ನ ಅಪರಾಹ್ನವಾಯಿತು. ಅವಳ ಸ್ಥಿತಿ ಇನ್ನೂ ಮಾರ್ಪಡದೆ ಅಂತೆಯೇ ಇತ್ತು.

"ಇಂಥ ಸಮಯದಲ್ಲಿ ಒಂದು ವಿಶೇಷ ಘಟನೆ ನಡೆಯಿತು. ಅಹುದು. ಕೆಲವು ವೇಳೆ ಜೀವನಕ್ಕೆ ತಿರುವು ಕೊಡಬಲ್ಲ ಎರಡು ಘಟನೆಗಳು ಒಂದೇ ಕಾಲದಲ್ಲಿ ನಡೆಯುವುದುಂಟು, ನಡೆಯುತ್ತಲೇ ಇರುತ್ತವೆ.

"ಅವಳು ಜೀವನದಲ್ಲಿಯೇ ನಿರುತ್ಸಾಹಗೊಂಡು, ಜಿಗುಪ್ಸೆಹೊಂದಿ ಬಿದ್ದುಕೊಂಡಿದ್ದಾಗ ಅವಳ ಮನೆಯ ಮುಂದೆ ಕೆಲವು ರಥಗಳು ಅಶ್ವಾರೋಹಿಗಳೊಂದಿಗೆ ಬಂದು ನಿಂತುವು–ಮಗಧ ರಾಜನ ಕಡೆಯಿಂದ ಬಂದಿದ್ದವು. ಬಿಂಬಸಾರ ಇರಬೇಕು. ಅಥವ ಇನ್ನು ಯಾರೊ. ತಂದೆಯನ್ನೇ ಕೊಲ್ಲಿಸಿದ ಕ್ರೂರಿ ಅಜಾತಶತ್ರುವೆ? ಇದ್ದರೂ ಇರಬಹುದು. ಅದು ಸ್ಪಷ್ಟವಾಗಿಲ್ಲ. ಅಷ್ಟು ಮುಖ್ಯವೂ ಅಲ್ಲ. ಇರಲಿ. ಆ ರಥಗಳಲ್ಲಿ ಒಂದು ಸರ್ವಾಲಂಕೃತವಾಗಿತ್ತು. ಅದರಲ್ಲಿ ಯಾರೂ ಇರಲಿಲ್ಲ. ಇನ್ನೊಂದು ಅತ್ಯಮೂಲ್ಯ ವಸ್ತ್ರಾಭರಣಗಳಿಂದ ತುಂಬಿತ್ತು. ಮತ್ತೊಂದರಲ್ಲಿ ಒಬ್ಬ ರಾಜಗೃಹದ ಅಧಿಕಾರಿ. ಕಡೆಯದರಲ್ಲಿ ರಾಜದಾಸಿಯರು. ಅಶ್ವಾರೋಹಿಗಳಾಗಿ ಅಂಗರಕ್ಷಕರಾಗಿ ಬಂದಿದ್ದುದು ರಾಜಭಟದಳ.

"ಇಲ್ಲಿ ಒಂದು ಮುಖ್ಯ ಸುದ್ದಿಯನ್ನು ಆಡಬೇಕು. ಅದು ಇದು. ಈವರೆಗೆ ವಾಸವಪಾಲಿಯ ಅಪೂರ್ವ ಸೌಂದರ್ಯ ಖ್ಯಾತಿ ಸಂಗೀತ ನರ್ತನಾದಿ ಕಲಾಕೀರ್ತಿ ಸರ್ವವಸ್ತುವಿನ ಸಮೀಪ ಪ್ರದೇಶಗಳಲ್ಲಷ್ಟೇ ಅಲ್ಲದೆ ರಾಜಧಾನಿಯನ್ನು ಮುಟ್ಟಿತ್ತು. ರಾಜನ ಕಿವಿಗೂ ಬಿದ್ದಿದ್ದಿತು. ಅವಳು ಪುರವಧು. ಪುರವನಿತೆ ಅಂದರೆ ಶ್ರೇಷ್ಠವರ್ಗ ವೇಶ್ಯೆಯೆಂಬುದು ಎಲ್ಲೆಲ್ಲಿಯೂ ಪ್ರಸಿದ್ಧವಾದದ್ದೆ. ರಾಜನಿಗೂ ತಿಳಿದಿದ್ದಿತು. ಹಾಗೆಂದೆ ಈ ರಥ ಅಶ್ವಾರೋಹಿ ಅಧಿಕಾರ ಪರಿವಾರವನ್ನು ಕಳುಹಿಸಿದ್ದ. ಅವಳಿಗೆ ರಾಜ ಬಹುಮಾನವನ್ನು ಸಮರ್ಪಿಸಿ ಸಕಲ ಉಚಿತ ಮರ್ಯಾದೆಯಿಂದ ರಾಜಧಾನಿಗೆ ಕರೆತರಬೇಕೆಂಬುದು ರಾಜಾಜ್ಞೆ.

"ಅಧಿಕಾರಿಗೆ ದ್ವಾರವನ್ನು ತೆರೆದ ಚೇಟಿಗೆ ಅವನು ತನ್ನ ಪರಿಚಯವನ್ನು ಮಾಡಿಕೊಟ್ಟು ತಾನೊಂದು ರಾಜ ಶುಭಸಂದೇಶವನ್ನು ತಂದಿರುವದಾಗಿ ಹೇಳಿ ಅವಳ ಸ್ವಾಮಿನಿಯನ್ನು ಕಾಣಬೇಕೆಂದಾಗ ಅತ್ಯಾನಂದತುಂದಿಲಳಾದ ಚೇಟಿ ಆತನನ್ನು ಉಚಿತ ಮರ್ಯಾದೆಯಿಂದ ಬರಮಾಡಿಕೊಂಡು ಕುಳ್ಳಿರಿಸಿ ಸಂಭ್ರಮದಿಂದ ವಾಸವಪಾಲಿಯಲ್ಲಿಗೆ ಓಡೋಡಿದಂತೆಯೇ ಹೋದಳು.

"'ದೇವಿ...'

"ದೇವಿ ಅಲುಗಾಡಲಿಲ್ಲ. ಹಿಂದೆ ಕಂಡಿದ್ದಂತೆಯೇ ಅಸ್ತವ್ಯಸ್ತವಾಗಿ ಗೋಡೆಗೆ ಮುಖ ತಿರುಗಿಸಿ ಮಲಗಿಕೊಂಡಿದ್ದಳು.

"'ದೇವಿ ಮಹಾರಾಜರ ಕಡೆಯಿಂದ ಅಧಿಕಾರಿಯೊಬ್ಬರು ಬಂದಿದ್ದಾರೆ.' ಎಂದಾಗಲೂ ದೇವಿ ಕೇಳದಂತೆಯೇ ಇದ್ದಳು.

"ರಾಜ ಶುಭಸಂದೇಶವನ್ನು ತಂದಿದ್ದಾರಂತೆ. ತಮ್ಮ ದರ್ಶನಕ್ಕಾಗಿ ಕಾದಿದ್ದಾರೆ.' ಎಂದು ಒತ್ತಿ ಹೇಳಿದಳು.

"ಆಗಲೂ ವಾಸವಪಾಲಿ ಚಲಿಸಲಿಲ್ಲ.

"'ನಾನು ಯಾರನ್ನೂ ಯಾವುದಕ್ಕಾಗಿಯೂ ನೋಡಲು ಇಚ್ಛಿಸುವುದಿಲ್ಲ. ನನ್ನ ಸ್ಥಿತಿ ಈಗ ಹಾಗಿದೆ. ತಿಳಿಸಿಬಿಡು.'

"'ದೇವಿ!...'ಎನ್ನುತ್ತ ಭಯಭೀತಳಾದಳು. ಧೈರ್ಯ ತಂದುಕೊಂಡು 'ದೇವಿ ಈತ ರಾಜರ ಅಧಿಕಾರಿ! ರಾಜ ಸಂದೇಶ......'ಎನ್ನುತ್ತಿದ್ದಂತೆಯೇ ವಾಸವಪಾಲಿ ಸಿಡಿದೆದ್ದು ಕುಳಿತು, 'ಯಾರಾದರೇನು? ಏನು ತಂದರೇನು? ಯಾರಿಂದ ತಂದರೇನು? ಹೇಳಲಿಲ್ಲವೇನು? ಹೋಗು! ತಿಳಿಸು!' ಎಂದುಬಿಟ್ಟಳು.

"ದಿಕ್ಕುಗಾಣದ ಚೇಟಿ ಅಲ್ಲಿಂದ ಬಂದು ಅಧಿಕಾರಿಗೆ ಆದಷ್ಟು ನಯವಾಗಿ ನಮ್ರತೆಯಿಂದ 'ನಮ್ಮ ಸ್ವಾಮಿನಿಗೆ ಸ್ವಸ್ಥವಿಲ್ಲ. ದಯವಿಟ್ಟು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾರೆ. ನೋಡುವಂತಿಲ್ಲವಾಗಿರುವುದಕ್ಕಾಗಿ ವ್ಯಸನ ಪಡುತ್ತಾರೆ' ಎಂದು ಹೇಳಿದಾಗ ಆತ ಸ್ತಂಭೀಭೂತನಾದ. ಹೀಗೆ ನಕಾರಾತ್ಮಕ ಉತ್ತರ ಬಂದಿದ್ದುದು ಇದೇ ಪ್ರಥಮ ಅವನಿಗೆ. ಆದರೆ ಆತ ಬೇಗನೆ ಸಾವರಿಸಿಕೊಂಡ. 'ಅಂಥ ಸ್ಥಿತಿ ಇದ್ದರಂತೂ ನಾನು ನೋಡಲೇಬೇಕು... ನಡೆ. ಹೋಗೋಣ' ಎಂದವನೆ ಹೊರಟೇ ಬಿಟ್ಟ. ಚೇಟಿಗೆ ಬೇರೆ ದಾರಿಯೇ ಇರಲಿಲ್ಲ; ಅವನನ್ನು ವಾಸವಪಾಲಿಯ ಶಯ್ಯಾಗೃಹಕ್ಕೆ ಕರೆದುಕೊಂಡು ಹೋಗಲೇಬೇಕಾಯಿತು.

"ಚೇಟಿ ಶಯ್ಯಾಗೃಹದ ದ್ವಾರವನ್ನು ಓರೆಮಾಡಿ ಕಾಣಿಸಿಕೊಂಡಾಗ ವಾಸವಪಾಲಿ ಹಿಂದಿನಂತೆಯೇ ಇದ್ದವಳು ಎದ್ದು ಕುಳಿತಿದ್ದಳು. ಚೇಟಿಯನ್ನು ಕಂಡು ಭ್ರೂಕುಂಚನಗೊಳಿಸಿದಳು. ಅಸಹನೆಯಿಂದ ನೇತ್ರ ದುರುಗುಟ್ಟಿತು.

"'ದೇವಿ—ಅತಿ...' ಚೇಟಿ ಅನ್ನುವಷ್ಟರಲ್ಲಿಯೇ ತಡೆದು ವಾಸವಪಾಲಿ 'ಮತ್ತೇಕೆ ಬಂದೆ, ಅದನ್ನು ಹೇಳುವುದಕ್ಕೆ? ಆಗಲೇ ಹೇಳಲಿಲ್ಲವೆ? ಅವನನ್ನೇಕೆ ಕಳುಹಿಸಲಿಲ್ಲ?' ಎಂದು ಗದರಿಸಿದಳು.

"ಆಗ ಅಧಿಕಾರಿ ಸಂಪ್ರದಾಯವನ್ನು ತೊರೆದು ಒಳಹೊಕ್ಕು 'ದೇವಿ ಕ್ಷಮಿಸಬೇಕು. ಇದು ಅವಳ ತಪ್ಪಲ್ಲ, ನನ್ನದು. ನಾನು ನನ್ನ ಕರ್ತವ್ಯ ಪಾಲನೆ ಮಾಡಲೇಬೇಕಾಗಿದೆ. ರಾಜಾಗ್ರಹಕ್ಕೆ ಪಾತ್ರನಾಗಲಾರೆ,' ಎಂದು ಪೀಠಿಕೆ ಹಾಕಿದ. ವಾಸವಪಾಲಿ ಕೋಪದಿಂದ ಅದಕ್ಕಿಂತ ಹೆಚ್ಚಾಗಿ ಬೇಸರದಿಂದ ಕೇಳುತ್ತಿದ್ದಳು. "ದೇವಿ ತಾವು ರಾಜಾನುಗ್ರಹಕ್ಕೆ ಪಾತ್ರರಾಗಿರುವಿರೆಂದು ತಿಳಿಸಲು ಬಹಳ ಸಂತೋಷಿಸುತ್ತೇನೆ. ಪ್ರಭುಗಳು ತಮ್ಮ ಪ್ರೀತ್ಯರ್ಥ ವಸ್ತ್ರಾಭರಣ ಕಾಣಿಕೆಯನ್ನು ನನ್ನೊಡನೆ ಕಳುಹಿಸಿದ್ದಾರೆ. ತಮ್ಮನ್ನು ಸಕಲ ಮರ್ಯಾದೆ

ಯೋಣ ರಾಜಗೃಹಕ್ಕೆ ಕರೆದು ತರಬೇಕೆಂದು ಶಾಸನ ರಾಜಭಟ ರಕ್ಷಕ ಪಡೆಯನ್ನೂ ನನ್ನೊಡನೆ ಕಳುಹಿಸಿದ್ದಾರೆ. ತಮ್ಮ ಸಿದ್ಧತೆಗಾಗಿ ನಾನು ಕಾಯುತ್ತೇನೆ. ನನ್ನೊಡನೆ ದಯವಿಟ್ಟು ಬಿಜಯ ಮಾಡಿಸಬೇಕು' ಎಂದು ವಿನಮ್ರನಾಗಿ ವಿಜ್ಞಾಪಿಸಿಕೊಂಡ.


"ಆದರೆ ಅದೆಲ್ಲ ಅವಳ ಕಿವಿಗೇ ಹೋದಂತೆ ಕಾಣಲಿಲ್ಲ. ಅವಳು ಅದೇ ಅಸಹನೆ ಬೇಸರಗಳಿಂದ 'ಆಗಲೆ ಹೇಳಿ ಕಳುಹಿಸಿದೆನಲ್ಲ? ನಾನೀಗ ಯಾರ ಬಳಿಗೂ ಬರಲಾರೆ. ಯಾರನ್ನೂ ಬರಮಾಡಿಕೊಳ್ಳಲಾರೆ. ಸೂಕ್ತವಾಗಿ ನಿವೇದಿಸಿ ಬಲಾತ್ಕರಿಸದಿರಿ. ನಮಸ್ಕಾರ!' ಎಂದು ಬಿದ್ದುಕೊಂಡಳು. ಗೋಡೆಯ ಕಡೆಗೆ ತಿರುಗಿಕೊಂಡು ಬಿಟ್ಟಳು.

"ಈಗ ಮತ್ತೊಮ್ಮೆ ಅಧಿಕಾರಿ ಭಂಗಿತನಾದ. ತನ್ನ ಕಿವಿಗಳನ್ನೇ ನಂಬದಾದ. ಅವನಿಗೆ ಕೋಪ ಬಂದಿತು. ತಡೆದುಕೊಂಡು 'ದೇವಿ ತಮಗೆ ನಾನು ತಿಳಿಸಿರುವುದು ರಾಜಾಪೇಕ್ಷೆಯೆಂಬುದನ್ನು ಗಮನಿಸಬೇಕು' ಎಂದು ಒತ್ತಿ ಹೇಳಿದ. ಅವಳು ಮಾತನ್ನೇ ಆಡದಿದ್ದಾಗ ಕೋಪವೇರಿ 'ಆ ಅಪೇಕ್ಷೆ ರಾಜಾಜ್ಞೆಯೂ ಕೂಡ' ಎಂದ. ಅವಳು ಅದನ್ನೂ ಲಕ್ಷಿಸದೆಯೇ ಇದ್ದಾಗ 'ಅದನ್ನು ಉಲ್ಲಂಘಿಸುವಂತಿಲ್ಲ ಪರಿಣಾಮವೇನಾದೀತೋ ಹೇಳುವಂತಿಲ್ಲ' ಎಂದು ಸೇರಿಸಿದ.

"'ಏನಾದರೂ ಆಗಲಿ, ಶೂಲಕ್ಕೇರಿಸಲಿ ಬೇಕಾದರೆ! ನನಗೆ ಈ ಜೀವನದಲ್ಲಿಯೇ ಅಸಹ್ಯ ಜಿಹಾಸೆಯುಂಟಾಗಿದೆ! ಕೃಪೆಯಿಟ್ಟು ಹೋಗಿ!' ಎಂದು ಬಿಟ್ಟಳು. ಅವನು 'ಹಾಗೆಯೇ ಪ್ರಭುಗಳಿಗೆ ತಿಳಿಸಬಹುದೆ?' ಎಂದಾಗ ಅವಳು 'ಹೇಗಾದರೂ ತಿಳಿಸಬಹುದು' ಎಂದು ಮುಗಿಸಿದಳು.

"ಅಧಿಕಾರಿಗೆ ಅವಳು ಒಂದು ಸಮಸ್ಯೆಯಾದಳು. ಅವನು ರಾಜಾಜ್ಞೆಯ ಮಿತಿಯನ್ನು ಮೀರಿ ತಾನೇ ಸ್ವತಂತ್ರಿಸಿ ಭಯೋತ್ಪಾದನೆ, ಬಲವಂತ ಮತ್ತೇನನ್ನೂ ಮಾಡುವಂತಿರಲಿಲ್ಲ. ರಾಜಭಯ. ಇವಳ ಮನಸ್ಸನ್ನು ಪರಿವರ್ತನೆ ಮಾಡುವ ಮಾರ್ಗವೂ ತಿಳಿಯದು. ಹೀಗಿದ್ದು ಅವನು ಅವಳನ್ನು ಬೀಳ್ಕೊಂಡು ಅಲ್ಲಿಂದ ಹೊರಟ. ಗೃಹದ್ವಾರದ ಬಳಿಯಲ್ಲಿ ನಿಂತು 'ನಿಮ್ಮ ಸ್ವಾಮಿನಿ ಹೀಗೇಕೆ ನಡೆದುಕೊಳ್ಳುತ್ತಾಳೆ! ರಾಜಾಹ್ವಾನವೆಂದರೆ ಕುಣಿಯುತ್ತ ನಗೆಯುತ್ತ ಬರಬೇಕು—ಅಂಥ ಅಪರೂಪ ಅತ್ಯಮೂಲ್ಯ ಕರೆ. ಅಂಥಾದ್ದರಲ್ಲಿ ಹೀಗೆ ತಿರಸ್ಕರಿಸುತ್ತಿದ್ದಾಳಲ್ಲ—ಪರಿಣಾಮವನ್ನೂ ಪರಿಗಣಿಸದೆ? ಅವರಿಗೆ ವಿವೇಚನಾಜ್ಞಾನ ನಾಶವಾಗಿಬಿಟ್ಟಿದೆಯೆ? ಉನ್ಮಾದವೆ? ಇನ್ನೇನು ಕಾರಣ?' ಎಂದು ಕೇಳಿದ. ಅದಕ್ಕೆ, ಉತ್ತರವಾಗಿ ಅವಳು ತನ್ನ ಸ್ವಾಮಿನಿಯು ಉಪಗುಪ್ತ ಭಿಕ್ಷು ಹೋದ ಅಂದು ಹೊರದ್ವಾರದಲ್ಲಿ ನಡೆದಿದ್ದ ಅಧ್ಯಾಯ ಹೀಗೆ ತನಗೆ ತಿಳಿದಷ್ಟನ್ನು ಹೇಳಿದಳು. ಕೇಳಿ ಅಧಿಕಾರಿಯಲ್ಲಿದ್ದ ಆಶ್ಚರ್ಯ ದ್ವಿಗುಣವಾಯಿತು. ಈ ವಿಚಾರವನ್ನು ಮನಸ್ಸಿನಲ್ಲಿ ಭದ್ರವಾಗಿ ಇಟ್ಟುಕೊಂಡ. ರಾಜಧಾನಿಗೆ ಹಿಂದಿರುಗಿದ..." ಎಂದು ದಾದಾಜಿ ಕ್ಷಣಕಾಲ ಮಾತನ್ನು ನಿಲ್ಲಿಸಿದರು.

"ಅಲ್ಲಾ ಅವಳೆಂಥ ಹೆಣ್ಣು! ಅವಳ ಭಿಕ್ಷು



• ಮಂಗನ ಕಾಯಿಲೆ •

ಮೋಹ ಅಂಥಾದ್ದೆಂದು ಅವಳು ಹಾಗೆ ನಡೆದು ಕೊಂಡಳೆಂದು ಸಂಭವವೇ ಕಷ್ಟವಾಗಿದೆ–ರಾಜನೊಬ್ಬ ಕರೆಯ ಕಳುಹಿಸಿದ್ದಾಗ" ಎಂದು ನಾನು ಹೇಳಿದೆ.

"ಸತ್ಯವಾದದ್ದೆ – ನಿಮ್ಮ ಸಂಶಯ. ಯಾರಿಗೆ ತಾನೆ ಹಾಗೆ ಅನ್ನಿಸುವುದಿಲ್ಲ ಹೇಳಿ? ಆದರೆ ಮಾನವ ಮನಸ್ಸು ವಿಚಿತ್ರವಾದದ್ದು. ಅದರ ನಡವಳಿಕೆಯನ್ನು ಹೀಗೆಂದು ಹೇಳಲಾಗುವುದಿಲ್ಲ. ಕೆಲವರು ಕೆಲವು ವೇಳೆ ಜೀವನವನ್ನು ಉಳಿಸಿಕೊಳ್ಳುವ ಅವಕಾಶವಿದ್ದರೂ, ಲೋಕಸುಖ ಸಂಪತ್ತೆಲ್ಲ ದೊರೆಯುವ ಸಂದರ್ಭವಿದ್ದರೂ ತಿರಸ್ಕರಿಸುತ್ತಾರೆ. ಇನ್ನಿಲ್ಲದ ಕಷ್ಟವನ್ನು ಅನುಭವಿಸಲು, ಮರಣ ಹೊಂದಲೂ ಸಿದ್ಧರಿರುತ್ತಾರೆ. ಅವನ್ನೇ ಆಯ್ದುಕೊಳ್ಳುತ್ತಾರೆ. ಕೆಲವರು ಒಂದು ತತ್ವಕ್ಕಾಗಿ ಒಂದು ವಾಗ್ದಾನಕ್ಕಾಗಿ ಸಾಕ್ರೆಟಿಸ್ ಜೀಸಸ್ ನೋಡಿ; ನಮ್ಮ ರಾಮಾಯಣ ಮಹಾಭಾರತ ಪುರಾಣಗಳಲ್ಲಿ ಅಂಥವರಿಂದ ತುಂಬಿ ಹೋಗಿವೆ ಪರಸ್ಪರ ಪ್ರೇಮಕ್ಕಾಗಿ ಮೋಹಕ್ಕಾಗಿ. ಜೀವ ತೆತ್ತವರ ಸಂಖ್ಯೆ ಜಗತ್ತಿನಲ್ಲೇನು –ಕಡಮೆಯೆ? ಇದರಲ್ಲಿ ಕಾರ್ಯಕಾರಣ! ಲಾಭನಷ್ಟ ಲೆಕ್ಕಾಚಾರ ಪ್ರಶ್ನೆಯೇ ಇಲ್ಲ. ಎಲ್ಲಾ ಭಾವನೆ, ಭಾವೋದ್ವೇಗ, ಮಾತ್ರವೆ. ಅದನ್ನು ಭ್ರಮೆಯೆನ್ನಬಹುದು, ಮೋಹೋನ್ಮಾದವೆಂದೂ ಹೇಳಬಹುದು. ಅಂತೂ ವಾಸವದತ್ತೆಯ ನಡವಳಿಕೆ ಅವಳ ಆಗಿನ ಮನಸ್ಥಿತಿ ಹೇಗಿತ್ತೆಂದು ತಿಳಿಸುತ್ತದೆನ್ನಬೇಕಾಗುತ್ತದೆ. ಅದು ಅನುಭವಿಸುವವರಿಗಷ್ಟೇ ವೇದ್ಯ" ಎಂದು ದಾದಾಜಿ ವಿವರಿಸಿದರು.

"ಅಹುದು, ಸರಿಯಾಗಿ ಹೇಳಿದಿರಿ. ದಯವಿಟ್ಟು ಕಥನವನ್ನು ಮುಂದುವರಿಸಿ." ಎಂದೆ.

"ಹುಂ…ರಾಜಧಾನಿಗೆ ಹಿಂದುರುಗಿದ ಅಧಿಕಾರಿಗೆ ರಾಜಕಾರ್ಯದಲ್ಲಿ ತಾನು ವಿಫಲನಾಗಿದ್ದುದಕ್ಕೆ ಬೇಸರ, ಭಯ, ಆ ವೈಫಲ್ಯಕ್ಕೆ ಕಾರಣಳಾದವಳ ಮೇಲೆ ಕೋಪ. ನಿರೀಕ್ಷಿಸಿಕೊಂಡು ಹಿಗ್ಗುತ್ತಿದ್ದ ಮಹಾ ಬಹುಮಾನ ತಪ್ಪಿಹೋದದ್ದಕ್ಕಾಗಿ ಬಹಳ ವ್ಯಸನ. ಇಂಥವನು, ಅನುಭವಿ ಅಧಿಕಾರಿ, ವಾಸವದತ್ತೆಯನ್ನು ಕ್ಷಣಕ್ಷಣವೂ ನಿರೀಕ್ಷಿಸುತ್ತಿದ್ದ ರಾಜನ ಸಮ್ಮುಖದಲ್ಲಿ ಹೇಗೆ ಅವಳ ಸೌಂದರ್ಯದ ಬಗ್ಗೆ ಅವಳ ನಡವಳಿಕೆಯ ಬಗ್ಗೆ, ಅವಳ ಭಿಕ್ಕು ಮೋಹದ ಬಗ್ಗೆ, ರಾಜಾಪೇಕ್ಷೆ ಅಜ್ಞೆ ತಿರಸ್ಕಾರದ ಬಗ್ಗೆ ಹೇಗೆ ವರ್ಣರಂಜಿತವಾಗಿ ವರದಿ ಮಾಡಿ ತನ್ನನ್ನು ಉಳಿಸಿಕೊಂಡು ಅವಳನ್ನು ತೀವ್ರ ರಾಜಾಗ್ರಹಕ್ಕೆ ಗುರಿಮಾಡಿದನೆಂದು ಊಹಿಸುವುದು ಸುಲಭ. ಅಧಿಕಾರಿ ಅವಳನ್ನು ಕರೆತರದಿದ್ದಾಗಲೆ ಕಿಡಿಕಿಯಾದ ರಾಜಕೋಪ, ವರದಿಯನ್ನು ಕೇಳಿ ಕೇಳಿದಂತೆ ಭುಗಿಲು ಭುಗಿಲು ಜ್ವಾಲೆಯಾಗಿ ಮೇಲೆದ್ದಿತು. ತತ್ಕ್ಷಣದಲ್ಲಿಯೇ ಅಧಿಕಾರಿಗೆ ರಾಜಾಜ್ಞೆ ಹೊರಟು ಬಿಟ್ಟಿತು. 'ಈ ಕ್ಷಣವೇ ನೀನು ಅಲ್ಲಿಗೆ ಮತ್ತೆ ಹಿಂದಿರುಗಿ ಹೋಗಬೇಕು. ಅವಳ ಗೃಹವನ್ನು ಒಂದು ಚೂರನ್ನೂ ಬಿಡದಂತೆ ಅವಳ ದೇಹದ ಮೇಲಿನ ಆಭರಣಗಳೂ ಸೇರಿ ಸಕಲ ವಸ್ತುಸಂಪತ್ತುಗಳನ್ನೂ ನಿನ್ನ ವಶಕ್ಕೆ ತೆಗೆದುಕೊಳ್ಳಬೇಕು. ಕಿಂಚಿತ್ತೂ ಕನಿಕರವನ್ನು ತೋರಿಸದೆ ಆ ರೂಪಗರ್ವಿತೆ, ಭಿಕ್ಕುಮೋಹಿತೆಯ ನಾಸಿಕಾಚ್ಛೇದ ಮಾಡಿ, ವಿರೂಪಗೊಳಿಸಿ, ಗೃಹದಿಂದ ಹೊರಗೆ ಅಟ್ಟಬೇಕು. ಯಾರೂ ಅವಳಿಗೆ ಆಶ್ರಯ ನೀಡಕೂಡದು, ಅವಳ ಸಂಪರ್ಕ ಇಟ್ಟುಕೊಳ್ಳಬಾರದು. ಈ ರಾಜಾಜ್ಞೆಯನ್ನು ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಸರ್ವ ವಸ್ತುವಿನಲ್ಲಿ ಎಲ್ಲ ಸ್ಥಳದಲ್ಲಿಯೂ ಘೋಷಿಸಬೇಕು. ನೀನು ವಶಪಡಿಸಿಕೊಂಡ ಚರಸ್ಥಿರ ಸಂಪತ್ತನ್ನೆಲ್ಲ ವಿಕ್ರಯಿಸಿ ಬಂದ ಧನವನ್ನು ರಾಜ್ಯಭಾಂಡಾರಕ್ಕೆ ಸೇರಿಸಬೇಕು. ಈ ರಾಜಾಜ್ಞೆಯನ್ನು ಶೀಘ್ರವಾಗಿ ನೆರವೇರಿಸಿ ಬಂದ ವರದಿ ಮಾಡು. ಹೋಗು!'

"ವಾಸವದತ್ತೆಯ ಕನಿಕರ ತರುವ ಆಕ್ರಂದನವನ್ನೂ ಲಕ್ಷಿಸದೆ, ದುಶ್ಯಾಸನ ಬಹಿಷ್ಟೆ ದ್ರೌಪದಿಯನ್ನು ಮುಡಿಹಿಡಿದು ಸೆಳೆಯುತ್ತ ರಾಜಸಭೆಗೆ ಎಳೆದುತಂದು ನಿಲ್ಲಿಸಿದಂತೆ ಇವಳನ್ನು ವೀಧಿಗೆ ತಂದು, ಪುರಜನರ ಮುಂದೆ ನಾಸಿಕಾಚ್ಛೇದಗೊಳಿಸಿ ಮುಖ ಮತ್ತು ದೇಹದ ಮೃದುಭಾಗಗಳ ಮೇಲೆಲ್ಲ ಕಲೆ ನಿಲ್ಲುವಂತೆ ಬರೆಹಾಕಿ ಅಧಿಕಾರಿಯ ಇಚ್ಛಾನುಸಾರ ವಿರೂಪಗೊಳಿಸಿ, ಕಠಿಣ ರಾಜಾಜ್ಞೆಯನ್ನು ಹಿಂಸ್ರ ಅಧಿಕಾರಿಯ ಕ್ರೌರ್ಯ



ಹೊಸ ಅಧಿಕ ಶಕ್ತಿಶಾಲಿ
ಸುಪರ್ 777 ಡಿಟರ್ಜೆಂಟ್ ಬಾರ್

ಉತ್ತಮಿಕೆಯ ಬಗ್ಗೆ ಬರಿಯ ಹೇಳಿಕೆಯುಷ್ಟೇ ಅಲ್ಲ,
ಹೇಳಿಕೆಯು ಸರಿಯಾಗಿರುವುದರ ವಾಗ್ದಾನವನ್ನೂ ಮಾಡುತ್ತದೆ.

ಈಗ ಹೊಸ ಸುಪರ್ 777 ಡಿಟರ್ಜೆಂಟ್ ಬಾರ್‌ನಿಂದ ನನಗೆ ಎಲ್ಲಕ್ಕಿಂತ ಅಧಿಕ ಬಿಳುಪು ಸಿಗುತ್ತದೆ. ಇದರ ಡಿಟರ್ಜೆಂಟ್ ಫಾರ್ಮುಲಾ ಮೊದಲಿಗಿಂತ ಹೆಚ್ಚು ಒಳ್ಳೆಯದಿದೆ. ಆದ್ದರಿಂದಲೇ ಇದು [illegible] ಹೆಚ್ಚು ನೊರೆ ಕೊಡುತ್ತದೆ. ಹೆಚ್ಚು ಬಟ್ಟೆಗಳನ್ನು ಒಗೆಯುತ್ತದೆ ಮತ್ತು ಹೆಚ್ಚು ಸಮಯ ಬರುತ್ತದೆ. ಆದ್ದರಿಂದಲೇ ಇದು ಇತರ ಎಲ್ಲಾ ಡಿಟರ್ಜೆಂಟ್ ಬಾರ್ ಮತ್ತು ಸಾಬೂನುಗಳಿಗಿಂತ ಉತ್ತಮವಾ[illegible]

ಉಪಯೋಗಿಸಿ ನೋಡಿರಿ....ನೀವೂ ನಿಮ್ಮ ಕಣ್ಣುಗಳನ್ನು ನಂಬಲಾರಿರಿ, ಪ್ರತಿ ಸಲವೂ ಇದನ್ನೆ [illegible]

ಯಿಂದ ಕಾರ್ಯಗತ ಮಾಡಿದ ಭೀಕರ ಭೀಭತ್ಸ ರೀತಿಯನ್ನು ಹೆಚ್ಚು ವಿವರಿಸಬೇಕೆ? ಬೇಡ ಬೇಡ. ಕಲ್ಪಿಸಿಕೊಂಡರೆ ದೇಹ ಜುಂ ಎನ್ನುತ್ತದೆ. ಕರುಣಾಶ್ರು ನುಗ್ಗಿ ಬರುತ್ತದೆ…"

ದಾದಾಜಿಯ ಧ್ವನಿ ಗದ್ಗದವಾಯಿತು. ಅವರು ಸ್ವಲ್ಪ ತಡೆದರು. ನಾನೂ ಸುಮ್ಮನಿದ್ದೆ, ಮಾತು ಹೊರಡದೆ, ಆ ಬಡಪಾಯಿ ನಿರ್ಭಾಗ್ಯೆಯನ್ನು ನೆನೆಸಿಕೊಳ್ಳುತ್ತ, ಕಲ್ಪನೆಯನ್ನು ತಡೆಯುತ್ತ.

"ಛೆ! ಕಡೆಗೂ ಆ ಹೆಣ್ಣು ಜೀವಕ್ಕೆ ಆ ಘೋರ ಶಿಕ್ಷೆ ಆಗೇ ಆಯಿತಲ್ಲ! ತಪ್ಪಲಿಲ್ಲವಲ್ಲ," ಎಂದು ಹೇಳಿದೆ, ಅವಳಿಗಾಗಿ ಮರುಗುತ್ತ–ಮಾತು ಬಂದಾಗ.

"ಅದೇ ನೋಡಿ ಈ ಸುಂದರ ಶೂಲ, ಸುಖದುಃಖ ಜೀವನ ನಾಟಕ" ಅವರೂ ತೊದಲಿ ಧ್ವನಿಗೂಡಿಸಿದರು.

"ಅನಂತರ?" ನಾನೇ ಕೇಳಬೇಕಾಯಿತು.

"ಅನಂತರವೇನು ಹೇಳಿ. ಆ ಅನಾಥೆ ಭಿಕ್ಷುಕಿ ಬೀದಿ ಪಾಲಾದಳು…ಇವಳ ಕಥೆಯನ್ನು ಮುಂದುವರಿಸುವುದಕ್ಕೆ ಮುಂಚೆ ತಪಗುಪ್ತನ ಬಗ್ಗೆ ಒಂದು ಮಾತನ್ನು ಹೇಳಿಬಿಡುತ್ತೇನೆ. ಹುಂ… ವಾಸವಪಾಲಿಯನ್ನು ಹಾಗೆ ಬಿಟ್ಟು ತನ್ನನ್ನು ರಕ್ಷಿಸಿಕೊಳ್ಳಲು ಅವಸರ ಅವಸರವಾಗಿ ಅವಳಿಂದ ಹರಿದುಕೊಂಡು ಹೊರಟು ಗುಪ್ತನಿಗೆ ಅವನಲ್ಲಿ ಇನ್ನೂ ಅಳಿಯದಿದ್ದ ದೌರ್ಬಲ್ಯ, ಸ್ವಲ್ಪವೇ ಚಿಗುರಿಕೊಂಡಿದ್ದ ಶಕ್ತಿ, ಇವುಗಳ ಅರಿವು ಅಷ್ಟಿಷ್ಟು ಆಯಿತ್ತು. ಮೇನಕಾ ಪ್ರಕರಣದಿಂದ ಪೋರಬಿದ್ದ ಋಷಿ ವಿಶ್ವಾಮಿತ್ರ ಬ್ರಹ್ಮಋಷಿತ್ವಕ್ಕಾಗಿ ಮತ್ತೆ ಕಠಿಣ ತಪ ಕೈಗೊಂಡಂತೆ ಇವನೂ ವಿಹಾರದಲ್ಲಿ ಅಡಗಿಕೊಂಡು ತಪಸ್ಸಿನಲ್ಲಿ ತೊಡಗಿದ್ದ. ವಾಸವಪಾಲಿಯ ಮಾದಕತೆ ಮೋಹಕತೆಗಳನ್ನು ಮನಸ್ಸಿನಿಂದ ವಿಸರ್ಜಿಸಿ ಮರೆಯಲು ಕಡೆಗೆ ಆಕರ್ಷಣಾಕ್ರಮಣವನ್ನು ತಡಗಟ್ಟುವದಕ್ಕಾದರೂ ವಿಶ್ವಪ್ರಯತ್ನ ಮಾಡುತ್ತಿದ್ದ.

"ವರ್ಷಗಳು ಕಳೆದುಹೋದವು.

"ಅವನಿಗೆ ತನ್ನ ಯತ್ನದಲ್ಲಿ ಅಷ್ಟಿಷ್ಟು ಯಶಸ್ಸು ಲಭಿಸಿತೆಂದು ತೋರಿದಾಗ ಮತ್ತೆ ಹಿಂದಿನಂತೆ

"ಸಂಚರಿಸುತ್ತ ಸಂಚರಿಸುತ್ತ ಸರ್ವವಸ್ತುವಿಗೆ ಒಮ್ಮೆ ಬಂದ. ಅವನಿಗೆ ತಿಳಿಯದಂತೆಯೇ ಅವನ ಕಾಲುಗಳು ಅವನನ್ನು ವಾಸವಪಾಲಿಯ ವೀಥಿಗೆ ಸೌಧದ ಮುಂದಕ್ಕೆ ಒಯ್ದಿದ್ದುವು. ಸೌಧದ ಮುಂದೆ ನಿಂತೂ ನಿಂತ. ಬುದ್ಧಂ ಶರಣಂ…ಸಘಂ ಭವತಿ… ಘೋಷ ಮಾಡಿದ. ಒಂದು ಕ್ಷಣದಲ್ಲೇ ದ್ವಾರ ತೆರೆಯಿತು. ಭಿಕ್ಷೆ ತಂದವಳನ್ನು ವಿಸ್ತಾರ ನೇತ್ರದಿಂದ ದೃಷ್ಟಿಸಿ ನೋಡಿದ …ಓ ಅವಳು ವಾಸವಪಾಲಿಯಲ್ಲ! ಅನ್ಯಸ್ತ್ರೀ! ಏನು, ಸೇವಕಳಿರಬಹುದೆ? ಹಾಗೂ ಕಾಣಿಸುತ್ತಿಲ್ಲವಲ್ಲ? ಗೃಹಸ್ವಾಮಿನಿಯಂತೆಯೇ ಇದ್ದಾಳಲ್ಲ? ಇವಳು ಯಾರು? ಅವಳು ಎಲ್ಲಿ? ಎಲ್ಲಿ? ಇಲ್ಲಿಯೇ ಇದ್ದಾಳೆಯೆ, ಹೇಗೋ? ಇದ್ದಂತಿಲ್ಲವಲ್ಲ? ಎಲ್ಲಿಗೆ ಹೋಗಿದ್ದಾಳೆ? ಏತಕ್ಕೆ ಹೋಗಿದ್ದಾಳೆ? ಮತ್ತೆ ಬರುತ್ತಾಳೆಯೋ? ಬರುವಂತೆಯೂ ತೋರುವುದಿಲ್ಲವಲ್ಲ? ಏಕೆ ತಾನೆ ಬಂದಾಳು–ಗೃಹ ಬೇರೆಯವರದ್ದಾಗಿರುವಂತೆ ಇರುವಾಗ…ಮತ್ತೆ? ಅವಳು ಎಲ್ಲಿದ್ದಾಳೆ ಈಗ? ಇಲ್ಲಿಯೇ ಎಲ್ಲಾದರೂ ಇದ್ದಾಳೆಯೆ? ಇದ್ದಾಳೆಯೋ– ಇಲ್ಲ…ಏನಾಯಿತು? ಏನಾಗಿದೆ? ಅವಳಿಗೆ……ಅವನ ಚಿಂತೆ ನಿರಂತರವಾಗಿ ನಡೆಯುತ್ತಿತ್ತು. ಕುತೂಹಲ ಆತಂಕ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿದ್ದುವು.

"'ಭಗವನ್ ಭಿಕ್ಷೆ ತಂದಿದ್ದೇನೆ' ಆ ಸ್ತ್ರೀ ಎಚ್ಚರಿಸಿದ ಮೇಲೆಯೇ ಅವನಿಗೆ ಎಚ್ಚರ. ಭಿಕ್ಷಾ ಪಾತ್ರೆಯನ್ನು ಮುಂದೆ ಹಿಡಿದ.

"'ಮಾತಾ,' ಅವನು ಅಲ್ಲೀಗೆ ಮಾತನ್ನು ನಿಲ್ಲಿಸಿದ. ಅವಳನ್ನು ವಾಸವಪಾಲಿಯ ಬಗ್ಗೆ ಕೇಳಬೇಕೆಂದು ಪ್ರಾರಂಭಿಸಿದ್ದ. ಅದು ಉಚಿತವೆಂದು ತೋರಿರಲಿಲ್ಲ.

"'ಏನು ಭಗವನ್? ಮತ್ತೇನಾದರೂ…'

"'ಇಲ್ಲ, ಇಲ್ಲ ಏನೂ ಇಲ್ಲ…ಮಾತಾ ನಿನಗೆ ಶುಭವಾಗಲಿ!…ಬುದ್ಧಂ ಸಂಘಂ…'ಅಲ್ಲಿಂದ ಕಾಲ್ತೆಗೆದು ಮುಂದೆ ಸಾಗಿದ…ಇನ್ನು ಯಾರನ್ನು ಕೇಳಲಿ ಯಾರನ್ನಾದರೂ ಕೇಳಲಿ ಕೇಳಲೆ? ಅದು ಉಚಿತವಲ್ಲ, ತನ್ನಂಥವನಿಗೆ. ಅಪಾರ್ಥ ವಾದೀತು. ವ್ಯರ್ಥವೂ ಆಗಬಹುದು. ಮತ್ತೆ?…ಚಿಂತಿಸುತ್ತಲೆ, ಹುಡುಕಿಕೊಳ್ಳುತ್ತಲೆ ವೀಧಿ ವೀಧಿಯಲ್ಲೂ

ದಾಟಿದ. ಕಂಡ ಸ್ತ್ರೀ ಮುಖಗಳನ್ನೆಲ್ಲ ಪರೀಕ್ಷಿಸುತ್ತ ಬಿಜ್ಜೆಪಡುತ್ತಿದ್ದ. ಗೃಹಗೃಹವನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿದ. ಅವಳ ಸೂಚನೆಗಾಗಿ ಎಲ್ಲೂ ಏನೂ ಕಾಣಲಿಲ್ಲ. ಜನರನ್ನು ಹಿಂಬಾಲಿಸುತ್ತ ಅವರ ಸಂಭಾಷಣೆಯನ್ನು ಕೇಳುತ್ತಿದ್ದ. ಅದರಿಂದಲೂ ಪ್ರಯೋಜನವಾಗಲಿಲ್ಲ. ಅವನ ಕಾಲುಗಳು ಸೋತವು. ತಲೆ ಬಿಸಿಲಿನಲ್ಲಿ ಸಿಡಿಯಿತು. ದೇಹ ಬೆವರಿನಿಂದ ತೊಯ್ದಿತು. ಉದರ ಬಾಧಿಸಿತು. ನೇತ್ರ ನೊಂದಿತು. ಸಂಧ್ಯಾಕಾಲ ಸಮೀಪಿಸುತ್ತಿತ್ತು. ಆದರೆ ಇನ್ನೂ ನಡೆಯುತ್ತಲೇ ಇದ್ದ. ನಡೆಯುತ್ತಲೇ ಇದ್ದ. ಕಡೆಗೆ ನಡೆಯಲಾರದೆ ನಿಲ್ಲಲಾರದೆ ನೋಡಲಾರದೆ ಅರಸುವುದನ್ನು ಅಂತ್ಯಗೊಳಿಸಿ ಪುರವನ್ನು ತೊರೆದು ಬಿಟ್ಟ.

"ಪುರ ಪೊರ ವಲಯದಲ್ಲಿ ಪರಿಚಿತ ಸರಸ್ಸಿನ ತೀರದ ಬೋಧಿ ವೃಕ್ಷದ ಕೆಳಗೆ ಕುಳಿತು ಆಯಾಸ ಪರಿಹರಿಸಿಕೊಂಡ. ಉದರ ಬಾಧೆ ನಿಂತಿತು. ಭಿಕ್ಷಾಪಾತ್ರೆಯನ್ನು ರಂಪತ್ರದಿಂದ ಮುಚ್ಚಿಟ್ಟು ಕೈಕಾಲು ಮುಖ ತೊಳೆದುಕೊಂಡು ಬಂದು ಸರಸ್ಸಿನ ಸೋಪಾನವನ್ನು ಇಳಿಯಲಾರಂಭಿಸಿದ. ಒಂದು ಮೆಟ್ಟಲು ಎರಡು ಮೂರು ನಾಲ್ಕು ಓ! ಮುಂದಿನ ಮೆಟ್ಟಲನ್ನು ದಾಟಿ ಅದರ ಮುಂದಿನದಕ್ಕೆ ಕಾಲಿಟ್ಟವ...ಓ ಇದೇನು ಈ ಮಧ್ಯ ಮೆಟ್ಟಿಲಿನ ಮೇಲೆ ಇನ್ನೇನು ಉಳಿದೇ ಬಿದ್ದಿತ್ತಲ್ಲ!...ಹಿಂತಿರುಗಿ ನೋಡಿದ ...ಹುಂ ಅದೊಂದು ಜೀರ್ಣ ವಸ್ತ್ರ ಕುಪ್ಪೆ!...ಇನ್ನಷ್ಟು ಪರೀಕ್ಷಿಸಿದ...ಅಲ್ಲ! ಕುಪ್ಪೆಯಲ್ಲ ವ್ಯಕ್ತಿ ಸ್ತ್ರೀ! ವೃದ್ಧೆ ಅಲ್ಲ: ಆ ಜಡೆಗಟ್ಟಿದ ಕೇಶ ಅಷ್ಟೇನು ಬೆಳ್ಳಗಾಗಿಲ್ಲ—ಮುಚ್ಚಿರುವ ನೇತ್ರ ಗುಳಿಬಿದ್ದಿದೆ. ಕಪೋಲ ಸುಕ್ಕಾಗಿ ಗೆರೆ ಬಿದ್ದಿದೆ—ಗೆರೆಯಷ್ಟೇ ಅಲ್ಲ. ಒಣಗಿದ ಗಾಯ ಕಲೆ ಗೆರೆಗಳು, ಒಂದರ ಮೇಲೊಂದು, ಅಡ್ಡಾದಿಡ್ಡಿ ಕದಪು ಮುಂಚಾಚಿಕೊಂಡಿದೆ. ಹುಂ ನಾಸಿಕವೆಲ್ಲಿ? ಎಲ್ಲಿ? ಇಲ್ಲ! ಉಹುಂ ಕೊಂಚ ಇದೆ, ಒಂದೇ ಚೂರು ಬೇರಿನಲ್ಲಿ! ಅಯ್ಯೋ ಪಾಪ ಯಾರೋ ನಾಸಿಕಾಚ್ಛೇದನವಾದಂತಿದೆಯಲ್ಲ! ಯಾವ ದುರಾತ್ಮರು ಮಾಡಿದ್ದಾರೋ ಅಥವ ನಾಸಿಕ ವ್ಯಾಧಿ ಬಂದು ತಿಂದು...ಇಲ್ಲ, ಕತ್ತರಿಸಿಯೇ ಇದ್ದಾರೆ!—ಸಂದೇಹವಿಲ್ಲ—ಯಾರು ಮಾಡಿದರು!

ಏಕೆ ಮಾಡಿದರು? ಬರೆ ಹಾಕಿದವರೂ ಇವರೇ—ಇನ್ನೆಲ್ಲೆಲ್ಲಿ ಘಾಸಿಸಿದ್ದಾರೋ ಏನೋ...ಅಜ್ಜಿಗುಜ್ಜಿ ಜಜ್ಜಿ ಜೋಲು ಚರ್ಮ ಕೊರಳು...ಕಾಣುವಷ್ಟು ಕೈಕಾಲು ಎಷ್ಟು ತೆಳು, ಬಿಳಿಚು! ಒಣಗಿದಗಳು! ಇನ್ನು ಅರೆಬರೆ ವಸ್ತ್ರ ಮುಚ್ಚಿದ ಭಾಗ ಹೇಗಿರಬಹುದು. ಅಸ್ಥಿಪಂಜರವೇನೋ ಚರ್ಮ ಚೀಲದ ಮೇಲೆಯೂ ಕಾಣುವುದು!— ಇವಳೊಂದು ಗುಬ್ಬಚ್ಚಿ ಮಾನವ ಗುಬ್ಬಚ್ಚಿ, ರೆಕ್ಕೆ ತರಿದ ಗುಬ್ಬಚ್ಚಿ ಇವಳು ಯಾರಿರಬಹುದು? ಏನಾಗಿದೆ ಇವಳಿಗೆ ಇಲ್ಲೇಕೆ ಬಿದ್ದುಕೊಂಡಿದ್ದಾಳೆ—ಬಹುಶಃ ದಿನವೆಲ್ಲ ಬಿಸಿಲಿನಲ್ಲಿ ಬೇಯುತ್ತ, ಮಳೆಯಲ್ಲಿ ನೆನೆಯುತ್ತ ನರಳಿಲ್ಲವೆ. ಆಹಾರವಿಲ್ಲವೆ? ನಿತ್ರಾಣವೆ? ನಿರಾಸೆಯೆ? ಬಾಳು ಬೇಸರವಾಗಿ ನೀರಿಗೆ ಬೀಳಲು ಬಂದಿದ್ದಳೆ? ಅದೂ ಸಾಧ್ಯವಾಗಲಿಲ್ಲವೆ? ಅಥವ ಇಂಥ ದುಸ್ಥಿತಿಯಲ್ಲೂ ಜೀವದಾಸೆ ಜಯಿಸಿದ್ದಿತೊ?'

"'ಪ್ರಿಯ—ಮಾ'—ಅವಳಿಗೆ ಹತ್ತಿರವಾಗಿ ಬಗ್ಗಿ ಕಿವಿಯ ಒಳಗೇ ಎನ್ನುವಂತೆ ಕೂಗಿದ.

"'ಯಾರು ಯಾರು?'. ಶವಕ್ಕೆ ಇದ್ದಕ್ಕಿದ್ದಂತೆ ಚೈತನ್ಯ ಬಂದಂತೆ ಆಶ್ಚರ್ಯವಾದಂತೆ ಏನೋ ಪರಿಚಯವಾದಂತೆ ಕೂಗಿ ಕೇಳುತ್ತ ಅಗಲವಾಗಿ ಕಣ್ಣು ಬಿಟ್ಟು ಅವನ ಕಡೆಗೆ ನೋಡಿದಳು.' ನೋಡುತ್ತಿದ್ದಳು. ಭ್ರಾಂತಳಾಗಿ 'ತ—ದಾ' ತಡೆದು ಅವಳ ಅದುರು ತುಟಿದಾಟಿ ಬಂದಿತು. ಆ ಸ್ವರ ಹೆಸರು.

"ಅವಳ ಕಣ್ಣುಗಳು, ಆಳದಲ್ಲಿದ್ದವೂ ಅವನಿಂದ ಮರೆಸಿಕೊಳ್ಳಲಾಗಲಿಲ್ಲ. ಪರಿಚಿತವೆಂದು ಅಂದುಕೊಳ್ಳುತ್ತಿದ್ದಂತೆಯೆ ಆ ಸ್ವರವೂ ಅವನಿಗೆ ಪರಿಚಿತವಾಗಿದ್ದ ಧ್ವನಿಯೇ ಎಂದೆನಿಸಿತ್ತು. ಅವನಿಗೆ ಅನುಮಾನ ಬಲಿಸಿತ್ತು. ಇನ್ನು 'ತ—ದಾ' ಏನಾಗಲಂತೂ ಅನುಮಾನ ಹೋಗಿ ನಿಶ್ಚಯವೇ ಆಗಿತ್ತು. 'ವಾಸವಿ ವಾಸವಿ! ನೀನೇಯೆ? ನೀನೇಯೆ?' ಎಂದು ಕೂಗಿಕೊಳ್ಳುತ್ತ ಅಲ್ಲೆ ಮಂಡಿಯೂರಿ ಕುಳಿತು ಅವಳ ಕೈಗಳನ್ನು ತೆಗೆದುಕೊಂಡು. ಸಾವಧಾನವಾಗಿಯೇ ಕುಳಿತು ಅವಳನ್ನು ತನ್ನ ತೊಡೆಯ ಮೇಲಕ್ಕೆ ಎಳೆದುಕೊಳ್ಳುತ್ತ 'ಪ್ರಿಯೆ ವಾಸವಿ!' ಮುಂದಿನ್ನು ಮಾತಾಡಲಾಗಲಿಲ್ಲ.

ಸುವಾಸಿತ ಹಾಗೂ ಸ್ವಾದಿಷ್ಟ ಮುಖಶುದ್ಧಿಗಾಗಿ



ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.

ಚಮನದಲ್ಲಿ ಏನೆಲ್ಲ ಇದೆ?



ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ, ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರಿಗೆ ಎಲ್ಲರಿಗೂ ಅಚ್ಚುಮೆಚ್ಚು.

ಸ್ಟಾರ್ ಕಂಪನಿ, ಬೆಳಗಾಂವ್

M. K. Publicity

“‘ಓ ಬಿಡು ಬಿಡು! ನಾನು ನಿನ್ನ ವಾಸವಿಯಲ್ಲ! ನೋಡು ಚೆನ್ನಾಗಿ ನೋಡು! ಬಿಟ್ಟುಬಿಡು! ನನ್ನ ಪಾಡಿಗೆ ನನ್ನನ್ನು! ಹೋಗು! ಹೋಗು!’ ಎಂದು ಅವನ ಮೃದು ಬಲವಂತ ಸೆಳೆತದಿಂದ ತಪ್ಪಿಸಿಕೊಳ್ಳಲು ಒದ್ದಾಡುತ್ತಿದ್ದಳು ವ್ಯರ್ಥವಾಗಿ. ಅವನಿಗೇ ಜಯವಾಯಿತು. ಅವಳ ಅವನ ತೊಡೆ ಸೇರಿದಳು. ಅವನ ಬಾಹು ಅವಳನ್ನು ಬಳಸಿತ್ತು. ಅವಳು ತನ್ನ ಆ ಮುಖವನ್ನು ಅವನ ಉದರಕ್ಕೆ ಒರಗಿಸಿ ಮುಚ್ಚಿಕೊಂಡು ಅಳುತ್ತಿದ್ದಳು. ಸಂತೋಷದಿಂದಲೆ ದುಃಖದಿಂದಲೇ ಸ್ವಲ್ಪಕಾಲ ಅವನು ಸುಮ್ಮನಿದ್ದ. ಕೂಡಲೆ ಏನೂ ಹೇಳಲೂ ತೋರದವನಂತೆ. ಅವಳಿಗೆ ಅಷ್ಟಿಷ್ಟು ಸಮಾಧಾನ ತಾನಾಗಿ ಆಗಲೆಂದು ಕ್ಷಣಗಳು ಕಳೆದವು. ಅಳು ಕಡಿಮೆ ಕಡಿಮೆಯಾಗಿ ನಿಲ್ಲುವಂತಿತ್ತು.

“‘ನೀನೇಕೆ ನನ್ನ ವಾಸವಿಯಲ್ಲ? ನನ್ನ ವಾಸವಿಯೇ!...ನನ್ನವಳೇ! ನನ್ನವಳೆ!’ ಎನ್ನುತ್ತ ತಲೆ ತಡವುತ್ತಿದ್ದ. ಕಡೆಗೆ. ‘ಪ್ರಿಯೆ, ನಿನಗೇನಾಯಿತು ಹೀಗೇ?’ ಎಂದವನೆ ತಬ್ಬಿಕಟ್ಟಿಕೊಂಡು ನಿಲ್ಲಿಸಿದ. ‘ಉಹುಂ ಅದೇನೂ ಬೇಡ ಸಧ್ಯಕ್ಕೆ. ಯಾವಾಗಲಾದರೂ ಹೇಳುವೆಯಂತೆ. ಈಗ ಬಾ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ’ ಎನ್ನುತ್ತ ಅರ್ಧ ಎತ್ತಿಕೊಂಡ.

“‘ಬೇಡ ಬೇಡ!’ ಎನ್ನುತ್ತ ಅವನ ಯತ್ನಕ್ಕೆ ಅಡ್ಡಿ ಮಾಡಿದಳು.

“‘ಏಕೆ ಪ್ರಿಯೆ! ಏನಾಯಿತು. ಸುಮ್ಮನಿರು. ವಿರೋಧಿಸಬೇಡ ಬಾ. ಹೋಗೋಣ, ನೀನು ನನ್ನವಳಲ್ಲವೆ? ಈಗ ಪೂರ್ಣವಾಗಿ ನನ್ನವಳು ಬಾ! ಬಾ!’ ಎಂದು ತನ್ನ ಯತ್ನವನ್ನು ಮೃದುವಾಗಿ ಮುಂದುವರಿಸುತ್ತಿದ್ದ.

“‘ಏನೆಂದೆ! ಏನು ಮಾಡುತ್ತಿದ್ದಿಯೆ?... ಅಯ್ಯೊ ಮೂರ್ಖ ಮೂರ್ಖಾ! ಶತಮೂರ್ಖಾ. ನಾನು ಇನ್ನೂ ನಿನ್ನವಳೆ? ನಿನ್ನೊಡನೆ ಬರಬೇಕೆ? ಕರೆದುಕೊಂಡು ಹೋಗುತ್ತಿಯಾ? ಛಿ? ಎಂಥ ಹುಚ್ಚ! ನಿನಗೆ ಬುದ್ಧಿ ಕೆಟ್ಟಿದೆ–ನಿಶ್ಚಯವಾಗಿ! ಬಿಡು ನನ್ನನ್ನು! ನಿನ್ನಷ್ಟಕ್ಕೆ ನೀನು ಹೋಗು ನನ್ನಷ್ಟಕ್ಕೆ ನನ್ನನ್ನು ಬಿಡು – ಇಲ್ಲಿ ಮರಣ ಹೊಂದಲು... ನನಗಿರುವುದು, ಬೇಕಾದುದು ಅದೊಂದೇ ಇನ್ನು ಸರಿಯಾಗಿಯೂ ಇದೆ...’

“‘ಇಲ್ಲ, ಬಿಡುವುದಿಲ್ಲ, ನಿನ್ನನ್ನು ಹೀಗೆ ಪೂರ್ಣವಾಗಿ ಪಡೆದಿರುವಾಗ. ಕರೆದೊಯ್ದೇ ತೀರುತ್ತೇನೆ.’

“ಅವರಿಬ್ಬರ ಮಧ್ಯೆ ಒಂದು ಅಸಮ ಹೋರಾಟವೆ ನಡೆಯುತ್ತಿತ್ತು.

“‘ಛೆ, ನೀನೆಂಥ ಮೂರ್ಖ ಹಟಮಾರಿ. ಯಾವಾಗಲೂ ಹೀಗೆಯೇ!’ ಎಂದು ಅವಳು ರೇಗಿಕೊಳ್ಳುತ್ತ ತಡವರಿಸುತ್ತ ನಿಲ್ಲಿಸಿ ನಿಲ್ಲಿಸಿ ಹೇಳುತ್ತಿದ್ದಳು. ‘ನನ್ನ ವಿಚಾರವನ್ನು ಅಂದರೆ ಅವಿಚಾರವನ್ನು ಏನೆಂದು ಹೇಳಲಿ? ಎಷ್ಟೆಂದು ಹೇಳಲಿ. ಅಲ್ಲಾ, ಒಂದಾನೊಂದು ಕಾಲದಲ್ಲಿ ಈ ದೇಹಕ್ಕೆ ಅಸಾಮಾನ್ಯತ ವಿಖ್ಯಾತ ರೂಪ ಸಂಪತ್ತು ಇತ್ತು. ನಿನ್ನನ್ನೂ ಸೆಳೆದಂಥಾದ್ದು ಕಂಡಕಂಡವರೆಲ್ಲ ಅತ್ಯಂತ ಶ್ರೀಮಂತರು, ರಾಜಮಹಾರಾಜರು ಕೂಡ ಮೋಹಿಸುವಂಥಾದ್ದು. ನಳನಳಿಸುವ ಎಳೆಯ ನವೋನವ ಯೌವನವಿತ್ತು. ಮುದ್ದಾಡುವ ಪ್ರಾಯ ಸೌಂದರ್ಯ. ಆಗ ನನಗಿದ್ದ ಮೋಹದಲ್ಲಿ ಎಲ್ಲರನ್ನೂ ಬಿಟ್ಟು ನಿನಗೇ ಅದೆಲ್ಲವನ್ನೂ ಅರ್ಪಿಸಿಕೊಂಡಿದ್ದೆ. ಪಂಚಾಯತಿಯ ತೀರ್ಮಾನವಾದ ಮೇಲೂ ಅದನ್ನು ನಿನಗೆ ನೀಡುತ್ತಲೇ ಇದ್ದೆ. ಆದರೆ ಅದೇನೋ ನನ್ನನ್ನು ಪೂರ್ಣವಾಗಿ ಪಡೆಯುವ ಅರ್ಥವಿಲ್ಲದ ಹಟತೊಟ್ಟು ನನ್ನ ಸುಲಭ ಸರಳ ಸದ್ವಸಮ್ಮತ ಸೂಚನೆಯನ್ನು ತಿರಸ್ಕರಿಸಿ ನಾನು ಅಂಗಲಾಚಿ ಬೇಡಿಕೊಂಡರೂ ಕೇಳದೆ ಸುಖ ಪಡೆಯದೆ. ಸುಖ ಕೊಡದೆ ಅಂಥಾ ಮಹದಾತ್ಮವನ್ನು ತ್ಯಜಿಸಿ ಹೊರಟು ಹೋದೆ. ಅದೂ ಹೋಗಲಿ ಎಂದರೆ ಇನ್ನೊಮ್ಮೆ ಬಂದಾಗಲೂ ಹಾಗೆಯೇ. ಆಗಲೋ ನನ್ನ ದೇಹ ಸೌಂದರ್ಯ [illegible] ನಲ್ಲಿ ಪಕ್ವವಾಗಿ ಇನ್ನು ಹೆಚ್ಚು ಸವಿ ಸವಿ ರುಚಿ ರುಚಿ ಮಾದಕ ರಸಪಾಕ ಪೂರ್ಣಕಲಾಯುಕ್ತ ಸುವಾಸನಾ ಸುಖಕಾರಕ ಭೋಗ . ಯೋಗ್ಯ ಸಂಪದ್ ವಸ್ತುವಾಗಿತ್ತು. [illegible] ಸಾಧನಗಳು ಇದ್ದವು, ರಾಣೀವಾಸದಲ್ಲಿರುವಂತೆ. ನೀನು ಕೇವಲ ಆಹಾರ ಭಿಕ್ಷೆ ಬೇಡಿದರೆ ನಾನು ನನ್ನನ್ನೇ ನನ್ನ ದೇಹವನ್ನು ನಿನ್ನ ಭಿಕ್ಷಾ[illegible] ಹಾಕಿದೆ. ನೀನಾದರೊ ಅಷ್ಟನ್ನೂ ಮತ್ತೆ

ನಿರಾಕರಿಸಿ ಹೊರಟು ಹೋದೆ. ನಾನು ಹಿಂಬಾಲಿಸಿ ಕರೆಯುತ್ತ ಹತ್ತಿರವೇ ಇರು ಎನ್ನುತ್ತ ಕಡೆಗೆ ಒಂದೇ ಒಂದುದಿನ, ಒಂದೇ ಘಳಿಗೆಗಾಗಿ ಮಂಡಿಯೂರಿ ಬೇಡಿಕೊಂಡರೂ ಹಿಂದಿರುಗಿ ನೋಡದೆ ಹಟವನ್ನೇ ಪಠಿಸುತ್ತ ಹೊರಟು ಹೋದೆ. ಅದರಿಂದ ನೀನು ಪಡೆದದ್ದಾದರೂ ಏನು! ...ಅಯ್ಯೋ ಅವಿವೇಕಿ. ನೋಡು ಏನಾಯಿತು! ರೂಪ ಲಾವಣ್ಯ ಯೌವನ ಐಶ್ವರ್ಯ ಅಷ್ಟೇಕೆ ನೆಲವಿಲ್ಲದೆ ನೆರಳಿಲ್ಲದೆ ಅನ್ನ ವಸ್ತ್ರಗಳಿಲ್ಲದೆ, ಈ ವಿಕಾರ ಸ್ವರೂಪವನ್ನು ಹೊತ್ತು ಆರೋಗ್ಯವಳಿದು ಅಕಾಲ ವೃದ್ಧಾಪ್ಯಕ್ಕೆ ತುತ್ತಾಗಿ ಮೃತ್ಯುಮುಖಳಾಗಿ ಕ್ಷಣ ಕ್ಷಣಗಳನ್ನು ಎಣಿಸುತ್ತಿದ್ದೇನೆ... ಪೂರ್ಣವಾಗಿ ಲಭಿಸಿದ್ದೇನಂತೆ. ಅಯ್ಯೋ ಪೂರ್ಣ ಅಪೂರ್ಣತೆಯೇ...ಕರೆದುಕೊಂಡು ಹೋಗುತ್ತೇನೆನ್ನುತ್ತಿಯೇ! ಏತಕ್ಕೆ! ಏತಕ್ಕೆ! ಏನನ್ನು, ಯಾವ ಸುಖವನ್ನು ಅನುಭವಿಸುವುದಕ್ಕೆ ಈ ಅಸಹ್ಯ ದುಃಖ ಚಿಂತಾಜನಕ ಭಾರ ಹೊರೆಯಿಂದ... ಈಗ ನನ್ನಲ್ಲಿ ಏನಿದೆ ಕರೆದುಕೊಂಡು ಹೋಗುವುದಕ್ಕೆ. ಸುಮ್ಮನೆ ಬಿಟ್ಟು ಹೋಗು! ಮತ್ತೊಮ್ಮೆ ಮೂರ್ಖ...'

"'ಇಲ್ಲ, ಬಿಟ್ಟು ಹೋಗುವುದಿಲ್ಲ, ಏನಾದರೂ ಎಂತಾದರೂ ನೀನು ಎಷ್ಟೇ ಹೇಳಿದರೂ ಹಟ ಮಾಡಿದರೂ' ಎನ್ನುತ್ತ ಬಾಹು ಬಳಸನ್ನು ಬಿಗಿಗೊಳಿಸಿದ. 'ನಿನ್ನಲ್ಲಿ ಏನಿಲ್ಲ ಪ್ರಿಯ ವಾಸವಿ? ಎಲ್ಲವೂ ಇದೆ—ನನಗೆ ಬೇಕಾದದ್ದೆಲ್ಲವೂ ಇದೆ. ಅದು ನೀನು! ನೀನು! ನನಗೆ ಬೇಕಾದವಳು ಬೇಕಾದ ಪ್ರೇಮ ವಸ್ತು. ವ್ಯಕ್ತಿ. ನಿಜವಾದ ನನ್ನ ಪ್ರಿಯ ವಾಸವಿ ನೀನು. ನನಗೆ ವಿಕಾರವಾಗಿ ಕಾಣಿಸುತ್ತಿಲ್ಲ ಅಸಹ್ಯವಾಗಿಯೂ ಇಲ್ಲ. ಹಿಂದೆ ಒಂದು ಕಾಲದಲ್ಲಿ ನಾನು ಕಾಮಿಸುತ್ತಿದ್ದ ಆ ನಿನ್ನ ರೂಪ ಪ್ರಾಯ, ಸಂಪತ್ತು ಇತ್ಯಾದಿ ಯಾವುವೂ ಇಲ್ಲದಿರಬಹುದು. ಆದರೇನಂತೆ. ಅವೆಲ್ಲವೂ ನಿನ್ನ ಕಾಮದೊಡನೆ ಸುಟ್ಟುಹೋಗಿ ನೀನು ಪುಟವಿಟ್ಟ ಸ್ವರ್ಣವಾಗಿ ಶೋಭಿಸುತ್ತಿದ್ದಿಯೇ. ಇನ್ನೇನು ಬೇಕು ನನಗೆ! ಈ ನೀನೇ ಬೇಕು. ನನಗೆ, ಈಗ...ನೀನು ಭಾರವೂ ಅಲ್ಲ ಹೊರೆಯೂ ಅಲ್ಲ, ನನ್ನ ಶಕ್ತಿಗೆ. ನೋಡು,

ಎಷ್ಟು ಹಗುರ' ಎನ್ನುತ್ತ ಪುಷ್ಪಮಾಲೆಯೆನ್ನುವಂತೆ ಮೇಲೆತ್ತಿಕೊಂಡ.

"'ಉಹುಂ ಉಹುಂ ಆಗದು! ಆಗದು! ನೀನು ಹೇಳುತ್ತಿರುವುದೊಂದೂ ನನಗೆ ಅರ್ಥವೇ ಆಗುತ್ತಿಲ್ಲ. ಮಾಡುತ್ತಿರುವುದು ಕೂಡ. ನೀನೊಬ್ಬ ಅಪರೂಪದ ಹುಚ್ಚ ಎಂದಷ್ಟೆ ನನಗೆ ತಿಳಿಯುವುದು ಬಿಡು. ಇಳಿಸು. ಬಿಡು! ಬಿಟ್ಟು ಹೋಗು ನನ್ನ ಪಾಡಿಗೆ!'

"'ಒಂದು ದಿನ ನಿನಗೆ ಎಲ್ಲ ಅರ್ಥವಾಗುತ್ತದೆ. ಈಗಲೇ ಆಗಿರದಿದ್ದರೆ ಈಗ ನಿನ್ನನ್ನು ಬಿಟ್ಟುಹೋಗುವ ಮಾತೇ ಇಲ್ಲ ಪೂರ್ಣವಾಸವಿಯನ್ನು. ನಾನು ಛಲಗಾರನೆಂದು ನಿನಗೆ ಗೊತ್ತಿಲ್ಲವೆ?' ಎನ್ನುತ್ತ, ಅವಳ ಕೂಗಾಟ ಹೋರಾಟಗಳನ್ನು ಲೆಕ್ಕಿಸದೆ ಅವಳನ್ನು ಭದ್ರವಾಗಿ ಅಪ್ಪಿಕೊಂಡು ಅಡಿಯಿಡುತ್ತಿದ್ದ ಮೇಲು ಮೇಲಿನ ಮೆಟ್ಟಲುಗಳಿಗೆ."

ದಾದಾಜಿ ಸ್ವಲ್ಪ ನಿಲ್ಲಿಸಿದರು. ನಾನೂ ಮೌನವಾಗಿದ್ದೆ. ಕ್ಷಣ ಬಿಟ್ಟು ಅವರು ನೆನೆಸಿಕೊಂಡಂತೆ "ಹ್ಞಾ, ಮುಂದಿನದನ್ನು ಹೇಳಲಿಲ್ಲ. ಇಲ್ಲಿ ವಿಹಾರ ಸೂಪ್ತಗಳನ್ನು ನೋಡಿದಿರಲ್ಲ, ಅವು ಅವರ ಆವಾಸ ಸ್ಥಾನವಂತೆ-ಜೀವನದಲ್ಲಿ ಮರಣದಲ್ಲಿ," ಎಂದು ಮುಕ್ತಾಯ ಮಾಡಿದರು.

ಇನ್ನೊಂದು ಕ್ಷಣ ಕಳೆಯಿತು.

"ನೋಡಿ ಬಾಬೂಜಿ ನೀವು ಬೌದ್ಧಕಾಲದ ಕಥೆಗಳನ್ನು ಓದಿಯೇ ಇರುತ್ತೀರಿ. ನಾನು ಪೂರ್ವಾರ್ಧ ಅಂಬಾಪಾಲಿಯ ಕಥೆಯನ್ನು ಹೇಳಿದ ನೆನಪಿಸಿದಂತೆ ಈ ಉತ್ತರಾರ್ಧ ನಿಮಗೆ ವಾಸವಪಾಲಿ – ತಪಗುಪ್ತರ ಕಥೆಯನ್ನು ನೆನಪಿಗೆ ತಂದಿರಬೇಕು, ಅಲ್ಲವೆ!" ಎಂದು ಕೇಳಿದರು.

"ಹೌದು ಅದನ್ನೇ ನಾನು ಯೋಚಿಸುತ್ತಿದ್ದೆ" ಎಂದೆ.


"ನೋಡಿ, ನನಗೆ ಅನ್ನಿಸುತ್ತದೆ ಈ ನಮ್ಮ ಹಿರಿಯರ ಕಥೆಯೇ ಎರಡಾಗಿ ಒಡೆದು ಅದರಿಂದ ಆ ಕಥೆಗಳು ಹುಟ್ಟಿಕೊಂಡಿರಬಹುದೆ, ಸ್ವಲ್ಪ ಮಾರ್ಪಾಡಾಗಿ ಹೆಸರು ವಿವರಗಳಲ್ಲಿ ಎಂದು. ಹಾಗೂ ಒಮ್ಮೊಮ್ಮೆ ಅಂದುಕೊಳ್ಳುತ್ತೇನೆ ನಮ್ಮ ವಂಶಜರು ಯಾರು ಯಾರೋ ಯಾವ-ಯಾವಾಗಲೋ ಆ ಹಿರಿಯರ ಸಂಗತಿಗೂ ಆ ಎರಡು ಕಥೆಗಳಿಗೂ ಇದ್ದ ಅಷ್ಟಿಷ್ಟು ಸಾಮ್ಯವನ್ನು ಗಮನಿಸಿ ಮೂರನ್ನೂ ಸೇರಿಸಿಯೇ ಈ ಕಥೆಯನ್ನು ಹೆಣೆದರೋ ಎಂದು."

"ಎರಡೂ ಸಾಧ್ಯ." ಎಂದು ನಾನು ತಲೆದೂಗಿದೆ.

ಅನಂತರ ಇನ್ನಷ್ಟು ಮಾತಾಡುತ್ತಿದ್ದಾಗ ನನ ಕಾರಿನ ಹಾರನ್ ಶಬ್ದ ಕೇಳಿಸಿತು. ಆಗಲೇ ಒಳಗೆ ಮಲಗಿದ್ದ ಅಣ್ಣ ತಂಗಿ-ತಪನ ವಾ[illegible] ಪಾಲಿತರನ್ನು ಇನ್ನೊಮ್ಮೆ ನೋಡಿ ಪ್ರೀ[illegible] ಆತಿಥ್ಯಕ್ಕಾಗಿ ಕಥೆಗಾಗಿ ಧನ್ಯವಾದ ಸಮ[illegible] ಸಿದ್ಧಾರ್ಥ ಗುಪ್ತರನ್ನೂ ಅಂಬಾಪಾಲಿತಾಳನ್ನು ಬೀಳ್ಕೊಂಡು ಅಲ್ಲಿಂದ ಹೊರಟೆ. ಅಶೋಕ ಗುಪ್ತ ಲಾಂದ್ರವನ್ನು ಹಿಡಿದುಕೊಂಡು ಜತೆಯಲ್ಲಿ ಬಂದು ಕಾರಿಗೆ ತಲಪಿಸಿ ನಮಸ್ಕಾರ ಹೇಳಿ ಹಿಂದಿರುಗಿದ.

ಈಗ ಇಷ್ಟು ದಶಕಗಳ ಮೇಲೆ ಅಂದಿನ ಈ ಕಥೆಯನ್ನು ವಿವರವಾಗಿ ಬರೆಯುತ್ತಿರುವಾಗ ಅದೆಲ್ಲ ಕನಸೊ ನನಸೊ ಎಂದೆನಿಸುತ್ತಿದೆ. ✡

(ಮುಗಿದುದು)



Edited, printed & published by M. N. Mahishi on behalf of the Administrator, Loka Shikshana Trust, Samyukta Karnataka Press, Koppikar Road, Hubli-580 020. Rept: Bombay: V. Satyamurthy Phone: 522412. Calcutta: H. Majumdar Phone: 46-4233; Madras: K.A. Subramanian Phone: 842201; New Delhi: P. R. Chopra Phone: 714130.